
ಸಾಯಿಸುತೆ

# ನಗೆ ಮಲ್ಲಿಗೆ



894·814 308 3
SAI N98
ಗ್ರಂಥ ಸ್ವಾಮ್ಯ ವಿಭಾಗ

# ಹಂಸ ಪಲ್ಲಕಿ

(ಸಾಮಾಜಿಕ ಕಾದಂಬರಿ)

**ಸಾಯಿಸುತೆ**

META ENTERED

*ಪ್ರಕಾಶಕರು :*

**ವಾಸವಾಂಬ ಪ್ರಕಾಶನ**

ನಂ. 63, ಆರ್ಯನಗರ, ಸಾರಕ್ಕಿ ರಸ್ತೆ,
ಬೆಂಗಳೂರು - 560 078
(ದೂರವಾಣಿ : 6642996)

HAMSA PALLAKI - a social novel by Smt. Saisuthe; I edn. February1998; Published by Vasavamba prakashna, No.63, Aryanagar, Sarakki Road, Bangalore - 78. All rights reserved by the Authoress ; Pages : 194; Price: Rs. 60=00

ಪ್ರಥಮ ಮುದ್ರಣ: ಫೆಬ್ರವರಿ 1998
ಹಕ್ಕುಗಳು : ಲೇಖಕಿಯದು

ಅಧಿಕೃತ ಮಾರಾಟಗಾರರು :

**ಗೀತಾ ಏಜನ್ಸೀಸ್**

*(ಸಗಟು ಪುಸ್ತಕ ವ್ಯಾಪಾರಿಗಳು)*

ಬಳೇಪೇಟೆ ಚೌಕ, ಬೆಂಗಳೂರು - 53

(*ದೂರವಾಣಿ* : 2874226)

ಬೆಲೆ : ರೂ. 60/-

ಸುಂದರ ಲಿಪಿ ಜೋಡಣೆ :

***ಎಸ್. ಎಸ್. ಕಂಪ್ಯೂಟೆಕ್ ಇಂಡಿಯಾ ಇಂಪ್ರೆಷನ್ಸ್,***

ವಿದ್ಯಾನಗರ, ತುಮಕೂರು-3 ; ದೂರವಾಣಿ : 880785

ಮುದ್ರಣ:

***ಜಗನ್ನಾಥ್ ಆಫ್‌ಸೆಟ್ ಪ್ರಿಂಟರ್ಸ್***

ಡಿ. ಎಸ್. ಲೇನ್, ಸೌರಾಷ್ಟ್ರಪೇಟೆ, ಬೆಂಗಳೂರು - 53.

## ಎರಡು ಮಾತು

*ಆತ್ಮೀಯ ಓದುಗರಲ್ಲಿ,*

ತೀರಾ ವಿಶಿಷ್ಟವೂ ಅಲ್ಲ, ವಿಭಿನ್ನವೂ ಅಲ್ಲದ ಕಥಾವಸ್ತು ಈ ಕಾದಂಬರಿ. ಬರೆಯುವ ಮುನ್ನ ಎಷ್ಟೋ ಸಂಸಾರಗಳಲ್ಲಿ ಇಣುಕಿ ನೋಡಿದ್ದೇನೆ. ನೇರವಾಗಿ ಕೇಳಿದ್ದೇನೆ, ಆತ್ಮೀಯವಾಗಿ ಪ್ರಶ್ನಿಸಿದ್ದೇನೆ. ಅದೆಲ್ಲವನ್ನು ಕಲೆಹಾಕಿ ನಿಮ್ಮ ಮುಂದೆ ಇಟ್ಟಿದ್ದೇನೆ. ಓದಿದ ನಂತರ ಯೋಚಿಸುವಂತಾದರೆ ನನ್ನ ಶ್ರಮ ಸಾರ್ಥಕ.

ಹಿತೈಷಿಗಳಾದ ಶ್ರೀ ಕೆ. ರಾಮಚಂದ್ರಯ್ಯನವರಿಗೂ, ಪ್ರಕಾಶಕರಾದ ವಾಸವಾಂಬ ಪ್ರಕಾಶನದ ಮಾಲಿಕರಿಗೂ ಮುಖಚಿತ್ರದ ಕಲಾವಿದರಾದ ಶ್ರೀ ಮೋನಪ್ಪ ಮತ್ತು ಮುದ್ರಣಕಾರರಾದ ಜಗನ್ನಾಥ ಪ್ರಿಂಟರ್ಸ್‌ರವರಿಗೂ ನನ್ನ ಕೃತಜ್ಞತೆಗಳು.

10 ಫೆಬ್ರವರಿ - 98 **ಸಾಯಿಸುತೆ**

ಸಾಯಿಸದನ,
ನಂ. 65/1, 7ನೇ ಮುಖ್ಯ ರಸ್ತೆ,
ವಿದ್ಯಾನಗರ,
ತುಮಕೂರು-572 103.

## ಸಾಯಿಸುತೆಯವರ ಕಾದಂಬರಿಗಳು

| | |
|---|---|
| ಹಂಸ ಪಲ್ಲಕಿ | ದೀಪಾಂಕುರ |
| ದಂತದ ಗೊಂಬೆ | ಸ್ವರ್ಗದ ಹೂ |
| ನನ್ನದೆಯ ಹಾಡು | ಇಂದ್ರ ಧನಸ್ಸು |
| ಜನನೀ ಜನ್ಮ ಭೂಮಿ | ಅರುಣ ಕಿರಣ |
| ಪ್ರಿಯಸಖೀ | ಧವಳ ನಕ್ಷತ್ರ |
| ನನ್ನ ಭಾವ ನಿನ್ನ ರಾಗ | ಚಿರಬಾಂಧವ್ಯ |
| ಶ್ಯಾನುಭೋಗರ ಮಗಳು | ಶುಭಮಿಲನ |
| ಸಪ್ತರಂಜನಿ | ಮಧುರಗಾನ |
| ಕೋಗಿಲೆ ಹಾಡಿತು | ಕಾರ್ತೀಕದ ಸಂಜೆ |
| ಕರಗಿದ ಕಾರ್ಮೋಡ | ನಾಟ್ಯಸುಧಾ |
| ಹೇಮಂತದ ಸೊಗಸು | ಮೂಡಿ ಬಂದ ಶಶಿ |
| ರಾಧ ಮೋಹನಾ | ಗಂಧರ್ವಗಿರಿ |
| ಬಣ್ಣದ ಚುಂಬಕ | ಬಿಳಿ ಮೋಡಗಳು |
| ರಜತಾದ್ರಿಯ ಕನಸು | ಮಾನಸ ವೀಣಾ |
| ಶ್ರಾವಣ ಪೂರ್ಣಿಮ | ಮುಗಿಲ ತಾರೆ |
| ಸುಮಧುರ ಸಂಗಮ | ಸ್ವಪ್ನ ಸಂಭ್ರಮ |
| ರಾಗ ಬೃಂದಾವನ | ಶ್ವೇತ ಗುಲಾಬಿ |
| ಬೆಳದಿಂಗಳ ಚೆಲುವೆ | ಮಧುರ ಆರಾಧನ |
| ವಸಂತದ ಚಿಗುರು | ಪಸರಿಸಿದ ಶ್ರೀಗಂಧ |
| ನೂರು ನೆನಪು | ಮೇಘವರ್ಷಿಣಿ |
| ಬಾಂದಳದ ನಕ್ಷತ್ರ | ಮೌನ ಆಲಾಪನ |
| ಶ್ರೀರಸ್ತು ಶುಭಮಸ್ತು | ಭಾವ ಸರೋವರ |
| ಸ್ನೇಹ ಮಾಧುರಿ | ಆರಾಧಿತೆ |
| ಮಂಗಳ ದೀಪ | ನಿಶಾಂತ್ |
| ಇಬ್ಬನಿ ಕರಗಿತು | ಪಂಚವಟಿ |
| ಪೂರ್ಣೋದಯ | ಬರಿದ ನೈದಿಲೆ |
| ಪುಷ್ಕರಿಣಿ | ವಸುಂಧರ |
| ಹೃದಯ ರಾಗ | ಕಲ್ಯಾಣ ರೇಖೆ |

ಜೀವನ ಸಂಧ್ಯ
ನಲಿದ ಸಿಂಧೂರ
ನಮ್ರತಾ
ಮಿಡಿದ ಶೃತಿ
ಸ್ವರ್ಣ ಮಂದಿರ
ಸುಮಧುರ ಭಾರತಿ
ಮಂದಾರ ಕುಸುಮ
ಸೊಬಗಿನ ಪ್ರಿಯದರ್ಶಿನಿ
ಪ್ರೇಮ ಸಾಫಲ್ಯ
ಮಮತೆಯ ಸಂಕೋಲೆ
ಮುಂಜಾನೆಯ ಮುಂಬೆಳಕು
ಹೊಂಬೆಳಕು
ಸುಪ್ರಭಾತದ ಹೊಂಗನಸು
ಚೈತ್ರದ ಕೋಗಿಲೆ
ಪ್ರೀತಿಯ ಹೂಬನ
ಬಾನು ಮಿನುಗಿತು
ಮಂಜಿನಲ್ಲಿ ಮಿಂದ ಪುಷ್ಪ
ಶರದೃತುವಿನ ಚಂದ್ರ
ಆಡಿಸಿದಳು ಜಗದೋದ್ಧಾರನಾ
ಸುಭಾಷಿಣಿ

ಅನುಬಂಧದ ಕಾರಂಜಿ
ಸಂಧ್ಯಾ ಗಗನ
ಮತ್ತೊಂದು ಬಾಡದ ಹೂ
ನಿಶೆಯಿಂದ ಉಷೆಗೆ
ಬಾಡದ ಹೂ
ವಿಧಿವಂಚಿತೆ
ಗಿರಿಧರ
ಮಿಂಚು
ಸಪ್ತಪದಿ
ನವಚೈತ್ರ
ಅಭಿಲಾಷ
ಡಾ|| ವಸುಧಾ
ಹಿಮಗಿರಿ ನವಿಲು
ವಿವಾಹ ಬಂಧನ
ಬೆಳ್ಳಿ ದೋಣಿ
ಅಮೃತ ಸಿಂಧು
ಸಮ್ಮಿಲನ
ವರ್ಷ ಬಿಂದು
ಪಾಂಚಜನ್ಯ

*ಮುಂದಿನ ಕಾದಂಬರಿಗಳು*

*'ಮಾಗಿಯ ಮಂಜು'*

*'ಹೇಮ ವಿಹಾರಿ'*

ಎರಡು ದಿನದಿಂದ ಸುರಿದ ಮಳೆ ಮೂರನೆಯ ದಿನಕ್ಕೂ ಮುಂದುವರಿದಿದ್ದು ತೀರಾ ಬೇಸರದ ಸಂಗತಿ. ದಿನಗೂಲಿಯವರಿಗೆ ಉಪವಾಸದ ಸಂಕಟ. ಆಫೀಸ್‌ಗೆ ಎಡತಾಕುವವರದಂತೂ ತೀರಾ ಫಜೀತಿ. ಸ್ವಲ್ಪ ಖುಷಿ ಕೊಟ್ಟಿದ್ದು ಶಾಲೆಗೆ ಹೋಗುವ ಪುಟಾಣಿಗಳಿಗೆ ! ಶಾಲೆಗೆ ಹೋಗುವ ಹಿಂಸೆ ಇಲ್ಲ. ಮಿಸ್‌ಗಳ ಬೈದಾಟ, ಹೋಂವರ್ಕ್ ಕಾಟ ತಪ್ಪಿತೆಂದು ಸಂತೋಷ. ಆದರೆ ತಾಯಂದಿರು ಪೂರ್ಣ ಸಂತೋಷ ಅನುಭವಿಸಲು ಬಿಟ್ಟಾರೇ !

ಸಿದ್ಧಳಾಗಿ ಶಾರದ ಕೊಡೆ ಹಿಡಿದು ಹೊರಗೆ ಬಂದಾಗ ಕೂತಿದ್ದ ಸೇತುರಾಮ್ ಮುಗುಳ್ನಗೆ ಬೀರಿದರು. "ಇವತ್ತು ಕೂಡ ಮಳೆ ಬಿಡೋ ಹಂಗಿಲ್ಲ. ಹಾಜರಿ ತೀರಾ ಕಡ್ಮೆಯೆಂದೆ. ಇದೊಂದು ದಿನ ರಜ ಹಾಕ್ಬಾರ್ದ್ದಾ!" ಅನುಮಾನಿಸುತ್ತಲೇ ಹೇಳಿದರು. ಇದಕ್ಕೆ ಮೊಮ್ಮಗಳು ಒಪ್ಪಲಾರಳೆಂದು ಅವರಿಗೆ ಗೊತ್ತು.

ನಸುನಗುತ್ತ ಅವರ ಬಳಿಗೆ ಬಂದವಳು "ನಾನು ನಿಮ್ಮ ಕೈಯಲ್ಲಿ ಬೆಳೆದವ್ಳು, ತಾತ. ಪಂಕ್ಚುಯಾಲಿಟಿ ತುಂಬ ಇಂಪಾರ್ಟೆಂಟ್ ನೀವೇ ಹೇಳಿದ್ದೀರಿ. ಬಂದ ವಿದ್ಯಾರ್ಥಿಗಳಿಗೆ ಪಾಠ ಮಾಡಿದರಾಯ್ತು" ಬಗ್ಗಿ ಹೇಳಿದಾಗ ಕಣ್ಣಲ್ಲಿಯೇ ಹೌದೆಂದು ಒಪ್ಪಿಕೊಂಡರು.

ಫ್ಲಾಸ್ಕ್ ತಂದು ಅವರ ಮುಂದಿಟ್ಟು "ಹಾರ್ಲಿಕ್ಸ್ ಕುಡ್ದು ಬಿಡಿ" ಕೊಡೆಯನ್ನು ಬಿಚ್ಚಿ ತಲೆಯ ಮೇಲಿಡಿದು ಹೊರಟಾಗ ಎದ್ದು ಬಂದು ಬಾಗಿಲಲ್ಲಿ ನಿಂತವರು ಕೈ ಬೀಸಿದರು. ಅವರ ದಿನಚರಿಯಲ್ಲಿ ಇದೊಂದು. ಅವಳು ಶಾಲಾ, ಕಾಲೇಜಿಗೆ ಹೊರಟಾಗಲು ಇದೇ ರೀತಿ ಬಂದು

ನಿಲ್ಲುತ್ತಿದ್ದರು. ಈಗಲೂ ಅಷ್ಟೆ , ಮೊಮ್ಮಗಳೆ ತಮ್ಮ ಸಮಸ್ತವು ಎನ್ನುವ ಭಾವನೆ.

ಮಳೆಯ ಬಿರುಸು ಸ್ವಲ್ಪ ತಗ್ಗಿದ್ದರಿಂದ ಕೆಲವು ಆಟೋಗಳು ನಿಂತಿದ್ದು, ಇವಳು ಸಮಯಕ್ಕೆ ಸರಿಯಾಗಿ ಕಾಲೇಜು ತಲುಪಲು ಅನುವಾಯಿತು. ಕಾಲುಗಳ ಕೆಳಗೆ ಹರಿಯುವ ನೀರು, ಕೊಳೆ, ಕಸವನ್ನು ಹೊತ್ತು ಹೊರಟ ಪ್ರವಾಹದಂತೆ ಭಾಸವಾಗುತಿತ್ತು.

"ಗುಡ್ ಮಾರ್ನಿಂಗ್ ಸರ್" ಎಂದಳು. ಪುಸ್ತಕವನ್ನ ಮುಖಕ್ಕೆ ಹಿಡಿದುಕೊಂಡು ಎದುರಾದ ಪ್ರೊಫೆಸರ್ ನಚಿಕೇತಗೆ "ಗುಡ್ ಮಾರ್ನಿಂಗ್ .... ಗುಡ್ ಮಾರ್ನಿಂಗ್... ಇವತ್ತು ವಿದ್ಯಾರ್ಥಿಗಳ ಸ್ಟ್ರೇನ್ತ್ ಮಾತ್ರವಲ್ಲ ಪ್ರಾಧ್ಯಾಪಕರ ಬರುವು ಕೂಡ ತಗ್ಗಿದೆ. ಸಿಟಿಯಲ್ಲಿರೋ ಜನ ಇಂಥ ಮಳೆಗೆ ಹೆದರಿಬಿಟ್ಟರೇ, ಗಡಿಯನ್ನ ನಮ್ಮ ಸೈನಿಕರು ಹೇಗೆ ಕಾಯಬೇಕು! ಬರೀ.... ಸೋಮಾರಿತನ. ನಿಮ್ತಂದೆ ಕೂಡ ಅಷ್ಟೆ ಎಂಥ ಮನುಷ್ಯ" ಅವಳ ತಂದೆಯನ್ನು ನೆನಪು ಮಾಡಿಕೊಂಡರು ಸೇತುರಾಮ್ ಅವರ ಕೊಲೀಗ್.

ಮುಗಳ್ನಕ್ಕು ಸರಿದು ಹೋದರು. ಅದು ನೋವಿನ ನಗು ಗೆಳೆಯನ ಬಗ್ಗೆ ಅಭಿಮಾನವಿಟ್ಟುಕೊಂಡ ಮನುಷ್ಯ, ಅವರ ಮಗಳು ಎದುರಾದಾಗಲೆಲ್ಲ ನೆನಪಿನಲ್ಲಿದ್ದ ವಿಷಯಗಳನ್ನೆಲ್ಲ ಹೆಕ್ಕಿ ಹೆಕ್ಕಿ ತೆಗೆಯುವುದು ಅವಳ ಸ್ವಭಾವ.

ಇದು ಶಾರದ ಓದಿದ ಕಾಲೇಜು. ಅವಳಪ್ಪ ಪಾಠ ಮಾಡುತ್ತಿದ್ದ ಕಾಲೇಜು. ಅದೇ ಕಾಲೇಜಿಗೆ ಉಪನ್ಯಾಸಕಿಯಾಗಿ ಬಂದಿದ್ದರೂ ಅವಳಿಗಿಂತ ಹೆಚ್ಚು ವಯಸ್ಸಿನಲ್ಲಿ ಹಿರಿಯರಾದ ವಿದ್ಯಾರ್ಥಿಗಳು ಬಂದು ಪಾಠ ಕೇಳಲು ಕೂಡುತ್ತಿದ್ದರು.

"ಹಲೋ ಶಾರದ....." ಕೋಟನ್ನು ಸರಿಯಾಗಿ ಎಳೆದುಕೊಳ್ಳುತ್ತ ಚಳಿಯ ನಟನೆ ಮಾಡಿ "ಈ ಮಳೆಯೇನು ನಿನ್ನ ಹೆದರಿಸೋಕೆ ಸಾಧ್ಯವಿಲ್ಲ. ಇದೊಂದು ದಿನವಾದ್ರೂ ರಜ ಚೀಟಿ ಕಳುಹಿಸಬಾರ್ದಿತ್ತಾ. ನಿನ್ನಡೆ ಬೆಟ್ಟು ಮಾಡಿ ಪ್ರಿನ್ಸಿಪಾಲರು ನಮ್ಮನ್ನ ಬೈಯ್ತಾರೆ. ಬ್ರಹ್ಮಾಂಡವಾದ ಚಳಿ. ಹಾಸಿಗೆ ಬಿಟ್ಟು ಮೇಲೆ ಏಳೋಕೆ ಮನಸ್ಸು ಬರೋಲ್ಲ" ಕೊಲೀಗ್ ಸುಂದರೇಶ್,ಹೇಳಿದ ಬರೀ ಅವಳ ಮುಗುಳ್ನಗೆಯೇ ಉತ್ತರ.

ಅಂದು ಕಾರಿಡಾರ್‌ನಲ್ಲಿ ನಿಂತು ಸುರಿಯೋ ಮಳೆಯನ್ನ ನೋಡುವಂತಾಯಿತೇ ವಿನ ಪಾಠಗಳೇನು ನಡೆಯಲಿಲ್ಲ. ಸ್ವಲ್ಪ ಬೇಗನೆ

ಆಟೋ ಹಿಡಿದು ಮನೆಗೆ ಬರುವ ವೇಳೆಗೆ ಕಾಶೀಪತಯ್ಯ ಕೂತಿದ್ದರು. ಅವರು ಅವಳ ತಂದೆಯ ಆತ್ಮೀಯ ಗೆಳೆಯರು, ಪ್ರೀತಿಯ ಬಂಧು.

"ಹೇಗಿದ್ದೀರಿ, ಅಂಕಲ್?" ಕೇಳಿದಳು.

ಅಡಿಯಿಂದ ಮುಡಿಯವರೆಗೂ ನೋಡಿದರು. ಮೂರರ ಶಾರದಳಿಂದ, ಈಗ ಉಪನ್ಯಾಸಕಿಯವರಿಗೂ ಬಲ್ಲವರೇ. ಆತ್ಮೀಯತೆ ನೋಟ ಬೀರಿದರು.

"ನಿನ್ನ ಮೇಲೆ ವಸಂತ ದೊಡ್ಡದಾಗಿ ಆರೋಪ ಮಾಡಿದ್ದಾನೆ. ನೀನು ಫೋನ್‌ನಲ್ಲಿ ಸಿಗ್ಲಿಲ್ಲ. ಎರಡು ಸಲ ಕಾಲೇಜಿಗೆ ಬಂದಾಗ್ಲೂ ಸಿಗ್ಲಿಲ್ವಂತೆ. ಅದಕ್ಕೆ ನಿನ್ನ ಕಟ್ಟಿಹಾಕೋಕೆ ನನ್ನ ಕಳ್ಸಿದ್ದಾನೆ" ಎಂದರು ಅರ್ಥಗರ್ಭಿತವಾಗಿ.

ಸೇತುರಾಮ್ ಕಡೆ ನೋಟ ಹರಿಸಿದಳು. ತಲೆದೂಗಿದರು. ಬಹುಶಃ ವಸಂತ, ಅವಳ ಮದುವೆಯನ್ನು ಆನಂದರಾವ್ ಬದುಕಿದ್ದಾಗಲೇ ಎಂದರೆ ಹನ್ನೆರಡು ವರ್ಷಗಳ ಹಿಂದೆಯೇ ನಿರ್ಧರಿಸಿದ್ದರು. ಆ ಬಗ್ಗೆ ಇಂದಿಗೂ ಯಾರ ತಕರಾರು ಇರಲಿಲ್ಲ. ಮುಂದೆ ತಕರಾರು ಸಾಧ್ಯವಿಲ್ಲ ಎನ್ನುವುದು ಕಾಶೀಪತಯ್ಯನವರ ಉದ್ದೇಶ.

"ಓದು ಮುಗೀತು. ಮದುವೆ ಮುಂದೂಡೋಕೆ ಯಾವ್ದೇ ಕಾರಣ ಕೊಡೋಕೆ ಸಾಧ್ಯವಿಲ್ಲ. ನಿನ್ನ ಒಪ್ಗೆ ಸಿಗಲೇಬೇಕೂಂತ ಹಟ ಹಿಡಿದು ಕೂತಿದ್ದಾನೆ, ಕಾಶೀಪತಿ" ಎಂದ ಸೇತುರಾಮ್ ನಗೆಯ ಚಟಾಕಿ ಹಾರಿಸಿದರು. "ಅಲ್ಲಿನವರೆಗೂ ಊಟ, ತಿಂಡಿ, ಕಾಫೀ ಕೊನೆಗೆ ನೀರು ಕೂಡ ಸೇವಿಸೋಲ್ಲಾಂತ ಹಟ. ಅದೇನು ಮಾಡ್ತೀಯೋ ಮಾಡು" ಪೂರ್ತಿ ಜವಾಬ್ದಾರಿಯನ್ನ ಅವಳ ಮೇಲೊರೆಸಿ ಕೈ ತೊಳೆದುಕೊಂಡಂತೆ ಮಾತಾಡಿದರು. ಮೊಮ್ಮಗಳ ಮೇಲೆ ಅವರ ಅಭಿಮಾನ ಅಷ್ಟರ ಮಟ್ಟಿನದು.

ಎರಡು ನಿಮಿಷ ತಲೆ ಬಗ್ಗಿಸಿಕೊಂಡು ಕೂತ ಶಾರದ ನಿಧಾನವಾಗಿ ಎದ್ದು ತನ್ನ ರೂಮಿಗೆ ಹೋದಳು. ವಸಂತ ಅಪರಿಚಿತನಲ್ಲ. ವಾರದಲ್ಲಿ ಬಂದು ಒಂದೆರಡು ಸಲವಾದರೂ ಭೇಟಿಯಾಗುತ್ತಿದ್ದ. ಬಲವಂತ ಮಾಡಿ ಹೋಟಲ್‌ಗೆ ಕರೆದೊಯ್ಯುತ್ತಿದ್ದ. ಕಲೆತು ಸಿನಿಮಾಗೂ ಹೋದದ್ದುಂಟು. ಅವನ ಮದುವೆಯಾಗುವ ಮುನ್ನಿನ ರಸಿಕತೆಗೆ ಅವಳ ಪ್ರೋತ್ಸಾಹವಿಲ್ಲ. ಈ ಕಾರಣಕ್ಕೆ ಮುನಿಸಿಕೊಳ್ಳುತ್ತಿದ್ದ ಕೆಲವೊಮ್ಮೆ "ಐ ಲವ್ ಯು ಶಾರದ. ನಿನ್ನ ಬಿಟ್ಟಿರೋಕೆ ನನ್ನಿಂದ ಸಾಧ್ಯವಿಲ್ಲ" ತೀವ್ರ ಪ್ರೇಮಿಯಂತೆ ಪ್ರಲಾಪಿಸಿ ಅವಳ ಮುಖವನ್ನು ಆರಕ್ತಗೊಳಿಸುತ್ತಿದ್ದ

ಹಿಂದೆಯೇ ಬಂದ ಸೇತುರಾಮ್ "ನಿನ್ನ ಮೌನನ ಒಪ್ಗೇ ಅಂತ ತಿಳ್ಕೊಂಡಿದ್ದಾನೆ, ಕಾಶೀಪತಿ. ನಾನು ಕೂಡ ಹಾಗೇ ಅಂದುಕೊಳ್ಳೇ ! ಅವ್ರಿಗೆ ಮಾತ್ರವಲ್ಲ, ನಿನ್ನ ಮದ್ವೆಯ ವಿಷ್ಯದಲ್ಲಿ ನಂಗೂ ಆತುರವೇ. ದೊಡ್ಡ ಜವಾಬ್ದಾರಿಯನ್ನು ಸರ್‍ಯಾದ ರೀತಿಯಲ್ಲಿ ನಿರ್ವಹಿಸಿದ ತೃಪ್ತಿ ನಂದಾಗುತ್ತೆ. ಅದ್ಕಿಂತ ಮತ್ತೇನು ಬೇಕು?" ಅವರ ಕಂಠ ಭಾರವಾಗಿದ್ದು ಅವಳ ಗಮನಕ್ಕೆ ಬಂತು.

"ಸರಿ... ತಾತ! ನಂಗೆ ಸಿಂಪಲ್ ಮದ್ವೆ ಇಷ್ಟ".

ಆ ವೇಳೆಗೆ ಕಾಶೀಪತಿಗಳ ಪ್ರವೇಶವಾಗಿತ್ತು. " ನಂಗೂ ಅದು ಇಷ್ಟವೇ. ಆದರೆ ಈ ನೆಪದಲ್ಲಾದ್ರೂ ಬಂಧುಗಳು-ಸ್ನೇಹಿತರನ್ನ ಬರಮಾಡಿಕೊಳ್ಳುವ ಆಸೆ. ಕರೆಸಿದ ಜನನಾ ಒಳ್ಳೆ ರೀತಿಯಲ್ಲಿ ಟ್ರೀಟ್ ಮಾಡ್ಬೇಕಾದರೇ ದೊಡ್ಡ ಛತ್ರವೆ ಆಗ್ಬೇಕು. ಅದಕ್ಕೆ ಅನುಗುಣವಾಗಿ ಊಟ, ತಿಂಡಿಯ ಏರ್ಪಾಟು ಆಗ್ಬೇಕು. ಅದಕ್ಕೆಲ್ಲ ಜನ ಬೇಕು. ಇಷ್ಟು ಸಾಕಾ? ಪಡೆದುಕೊಂಡ ಛತ್ರಕ್ಕೆ ಸರ್‍ಯಾಗಿ ಅಲಂಕಾರಬೇಕು. ಇಂಥದೆಲ್ಲ ಇರುತ್ತೆ. ಅದಕ್ಕೆ ಖಂಡಿತ ನಿನ್ನ ತಕರಾರು ಇರೋಲ್ಲ. ಒಬ್ನೇ... ಮಗ...." ರಾಗ ಎಳೆದರು, ಒಪ್ಪಿಸಿದರು ಕೂಡ.

ಸೇತುರಾಮ್ ಕೂಡ ಏನು ಹೇಳಲಾರದೆ ಹೋದರು. ಅವಳ ಮದುವೆಗಾಗಿ ಬ್ಯಾಂಕ್‌ನಲ್ಲಿ ಇರಿಸಿದ್ದ ಹಣವನ್ನು ಪೂರ್ತಿಯಾಗಿ ಕಾಶೀಪತಿಗೆ ಒಪ್ಪಿಸಿದರು.

"ಈ ಇಷ್ಟು ಹಣದಲ್ಲೆ ಮದ್ವೆ ಮುಗೀಲಿ. ಅಷ್ಟೋ ಇಷ್ಟೋ ಹೆಚ್ಚಿಗೆ ಖರ್ಚಾದರೇ ಆ ಹಣ ನಿಂಗೆ ಸಿಗುತ್ತೆ. ಮಿಕ್ಕಿದ್ದು ನಿನ್ನಿಷ್ಟ" ಎಂದರು.

ನಿರಂತರವಾಗಿ ಈ ವಿವಾಹದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿತ್ತು. ಕಾಶಿಪತಿ-ಆನಂದನ ಫ್ರೆಂಡಾಗಿ ಮನೆಗೆ ಬರುತ್ತಿದ್ದವನು ಒಂದೇ ತಿಂಗಳಲ್ಲಿ ಮದುವೆಯಾದರು, ವಿವಾಹವಾದ ವರ್ಷವೇ ಗಂಡು ಕೂಸನ್ನ ಹೆತ್ತು ಅವರ ಕೈಯಲ್ಲಿಟ್ಟು ಮಡದಿ ಮರಣಿಸಿದಾಗ ಒಂಟಿಯಾದರೇ, ಅದೇ ರಿಪೀಟ್ ಆಯಿತು. ಆನಂದರಾವ್ ಹೆಂಡತಿ ಮದುವೆಯಾದ ಐದನೆ ವರ್ಷದಲ್ಲಿ ಒಂದು ಹೆಣ್ಣು ಮಗುವನ್ನ ಹೆತ್ತು ಕಣ್ಮುಚ್ಚಿಕೊಂಡಾಗ, ಅವರು ಒಂಟಿಯಾದರು. ಈ ಒಂಟಿತನ ಅವರ ಗೆಳೆತನವನ್ನು ಮತ್ತಷ್ಟು ಭದ್ರಗೊಳಿಸಿತ್ತು.

ಕಾಶೀಪತಿಗಳು ಹೋದ ಒಂದು ಗಂಟೆಯು ನಂತರ ಅವಳು

ರೂಮಿನಿಂದ ಹೊರಗೆ ಬಂದದ್ದು. ಕಾಫೀ ಬೆರೆಸಲು ಸಿದ್ದವಾಗಿ ಕೂತಿದ್ದರು. ಸೇತುರಾಮ್.

"ನೀನು ಬರಲೀಂತ ಕಾಯ್ತ ಇದ್ದೆ. ವಿವಾಹ ಬದ್ಕಿಗೊಂದು ಮುಖ್ಯವಾದ ತಿರುವು. ಟೆನ್‌ಷನ್ ಇರೋದು ಸಹಜ. 'ಸಿಂಪ್ಲಿಸಿಟಿ' ನಿನ್ನ ಸ್ವಭಾವ. ಹಾಗಂತ ಬೇರೆಯವ್ರನ್ನ ನೋಯಿಸೋಕೆ ಸಾಧ್ಯನಾ. ಜೀವನ ನಿಂತಿರೋದೇ ಸಾಮರಸ್ಯದ ಮೇಲೆ. ವ್ಯಕ್ತಿ ವ್ಯಕ್ತಿಯ ನಡ್ವೇ ಡಿಫರೆನ್ಸಸ್ ಸಹಜ. ವಿಚಾರ-ಸಾಮ್ಯ ಎಷ್ಟು ದಂಪತಿಗಳ ನಡುವೆ ಇದೆ? ಪ್ರೀತಿ, ಎಲ್ಲಾನು ತೂಗಿಸಿಕೊಂಡು ಹೋಗುತ್ತೆ " ಬುದ್ಧಿ ಹೇಳಿದರು.

ಬೌದ್ಧಿಕವಾಗಿ ಬೆಳೆದ ಮಾಸ್ಟರ್ ಡಿಗ್ರಿಯಲ್ಲಿ ಚಿನ್ನದ ಪದಕ ಪಡೆದ ಶಾರದ ಮೌನವಾಗಿ ಆಲಿಸಿದಳು. ವೈವಾಹಿಕ,ದಾಂಪತ್ಯ ಅಂಥ ವಿಷಯಗಳಲ್ಲಿ ತನ್ನ ತಿಳಿವಳಿಕೆಯೇ ಕಡಿಮೆಯೆಂದುಕೊಂಡು 'ಹ್ಞೂ' ಗುಟ್ಟಿದಳು.

ತಕ್ಷಣವೆ ದೊಡ್ಡದಾಗಿ ವಿವರವಾಗಿ ಅಮೆರಿಕಾದಲ್ಲಿದ್ದ ಕಿರಿಯ ಮಗನಿಗೆ ಪತ್ರ ಬರೆದರು. ಆನಂದ್,ಅರವಿಂದ ಇಬ್ಬರು ಗಂಡು ಮಕ್ಕಳು ಸೇತುರಾಮ್‌ಗೆ. ಆನಂದ್ ಎಷ್ಟು ಸರಳ ಜೀವನವನ್ನು ಇಷ್ಟಪಡುತ್ತಿದ್ದರೋ, ಅಷ್ಟೆ ಅದಕ್ಕಿಂತ ಹೆಚ್ಚು ಗ್ಲಾಮರಸ್ ಆಗಿರಲು ಇಷ್ಟಪಡುತ್ತಿದ್ದ ಅರವಿಂದ ಮೊದಲಿನಿಂದಲೂ ಅಮೆರಿಕಾದಲ್ಲಿ ಹೋಗಿ ನೆಲೆಸಲು ಆಸೆಪಟ್ಟು ಅದನ್ನು ಪೂರ್ಣ ಮಾಡಿಕೊಂಡಿದ್ದರು. ಎರಡು ವರ್ಷಕ್ಕೋ, ಮೂರು ವರ್ಷಕ್ಕೋ ಭಾರತಕ್ಕೆ ಬಂದು ಹೋಗುತ್ತಿದ್ದವನು ಐದು ವರ್ಷಗಳಿಂದ ಬಂದಿರಲಿಲ್ಲ. ಏನೇನೋ ಸಬೂಬು, ಖರ್ಚು-ವೆಚ್ಚದ ಬಗ್ಗೆ ಹೇಳುತ್ತಿದ್ದ. ಕೆಲಸದ ಒತ್ತಡದ ಬಗ್ಗೆ ಬರೆಯುತ್ತಿದ್ದ. 'ಶಾರದಾಗೊಂದು ಮದ್ವೆ ಮಾಡಿ ಮುಗ್ಸಿ ಬಂದು ನಮ್ಮ ಜೊತೆ ಇದ್ಬಿಡು. ನಾನು ಮಗಾನೆ.' ಪ್ರತಿಯೊಂದು ಪತ್ರದಲ್ಲು ಇಂಥ ವಾಕ್ಯವಿರುತ್ತಿತ್ತು.

ಅದನ್ನು ಓದಿದಾಗೆಲ್ಲ ಶಾರದ ಗಂಭೀರವಾಗುತ್ತಿದ್ದಳು. ಅವಳ ಬದುಕು, ದಿನಚರಿಯಲ್ಲಿ ಒಂದಾಗಿದ್ದ ತಾತ ಕೆಲವು ಕಾಲ ಅಲ್ಲಿ ಹೋಗಿರುವುದು ಅವಳಿಗೂ ಸಮ್ಮತವೆನಿಸುತಿತ್ತು. ಆದರೆ ಏಕೈಕ ಕೊಂಡಿ - ಅದನ್ನು ನೆನೆದರೆ ಮರಳುಗಾಡಿನಲ್ಲಿ ನಿಂತ ಅನುಭವವಾಗುತಿತ್ತು. ಆಗ ವಿವಾಹ ತೀರಾ ಅನಿವಾರ್ಯವೆನಿಸುತಿತ್ತು.

ಮೂರು ದಿನದಿಂದ ಒಂದೇ ಸಮನೆ ಸುರಿದ ಮಳೆ ಹೆಚ್ಚು ಕಡಿಮೆ

ನಿಂತೇ ಹೋಯಿತು ಎನ್ನುವಂತೆ ಆಕಾಶ ಬೆಳ್ಳಗಾದಾಗ ತಾತ, ಮೊಮ್ಮಗಳು ಬಂದು ಹೊರಗೆ ನಿಂತರು.

"ತಾತ, ಒಂದ್ಮಾತ್ರು ಕೇಳ್ಲಾ?" ಎಂದಳು ಎತ್ತಲೋ ನೋಡುತ್ತ. ಸೇತುರಾಮ್ ಕಣ್ಣು ಮಂಜಾಯಿತು. "ನೀನು ಏನು ಕೇಳ್ತೀಯಾಂತ ನಂಗೆ ಗೊತ್ತು. ನಿನ್ನ ವಿವಾಹವಾದ್ಮೇಲೆ ಅಮೆರಿಕಾಗೆ ಹೋಗಿಬಿಡ್ತೀನೀಂತ ತಾನೇ. ಹೋದರೂ ಅವ್ನ ಮನಸ್ಸು ಸಮಾಧಾನಕ್ಕೆ ಆರು ತಿಂಗಳೋ, ವರ್ಷವೋ ಉಳಿಬಹುದಷ್ಟೆ. ಆಮೇಲೆ ಹಿಂದಿರುಗಿಬಿಡ್ತೀನಿ. ಈ ವಯಸ್ಸಿನಲ್ಲಿ ಇಲ್ಲೇ ಇರ್ಬೇಕು. ಇಲ್ಲಿನ ಗಾಳಿ, ಮಣ್ಣು ಪಂಚಭೂತಗಳಲ್ಲಿ ಬೆರೆತುಹೋಗ್ಬೇಕು" ಭಾವೋದ್ವೇಗದಿಂದ ಮಾತಾಡಿದಾಗ, ಅವರ ಬಾಹುಗಳಲ್ಲಿ ಸೇರಿ ಹೋಗಿ ಕಣ್ಣೀರು ಸುರಿಸಿದಳು.

"ವಸಂತ ಒಳ್ಳೇ ಹುಡ್ಗ. ಅವನದು ಬಿಜಿನೆಸ್ ಲೈನ್ ವಿಚಾರಗಳು-ದೃಷ್ಟಿಗಳು ಬೇರೆಯಾಗುತ್ತೆ. ಅದ್ರಿಂದ....." ಯಾಕೋ ಸುಮ್ಮನಾಗಿಬಿಟ್ಟರು ಸೇತುರಾಮ್. ತುಂಬು ಅನುಭವ, ಸಮಾಜವನ್ನು ತೆರೆದ ಕಣ್ಣುಗಳಿಂದ ನೋಡಿದ ವಿಮರ್ಶಿಸಿದ ವ್ಯಕ್ತಿ. ನೂರು ದಂಪತಿಗಳಲ್ಲಿ ಅವರ ಪ್ರಕಾರ ಒಂದೆರಡು ಜೋಡಿಗಳಲ್ಲಿ ವಿಚಾರ-ಸಾಮ್ಯವಿರಬಹುದು. ಹಾಗೆಂದು ಬೇರೆಯವರೆಲ್ಲ ಅಸುಖಿಗಳೆಂದು ಹೇಳುವುದು ತಪ್ಪು.

ನಾಲ್ಕು ದಿನಗಳ ನಂತರ ಸಿಕ್ಕ ಪ್ರೊಫೆಸರ್ ರಂಗೇಗೌಡರು "ನಿನ್ನದ್ದೆ ವಿಷ್ಯ ಗೊತ್ತಾಯ್ತು. ವಸಂತ್‌ನ ಒಂದೆರಡು ಸಲ ನೋಡಿದ್ದೀನಿ. ಮಾತಿನ ವೈಖರಿ, ಮುಖ ಲಕ್ಷಣ ನೋಡಿದರೇ ಬೌದ್ಧಿಕ ಬೆಳವಣಿಗೆ ಕಮ್ಮಿ ಅನ್ನಿಸುತ್ತೆ. ಆಳೋ ಹೃದಯನ ಸಮಾಧಾನಪಡ್ಸಬಹ್ದು, ಸಿಡಿಯೋ ಮಿದುಳಿಗೆ ಸಾಂತ್ವನ ಹೇಳೋದು ಕಷ್ಟ. ಒಂದಿಷ್ಟು ಯೋಚ್ಸು. ಎರಡು ಮದ್ವೆಯಾದೆ, ಏನೇನು ಪ್ರಯೋಜನವಿಲ್ಲ. ಬಡಿದಾಡೋಕ್ಕಿಂತ ವೈವಾಹಿಕ ಬಂಧನದಿಂದ ಹೊರ ಬರೋದೇ ಉತ್ತಮವೆನಿಸಿತು ಛೆ.... ಛೆ...." ತಲೆ ಕೊಡವಿಕೊಂಡು ಹೋದರು.

ಶಾರದನ ಒಂದಿಷ್ಟು ಯೋಚನೆಯ ಆಳಕ್ಕೆ ತಳ್ಳಿತು ರಂಗೇಗೌಡರ ಮಾತುಗಳು. ಅವರ ಮೊದಲ ಮದುವೆ ತಾಯಿ ತಂದೆಯರ ಬಲವಂತದಿಂದ ನಡೆದರೂ, ಎರಡನೆಯದು ಪ್ರೇಮ ವಿವಾಹ. ಅವರ ಕೊಲೀಗ್ ಶಾಂತನ ಪ್ರೇಮಿಸಿ ಮದುವೆಯಾಗಿದ್ದರು. ನಿರಂತರವಾಗಿ ಅವರ ಪ್ರೇಮ ಮೂರು ವರ್ಷದಷ್ಟು ದೀರ್ಘ ಕಾಲ ಸಾಗಿ ನಂತರವೆ

ರಿಜಿಸ್ಟರ್ ಆಫೀಸ್‌ನಲ್ಲಿ ದಂಪತಿಗಳಾಗಿದ್ದು. ಆಮೇಲೆ ಅವರು ಜೊತೆಯಲ್ಲಿದ್ದಿದ್ದು ಆರು ತಿಂಗಳು ಮಾತ್ರ. ಮೂರು ತಿಂಗಳ ಹಿಂದೆ ಡೈವೋರ್ಸ್ ಆಗಿತ್ತು. ಒಂದೇ ಕಾಲೇಜಿನಲ್ಲಿ ಕೆಲಸ ಮಾಡುವ ಅವರು ಶತ್ರುಗಳಂತೆ ಮುಖ ತಿರುಗಿಸಿ ಓಡಾಡುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಇದು ಗೇಲಿಯ ವಿಷಯ.

ಸಂಜೆ ಮನೆಗೆ ಬರುವ ವೇಳೆಗೆ ವಸಂತ ಕಾದು ಕೂತಿದ್ದ. ಉಡುಪಿನ ಬಗ್ಗೆ ಬಹಳ ಆಸಕ್ತಿ ಇದ್ದವು. ಮಾರ್ಕೆಟ್‌ಗೆ ಬಂದ ಯಾವುದೇ ಹೊಸ ಮಾದರಿ ಡ್ರೆಸ್ ಅವನ ವಾರ್ಡ್‌ರೋಬ್ ಸೇರಬೇಕು.

"ಹಲೋ, ಯಾಕೆ ಇಷ್ಟೊತ್ತು?" ಕೇಳಿದ ವಾಚ್ ಕಡೆ ನೋಟವರಿಸುತ್ತ. " ಒಂದಿಷ್ಟು ಡಿಸ್‌ಕಷನ್ ಇತ್ತು " ಪುಸ್ತಕ ಮತ್ತು ತನ್ನ ಪುಟ್ಟ ಪರ್ಸನ್ನ ರೂಮಿಗೊಯ್ದು ಇಟ್ಟು ಹಿಂದಿರುಗುವಲ್ಲಿ ಅವನು ಗೂಳಿಯಂತೆ ನುಗ್ಗಿದವನು ಅವಳ ಸೊಂಟದ ನಗ್ನ ಭಾಗಕ್ಕೆ ಕೈ ಹಾಕಿದಾಗ ಮೆಲ್ಲಗೆ ಸರಿಸಿದಳು. "ಇದೇನು, ದಿಢೀರಾಗಿ ಪ್ರತ್ಯಕ್ಷವಾಗ್ಬಿಟ್ಟೆ"?

ತಟ್ಟನೆ ಅವನ ಮುಖ ಮುದುರಿತು. "ಇನ್ಮೇಲೆ ಒಂದಿಷ್ಟು ಮರ್ಯಾದೆಯಾಗಿ ಮಾತಾಡೋದ್ನ ಕಲೀ. ನಮ್ಮ ಮದ್ವೆ ಇನ್ನ ಇರೋದು ಇಪ್ಪತ್ತೆ ದಿನಗಳು. ಇದೇ ಮುಂದುವರಿಯಬಾರದಲ್ಲ" ಎಂದ. ಇದು ಪುರುಷ ಪ್ರಧಾನ ಪ್ರಪಂಚ ಎಂದು ಅವಳಿಗೆ ನೆನಪು ಮಾಡುವ ಉದ್ದೇಶ. ಹಾಗೆಂದು ಊಹಿಸದೇ ಆರಾಮಾಗಿ ನಕ್ಕು ಬಿಟ್ಟಳು.

"ಮೊದಲಿನಿಂದ ಹಾಗೇ ಮಾತಾಡಿಯೋ ಅಭ್ಯಾಸ" ಚುಟುಕಾದ ಪ್ರತಿಕ್ರಿಯೆ. ವಸಂತ ನೇರವಾಗಿ ನೋಡಿ ಪ್ಯಾಂಟ್ ಜೇಬಿನೊಳಕ್ಕೆ ಕೈ ತುರುಕಿ "ಅಪ್ಪ, ನಿನ್ನ ಷಾಪಿಂಗ್ ಕರ್ಕೊಂಡ್ಹೋಗೋಕೆ ಹೇಳಿದ್ದಾರೆ. ಬಿ ಕ್ವಿಕ್, ಬೇಗ ರೆಡಿಯಾಗ್ಬೇಕು" ಹೊರಗೆ ನಡೆದ.

ಅವಳಿಗೆ ಹೊರಗೆ ಹೋಗುವ ಮನಸ್ಸಿಲ್ಲದಿದ್ದರೂ ವಸಂತನಿಗೋಸ್ಕರ ಹೊರಡಬೇಕಿತ್ತು. ಸೀರೆ ಚೆನ್ನಾಗಿದೆಯೆನಿಸಿದ್ದರಿಂದ ಮುಖ ತೊಳೆದು ಪೌಡರ್ ಹಾಕಿ ಹಣೆಗೆ ಸ್ಟಿಕರ್ ಅಂಟಿಸಿ ಹೊರಗೆ ಬಂದಾಗ ಸೇತುರಾಮ್ ಅವರೊಂದಿಗೆ ಮಾತಾಡುತ್ತಿದ್ದ ವಸಂತ ತಕ್ಷಣ ಎದ್ದ. ಇಷ್ಟು ಸರಳವಾಗಿ ಹೊರಟಿದ್ದು ಅವನಿಗಿಷ್ಟವಾಗಲಿಲ್ಲ.

"ನೋಡು ವಸಂತ್, ನಿನ್ಮದ್ವೆ ಆಗೋವರ್ಗೂ ಯಾವ್ದೇ ಬಲವಂತವನ್ನು ಅವ್ಳ ಮೇಲೇರಬೇಡ" ಅವನಪ್ಪ ತಾಕೀತು ಮಾಡಿದ್ದರು ಅವನ ಸ್ವಭಾವವನ್ನ

ಅರಿತು.

ಕೆಂಪು ಮಾರುತಿ ಡೋರ್ ಓಪನ್ ಮಾಡಿದ. ಅವಳಪ್ಪ ಕಾರು, ಹಣ ಅಂಥದ್ದನೇನು ಮಾಡಿರಲಿಲ್ಲ. ಆ ಬಗ್ಗೆ ಎಂದೂ ಚಿಂತಿಸಿದ ಹೆಣ್ಣಲ್ಲ. ಕೆಲವೊಮ್ಮೆ ಟೂ ವೀಲರ್ ಕೊಳ್ಳಬೇಕೆಂದುಕೊಂಡರೂ ಮನಸ್ಸು ಮಾಡದೆ ಸುಮ್ಮನಾಗಿದ್ದಳು.

"ಇನ್ನ ಬರೀ ಇಪ್ಪತ್ತೇ ದಿನ" ಅವಳ ಕಿವಿಯ ಬಳಿ ಉಸುರಿದ ಕಚಗುಳಿ ಇಡುವಂತೆ. ಅವಳ ಮುಖದಲ್ಲಿ ನವ ಪಲ್ಲವಿಗಳು ಪಲ್ಲವಿಸಿದವು. "ಇಪ್ಪತ್ತು ನಾಲ್ಕು ಗಂಟೆ ನನ್ನ ಬಾಹುಗಳಲ್ಲಿ" ಈ ಒಂದು ಮಾತಿಗೆ ಬೆಚ್ಚಿ ಬಿದ್ದಳು. 'ಇಪ್ಪತ್ತುನಾಲ್ಕು ಗಂಟೆ ಬಾಹುಗಳಲ್ಲಿ' ಇದೊಂದು ಬರೀ ಮಾತೆನಿಸಿತು.

ದೊಡ್ಡ ಸ್ಯಾರಿ ಸೆಂಟರ್ ಮುಂದೆ ಕಾರು ನಿಂತಿತು. ಜಬರ್ದಸ್ತಿನಿಂದ ಒಳಗೆ ಕರೆದೊಯ್ದ. ಸೀರೆಗಳನ್ನ ತೆಗೆಸಿ ತೆಗೆಸಿ ರಾಶಿ ಹಾಕಿಸಿದ. ಅವಳು ಒಪ್ಪುವ ಒಪ್ಪಿದ ಸೀರೆಗಳನ್ನು ಬಿಟ್ಟ ಏನೇನೋ ನೆಪ ಹೇಳಿ, ತನಗೇ ಇಷ್ಟ ಬಂದಿದ್ದನ್ನೆಲ್ಲ ಕೊಡಿಸಿದ. ಬೆರಳಿಡಿದು ಹೋಗುವ ಒಂದು ಪುಟ್ಟ ಮಗುವಾದರೂ ತನ್ನ ಬೇಡಿಕೆಗೆ ಹಟ ಮಾಡಬಲ್ಲದು, ಆದರೆ ಶಾರದ ತುಟಿ ಎರಡು ಮಾಡಲಿಲ್ಲ. ತೀರಾ ವಿಪರೀತ ಮಾತಾಡುವ ಅವನ ಜೊತೆ ಒಂದು ನಾಲ್ಕು ಗಂಟೆ ಸುತ್ತಾಡಿ ಮನೆಗೆ ಮರಳುವ ವೇಳೆಗೆ ತಲೆ ನೋವು ಬಂದಿತ್ತು.

"ತಾತ ತುಂಬ ತಲೆ ನೋವು" ಅವರ ತೊಡೆಯ ಮೇಲೆ ತಲೆ ಇಟ್ಟು ಮಲಗಿಬಿಟ್ಟಳು. ಪ್ರೀತಿಯಿಂದ ಮುಂದಲೆಯ ಸವರಿ ತಮಾಷೆ ಮಾಡಿದರು. "ವಸಂತ ಸುಮ್ನೇ ತಿರುಗಾಡಿಸಿ ಬಿಟ್ಟನಾ?" ಅವರ ಪ್ರಶ್ನೆಗೆ ಉತ್ತರಿಸದೆ ಕಣ್ಣು ಮುಚ್ಚಿದಳು. ಪ್ರೊಫೆಸರ್ ರಂಗೇಗೌಡರು ಹೇಳಿದ ಮಾತುಗಳು ನೆನಪಾಯಿತು. ಜಿಜ್ಞಾಸೆಯಿಂದ ಮೇಲೆದ್ದಳು.

"ತಾತ, ಒಂದ್ಮಾತು ಕೇಳ್ಲಾ ? ನನ್ನ ಮತ್ತು ವಸಂತನ ಸ್ವಭಾವಗಳು ತೀರಾ ಭಿನ್ನ ಅನ್ನಿಸೋಲ್ವಾ ?" ಮರಳಿನಲ್ಲಿ ಜಲಕ್ಕಾಗಿ ಹುಡುಕಾಡಿದಂಥ ಪ್ರಶ್ನೆ.

"ಪ್ರೀತಿಯ ನಡುವೆ ಎಲ್ಲಾ ಮುಚ್ಚಿ ಹೋಗುತ್ತೆ. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕು ನಿನ್ನಪ್ಪ, ಚಿಕ್ಕಪ್ಪ. ಆದ್ರೂ ಇಬ್ಬರಲ್ಲಿ ಎಂಥ ವ್ಯತ್ಯಾಸ. ಅವನು ಹಣ, ವೈಭವೋಪೇತ ಜೀವನಕ್ಕೆ ಅಂಟಿಕೊಂಡರೇ

ಆನಂದ್ ಸರಳತನಕ್ಕೆ ಇನ್ನೊಂದು ಹೆಸರು. ಅಂಥದ್ದರಲ್ಲಿ ಬೇರೆ ಬೇರೆ ಕಡೆ ಬೆಳೆದ ಹೆಣ್ಣು, ಗಂಡು ಒಟ್ಟಿಗೆ ಜೀವಿಸೋದು ಸೃಷ್ಟಿಯ ಒಂದು ತಂತ್ರ. ಅದು ತಲೆ ಕೆಡ್ಸಿಕೊಳ್ಳೋಂಥ ವಿಷ್ಯವೇ ಅಲ್ಲ" ಜಾರಿಸಿಬಿಟ್ಟರು. ಅದು ಲಾಜಿಕ್ ಅನ್ನಿಸಲಿಲ್ಲ. ಅವರ ಕೈಯಲ್ಲಿ ಬೆಳೆದದ್ದರಿಂದ ಮೌನವಹಿಸಿದಳು.

ಮರುದಿನ ಕಾಲೇಜಿನಲ್ಲಿ ಒಂದು ರಾದ್ಧಾಂತ ನಡೆದು ಪ್ರಿನ್ಸಿಪಾಲರವರೆಗೂ ಹೋಯಿತು. ಪ್ರೊಫೆಸರ್ ರಂಗೇಗೌಡ ಮತ್ತು ಶಾಂತಳ ನಡುವೆ ನಡೆದ ಜಗಳ ತೀರಾ ವಿಕೋಪಕ್ಕೆ ಹೋಯಿತು. ಅಧ್ಯಾಪಕರಲ್ಲಿ ಮಾತ್ರವಲ್ಲ ವಿದ್ಯಾರ್ಥಿಗಳಲ್ಲಿ ಕೂಡ ಎರಡು ಬಣಗಳಾಗಿ ತಮ್ಮ ತಮ್ಮಲ್ಲಿಯೇ ವಾದಗಳನ್ನು ಷುರು ಮಾಡಿದ್ದರು.

"ಏನಿದೆಲ್ಲ, ವೈಯಕ್ತಿಕ ವಿಷ್ಯಗಳು ವಿದ್ಯಾರ್ಥಿಗಳ ಮಟ್ಟಕ್ಕೆ ಇಳೀಬಾರ್ದು. ಆರ್ ಯು ನಾಟ್ ಅಷೇಮ್ಡ್" ಗುಡುಗಿದ್ದರ ಜೊತೆಗೆ ಪೇಚಾಡಿಕೊಂಡರು.

"ನಂಗೆ ಆ ಹೆಣ್ಣಿನ ಮುಖ ನೋಡಲು ಇಷ್ಟವಿಲ್ಲ. ಅದ್ಕೇ ಕಾರಣ ಕೇಳ್ಬೇಡಿ. ಸಾರಿ ಸರ್, ಎಕ್ಸಟ್ರೀಮ್ಲಿ ಸಾರಿ" ಕ್ಷಮೆ ಕೇಳಿ ಎದ್ದು ಹೋಗುವ ಮುನ್ನ ಒಮ್ಮೆ ತಮ್ಮ ಮಾಜಿ ಹೆಂಡತಿಯ ಕಡೆ ತಿರುಗಿ "ದಯವಿಟ್ಟು ಕ್ಷಮ್ಸು, ನಿನ್ನ ಬಗ್ಗೆ ನಂಗೆ ಯಾವ್ದೇ ಭಾವನೆಗಳಿಲ್ಲ. ಸುಮ್ನೆ ಕೆರಳಿಸಿ ಕಾಲೇಜನ್ನು ಕಲುಷಿತಗೊಳಿಸ್ಬೇಡ" ರಂಗೇಗೌಡರು ಹೇಳಿದರು.

ಮರುದಿನ ಅವರು ಲೈಬ್ರರಿಯಲ್ಲಿ ಸಿಕ್ಕರು. ಶಾರದಾಗೆ ತೀರಾ ತಲೆ ಕೆಡಿಸಿಕೊಂಡಂತೆ ಕಂಡ ಮನುಷ್ಯ. ವಿದ್ಯಾರ್ಥಿಗಳು ಅವರಿಗೆ ಹೆದರುತ್ತಿದ್ದರು. ಕಾರಣ ಬುದ್ಧಿವಂತ ವಿದ್ಯಾರ್ಥಿಗಳೆಂದರೆ ಅಭಿಮಾನ, ಬಡ ವಿದ್ಯಾರ್ಥಿಗಳೆಂದರೆ ಸಹಾನುಭೂತಿ ಇಬ್ಬರಿಗೂ ಸಹಾಯ ಮಾಡುತ್ತಿದ್ದರು.

ಅವರ ಎದುರಿನಲ್ಲಿಯೇ ಕೂತು "ತುಂಬ ಅಪ್‌ಸೆಟ್ ಆಗಿದ್ದಿರಲ್ಲ, ಸರ್" ಎಂದಳು. ಓದುತ್ತಿರುವ ಪುಸ್ತಕ ಮುಚ್ಚಿಟ್ಟು ಕನ್ನಡಕ ತೆಗೆದು ಕಣ್ಮುಚ್ಚಿಕೊಂಡರು. "ಮೊನ್ನಿನ ಪ್ರಕರಣದಿಂದ ತೀರಾ ಬೇಸರವಾಯ್ತು. ಡೈವೋರ್ಸ್ ಆದ್ಮೇಲೆ ನಮ್ಮ ನಮ್ಮ ದಾರಿಗಳು ಕವಲೊಡೆದವು. ಹಿಂದಿನ ವೈವಾಹಿಕ ಜೀವನದ ಬಗ್ಗೆ ರಾದ್ಧಾಂತ ನಂಗಿಷ್ಟವಿಲ್ಲ" ಕರ್ಚಿಪ್‌ನಿಂದ ಹಣೆ, ಮುಖವನ್ನು ಒತ್ತಿ ಒತ್ತಿ ಒರೆಸಿಕೊಂಡರು.

"ನೀವಿಬ್ರು ಪ್ರೇಮಿಸಿ ವಿವಾಹವಾದ್ರಿ" ನೆನಪಿಸಿದಳು.

"ಆಫ್ ಕೋರ್ಸ್ ಪ್ರೇಮ ಅನ್ನುವುದಾದರೂ ಏನು? ಅದಕ್ಕೊಂದು

ಥೆಪಿನೆಷನ್ ಹೇಳಿ. ಟೀನಿಂದ ಷುರುವಾಯಿತು ನಮ್ಮಿಬ್ಬರ ಪರಿಚಯ. ಭೇಟಿ, ಓಡಾಟ ನೋಡಿ ಕಾಲೇಜಿನಲ್ಲಿ ಅದಕ್ಕೊಂದು ಹೆಸರಿಟ್ಟರು 'ಪ್ರೇಮ' ಎಂದು. ಒಮ್ಮೆ ನಾವಿಬ್ಬರು ಯಾಕೆ ವಿವಾಹವಾಗ್ಬಾರ್ದೂಂತ ಶಾಂತ ಕೇಳಿದಾಗ 'ಹ್ಞೂ' ಎಂದು ಬಿಟ್ಟೆ. ನಮ್ತಂದೆ ತಾಯಿ ಬಳಗದ ಹುಡುಗಿಯನ್ನು ನೋಡಿ ಮದ್ವೆ ಮಾಡಿದ್ದರು. ಅವಳೊಂದಿಗಿನ ಬದ್ಕು ಉಸಿರುಗಟ್ಟಿದಾಗ ಅವರಿಗೆಲ್ಲ ತಿಳಿ ಹೇಳಿ ಡೈವೋರ್ಸ್ ಪಡೆದು ಪೂರಾ ಸ್ವತಂತ್ರನಾದ್ದರಿಂದ, ಶಾಂತಳೊಂದಿಗಿನ ನನ್ನ ವಿವಾಹಕ್ಕೆ ಯಾವುದೇ ಅಡ್ಡಿ ಇರಲಿಲ್ಲ. ಆಮೇಲೆ ಅವಳ ಮಾತು, ನಡೆ ತೀರಾ ಬಾಲಿಶವೆನಿಸಿತು. ಅವಳು ಮಾಸ್ಟರ್ ಡಿಗ್ರಿ ಪಡೆದು ಉಪನ್ಯಾಸಕಿಯಾಗಿದ್ದಳೇ ಹೊರತು ಪ್ರಬುದ್ಧಳಲ್ಲವೆನಿಸಿತು. ನನ್ನಷ್ಟಲ್ಲದಿದ್ದರೂ ನಾನು ಮಾತಾಡುವುದನ್ನು ಅರ್ಥ ಮಾಡಿಕೊಳ್ಳಲು ಅಸಮರ್ಥಳಾದಾಗ, ಇದೆಂಥ ದಾಂಪತ್ಯವೆನಿಸಿತು. ನನಗೆ ಆಸಕ್ತಿ ಇರುವ ವಿಷಯಗಳಲ್ಲಿ ಅವಳು ಆಸಕ್ತಿ ತೋರುವಷ್ಟಾದರೂ ಜಾಣೆಯಾಗಿರಬೇಕಿತ್ತು. ನನ್ನ ಮನೋಲೋಕದ ಮಟ್ಟವೆ ಬೇರೆ, ಅವಳದೇ ಬೇರೆಯೆನಿಸಿದಾಗ ಜೊತೆಯಲ್ಲಿರುವುದು ತೀರಾ ಕಷ್ಟವೆನಿಸಿತು. ಶರೀರದ ಆಕರ್ಷಣೆ ತೀರಾ ಕಡಿಮೆಯಾದಾಗ ದಾಂಪತ್ಯ ಅರ್ಥ ಕಳೆದುಕೊಂಡಿತು. ಯಾವ ಅರ್ಥದಲ್ಲಿ ಜೊತೆಯಾಗಿರುವುದು? ಅದಕ್ಕೆ ಡೈವೋರ್ಸ್‌ಗೆ ಒಪ್ಪಿಸಿದೆ" ರಂಗೇಗೌಡರು ತಮ್ಮ ಮನವನ್ನು ಬಿಚ್ಚಿಟ್ಟರು.

ಶಾರದ ಮೌನವಹಿಸಿದಳು. ಇದು ಸರಿ, ಇದು ತಪ್ಪು ಎಂದು ವಿಶ್ಲೇಷಿಸುವುದಕ್ಕಾಗದೆ ಆಲೋಚನೆಯಲ್ಲಿ ಮುಳುಗಿದಳು. ಎಲ್ಲಾ ವಿಚಿತ್ರವಾಗಿ ಕಂಡಿತು. ಯಾವುದೂ ತರ್ಕಕ್ಕೆ ಸಿಗಲಿಲ್ಲ.

ಅಂದು ಶಾರದ ಮತ್ತು ವಸಂತ ದಂಪತಿಗಳಾದರು. ಆ ವಿವಾಹಕ್ಕೆ ಅವಳ ಚಿಕ್ಕಪ್ಪ ಕುಟುಂಬ ಸಮೇತರಾಗಿ ಬಂದು ಭಾಗವಹಿಸಿದರು. ಸರಳವಾದ ವಿವಾಹವೇನಲ್ಲ, ಬಹಳ ವಿಜೃಂಭ ಣೆಯಿಂದ ನಡೆದ ವಿವಾಹಕ್ಕೆ ಕಾಲೇಜಿನ ವಿದ್ಯಾರ್ಥಿಗಳಿಂದ ಹಿಡಿದು ಮ್ಯಾನೇಜ್‌ಮೆಂಟ್‌ನವರೆಲ್ಲ ಬಂದು ಭಾಗವಹಿಸಿದ್ದರ ಜೊತೆಗೆ ಸಿಟಿಯ ಬಿಜಿನೆಸ್‌ಗೆ ಸಂಬಂಧಪಟ್ಟ ಪ್ರಸಿದ್ಧರೆಲ್ಲ ಬಂದು ಭಾಗವಹಿಸಿ, ಹಾರೈಸಿದರು.

* * * *

ಇಡೀ ಒಂದು ತಿಂಗಳು ಕಾಲೇಜಿಗೆ ರಜ ಹಾಕಿದ್ದರಿಂದ ಹನಿಮೂನ್‌ಗೆ ಹೋಗಿ ಸುತಾಡಿ ಬಂದರು. ಸೇತುರಾಮ್ ಮಗನ ಜೊತೆಗೆ ಅಮೆರಿಕಾಗೆ

ಹಾರಿ ಬಿಟ್ಟಿದ್ದರಿಂದ, ಆ ಮನೆಯನ್ನ ಹತ್ತಿರದ ಬಂಧುಗಳ ವಾಸಕ್ಕಾಗಿ ತಾತ್ಕಾಲಿಕವಾಗಿ ಬಿಟ್ಟುಕೊಟ್ಟಿದ್ದರು. ಅದರಿಂದ ಅವಳು ಶಾಶ್ವತವಾಗಿ ಗಂಡನ ಮನೆಯಲ್ಲಿ ಉಳಿದಂತಾಗಿತ್ತು.

ಅಂದು ಕಾಲೇಜಿಗೆ ಹೊರಡಲೇ ಬೇಕಾಗಿದ್ದರಿಂದ ಬೇಗನೆ ಏಳುವುದು ಅನಿವಾರ್ಯವಾಗಿತ್ತು. ವಸಂತನ ತೆಕ್ಕೆಯಿಂದ ಹೊರ ಬರಲು ಪ್ರಯಾಸಪಡಬೇಕಾಯಿತು.

"ಟೈಮ್ ನೋಡಿ, ಎಷ್ಟಾಗಿದೆ. ಮಾವನವರು ವಾಕ್ ಮುಗ್ಸಿಕೊಂಡು ಹಿಂದಿರುಗಿರ್ತಾರೆ, ಪ್ಲೀಸ್" ಅನುನಯಿಸಲು ಹೋಗಿ ಸೋತಾಗ "ಇವತ್ತು ಕಾಲೇಜಿಗೆ ಹೋಗ್ಬೇಕು. ಇಡೀ ಒಂದ್ತಿಂಗ್ಳು ಅಷ್ಟು ಕಾಲ ರಜ.... ಮೈ ಗಾಡ್" ಅಸ್ತವ್ಯಸ್ತಗೊಂಡ ನೈಟಿಯನ್ನು ಸರಿ ಮಾಡಿಕೊಂಡು ಅವನ ಕೈಯನ್ನು ಪ್ರಯಾಸದಿಂದ ಸರಿಸಿ ಹೊರ ಬಂದಾಗ ಅವನ ಮುನಿಸಿನ ಬಗ್ಗೆ ಯೋಚಿಸುವ ಸ್ಥಿತಿಯಲ್ಲಿರಲಿಲ್ಲ.

ಸ್ನಾನ ಮುಗಿಸಿ ಸೀರೆಯುಟ್ಟು ಹೊರ ಬಂದಾಗ ಕಾಫೀ ಕುಡಿಯುತ್ತಿದ್ದ ಕಾಶೀಪತಿಗಳನ್ನು ನೋಡಿ "ಸಾರಿ, ಅಂಕಲ್.... ಸ್ವಲ್ಪ ತಡವಾಯ್ತು" ಸಂಕೋಚಿಸಿದಳು. ತಂದೆಯ ಸ್ನೇಹಿತರಾದ ಅವರ ಬಗ್ಗೆ ಅಭಿಮಾನದ ಜೊತೆ ಸ್ನೇಹವು ಇತ್ತು. ಆನಂದ್ ಸತ್ತ ನಂತರವು ಕಾಶೀಪತಿ ವಾರಕ್ಕೆರಡು ಸಲವಾದರೂ ಬರುತ್ತಿದ್ದರು, ಅವಳ ಮನೆಗೆ.

"ಪರ್ವಾಗಿಲ್ಲ, ನೋ ಪ್ರಾಬ್ಲಮ್. ನಾನು ಬೆರೆಸಿದ ಕಾಫೀ ರುಚಿ ನೋಡು" ಅವಳಿಗೆ ಒಂದು ಕಪ್ ಬೆರೆಸಿ ಕೊಟ್ಟರು. ಅವರ ಎದುರಿನಲ್ಲಿ ಕೂತು ಕುಡಿದಳು ಅವರಾಡುವ ಮಾತುಗಳನ್ನು ಕೇಳುತ್ತ.

ದಢ ದಢ ಅಡಿಗೆ ಮನೆಗೆ ನುಗ್ಗಿದವಳು ಚಟ್ನಿಗೆ ವಗ್ಗರಣೆ ಹಾಕುತ್ತಿದ್ದ ಗೋಪಿಯನ್ನು ಸರಿಸಿ "ಇನ್ನ ಹತ್ತು ನಿಮಿಷದಲ್ಲಿ ತಿಂಡಿ ರೆಡಿ ಇರ್ಬೇಕು" ಇಡ್ಲಿಯ ಬಟ್ಟಲುಗಳಿಗೆ ಹಿಟ್ಟನ್ನ ತುಂಬಿ ಗ್ಯಾಸ್ ಮೇಲಿಟ್ಟಳು.

"ಅಕ್ಕ, ಕಾಫೀ... ಚಿಕ್ಕೆಜಮಾನ್ರಿಗೆ" ಎಂದಾಗ ಗೋಪಿ ಹಿಂದಕ್ಕೆ ತಿರುಗಿದಳು. 'ಅಕ್ಕ' ಎನ್ನುವ ಆತ್ಮೀಯ ಪದ ಬಳಸಿದ್ದ ಅವಳ ಬಗ್ಗೆ. ಶಾರದ ಚಿಕ್ಕಪ್ಪನ ಮಕ್ಕಳು ಕೂಡ ಹೆಸರಿಡಿದು ಕೂಗುತಿದ್ದರೇ ವಿನಃ 'ಅಕ್ಕ' ಎಂದೇನು ಅನ್ನುತ್ತಿರಲಿಲ್ಲ. ಅವನನ್ನು ಹೆಚ್ಚಾಗಿ ಗಮನಿಸಿರಲಿಲ್ಲ ಅವಳು.

"ಸ್ಕೂಲಿಗೆ ಹೋಗ್ತೀಯಾ?" ಕೇಳಿದಳು.

ಇಲ್ಲವೆಂದು ತಲೆಯಾಡಿಸಿದವನ ಕಣ್ಣಲ್ಲಿ ದೈನ್ಯತೆ ಇತ್ತು. "ಇಲ್ಲಿಗೆ ಬರೋಕೆ ಮೊದ್ಲು ಹೋಗ್ತಾ ಇದ್ದರೂ ಸರ್ರ್ಯಾಗಿ ಕಲೀಲಿಲ್ಲ" ಹೇಳಿಕೊಂಡ.

ಅವಳಿಗೆ ಕಾಲೇಜಿಗೆ ಹೊರಡುವ ಗಡಿಬಿಡಿ ಇದ್ದುದ್ದರಿಂದ ಮತ್ತೇನು ಕೇಳಲು ಹೋಗಲಿಲ್ಲ. ಬಿಚ್ಚಿದ ಕೂದಲನ್ನು ಒಂದು ಕೈಯಲ್ಲಿ ಕೊಡವುತ್ತಲೇ ರೂಮಿಗೆ ಹೋದಳು.

"ಕಾಫೀ...!" ಮಂಚದ ಪಕ್ಕದ ಟೀಪಾಯಿ ಮೇಲಿಟ್ಟು ಕೂದಲಲ್ಲಿ ಕೂಮ್ ಆಡಿಸಿದವಳು ಲಗುಬಗನೆ ಬಂದು ಜಡೆ ಹೆಣೆದುಕೊಂಡು, ಮುಖದ ಶೃಂಗಾರ ಮುಗಿಸಿ ತಿರುಗಿದಾಗಲೂ ಕಾಫೀ ಅಲ್ಲೇ ಇತ್ತು. ವಸಂತ್ ಮಗ್ಗುಲು ಕೂಡ ಬದಲಾಯಿಸಿರಲಿಲ್ಲ.

"ಕಾಫೀ ತಣ್ಣಗಾಯ್ತು, ಬೇಗ ಕುಡ್ದುಬಿಡಿ" ಒಂದು ಸಣ್ಣ ವಿನಂತಿ ಮಾಡಿ ಅಡಿಗೆಯ ಮನೆಗೆ ಓಡಿದಳು, ವಗ್ಗರಣೆ ಹಾಕುತ್ತಿದ್ದ ಗೋಪಿ "ಅಕ್ಕ, ಇಡ್ಲಿ ರೆಡಿಯಾಯ್ತು" ವರದಿ ಒಪ್ಪಿಸಿದ.

ಇಡ್ಲಿ ಬಾಕ್ಸ್ ಡೈನಿಂಗ್ ಹಾಲ್‌ಗೆ ಬಂದರೂ, ವಸಂತ್ ಏಳುವ ಸೂಚನೆ ಕಾಣಲಿಲ್ಲ. ಬಹುಶಃ ಅವನಿನ್ನ ಹನಿಮೂನ್‌ನ ಮೂಡಿನಲ್ಲಿಯೇ ಇದ್ದಾನೆಂದುಕೊಂಡಾಗ, ಅವಳ ತುಟಿಯಂಚನು ಮುಗುಳ್ನಗು ಆಕ್ರಮಿಸಿತು. ಸತ್ಯ ಕಾಶೀಪತಿಗಳಿಗೆ ಮಾತ್ರ ಗೊತ್ತು. ಪ್ರತಿ ದಿನ ಅವನ ಸುಪ್ರಭಾತ ಒಂಬತ್ತರ ನಂತರವೆ.

"ನೀನು ತಗೋಮ್ಮ, ಅವನು ಹತ್ತೂವರೆಯ ನಂತರವೇ ಮನೆ ಬಿಡೋದು" ಬಲವಂತ ಮಾಡಿ ತಾವು ತಿಂಡಿಗೆ ಕೂತರು. ಅದೂ ಇದೂ ಮಾತಾಡಿದರು. ಹಾಕಿಕೊಂಡ ಮೂರು ಇಡ್ಲಿಗಳನ್ನ ಎರಡೇ ನಿಮಿಷದಲ್ಲಿ ಮುಗಿಸಿ ಎದ್ದ ಸೊಸೆಯನ್ನು ಅಭಿಮಾನದಿಂದ, ಈ ವಯಸ್ಸಿನಲ್ಲಿ ಇಂಥ ಚುರುಕು ಅಗತ್ಯವೆನಿಸಿತು.

ಕಾಫೀಯ ಕಪ್ ಕೆಳಗಿಟ್ಟು ಮೇಲೆದ್ದರು "ಹೇಗೂ ನಾನು ಫ್ರೀ. ನಿನ್ನ ಕಾಲೇಜಿಗ ಡ್ರಾಪ್ ಮಾಡಿ ಹಾಗೇ ಒಂದು ಸುತ್ತು ಹಾಕ್ಕೊಂಡ್, ಇವ್ನು ಹೊರಡೋ ವೇಳೆಗೆ ಮನೆಗೆ ಬರ್ತೀನಿ."

"ಬೇಡ ಅಂಕಲ್, ನಂಗೆ ಆಟೋ ಬಸ್ಸಿನಲ್ಲಿ ಓಡಾಡಿ ಅಭ್ಯಾಸವಿದೆ" ನಿರಾಕರಿಸಿದಳು. ಅವರು ಒಪ್ಪಲಿಲ್ಲ. ಕಾಲೇಜಿಗೆ ಡ್ರಾಪ್ ಮಾಡಿಯೇ ಹಿಂದಿರುಗಿದ್ದು.

ವಸಂತ್ ಗಡಿಗೆ ಗಾತ್ರ ಮುಖ ಮಾಡಿಕೊಂಡು ಕೂತಿದ್ದ. ಹೊರಟಾಗ

ಅವಳನ್ನ ತನ್ನ ಬಾಹುಗಳಲ್ಲಿ ತಗೊಂಡು "ಕಾಲೇಜಿಗೆ ಹೋಗೋದೇ ಬೇಡ" ಎಂದು ಅವಳ ಅಧರಗಳನ್ನ ತನ್ನ ತುಟಿಗಳಿಂದ ಬಂಧಿಸಿದಾಗ ಒದ್ದಾಡಿ ಬಿಟ್ಟಿದ್ದಳು. "ರಾತ್ರಿಯಲ್ಲ...." ಬಿಡಿಸಿಕೊಂಡು ಹೋಗಿದ್ದ ಮಡದಿಯ ಮೇಲೆ ಅವನಿಗೆ ಕೆಂಡದಂಥ ಕೋಪ.

"ಯಾಕೋ ಸುಮ್ನೇ ಕೂತಿದ್ದೀಯಾ ? ಇನ್ಮೇಲಾದ್ರೂ ಸ್ವಲ್ಪ ಚುರುಕಾಗು. ಶಾರದನ ಕಾಲೇಜ್ ಹತ್ರ ಡ್ರಾಪ್ ಮಾಡಿ ನಿನ್ನ ಆಫೀಸ್‌ಗೆ ಹೋಗ್ಬಹ್ದು."

ತಂದೆಯ ಮಾತನ್ನ ಗಮನಕ್ಕೆ ತೆಗೆದುಕೊಳ್ಳದವನಂತೆ ಕೂತೆ ಇದ್ದ. ಕಾಶೀಪತಿಗಳು ತಮ್ಮ ರೂಮಿಗೆ ಹೋದರು. ಅವರು ಈಗ ಪೂರ್ತಿ ರಿಟೈರ್ಡ್. ಕನ್‌ಸ್ಟ್ರಕ್ಷನ್ ಕಂಪನಿಯ ಪೂರ್ತಿ ಜವಾಬ್ದಾರಿಯನ್ನು ಮಗನಿಗೆ ವಹಿಸಿ ನಿಶ್ಚಿಂತರಾಗಿದ್ದರು. ಯಾವುದೇ ವ್ಯವಹಾರದಲ್ಲಿ ತಲೆ ಹಾಕರು. ಆ ವಿಷಯದಲ್ಲಿ ತನಗಿಂತ ಮಗ ಬುದ್ಧಿವಂತ ಎನ್ನುವ ನಂಬಿಕೆ ಅವರದು.

"ಯಜಮಾನ್ರೇ ಅಣ್ಣನವ್ರು ತಿಂಡಿ ಬೇಡಾಂದ್ರು" ಗೋಪಿ ಹೇಳಿದಾಗ ಹೊರಗೆ ಬಂದರು. ಷೂ ಕಟ್ಟುತ್ತಿದ್ದ ವಸಂಸತ್‌ನ ಮುಖ ಬಿಗಿದುಕೊಂಡಿದ್ದು ಅವರ ಗಮನಕ್ಕೆ ಬಂತು.

"ಎನೀ ಪ್ರಾಬ್ಲಮ್ ?" ಕೇಳಿದರು.

"ಏನಿಲ್ಲ...." ಎಂದು ತಲೆಯೆತ್ತಿದವನು ತಂದೆಯತ್ತ ನೋಡಿ ನೋಟ ಇಳಿಸಿದ. "ಶಾರದ ಕಾಲೇಜಿಗೆ ಹೋಗುವ ಅಗತ್ಯವಿದ್ಯಾ ?" ಮೊನಚಾಗಿತ್ತು ಅವನ ಪ್ರಶ್ನೆ.

"ಇದು ತೀರಾ ಕ್ಲಿಷ್ಟವಾದ ಪ್ರಶ್ನೆ. ಅದಕ್ಕೆ ಆನ್ಸರ್ ಅವ್ಳೇ ಮಾಡ್ಬೇಕು. ಅದ್ರಿಂದ ನಿಂಗೇನು ತೊಂದರೆ ? ಮನೆ ಒಂಬತ್ತಕ್ಕೆ ಬಿಟ್ಟರೂ ಸಂಜೆ ವೇಳೆಗೆ ವಾಪಸ್ಸು ಬರ್ತಾಳೆ. ಕೆಲವೊಮ್ಮೆ ಇನ್ನು ಬೇಗ ಬರ್ತಾಳೆ. ವರ್ಷದಲ್ಲಿ ಸಾಕಷ್ಟು ರಜ ದಿನಗಳು! ಪಾಠ ಹೇಳೋದು ಅವ್ಳಿಗೂ ಇಷ್ಟವಾದ ಕೆಲ್ಸ" ಇಷ್ಟು ವಿವರಣೆ ನೀಡಿದರು.

ಬಿರುಗಾಳಿಯಂತೆ ಎದ್ದು ಹೋದ. ಅವರಿಗೆ ಆಶ್ಚರ್ಯ, ಯಾವುದೇ ದುರಭ್ಯಾಸಗಳಿಲ್ಲ ವಸಂತನಿಗೆ. ಅವನಿಗೆ ಡೈಮಂಡ್ ಕನಸ್ಟ್ರಕ್ಷನ್ ಕಂಪನಿ ವಹಿಸಿಕೊಟ್ಟ ಮೇಲೆ ಸಾಕಷ್ಟು ಹಣ, ಹೆಸರು ಮಾಡಿತ್ತು. ಆದರೆ ಓದಿನಲ್ಲಿ ಮಾತ್ರ ಅಂಥ ಬುದ್ಧಿವಂತನಲ್ಲ. ಡೊನೇಷನ್ ಕೊಟ್ಟು ಬಿ.ಇ.,ಗೆ ಸೇರಿಸಿದರೂ ಪೂರ್ತಿ ಮಾಡದೆ ಅರ್ಧದಲ್ಲಿಯೆ ಬಿಟ್ಟಿದ್ದ.

ಇಂದು ಬರೀ ಎರಡೇ ಪಿರಿಯಡ್ ಇದ್ದುದ್ದರಿಂದ ಎರಡರ ವೇಳೆಗೆ

ಮನೆಗೆ ಬಂದಳು. ಬೆಳಗಿನ ಗಂಡನ ಮುನಿಸನ್ನ ಅಷ್ಟು ದೊಡ್ಡದಾಗಿ ಮಾಡಿಕೊಂಡಿರಲಿಲ್ಲ.

"ಊಟ ಮುಗ್ಸಿ ನಿದ್ದೆ ತೆಗ್ಯೊ ಆಲೋಚನೆಯಲ್ಲಿದ್ದೆ" ಕಾಶೀಪತಿಗಳು ಬಂದು ಊಟದ ಟೇಬಲ್ಲುನ ಮುಂದೆ ಕೂತರು. "ನಾನೇ ಬಡುಸ್ತೀನಿ, ಗೋಪಿ ನೀನು ಬೇರೆನಾದ್ರೂ ಕೆಲ್ಸ ನೋಡ್ಕೋಗು" ಅವನನ್ನ ಕಳಿಸಿ ಹತ್ತಿರ ನಿಂತು ಬಡಿಸತೊಡಗಿದಳು.

"ನೀನು ಕೂತ್ಕೋ" ಹೇಳಿದರು ಪೂರಿ ಮುರಿಯುತ್ತ.

"ವಸಂತ್ ಕೂಡ ಊಟಕ್ಕೆ ಬರೋ ಸಮಯುವಲ್ವಾ ! ಇಬ್ರೂ ಜೊತೆಯಾಗಿಯೇ ಊಟ ಮಾಡ್ತೀವಿ" ಎಂದಳು.

ಮಗ ಎರಡರಿಂದ ನಾಲ್ಕರ ಒಳಗೆ ಊಟಕ್ಕೆ ಬರುತ್ತಿದ್ದ. ಕೆಲವೊಮ್ಮೆ ಇನ್ನು ಲೇಟು. ಆವರೆಗೂ ಕಾಲೇಜಿಗೆ ಹೋಗಿ ಬಂದವಳು ಕಾಯುತ್ತ ಕೂಡುವುದು ಬೇಡವೆನಿಸಿದರೂ, ಬಲವಂತ ಮಾಡಬಾರದೆನಿಸಿತು.

"ಒಂದ್ಸಲ ಫೋನ್ ಮಾಡಿ ವಿಚಾರಿಸ್ಕೋ."

ಅದು ಅವಳಿಗೆ ಸರಿಯೆನಿಸಿತು. ಫೋನೆತ್ತಿದವನು ವಸಂತನೇ "ನಾನು ಶಾರದ ಮಾತಾಡ್ತಾ ಇರೋದು. ಊಟದ ಸಮಯುವಲ್ವಾ, ಯಾವಾಗ ಬರ್ತೀರಾ ?" ಕೇಳಿದಳು.

"ನಂಗೆ ಇಷ್ಟ ಬಂದಾಗ" ಫೋನ್ ಕುಕ್ಕಿದ.

ತುಂಬ ಬಿಜಿ ಇರಬೇಕೆಂದುಕೊಂಡಳಷ್ಟೆ. ಅವಳಲ್ಲಿ ನೆಗೆಟಿವ್ ಥಿಂಕಿಂಗ್ ಕಡಿಮೆ. ಇದು ಸೇತುರಾಮ್ ತರಬೇತಿಯೋ, ಅಥವಾ ಅವಳ ಸಹಜ ಸ್ವಭಾವವೋ.

"ಏನು ಹೇಳ್ದಾ ?" ವಿಚಾರಿಸಿದರು.

ಅವನ ಮಾತನ್ನ ಹಾಗೆಯೇ ಹೇಳುವ ಬದಲು "ಬರ್ತೀನಿ... ಅಂದ್ರು" ಎಂದು ಅಲ್ಲಿಯೇ ಕೂತಳು ಅವರ ಊಟ ಮುಗಿಯುವವರೆಗೂ.

"ಥ್ಯಾಂಕ್ಯೂ, ಥ್ಯಾಂಕ್ಯೂ... ನೀನು ಎದುರಿಗೆ ಇದ್ದುದ್ದರಿಂದ ನಾಲ್ಕು ತುತ್ತು ಹೆಚ್ಚೇ ಊಟ ಮಾಡ್ದೇ. ಆರಾಮಾಗಿ ಒಂದು ನಿದ್ದೆ ತೆಗೀತೀನಿ" ಅಂದಿನ ಪೇಪರ್ ಹಿಡಿದು ತಮ್ಮ ರೂಮಿಗೆ ಹೋದರು. ನಾಲ್ಕರವರೆಗೂ ಅವರು ಹೊರಗೆ ಬರರು. ಈಗ ಶಾರದ ಇದ್ದುದ್ದರಿಂದ ಪೂರ್ತಿ ನಿಶ್ಚಿಂತೆ.

ಯಾಕೋ ಅವಳಿಗೆ ಊಟ ಬೇಡವೆನಿಸಿದ್ದರಿಂದ "ಗೋಪಿ, ನೀನು

ಊಟ ಮಾಡು" ಎಂದು ಹೇಳಿ ರೂಮಿಗೆ ಹೋಗಿ ಹಾಸಿಗೆಯ ಮೇಲೆ ಉರುಳಿಕೊಂಡಳು. ಜೊಂಪು ಹತ್ತಿತು. ಆರಾಮಾಗಿ ನಿದ್ರಿಸಿದಳು. ಮದುವೆಯಾದದ್ದಿನಿಂದ ಇಂದಿನವರೆಗೂ ನಿದ್ದೆ ಇಲ್ಲದ ರಾತ್ರಿಗಳೇ.

ದೊಡ್ಡ ಸದ್ದಾದಾಗ ಕಣ್ಣು ಬಿಟ್ಟಳು. ಹಿತ್ತಾಳೆಯ ಹೂಜಿ ನೆಲದ ಮೇಲೆ ಬಿದ್ದು ಹೊರಳಾಡುತಿತ್ತು. ವಸಂತ್ ನಿಂತಿದ್ದ. ಅವಳಿಗೆ ತೀರಾ ನಿದ್ದೆಯ ಅಗತ್ಯವಿದುದ್ದರಿಂದ ತುಟಿಗಳ ಮೇಲೆ ಪ್ರಯತ್ನಪೂರ್ವಕವಾಗಿಯೆ ಮುಗುಳ್ನಗು ತಂದುಕೊಂಡಿದ್ದು.

ಬಗ್ಗಿ ಹೂಜಿಯನ್ನೆತ್ತಿ ಮೊದಲ ಸ್ಥಾನದಲ್ಲಿಟ್ಟು "ಈಗ ಅಂಕಲ್ ಮಲಗೋಕೆ ರೂಮಿಗೆ ಹೋದ್ರು. ನಾವು ಊಟ ಮಾಡೋಣ" ಹೊರಟವಳನ್ನ ನಿಲ್ಲಿಸಿದ ರೆಟ್ಟೆ ಹಿಡಿದು "ನಂಗೆ ಈಗ ಊಟ ಬೇಡ. ನೀನು ಕಾಲೇಜಿಗೆ ಹೋಗೋವಾಗ ಈ ವೇಳೆಗೆ ಬರ್ತೀನಿಂತ ಯಾಕೆ ತಿಳಿಸ್ಲಿಲ್ಲ!" ದನಿಯಲ್ಲಿ ಜೋರಿತ್ತು.

"ಇನ್ನ ಒಂದೆರಡು ಪಿರಿಯಡ್ ಇತ್ತು. ಪ್ರೊಫೆಸರ್ ರಂಗೇಗೌಡರು ತಮ್ಮ ಪೋರ್ಷನ್ ಕವರಾಗಿಲ್ಲಂತ ರಿಕ್ವೆಸ್ಟ್ ಮಾಡ್ಕೊಂಡ್ರು. ಅದ್ಕೇ ಬೇಗ ಮನೆಗ್ಬಂದಿದ್ದು" ಕಾರಣ ತಿಳಿಸಿದಳು.

ಮೆಲ್ಲಗೆ ರೆಟ್ಟೆ ಬಿಡಿಸಿಕೊಂಡು ಹಾಸಿಗೆಯ ಮೇಲೆ ಉರುಳಿಕೊಂಡಳು. ನಿದ್ದೆ ಗಾಢವಾಗಿ ಅವಳನ್ನು ಅಪ್ಪುತಿತ್ತು.

"ಯಾವ ರಂಗೇಗೌಡರು?" ಕೇಳಿದ.

"ಪ್ರೊಫೆಸರ್ ರಂಗೇಗೌಡರು" ಎಂದು ಕಣ್ಣು ಮುಚ್ಚಿಕೊಂಡಳು.

"ಊಟಕ್ಕೆ ರೆಡಿ ಮಾಡಿದ್ದೀನಿ" ಗೋಪಿ ಹೊರಗಿನಿಂದಲೇ ಕೂಗಿದ.

ಬಟ್ಟೆ ಬದಲಾಯಿಸಿದ ವಸಂತ "ನಡೀ ಊಟ ಮಾಡೋಣ. ಬಂದ ಕೂಡ್ಲೆ ಮಲಗೋ ಅಂಥ ಆಯಾಸವೇನು?" ತೋಳಿಡಿದ. ಆ ನಿದ್ದೆಯ ಮಂಪರಿನಿಂದ ಎದ್ದು ಬರಲು ಅವಳಿಂದ ಸಾಧ್ಯವಿರಲಿಲ್ಲ. "ನಂಗೆ ನಿದ್ದೆ" ಅಷ್ಟೇ ಹೇಳಿದ್ದು. ಕಣ್ ಬಿಡಲು ಕೂಡ ಸಾಧ್ಯವಿರಲಿಲ್ಲ ಅವಳಿಂದ.

ಆದರೆ ವಸಂತನ ಪಟ್ಟು ಬಲವಾಗಿತ್ತು. ಕೈ ಹಿಡಿದವಳ ಬಗ್ಗೆ ಅವನದು ಸ್ವಷ್ಟವಾದ ಕಲ್ಪನೆ. ಅದನ್ನು ದಕ್ಕಿಸಿಕೊಳ್ಳಬೇಕೆಂಬ ಛಲ ಕೂಡ. ನಿದ್ದಿಸುತ್ತಿದ್ದವಳ ಮುಖದ ಬಳಿಗೆ ತುಟಿಗಳನ್ನು ನಿಧಾನವಾಗಿ ಒಯ್ದುವನು ತಟ್ಟನೆ ತುಟಿಯ ಕಚ್ಚಿದ ಸ್ವಲ್ಪ ನೋವಾಗುವಂತೆ. ಉಮರ್ ಖಯ್ಯಾಮರ ನಿದ್ರಿಸುತ್ತಿದ್ದ ಮಡದಿಯ ತುಟಿಗಳಿಗೆ ಹೂಮುತ್ತನ್ನು ಕೊಡುವ ರಸಿಕತೆಗೂ

ಇಂದಿನ ಒರಟುತನಕ್ಕೂ ವ್ಯತ್ಯಾಸವಿದೆಯೆನ್ನುವ ಪರಿಜ್ಞಾನ ಆ ಸಮಯದಲ್ಲಿ ಇರಲಿಲ್ಲ. ಗಾಢವಾದ ನಿದ್ದೆಯಲ್ಲಿ ಇದು ಮಧುರ ಅನುಭವವಾಗಲಿಲ್ಲ, ಹಿಂಸೆಯೆನಿಸಿತು. ಎಚ್ಚರ ಮಾಡಿಕೊಂಡು ಎದ್ದು ಕೂತಳು. ಅವನ ಕೊರಳಿಗೆ ಹಾರವಾಗುವ ಬದಲು ಸರಿಸಿ ಮೇಲೆದ್ದಳು.

"ಬನ್ನಿ ... ಊಟ ಮಾಡೋಣ."

ಅವಳ ಕರೆಗೆ ಓಗೊಡದೆ ಮುನಿಸಿಕೊಂಡು ಕೂತಾಗ ಅವಳಿಗೆ ಅರ್ಥವಾಗಲಿಲ್ಲ. ಬುದ್ಧಿ ಖರ್ಚು ಮಾಡಿ ರಮಿಸಿ ಕರೆದೊಯ್ದಳು. ಊಟದ ಮಧ್ಯ ಪ್ರೊಫೆಸರ್ ರಂಗೇಗೌಡರು ಪ್ರತ್ಯಕ್ಷವಾದಂತೆ ಮತ್ತೆ ಅವರ ವಿಷಯಃ ಎತ್ತಿದ.

"ಯಾರು ರಂಗೇಗೌಡರು ?"

"ಸೋಷಿಯಾಲಜಿ ಪ್ರೊಫೆಸರ್" ಎಂದಳು ಅನ್ನ ಕಲೆಸುತ್ತ.

"ಅಂದರೇ, ನಿನ್ನ ಕೊಲೀಗ್"

ಅವಳೇನು ಪ್ರತಿಕ್ರಯಿಸದೆ ಊಟ ಮಾಡತೊಡಗಿದಳು. ರಂಗೇಗೌಡರ ಬಗ್ಗೆ ಅನಾವಶ್ಯಕವಾಗಿ ಮಾತು ಬೆಳೆಸುವುದು ಅವಳಿಗೆ ಬೇಕಿರಲಿಲ್ಲ.

"ಇಬ್ಬರು ಹೆಂಡತಿಯರಿಗೆ ಸೋಡಾ ಚೀಟಿ ಕೊಟ್ಟ ರಂಗೇಗೌಡರು ತಾನೇ" ಎಂದ ಮತ್ತೆ. ತಲೆಯೆತ್ತಿ ಶೀತಲ ನೋಟ ಬೀರಿದವಳು "ನಮ್ಮ ಕಾಲೇಜಿನಲ್ಲಿ ಇರೋದು ಒಬ್ಬರೇ ರಂಗೇಗೌಡರು" ಮೊಸರನ್ನ ಸುರಿದುಕೊಂಡಳು. ಮಾತುಗಳು ಬೆಳೆಯುವುದು ಅವಳಿಗೆ ಬೇಕಿರಲಿಲ್ಲ.

"ಸ್ವಲ್ಪ ಕುಳ್ಳಗೆ, ನಸು ಕಪ್ಪು ಬಣ್ಣದ ವ್ಯಕ್ತಿನೇ ಅಲ್ವಾ ರಂಗೇಗೌಡರು. ಈಚೆಗೆ ಅವ್ರ ಕೊಲೀಗ್ ಶಾಂತ ಅನ್ನೋರ್ನ ಪ್ರೇಮಿಸಿ ಡೈವೋರ್ಸ್ ಕೊಟ್ಟರಂತಲ್ಲ. ನಿಂಗೆ ಈ ವಿಷ್ಯ ತಿಳಿಯದಾ ? ಇಡೀ ಕಾಲೇಜಿಗೆ ಗೊತ್ತಿರೋ ವಿಷ್ಯ ನಿಂಗೆ ತಿಳಿಯದಾ? " ಆರಾಮಾಗಿ ಮಾತಾಡುತ್ತ ಮಾತು ಷುರು ಮಾಡಿದ್ದ.

ಮೊಸರನ್ನ ಗಂಟಲಲ್ಲಿ ಹಿಡಿಯಿತು. ಅನಾವಶ್ಯಕವಾಗಿ ಆ ವ್ಯಕ್ತಿಯನ್ನ ಇಲ್ಲಿ ಎಳೆದಾಡುವುದು ಇಷ್ಟವೆನಿಸಲಿಲ್ಲ.

"ಗೊತ್ತು ! ಅವರೊಬ್ಬ ಪ್ರೊಫೆಸರ್ ಆಗಿ ನಂಗೆ ಗೊತ್ತೆ ವಿನಃ ವ್ಯಕ್ತಿಗತ ವಿಷ್ಯದ ಬಗ್ಗೆ ನಂಗೆ ಇಂಟರೆಸ್ಟಿಲ್ಲ" ನೀರು ಕುಡಿದು ನೆತ್ತಿ ಹತ್ತಿ ತಾನೇ ನೆತ್ತಿಯ ಮೇಲೆ ತಟ್ಟಿಕೊಂಡಳು.

ಆಗ ನೆನಪಾಯಿತು ತಾತನ ಮಮತೆ. ಹತ್ತಿರ ಕೂತು ಬಡಿಸುತ್ತಿದ್ದವರು ಯಾವುದೋ ಜೋಕ್‌ಗಳನ್ನು ಕಟ್ ಮಾಡಿ ಎರಡು ತುತ್ತು ಹೆಚ್ಚಿಗೆ ಊಟ ಮಾಡುವಂತೆ ಮಾಡುತ್ತಿದ್ದ ಅವರ ಎದೆಯ ಮೇಲೆ ತಲೆ ಇಟ್ಟು ಕಣ್ಣೀರು ಸುರಿಸಬೇಕೆನಿಸಿತು. ತಕ್ಷಣ ಎದ್ದು ಕೈ ತೊಳೆದು ಹೋಗಿಬಿಟ್ಟಳು.

ಕನಿಷ್ಟ ಅವಳ ಬಗ್ಗೆ ಯೋಚಿಸಲಿಲ್ಲ. ಇದನ್ನ ಅಹಂಕಾರವೆಂದು ಭಾವಿಸಿದ. ಅವನ ಮಟ್ಟಿಗೆ ಹಾಗೇ ಎದ್ದು ಹೋದುದ್ದು ದೊಡ್ಡ ಅಪರಾಧವೆನಿಸಿತು. ಆದರೂ ಹೊಟ್ಟೆ ಹಸಿದಿದ್ದರಿಂದ ಸಾವಕಾಶವಾಗಿ ಊಟ ಮಾಡಿಯೆ ಎದ್ದು ರೂಮಿಗೆ ಬಂದಳು. ಕಣ್ಮುಚ್ಚಿ ಮಲಗಿದ್ದಳು ಶಾರದ. ಅವಳು ಈಗ ಬಾಲ್ಯದ ನೆನಪುಗಳ ಮಧ್ಯೆ ನಲಿದಾಡುವ ಚಿಟ್ಟೆಯಾಗಿ ವಿಹರಿಸುತ್ತಿದ್ದಳು.

ಫೋನ್ ಸದ್ದು ಮಾಡಿದ್ದರಿಂದ ಅತ್ತ ಗಮನವರಿಸಿದ ವಸಂತ. ಲೈನ್‌ನಲ್ಲಿ ಸೇತುರಾಮ್ ಇದ್ದರು. "ಅಲ್ಲಿಗಿಂತ ಇಲ್ಲಿ ನೂರು ಪಾಲು ಚೆನ್ನಾಗಿದೆ. ಯಾತರ ಕೊರತೆ ? ಷಾಪಿಂಗ್ ಮಾಡಿಕೊಂಡು ಬಂದ ವಸ್ತುಗಳನ್ನೆ ಇನ್ನ ಸಾವರಿಸಿಕೊಂಡಿಲ್ಲ, ನಿಮ್ಮ ಮೊಮ್ಮಗಳು" ಹೇಳಿದ್ದು ಅವಳಿಗೆ ಕೇಳಿಸಿತು.

"ನಿಮ್ಮ ತಾತ ಲೈನ್‌ನಲ್ಲಿದ್ದಾರೆ" ಅವಳಿಗಿತ್ತವನು ಇನ್ನೊಂದು ಫೋನೆತ್ತಿಕೊಂಡ. "ಎಲ್ಲಾ ಮಾಮೂಲಾಗಿ ವಿಚಾರಿಸಿದ್ದೇ, ಹೆಚ್ಚೇನು ಇರಲಿಲ್ಲ ಅವರುಗಳ ಮಾತುಕತೆಯಲ್ಲಿ" ಆಗಾಗ ಮನೆ ಕಡೆ ಹೋಗಿ ಬಾ ಎಂದು ಆದೇಶವಿತ್ತರು ಕೊನೆಯಲ್ಲಿ. ತಕ್ಷಣ ಈ ಭಾನುವಾರ ಹೋಗಿ ಬರುವ ನಿಶ್ಚಯ ಮಾಡಿದಳು ಶಾರದ.

ಮಂಕು ಕವಿದಂತೆ ಒಂದು ಕಡೆ ಕೂತುಬಿಟ್ಟಳು. ಸೇತುರಾಮ್ ಬರೀ ತಾತ, ಪಾಲಕ ಮಾತ್ರವಾಗಿರಲಿಲ್ಲ, ಒಳ್ಳೆಯ ಸ್ನೇಹಿತನಂತೆ ಮೊಮ್ಮಗಳ ಬಳಿ ನಡೆದುಕೊಳ್ಳುತ್ತಿದ್ದರು. ಕಾಲೇಜಿನಲ್ಲಿ ನಡೆಯುವ ಎಷ್ಟೋ ವಿಷಯಗಳನ್ನು ಅವರೊಂದಿಗೆ ಚರ್ಚಿಸುತ್ತಿದ್ದಳು. ಒಂದು ಸೀಮಿತವಾದ ಅನುಭವದಲ್ಲಿ ಸಲಹೆ, ಸೂಚನೆಗಳನ್ನು ಕೊಡುತ್ತಿದ್ದರು.

"ಏನ್ಹೇಳಿದ್ರು ?" ಅವಳೆದುರು ಕಾಲು ಮೇಲೆ ಕಾಲು ಹಾಕಿಕೊಂಡು ಕೂತು ವಿಚಾರಿಸಿದ. "ಮಾಮೂಲಿ ವಿಷಯನೇ, ಅವ್ರಿಗೆ ಬೇಗ ಇಲ್ಲಿಗೆ ಹಿಂದಿರುಗೋ ಆಸೆ. ಚಿಕ್ಕಪ್ಪ ಒಪ್ತಾ ಇಲ್ಲ. ಈ ಸಲದ ವೆಕೇಷನ್‌ನಲ್ಲಿ ನಮ್ಮನ್ನ ಅಮೆರಿಕಾಗೆ ಕರೆದಿದ್ದಾರೆ" ಎಂದಳು.

ಅಷ್ಟೇನೋ ಎನ್ನುವಂತೆ ಅವಳತ್ತ ನೋಡಿದ. ತಲೆಯನ್ನು ಪೂರ್ತಿ ಹಿಂದಕ್ಕೆ ಚಾಚಿ ಚಾವಣಿಯನ್ನ ದಿಟ್ಟಿಸುತ್ತಿದ್ದಳು. ಅವಳಿಗೆ ಅಮೆರಿಕಾಗೆ ಹೋಗುವ ಆತುರಕ್ಕಿಂತ, ಸೇತುರಾಮ್ ಬೇಗ ಬಂದರೇ ಚೆನ್ನೆನಿಸಿತು.

"ರಂಗೇಗೌಡರು ಪ್ರೀತಿಸಿ ವಿವಾಹವಾದ ಶಾಂತನ ಯಾಕೆ ಡೈವೋರ್ಸ್ ಮಾಡಿದ್ದು?" ಮತ್ತೆ ಅದೇ ವಿಷಯಕ್ಕೆ ವಸಂತ ಬಂದಾಗ ಅವಳಿಗೆ ಅಚ್ಚರಿ. ಪ್ರೊಫೆಸರ್ ದಾಂಪತ್ಯ ಜೀವನ ಬಗ್ಗೆ ಇವರಿಗೇಕೆ ಕುತೂಹಲ? ಇಷ್ಟವೆನಿಸಲಿಲ್ಲ "ಅದು ತೀರಾ ವೈಯಕ್ತಿವಾದ್ದುದ್ದು" ಎಂದವಳೇ ಎದ್ದು ಹೊರಗೆ ಬಂದಳು.

ಕಾಶೀಪತಿಗಳು ಕೂತು ಕನ್ನಡಕವನ್ನೊರೆಸುತ್ತಿದ್ದವರು ಮುಗುಳ್ನಗೆ ಚೆಲ್ಲಿ "ಬಾ ಕೂತ್ಕೋ, ವಸಂತ ಮಲಗಿದ್ದಾನಾ? ಏನೇ ಆಗ್ಲಿ, ಇವ್ನ ಮೇಲೊಬ್ಬ ಬಾಸ್ ಇರ್ಬೇಕಿತ್ತು. ಇವನದ್ದೇ ಸಾಮ್ರಾಜ್ಯ, ಇವ್ನೆ ರಾಜ.... ಇವ್ನೇ ಮಂತ್ರಿ" ಎಂದರು.

ಅವಳೇನು ಈ ಮಾತಿಗೆ ಪ್ರತಿಕ್ರಯಿಸುವಂತಿರಲಿಲ್ಲ.

"ಕೇರಂ ತಗೊಂಡ್ಬಾರೋ ಗೋಪಿ. ನಾನು, ಶಾರದ ಒಂದಾಟ ಆಡ್ತೀವಿ" ಕೂಗಿ ಹೇಳಿದರು. ಆರಾಮಾಗಿ ನಗು ನಗುತ್ತ ವ್ಯಂಗ್ಯವಿಲ್ಲದೆ ಮಾತಾಡುವ ಕಾಶೀಪತಿ ಅಂಕಲ್ ಮೊದಲಿನಿಂದಲೂ ಇಷ್ಟವೆ.

ಪಾನ್ ಜೋಡಿಸುತ್ತಿದ್ದವಳು ತಲೆಯೆತ್ತಿ "ಅಂಕಲ್, ನಮ್ಮಣ್ಣ ಒಮ್ಮೆ ಕೂಡ ಕೇರಂನಲ್ಲಿ ನಿಮ್ಮನ್ನ ಗೆಲ್ಲೋಕೆ ಬಿಡ್ತಾ ಇರ್ಲಿಲ್ವಂತೆ" ನೆನಪಿಸಿದಳು. ಅಷ್ಟು ಸಾಕಿತ್ತು ಅವರಿಗೆ.

"ಹೇಗೆ ಬಿಡ್ತಾನೆ ! ತಾನು ದೊಡ್ಡ ಛಾಂಪಿಯನ್ ಅನ್ನೋ ಬಡಿವಾರ ಅವನದು. ಎಷ್ಟೋ ಸಲ ಬಡಿದಾಟಕ್ಕೆ ಇಳಿದಿದೆ. ನನ್ನ ಮೇಲಾದಾಗಲ್ಲೆಲ್ಲ, ಆನಂದ್ ಕಾಲಿಡಿದು ಕೆಡವಿಬಿಡ್ತಾ ಇದ್ದ. ಆ ದಿನಗಳು ಎಷ್ಟೊಂದು ಚೆನ್ನ".

ಸೇತುರಾಮ್‌ನ ಬಿಟ್ಟರೇ ಅವಳ ತಂದೆಯನ್ನು ಹೆಚ್ಚು ತಿಳಿದವರು ಇವರೊಬ್ಬರೆ. ಇಂದಿಗೂ ಮಾನಸಿಕವಾದ ಗೆಳೆತನದ ಮೂಡ್‌ನಲ್ಲಿಯೇ ಇರುತ್ತಿದ್ದ ವ್ಯಕ್ತಿ.

ಒಂದೇ ಸಮ ಮೂರು ಆಟಗಳಲ್ಲಿ ಶಾರದ ಗೆದ್ದಾಗ ಅವರ ಕಣ್ಣಲ್ಲಿ ನೀರಿತ್ತು. "ನನ್ನ ಆನಂದ ಸತ್ತಿಲ್ಲ. ನಾನು ತುಂಬ ಅದೃಷ್ಟವಂತ. ಈ ಸಲ ಗೆಲ್ಲು ನೋಡೋಣ" ಪಾನ್‌ಗಳನ್ನು ಜೋಡಿಸತೊಡಗಿದಾಗ, ಹೊರಗೆ ಬಂದ ವಸಂತ.. ನಿಂತಿದ್ದ ಗೋಪಿ ಕಡೆ ಕೆಂಗಣ್ಣು ಬಿಟ್ಟ.

"ನಿಂತು ಕೇರಂ ನೋಡೋಕಾ, ನಿಂಗೆ ಸಂಬಳ ಕೊಡೋದು. ಹೋಗಿ ಕೆಲ್ಸ ನೋಡು" ಸಿಡುಕಿದ.

ಪಾನ್‌ಗಳ ಮೇಲಿದ್ದ ಅವರ ಕೈ ಹಾಗೆಯೆ ನಿಂತಿತು. ವಸಂತ್‌ನ ಮುದ್ದು ಮಾಡಿದ್ದುಂಟು. ದುರಹಂಕಾರ ಮಾತ್ರ ಇಷ್ಟವಾಗದು. ಆದರೆ ಅವರು ಅರ್ಥ ಮಾಡಿಕೊಂಡಿದ್ದು ಬೇರೆ ರೀತಿಯಲ್ಲಿ. ಎಲ್ಲವನ್ನು ಹಾಗೆ ಬಿಟ್ಟು ಮೇಲೆದ್ದು ರೂಮಿಗೆ ಹೋದರು. 'ಅವನು ಮನೆಯಲ್ಲಿದ್ದಾಗ ಸೊಸೆಯನ್ನು ಕೇರಂ ಆಟಕ್ಕೆ ಕೂಡಿಸಿಕೊಂಡಿದ್ದು ತಪ್ಪು' ಎಂದುಕೊಂಡರು.

"ನಿಮ್ಗೇ ಕೇರಂ ಇಷ್ಟವಿಲ್ವಾ ? ನಮ್ಮಣ್ಣ ಕೂಡ ಒಳ್ಳೆ ಪ್ಲೇಯರಂತೆ. ತಾತ ನನ್ನ ಕೂಡಿಸಿಕೊಳ್ಳೋರು ಆಡೋಕೆ" ಸರಳವಾಗಿ ಹೇಳಿದಳು.

ಮುಖ ಬಿಗಿದುಕೊಂಡೇ ಹೊರಗೆ ಹೋದ. ವಿವಾಹವಾದ ಒಂದು ತಿಂಗಳಲ್ಲಿಯೇ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದಳು. ಪ್ರೇಮ ಪ್ರೀತಿ ಬಯಕೆಯಲ್ಲಿ ಹೊಗೆಯಾಡಿ ಸತ್ತು ಹೋದರೇ ಉಳಿಯೋದೇನು? ಇದೇನಾ ದಾಂಪತ್ಯ? ಇಷ್ಟಕ್ಕಾಗಿ ಇಷ್ಟು ಕಟ್ಟಳೆಗಳು, 'ಪ್ರೀತಿಯೊಂದೇ ದಾಂಪತ್ಯಕ್ಕೆ ಭದ್ರವಾದ ಬುನಾದಿ' ಮದುವೆಗೆ ಮುನ್ನ ಇಂಥ ಅರ್ಥ ಬರುವ ಹಲವು ಮಾತುಗಳನ್ನ ಹೇಳಿದ್ದು ಇಂಥ ಸಮಯದಲ್ಲಿ ಅನುಕೂಲವಾಗಲಿದೆಯೆಂದೆ ಇರಬಹುದು.

ಶಾರದ ಎದ್ದು ಹೊರಗೆ ಬಂದಳು. ಅಡ್ಡಾಡುತ್ತಿದ್ದ ಬಿರುಸಿನಿಂದ ವಸಂತ ಹೇಗೆ ಮಾತು ಪ್ರಾರಂಭಿಸಬೇಕೆಂದು ಯೋಚಿಸಿದಳು.

"ನಿಂಗೆ ಶಾಂತ ಗೊತ್ತಾ?" ಕೇಳಿದ.

ಯಾವ ಶಾಂತ ಎಂದು ಯೋಚಿಸಿದಳು. ತಟ್ಟನೆ ಅವಳಿಗೆ ಪ್ರೋಫೆಸರ್ ರಂಗೇಗೌಡರ ಮಾಡಿ ಪತ್ನಿ ಶಾಂತಳ ಬಗ್ಗೆ ಪ್ರಶ್ನಿಸುತ್ತಿರುವುದು ಎಂದು ಅನ್ನಿಸಲೆ ಇಲ್ಲ.

"ಯಾವ ಶಾಂತ?"

"ಅದೇ ರಂಗೇಗೌಡರಿಂದ ಡೈವೋರ್ಸ್ ಪಡೆದ ಶಾಂತ, ಅಷ್ಟು ತಿಳಿಯೋಲ್ವಾ? ಅಥವಾ ನಟನೆನಾ?" ಬಿರುಸಾಗಿತ್ತು ಅವನ ನುಡಿಗಳು. ಇದು ಅವಳ ಮನಸ್ಸಿನ ಆಳಕ್ಕೆ ಬಿದ್ದ ಪೆಟ್ಟು. ಚೇತರಿಸಿಕೊಳ್ಳಲು ನಿಮಿಷಗಳೆ ಬೇಕಾಯಿತು. ಸುಮ್ಮನೆ ಒಳಗೆ ಹೋದಳು. ಎಲ್ಲೋ ಅವರ ಪಾಡಿಗೆ ಅವರಿದ್ದ ರಂಗೇಗೌಡರು, ಶಾಂತಳನ್ನು ಮಾತುಗಳ ಮೂಲಕ ತಮ್ಮ ನಡುವೆ ತಂದು ಕೊಳ್ಳುವುದು ಹಾಸ್ಯಸ್ಪದವೆನಿಸಿತು.

ಒಂಟಿಯಾಗಿ ಕೂತು ಕೇರಂ ಆಡತೊಡಗಿದಳು. ತಾಯಿಯು ನೆನಪಿರಲಿಲ್ಲ. ತಂದೆಯು ನೆನಪು ಇತ್ತು. ಅವರು ಸತ್ತಾಗ ತೀವ್ರತರನಾದ ಅನಾರೋಗ್ಯಕ್ಕೆ ಒಳಗಾಗಿದ್ದರು. ಅಲ್ಪ ಸ್ವಲ್ಪ ಉಳಿಸಿಟ್ಟ ಹಣ ಆ ಸಮಯದಲ್ಲಿಯೇ ಖರ್ಚಾಗಿದ್ದು.

ಆನಂದ್ ಅಧ್ಯಾಪಕ ವೃತ್ತಿಯಲ್ಲಿದ್ದರು. ಕಾಲೇಜಿನ ವಿದ್ಯಾರ್ಥಿಗಳಲ್ಲಿ ಸ್ನೇಹದಿಂದ ಬೆರತು ಹೋಗುತ್ತಿದ್ದರು. ಕ್ರೀಡಾಂಗಣಕ್ಕೆ ಹೋಗಿ ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಿದ್ದರು. ಒಮ್ಮೆ ಕೂಡ ಅವಳನ್ನ ಗದರಿಸಿದ್ದು ಕೂಡ ನೆನಪಿರಲಿಲ್ಲ. ಮನೆಗೆ ಬಂದರೆ ಶಾರದ, ಶಾರದ, ಶಾರದ ಆ ಹೆಸರಿನಿಂದಲೆ ತುಂಬಿಸಿ ಬಿಡುತ್ತಿದ್ದರು. ಎಷ್ಟು ಹಿತವಾದ ನುಡಿಗಳು ಅವು.

ಜಜಜ

ಶನಿವಾರವೆ ಆ ಮನೆಗೆ ಹೋಗಿ ಬರುವುದೆಂದು ನಿಶ್ಚಯಿಸಿಕೊಂಡಿದ್ದರಿಂದ, ಬೆಳಿಗ್ಗೆ ಎದ್ದ ಕೂಡಲೇ ವಸಂತನ ಕಿವಿಯ ಬಳಿ ಉಸುರಿದಳು. "ನಮ್ಮ ಮನೆಗೆ ಹೋಗೋ ಪ್ರೋಗ್ರಾಂ ಹಾಕ್ಕೊಂಡಿದ್ದೀನಿ. ಅವನು ಅಲುಗಲಿಲ್ಲ. ಹೊದ್ದಿಕೆ ಸರಿಸಿ ಹೊರಗೆ ಬಂದವಳು ಸ್ನಾನ ಮುಗಿಸಿ ಕಾಫೀ ಹಿಡಿದು ಪೇಪರ್ ಹಿಡಿದು ಮುಂದಿನ ಬಾಲ್ಕನಿಯಲ್ಲಿ ಕೂತಿದ್ದ ಕಾಶೀಪತಿಗಳ ಬಳಿ ಹೋದಳು."

"ಅಂಕಲ್, ನಮ್ಮ ಮನೆಗೆ ಹೋಗ್ಬರ್ತೀನಿ"

ಸೊಸೆಯ ಮಾತಿಗೆ ತಲೆಯೆತ್ತಿದವರ ಕಣ್ಣುಗಳು ತೇವಗೊಂಡವು, ಅವರ ತವರು ಮನೆಯವರಾಗಿ ಭಾರತದಲ್ಲಿ ಯಾರು ಇರಲಿಲ್ಲ, ಹತ್ತಿರದ ಬಂಧುಗಳೆನಿಸಿಕೊಂಡವರು.

ಕಪ್‌ನ ಟೀಪಾಯಿ ಮೇಲಿಟ್ಟು "ನಾನು ಕೂಡ ನಿಮ್ಮೊಂದಿಗೆ ಬರೋನೇ. ಆದರೆ ಇಂದು ಎಲ್ಲಾ ರಿಟೈರ್ಡ್ ಪರ್ಸನ್ಸ್ ಎಲ್ಲಾ ಸೇರಿ ಒಂದು ಕಲ್ಚರಲ್ ಪ್ರೋಗ್ರಾಂ ಹಮ್ಮಿಕೊಂಡಿದ್ದೇವೆ. ಬೇರೆಯವ್ರಿಗೆ ಅಲ್ಲಿ ಪ್ರವೇಶದ ಅವಕಾಶವಿಲ್ಲ" ಜೋರಾಗಿ ನಕ್ಕರು.

ಅದೇನೆಂದು ಒಮ್ಮೆ ಸೇತುರಾಂ ಹೇಳಿದ್ದರು. "ಅಂದು ಪಥ್ಯವೆಲ್ಲ ಪಕ್ಕಕ್ಕಿಟ್ಟು , ಇಷ್ಟಬಂದ್ದಿದ್ದನ್ನು ತಿನ್ನೋ ಪ್ರೋಗ್ರಾಂ, ಸಂಜೆಯೇ ಡಾಕ್ಟು ಬಳಿ ಒಡ್ತಾರೆ. "

"ನಂಗೆ ಗೊತ್ತು , ಹೆಚ್ಚು ಖಾರ ತಿನ್ನಬೇಡಿ "

ಹೊಸ ನಿರ್ಭಂದನೆ ವಿಧಿಸುವಂಥ ವ್ಯಕ್ತಿಯ ದರ್ಶನ. ಅವರದೆ ಉಬ್ಬಿತು. ಮಗನಿಗೆ ಇಂಥದ್ದಕ್ಕೆಲ್ಲ ಪುರಸತ್ತಿಲ್ಲ. ಕೆಲವೊಮ್ಮೆ ಮರೆತುಬಿಡುತ್ತಿದ್ದ. ಅಥವಾ ಇವರು ಹೋಗುವ ವೇಳೆಗೆ ಎದ್ದೇ ಇರುತ್ತಿರಲಿಲ್ಲ.

"ನಂಗೆ ತುಂಬ ... ತುಂಬ ಸಂತೋಷವಾಯ್ತು. ನನ್ನ ಆರೋಗ್ಯದ ಪೂರ್ಣ ಜವಾಬ್ದಾರಿ ಹೊತ್ತು ನಾನೆ ಎಚ್ಚರದಿಂದಿರಬೇಕಿತ್ತು. ಮುಂದೆ ಅದರ ಅಗತ್ಯವಿಲ್ಲ. " ಆನಂದ ಪರವಶರಾದರು.

ಒಂಬತ್ತು ಗಂಟೆಯ ವೇಳೆಗೆ ನಾಲ್ಕು ಸಲವಾದರೂ ವಸಂತನನ್ನು ಎಬ್ಬಿಸುವ ಪ್ರಯತ್ನ ಮಾಡಿದಳು. ಭಾನುವಾರ ಅವನು ಏಳುವುದು ನಿಧಾನವಾದರೂ, ಎಂಟುವರೆಯ ಒಳಗೆ ಎದ್ದು ಆಯುರ್ವೇದ ತೈಲವನ್ನು ತಲೆ, ಮೈಗೆಲ್ಲಾ ಹಚ್ಚಿಕೊಂಡು ಕೂಡುತ್ತಿದ್ದ. ಈ ಪ್ರೋಗ್ರಾಮ್ ಸಾಧಾರಣವಾಗಿ ಕ್ಯಾನ್ಸಲ್ ಆಗದು.

ಕಾಶಿಪತಿಗಳು ಹೊರಟ ನಂತರ ಮತ್ತೊಮ್ಮೆ ರೂಮಿಗೆ ಬಂದಳು. ಗಾಢವಾದ ನಿದ್ದೆಯಲ್ಲಿದ್ದ. ಹೊರ ಬಂದವಳು ಗೋಪಿಗೆ ಹೇಳಿ ಆಟೋ ಸ್ಟಾಂಡ್‌ಗೆ ಬಂದು ನಿಂತಳು.

"ಸೇತುರಾಮ್ ಮೊಮ್ಮಗಳು ಅಲ್ವಾ? ಅದೇ ಆನಂದನ ಮಗಳು". ಒಬ್ಬ ವೃದ್ಧರು ಮಾತಾಡಿಸಿದಾಗ ಹಾಯೆನಿಸಿತು. ತಂದೆ, ತಾತ ಸುದ್ಧಿಯೆತ್ತುವರೆಲ್ಲ ಬಂಧುಗಳೆನಿಸಿ ಬಿಡುತ್ತಿತ್ತು.

"ಹೌದು ..." ಎಂದ ಕೂಡಲೇ ಹಿಂದಿನ ನೆನಪುಗಳನ್ನು ಮೆಲಕು ಹಾಕತೊಡಗಿದಾಗ ಎರಡು ಬಸ್ಸು ತಪ್ಪಿ ನಂತರ ಪ್ರಯಾಸದಿಂದ ಆಟೋ ಹಿಡಿದು ಅವರನ್ನು ಮನೆಯ ಬಳಿ ಇಳಿಸಿ ಬಲವಂತಕ್ಕೆ ಕಾಫೀ ಕುಡಿದೇ ಹೊರಡಬೇಕಾಯಿತು.

ಬಂದ ಕೂಡಲೇ ಮನೆಯಲ್ಲಿ ವಾಸವಾಗಿದ್ದ ಅರುಂದತಿ ವಿಷಯ ಮುಟ್ಟಿಸಿದರು. "ನಿಮ್ಮ ಯಜಮಾನರು ಈಗ ತಾನೆ ಬಂದ್ಹೋದ್ರು,ಒಂದ್ಲೋಟ ಕಾಫೀ ಕೂಡ ಕುಡ್ದು ಹೋಗ್ಲಿಲ್ಲ. ಎಷ್ಟೇ ಬಲವಂತ ಮಾಡಿದ್ರು ಕಾರಿನಿಂದ ಇಳೀಲಿಲ್ಲ. "

"ಅರ್ಜೆಂಟ್ ಕೆಲ್ಸವಿರಬೇಕು" ಅಷ್ಟೇ ನುಡಿದಿದ್ದು.

"ಹೇಗೂ ಬಂದಿದ್ದೀಯಾ, ಒಂದ್ಗಂಟೆ ಇರು, ಇಲ್ಲೇ ಹತ್ತಿರದಲ್ಲಿ ದೇವಸ್ಥಾನಕ್ಕೆ ಪೂಜೆಗೆ ಕೊಟ್ಟಿದ್ದೀನಿ. ಪ್ರಸಾದ ತರ್ತೀನಿ" ಅವಳನ್ನು ಬಿಟ್ಟ

ಆಕೆ ಹೋದರು.

ರೂಮು, ಅಡಿಗೆ ಮನೆ, ದೇವರ ಮನೆ, ಬಚ್ಚಲು ಮನೆ ಎಲ್ಲಾ ಕಡೆ ಓಡಾಡಿದಳು. ಪುಟ್ಟ ಹುಡಿಗಿಯಾಗಿದ್ದಾಗ ಚಿಕ್ಕ ಸ್ಟೂಲು ಮೇಲೆ ಕೂಡಿಸಿ ಅವಳ ತಲೆಗೆ ಎಣ್ಣೆಯೊತ್ತುತ್ತಿದ್ದರು. ಆ ಪುಟ್ಟ ಸ್ಟೂಲ್‌ನ ಕಂಡಾಗ ಕುಸಿದು ಕೂತಳು. ಯಾರಾದರೂ ಜೊತೆಯಲ್ಲಿ ಇರಬಾರದೆಯನಿಸಿತು. ವಸಂತ್ ಇದ್ದಿದ್ದರೇ, ಎಂದೂ ಅವಳ ಮನಸ್ಸಿನ ಭಾವನೆಗಳನ್ನು ಅವನ ಮುಂದೆ ಹೇಳಲಾಗಿರಲಿಲ್ಲ. ಅವಕಾಶ ಸಿಕ್ಕಿರಲಿಲ್ಲವಾ? ಅಥವಾ ವಸಂತ ಅಂಥ ಅವಕಾಶ ಕೊಟ್ಟಿರಲಿಲ್ಲವಾ? ಇಲ್ಲಿ ಇನ್ನು ಅಷ್ಟರಮಟ್ಟಿಗೆ ಅನ್ಯೋನ್ಯತೆ ಬೆಳೆದಿರಲಿಲ್ಲವಾ? ಈ ಮೂರು ಪ್ರಶ್ನೆಗಳಿಗೆ ಸದ್ಯದಲ್ಲೇ ಉತ್ತರ ಸಿಗದು.

ಸೇತುರಾಮ್ ಮಲಗುತ್ತಿದ್ದ ಮಂಚದ ಮೇಲೆ ಹೋಗಿಕೂತಳು. ಗೋಡೆಯ ಮೇಲಿದ್ದ ಅವಳು ತಂದೆಯ ಫೋಟೋ ಹಾಗೆಯೇ ಇತ್ತು. ಭಾವುಕಳಾಗಿ ಛೇರ್ ಮೇಲೆ ನಿಂತು ಬೆರಳುಗಳಿಂದ ಸವರಿದಾಗ, ಧೂಳು ಅಂಟಿತು. ಬಟ್ಟೆ ಹುಡುಕಿ ತೆಗೆದೊರೆಸಿದವಳು ಗೋಡೆಯಿಂದ ಕಳಚಿದಳು. ತೀರಾ ಅಮೂಲ್ಯವೆನಿಸಿತು. 'ಅಣ್ಣ ನಿಮ್ಮ ಪ್ರೀತಿ ಪೂರ್ತಿಯಾಗಿ ನಂಗೆ ಸಿಗಲೇ ಇಲ್ಲ' ತೇವಗೊಂಡಿತು ಅವಳ ಕಣ್ಣುಗಳು.

ಅರುಂಧತಿ ಪ್ರಸಾದ ಬುಟ್ಟಿ ಹಿಡಿದು ವಾಪಸ್ಸಾಗಿದ್ದು ಹನ್ನೆರಡರ ನಂತರವೆ "ನಿನ್ನ ಕೂಡ ದೇವಸ್ಥಾನಕ್ಕೆ ಕರೆದೊಯ್ಯೊ ಆಸೆ ಇತ್ತು. ಮತ್ತೆ ನಿನ್ನ ಗಂಡ ಹುಡ್ಕಿಕೊಂಡ್ಬಂದ್ರೆ.... ವಿವಾಹವಾದ ಹೊಸದರಲ್ಲಿ ಇಂಥದ್ದು ಸಹಜವೇ" ರಸಾಯನದ ದೊನ್ನೆಯನ್ನು ಅವಳಿಗೆ ಕೊಟ್ಟರು.

"ನಿನ್ನ ತಾತ ಪತ್ರ ಬರೆದಿದ್ರು. ಅವ್ರು ಬರೋದು ತಿಳ್ಸಿ ತಿಂಗ್ಳಿಗೆ ಮುಂಚೆ ಪತ್ರ ಬರೆದರೇ ಸಾಕು. ಖಾಲಿ ಮಾಡಿ ಕೊಡ್ತೀವಿ. ಅವ್ರಿಗೂ ಇಲ್ಲಿದ್ದುಕೊಂಡು ನಿನ್ನ ಅಳಿಯಂದಿರನ್ನು ಕರ್ದು ಕಳ್ಸಿಮಾಡೋ ಆಸೆ." ಇಷ್ಟನ್ನು ಅಕ್ಕರೆಯಿಂದ ಹೇಳಿಕೊಂಡರು.

ಬಲವಂತದಿಂದ ಇರಿಸಿಕೊಂಡು ಊಟ ಮಾಡಿಸಿ ತಾವೇ ಆಟೋ ಸ್ಟಾಂಡ್‌ನ ವರೆಗೂ ಬಂದು ಆಟೋ ಹತ್ತಿಸಿ "ನಮ್ಗೆ ತಾನೇ ಇಲ್ಲಿ ಯಾರಿದ್ದಾರೆ? ನಿನ್ನದೇ ಮನೆ ಆಗಾಗ ಅಳಿಯಂದಿರು, ನೀನು ಬಂದು ಹೋಗ್ತಾ ಇದ್ದರೆ ಚೆನ್ನ" ಪ್ರೀತಿಯಿಂದ ಹೇಳಿದರು ಆಕೆ. ತಾಯಿ, ಮಗ ಇಬ್ಬರೇ ಇದ್ದಿದ್ದು. ಮಗ ಬೆಳಿಗ್ಗೆ ಹೋದರೆ ಸಂಜೆಗೆ ಹಿಂದಿರುಗೋದು. ಅರುಂಧತಿ ಸೇತುರಾಮ್‌ಗೆ ತಂಗಿಯ ವರಸೆ ಆಗಬೇಕು.

ಆಟೋದಿಂದ ಮನೆಯ ಮುಂದೆ ಇಳಿದಾಗ ಹೊರಗೆ ಅಡ್ಡಾಡುತ್ತಿದ್ದ, ವಸಂತ ಸರ್‍ರನೆ ಒಳಗೆ ಹೋದ. ಯಾಕೆ, ಎನ್ನುವ ಪ್ರಶ್ನೆ ಅವಳಲ್ಲಿ ಮೂಡಿ ಮರೆಯಾಯಿತು.

ಬಾಗಿಲಿಗೆ ಬಂದ ಗೋಪಿ "ಅಕ್ಕ, ಚಿಕ್ಕೆಜಮಾನ್ರು ಯಾಕೋ ತುಂಬ ಕೋಪ ಮಾಡ್ಕೊಂಡಿದ್ದಾರೆ. ಒಂದು ನೂರು ಸಲವಾದರೂ ನಿಮ್ಮನ್ನು ವಿಚಾರಿಸಿದ್ರು" ವರದಿ ಒಪ್ಪಿಸಿದ.

ನೇರವಾಗಿ ರೂಮಿಗೆ ಬಂದಳು. ಕೂತಿದ್ದ ವಸಂತನ ಕಣ್ಣುಗಳಲ್ಲಿ ಕೆಂಡಗಳಿತ್ತು. ಭಸ್ಮಾಸುರನ ಅವತಾರದಂತೆ ಕಂಡ.

"ಎಲ್ಲಿಗೆ ಹೋಗಿದ್ದೆ?" ಕೇಳಿದ.

ಕೈ ಹಿಡಿದವಳ ಕಲ್ಪನೆಯ ಬಗ್ಗೆ ಅವನದು ವಿಶಿಷ್ಟವಾದುದ್ದು. ಅವನ ಸುತ್ತಲೇ ಅವಳು ಸುತ್ತಬೇಕು. ಪ್ರತಿಯೊಂದಕ್ಕೂ ಅವನ ಸಲಹೆ ಪಡೆಯಬೇಕು, ಪ್ರತಿಯೊಂದು ಅವನಿಗೆ ವರದಿಯಾಗಬೇಕು. ಪೂರ್ತಿ...ಪೂರ್ತಿಯಾಗಿ ಅವನ ಇಷ್ಟದಂತೆಯೇ ಶಾರದ ನಡೆದುಕೊಳ್ಳಬೇಕು.

"ನಮ್ಮ ಮನೆಗೆ ಹೋಗಿದ್ದೆ" ಸರಳವಾಗಿ ಹೇಳಿದಳಷ್ಟೇ.

ಅಷ್ಟರಲ್ಲಿ ಗೋಪಿ ಕೂಗಿಕೊಂಡಿದ್ದರಿಂದ ಹೊರಗೆ ಹೋದಳು. ಅವಳ ಕೆಲವರು ಸ್ಟೂಡೆಂಟ್ಸ್ ಗುಂಪು ಮಾಡಿಕೊಂಡು ಬಂದಿದ್ದರು.

"ವಿಜಿ ಮದ್ವೆ ಇನ್ವಿಟೇಷನ್ ಕೊಡೋಕೆ ಬಂದಿದ್ದೀವಿ, ಡಿಸ್ಚಾರ್ಜ್ ಆಯ್ತು ಮೇಡಮ್" ಅವಳಿಗಿಂತ ಎತ್ತರವಿದ್ದ ಜೈನ್ ಹೇಳಿದಾಗ "ನೋ, ಕೂತ್ಕೊಳ್ಳಿ..." ಎಂದಳು. ಫೈನಲ್ ಇಯರ್‍ನಲ್ಲಿ ಕಲಿಯುತ್ತಿದ್ದ ಅವನು ಇಂಗ್ಲೀಷ್ ಲಿಟರೇಚರ್‍ನ ಅಭ್ಯಾಸ ಮಾಡುತ್ತಿದ್ದ. ಓದಿನಲ್ಲಿ ಬುದ್ಧಿವಂತ. ಆದರೆ ಬುದ್ಧಿವಂತಿಕೆಯ ಸೋಗು ಇರಲಿಲ್ಲ. ವಿಪರೀತ ವಾಚಾಳಿ ಅವನಿದ್ದ ಕಡೆ ಮಾತು, ನಗು ವಿಪರೀತ.

. ಇಲ್ಲು ಕೂಡ ಅದೇ ವರಸೆ. ಇಪ್ಪತ್ತು ನಿಮಿಷಗಳ ನಂತರವೆ ಅವರೆಲ್ಲ ಹೋಗಿದ್ದು. ಗೋಪಿ ಕೂಡ ಅಷ್ಟು ದೂರದಲ್ಲಿ ನಿಂತು ಕೇಳಿಸಿಕೊಂಡಿದ್ದ. ಅವನಿಗೆ ಇಂಥ ಸ್ಟೂಡೆಂಟ್ಸ್ ಅಂದರೇ ಇಷ್ಟ. ಇಂಥ ಆಸೆ, ಆಕಾಂಕ್ಷೆಗಳು ಇದ್ದರೂ ಅವನ ತಲೆಗೆ ವಿದ್ಯೆ ಹತ್ತಿರಲಿಲ್ಲ.

ಮತ್ತೆ ರೂಮಿಗೆ ಬಂದಾಗ ಮಲಗಿ ತಾರಸಿಯನ್ನು ದಿಟ್ಟಿಸುತ್ತಿದ್ದ ವಸಂತ. ಅವರುಗಳ ನಗು ಬಂದು ಅವನ ಕಿವಿಗೆ ಅಪ್ಪಳಿಸುತಿತು.

ಪಕ್ಕದಲ್ಲಿ ಕೂತು ಅವನ ತೋಳಿನ ಮೇಲೆ ಕೈ ಇಟ್ಟಳು. ಅಷ್ಟೇ ರಭಸವಾಗಿ ಹಿಂದಕ್ಕೆ ತಳ್ಳಿದ, ತಟ್ಟನೆ ಎದ್ದಳು.

"ಯಾಕೆ ಕೋಪ? ನೆನ್ನೆ ನಾನು ನಮ್ಮ ಮನೆಗೆ ಹೋಗಿ ಬರೋ ವಿಷ್ಯ ತಿಳಿಸಿದ್ದೆ. ಇಂದು ಕೂಡ ಸಾಕಷ್ಟು ಸಲ ಎಬ್ಬಿಸ್ದೇ. ಬೇರೆ ಏನಾದ್ರೂ ಪ್ರಾಬ್ಲಮಾ?" ಕೇಳಿದಳು ನವಿರಾಗಿ.

ಎಷ್ಟೋ ಉತ್ಸಾಹದಿಂದ ವಸಂತನೊಂದಿಗೆ ತನ್ನ ಬಾಲ್ಯದ ವಿಷಯಗಳನ್ನೆಲ್ಲ ಹೇಳಿಕೊಳ್ಳಬೇಕೆಂದು ತುಂಬು ಉತ್ಸಾಹದಿಂದ ಬಂದಿದ್ದಳು. ಅವೆಲ್ಲ ಮುರುಟಿ ಹೋದವು.

"ನಾನು ಬಂದಿದ್ದಾಗ ನೀನು ಅಲ್ಲಿರಲಿಲ್ಲ !" ದೊಡ್ಡದಾಗಿ ಆರೋಪ ಮಾಡಿದ "ನಾನು ತಲುಪಿದ್ದೆ ಲೇಟಾಗಿ, ತಾತ, ಅಣ್ಣನ ಪರಿಚಯದವರು ಸಿಕ್ಕಿ, ಅವರೊಂದಿಗೆ ಅವರ ಮನೆಗೆ ಹೋಗಿದ್ದೆ. ವಯಸ್ಸಾದವರು ತುಂಬು ಆತ್ಮೀಯತೆ ತೋರಿದರು. ಅಣ್ಣನ ಬಗ್ಗೆ ಎಷ್ಟೋ ಹೇಳಿದ್ರು" ಕೆಲವು ಕ್ಷಣ ಭಾವುಕಳಾದಳು.

"ನೋ, ನಂಗೆ ಇದೆಲ್ಲ ಇಷ್ಟವಾಗೋಲ್ಲ !" ಕಿರುಚಿದ.

'ಯಾವುದು ಇಷ್ಟವಾಗೋಲ್ಲ' ಅವಳಿಗೆ ಅರ್ಥವಾಗಲಿಲ್ಲ. ಮೊದಲ ಸಲ ಪೆಟ್ಟು ತಿಂದ ಮಗುವಿನಂತೆ ಚಡಪಡಿಸಿದಳು. ವಸಂತ ಅಪರಿಚಿತನಲ್ಲ, ಅವನ ಗುಣಾವಶೇಷಗಳನ್ನು ತಾನು ಆಳವಾಗಿ ಚಿಂತಿಸಲಿಲ್ಲವೆಂದುಕೊಂಡಳು.

ರೂಮಿನೊಳಗೆ ಉಸಿರುಗಟ್ಟುವಂತಾದಾಗ ಎದ್ದು ಹೊರಬಂದಳು. ಇಡೀ ಮನೆಯಲ್ಲಿದಿದ್ದು ಮೂವರೇ. ಹೊಸದಾಗಿ ಸೇರ್ಪಡೆಯಾದವಳು ಇವಳೊಬ್ಬಳೆ. ಹುಟ್ಟಿ ಬೆಳೆದ ಮನೆಗಿಂತ ಇದು ದೊಡ್ಡದೇ. ಐದಾರು ವರ್ಷಗಳ ಹಿಂದೆ ಹೊಸ ರೂಪು ಕೊಟ್ಟಿದ್ದರಿಂದ ನವನವೀನವಾಗಿತ್ತು. ಹಳೆ ಫರ್ನಿಚರ್‌ಗಳನ್ನು ಎಸೆದು ಹೊಸದಾಗಿ ಕುಷನ್ ಸೋಫಾಗಳನ್ನು ಕೊಂಡು ತಂದು ಹಾಕುವುದರ ಜೊತೆಗೆ ಅಲಂಕಾರಿಕವಾದ ಕೆಲವು ವಸ್ತುಗಳನ್ನು ತಂದು ಜೋಡಿಸಿದ್ದರು.

"ಅಕ್ಕ, ಊಟ ಮಾಡ್ಬನ್ನಿ" ಕರೆದ.

ಇಬ್ಬರು ಗಂಡಸರ ಜೊತೆ ಹೆಣಗುತ್ತಿದ್ದವನಿಗೆ ಶಾರದ ಬಂದಿದ್ದು ದೊಡ್ಡ ನಿಧಿ ಸಿಕ್ಕಿದಂತಾಗಿತ್ತು. ಕಾಶೀಪತಿಗಳು ಕೆಲವೊಮ್ಮೆ ಮಾತಾಡಿಸುತ್ತಿದ್ದರು.

ಅದು ಬಿಟ್ಟರೇ ವಸಂತ ಏನಾದರೂ ಕೆಲಸ ಹೇಳುತ್ತಿದ್ದನೇ ವಿನಃ ಮಾತಾಡಿಸುವ ಗೋಜಿಗೆ ಹೋಗುತ್ತಿರಲಿಲ್ಲ.

"ನನ್ನ ಊಟ ಆಯ್ತು, ಅವರದ್ದು ಆಯ್ತ ?" ವಿಚಾರಿಸಿದಳು. ಅವಳಿಗೆ ಅದೇನು ತಪ್ಪು ಅನ್ನಿಸಲಿಲ್ಲ. "ಆಗ್ಲೇನೇ ಆಯ್ತು. ಚಿಕ್ಕೆಜಮಾನ್ರು ಊಟಕ್ಕೆ ಯಾರ್ಗೂ ಕಾಯೋಲ್ಲ. ದೊಡ್ಡೆಜಮಾನ್ರು ಮಾತ್ರ ಅವ್ರಿಗಾಗಿ ಕಾಯ್ತಾರೆ" ಎಂದ ಅತ್ತಿತ್ತ ನೋಡುತ್ತ.

ಗೋಪಿಯನ್ನು ನೋಡಿದಳು. ಬಹುಶಃ ಹದಿನೈದು ಹದಿನಾರರ ಒಳಗಿನ ವಯಸ್ಸು, ಅಂದರೆ ಪ್ರೌಢ ತರಗತಿಯ ಕೊನೆಯ ವರ್ಷದಲ್ಲಿ ವ್ಯಾಸಂಗ ಮಾಡಬೇಕಿತ್ತು.

"ಎಲ್ಲಿವರ್ಗೂ ಓದ್ದೇ?" ಕೇಳಿದಳು.

ತಲೆ ತಗ್ಗಿಸಿ ನಿಂತವನು ಬೆರಳುಗಳನ್ನು ಎಣಿಸಿಕೊಂಡ. ಒಂದು, ಎರಡು, ಮೂರು, ನಾಲ್ಕು ಕೊನೆಯ ಬೆರಳು ಮಡಚಿಯವನು ತಲೆಯೆತ್ತಿ "ನಾಲ್ಕು...." ಎಂದ. ಅವನ ಉತ್ಸಾಹಕ್ಕೆ ಪಕ್ಷಿಗಳು ಚದುರಿ ಹೋದಂತಾಯಿತು.

"ನಿಮ್ಮಪ್ಪ ಸ್ಕೂಲು ಬಿಡಿಸಿದ್ರಾ ?"

ಅಡ್ಡಡ್ಡ ತಲೆಯಾಡಿಸಿದವನು "ನಾನೇ ಸ್ಕೂಲಿಗೆ ಕಳ್ಳಬಿದ್ದೆ. ಹೊಡೆದು-ಬಡಿದು ಮಾಡಿದ್ರೂ ನಾನು ಸ್ಕೂಲಿಗೆ ಹೋಗ್ಲಿಲ್ಲ. ಸಿಕ್ಕಾಪಟ್ಟೆ ಅಲೀತಾ ಇದ್ದೆ. ನಂಗೆ ಈಜು ಇಷ್ಟ. ಒಮ್ಮೆ ಅರ್ಧ ಕೆರೆಯವರೆಗೂ ಈಜಿ ಮುಳುಗಿದಾಗ ಯಾರೋ ಹೊರಗೆ ಎಳೆದು ತಂದು ಹಾಕಿದ್ರು. ಆಗ ತಂದು ಇಲ್ಲಿ ಕೆಲ್ಸಕ್ಕೆ ಬಿಟ್ಟರು. ಸಂಬಳ ಮಾತ್ರ ನಮ್ಮಪ್ಪ ತಗೋತಾರೆ" ಎಂದ. ಅದು ಅವನ ಮಟ್ಟಿಗೆ ಅಪರಾಧವಾಗಿ ಕಂಡಿರಬೇಕು.

ಕಾಲೇಜಿಗೆ ಬರೋ ಎಷ್ಟೋ ವಿದ್ಯಾರ್ಥಿಗಳು ಓದಲು ಬಂದವರಲ್ಲ. ಕೆಲವರು ತಂದೆ ತಾಯಿಯರ ಒತ್ತಡದಿಂದ ಬಂದವರೇ, ಕೆಲವರು ಮಜಾ ಉಡಾಯಿಸಲು ಬರುತ್ತಿದ್ದರು. ಅವರದೇ ಉಪಟಳ. ಇನ್ನು ಕೆಲವರು ವಿದ್ಯಾಭ್ಯಾಸವನ್ನ ಗುರಿಯಾಗಿಟ್ಟುಕೊಂಡು ಬರುತ್ತಿದ್ದರು. ಅಂಥವರಿಂದಲೇ ಕಾಲೇಜಿಗೆ ಹೆಸರು. ಗೋಪಿ ಯಾವ ಗುಂಪಿಗೆ ಸೇರಿರಬಹುದೆಂದು ಯೋಚಿಸಿದಳು.

"ತಪ್ಪು ಮಾಡ್ದೇಂತ ಅನ್ನಿಸೋಲ್ವಾ, ಗೋಪಿ? ಕಲಿಕೆ ಎಲ್ಲರಿಗೂ ಅನಿವಾರ್ಯ. ನಿಂಗೆ ಎಷ್ಟರಮಟ್ಟಿಗೆ ಅಕ್ಷರದ ಪರಿಚಯವಿದೆಯೋ

ನೋಡೋಣ. ನೀನು ಅಡಿಗೆಗೆ ಉಪಯೋಗಿಸುವ ಎಲ್ಲಾ ಪದಾರ್ಥಗಳ ಹೆಸರುಗಳನ್ನು ಬರೆದು ತಗೊಂಡ್ಬಾ" ಹೇಳಿ ಕಳಿಸುವುದರ ಜೊತೆಗೆ ಅವನಿಗೊಂದು ಪೆನ್ಸಿಲ್, ಪೇಪರ್ ಕೊಟ್ಟು ಕಳುಹಿಸಿದಳು.

ಬಂದ ವಸಂತ ಅವಳ ಎದುರಿನಲ್ಲಿ ಕೂತ. ದಿಟ್ಟಿಸಿ ನೋಡಿದ. ನೋಟ ತಪ್ಪಿಸಿ ನೋಡಿದ, ಬದಲಾಯಿಸಿ ನೋಡಿದ, ಅವಳೇನು ವಿಚಲಿತಳಾಗಲಿಲ್ಲ.

"ನನ್ನ ಒಪ್ಗೇ ಇಲ್ದೇ ನೀನು ಹೋಗ್ಬಾರ್ದಿತ್ತು" ಎಂದಳು ಚುರುಕಾಗಿ.

ಕೆನ್ನೆಗೆ ಬಾರಿಸಿದಂತಾಯಿತು. ಅವಳು ಒಂದಲ್ಲ ನಾಲ್ಕು ಸಲ ಹೇಳಿದ್ದಳು. ಹುಟ್ಟಿ ಬೆಳೆದ ಮನೆಗೆ ಹೋಗಿ ಬರುವುದಕ್ಕೆ ಒಪ್ಪಿಗೆ, ಮಾಡದ ಅಪರಾಧಕ್ಕಾಗಿ ಕೊಳಗಳನ್ನು ತೊಡಿಸಿದಂತಾಯಿತು.

ಅಷ್ಟರಲ್ಲಿ ರಂಗದ ಮೇಲೆ ಕಾಶೀಪತಿಗಳ ಪ್ರವೇಶವಾಯಿತು. "ವ್ಹಾ... ವ್ಹಾ... ನಾನೇನೋ ಅಂದ್ಕೊಂಡೇ. ಕನಿಷ್ಟ ಒಂದೆರಡು ಗಂಟೆಗಳು ಮಡದಿಯನ್ನು ನೋಡದೇ ಇರೋದು ಕಷ್ಟ. ಅದಕ್ಯಾಕೆ ಬಿಗುವು, ಇನ್ಮೇಲೆ ನೀನು ಒಬ್ಬ ಸ್ಟೂಡೆಂಟಾಗಿ ಕಾಲೇಜಿಗೆ ಹೋಗ್ಬಿಡು" ಹಾಸ್ಯ ಮಾಡಿದರು.

ಮರುಕ್ಷಣ ಎಲ್ಲಾ ಮರೆತಂತೆ ತಂದೆಯ ಜೊತೆ ಹರಟಿದ. ಸಾಯಂಕಾಲ ಒಂದು ಸಿನಿಮಾ ಪ್ರೋಗ್ರಾಂ ಹಾಕಿದ. ಅವಳು ಮೂವೀಗೆ ಹೋಗುತ್ತಿದ್ದುದು ಕಡಿಮೆ. ನಾಟಕಗಳಿಗೆ ಸೇತುರಾಮ್‌ನೊಂದಿಗೆ ಹೋಗುತ್ತಿದ್ದಳು. ಇಂದು ಸುತರಾಂ ಹೊರಗೆ ಹೋಗುವ ಇಷ್ಟವಿರಲಿಲ್ಲ. ಅದನ್ನ ವ್ಯಕ್ತ ಪಡಿಸಲಾರದೆ ಹೋದಳು.

"ಬೇಗ ರೆಡಿಯಾಗು, ಒಂದಿಷ್ಟು ಹೊರ್ಗೇ ಹೋಗಿ ಬಂದ್ಬಿಡ್ತೀನಿ" ನಡೆದ ವಸಂತ. ಸೊಸೆಯ ಕಡೆ ನೋಡಿದರು ಕಾಶೀಪತಿಗಳು "ಒಂಟಿಯಾಗಿ ಬೆಳ್ದ, ನನ್ನ ಮಟ್ಟಿಗೆ ವಸಂತನಿಗೆ ಸ್ನೇಹಿತರು ಕಡ್ಮೇ. ಇಲ್ಲು ಅಷ್ಟೆ, ಏಕ ಚಕ್ರಾಧಿಪತ್ಯ. ಕನ್‌ಸ್ಟ್ರಕ್ಷನ್ ಕಂಪನಿ ಸ್ವಂತದ್ದು. ಸಲಹೆ ಕೊಡಬಹುದು, ಹೀಗೇ ಮಾಡು, ಇಷ್ಟು ಆಗಲೇ ಬೇಕೂಂತ ಹೇಳೋರಿಲ್ಲ. ಅದಕ್ಕೆ ಒಂದಿಷ್ಟು ಜೋರು, ಹಟ. ನೀನು ಬಂದಿದ್ದೀಯಲ್ಲ, ಎಲ್ಲಕ್ಕೂ ವಿರಾಮ ಬಿದ್ದಂತೆ" ಲೀಲಾಜಾಲವಾಗಿ ಮಗನ ಸ್ವಭಾವಕ್ಕೆ ಯಾವುದೇ ಮೆರಗನ್ನು ಹಚ್ಚದೆ ಯತಾರ್ಥ ಬಿಡಿಸಿಟ್ಟರು.

"ಮದುವೆಗೆ ಮುನ್ನ ಅವ್ರ ಕೋಪಾನ ನೋಡಿರಲಿಲ್ಲ"

ಅವಳ ಅಯೋಮಯವಾದ ಮಾತಿಗೆ ನಕ್ಕುಬಿಟ್ಟರು. "ನೀನೆಂದೋ ಅಪರೂಪಕ್ಕೆ ತಾತನ ಜೊತೆ ಬರ್‍ತಾ ಇದ್ದೆ. ಅವನೇ ನಿನ್ನ ನೋಡೋಕೆ

ಬರ್‍ತಾ ಇದ್ದ. ಕಟ್ಟುಪಾಡು, ಬಂಧನವಿಲ್ಲದ ದಿನಗಳು ಆಗ ಕೋಪದಿಂದ ಮಾತಾಡೋಕೆ ಸಾಧ್ಯನಾ ? ಈಗ ಹೆಂಡತಿಯೆನ್ನುವ ಅಧಿಕಾರ, ಅಹಂ-ಎಲ್ಲ ಸಹಜವೇ ?".

ಈ ಗೊಂದಲದ ನಡುವೆ ಮುಳುಗಿದ್ದಾಗಲೇ ವಸಂತ ಸಿಳ್ಳೆ ಹಾಕುತ್ತ ಒಳಗೆ ಬಂದವನು ವಾಚ್‌ಕಡೆ ನೋಡಿ "ನಾನು ಹೇಳಿ ಹೋಗಿ ಅರ್ಧ ಗಂಟೆ ಆಯ್ತು, ನಂಗೆ ಸೋಮಾರಿತನ ಇಷ್ಟವಾಗೋಲ್ಲ" ಸ್ವಲ್ಪ ಅಸಹನೆಯಿಂದ ನುಡಿದ.

ಕಾಶೀಪತಿಗಳಿಗೆ ರೇಗಿತು. ಮಗನಿಗೆ ಬುದ್ಧಿ ಹೇಳಬೇಕೆಂದರೂ ಹೇಳಲಿಲ್ಲ. ದಂಪತಿಗಳ ಮಧ್ಯೆ ಮೂರನೆಯವರ ಪ್ರವೇಶ ವಿರಸಕ್ಕೆ ನಾಂದಿಯಾಗುತ್ತದೆಯೆಂದು ಮೌನವಹಿಸಿದರು.

'ಪಾದರಸದಂಥ ಚುರುಕು' ಸೇತುರಾಮ್‌ನಿಂದ ಹಿಡಿದು ಎಲ್ಲರೂ ಅವಳ ಬಗ್ಗೆ ಹೇಳುತ್ತಿದ್ದ ಮಾತುಗಳು. 'ಸೋಮಾರಿ' ಎನ್ನುವ ಬಿರುದನ್ನು ದಯಪಾಲಿಸಿದ್ದ ಪತಿ ಮಹಾಶಯ. ಪ್ರತಿಭಟನೆ ಬೇಡವೆನಿಸಿ ಎದ್ದು ಹೋದಳು.

ಗುಲಾಬಿ ಬಣ್ಣದ ಸೀರೆಗೆ ಸಣ್ಣನೆಯ ಅಂಚು ಇದ್ದು ಒಡಲ್ಲೆಲ್ಲ ಹಸುರು ಹೂಗಳಿದ್ದ ಶುದ್ಧ ರೇಶಿಮೆಯ ಸೀರೆಯುಟ್ಟು ಮುಖಾಲಂಕಾರ ಮುಗಿಸಿ ಹೊರಟಾಗ, ವಸಂತ ಅಸಮಾಧಾನ ವ್ಯಕ್ತಪಡಿಸಿದ.

"ಇದು ತೀರಾ ಸಿಂಪಲ್ಲಾಯ್ತು ! ಮಾರ್ನಿಂಗ್ ಷೋಗೆ ಇಂಥ ಸೀರೆ ಸರೀ. ಯಾವುದಾದ್ರೂ ದಟ್ಟವಾದ ಬಣ್ಣದ ಸೀರೆಯುಡು" ತಾಕೀತು ಮಾಡಿದ.

ಮೊದಲೇ ಉಡುಪಿನ ಬಗ್ಗೆ ಅಂಥ ವ್ಯಾಮೋಹವಿಲ್ಲದ ಅವಳಿಗೆ ತೀರಾ ಬೇಸರವೆ. ಕಡು ನೀಲಿ ಬಣ್ಣದ ಜಾರ್ಜೆಟ್ ಸೀರೆಯನ್ನು ಮೆಚ್ಚಿ ಮೆಚ್ಚಿ ಕೊಡಿಸಿದ್ದ. ಅದರ ಒಡಲ್ಲೆಲ ನಕ್ಷತ್ರಗಳಂತೆ ಬುಟ್ಟಾಗಳು. ಗೆರೆ ಎಳೆದಂತೆ ಸಣ್ಣ'ಅಂಚಿತ್ತು. ಅದನ್ನು ಉಟ್ಟಳು.

ನಾಲ್ಕಾರು ಸಲ ಷೋಕೇಸ್‌ನಲ್ಲಿದ್ದ ಬೊಂಬೆಯನ್ನು ನೋಡಿದ. ತುಂಬು ಸೊಬಗಿನ ನಿಲುವು. ಅಚ್ಚ ಬಿಳಿಯ ಬಣ್ಣಕ್ಕೆ ಕಪ್ಪು ಕಣ್ಣುಗಳ ಶೋಭೆ. ಅದರಲ್ಲಿ ಪ್ರಜ್ವಲಿಸುವ ಬೌದ್ಧಿಕ ಬೆಳಕು. ಎತ್ತರದ ನಿಲುವು. ಎಲ್ಲವೂ ಚೆನ್ನವೇ ಮದುವೆಯ ರಿಸೆಪ್ಷನ್‌ನಲ್ಲಿ ಅವನ ಗೆಳೆಯರೆನಿಸಿಕೊಂಡಿದ್ದ ಕೆಲವರು ಪಿಸುಗುಟ್ಟಿ 'ಕಂಗ್ರಾಟ್ಸ್' ಹೇಳಿದ್ದರು. ಇದೊಂದು ಸೌಭಾಗ್ಯವೇ!

ಅವಳಿಗೆ ಯಾವ ಬಣ್ಣದ ಸೀರೆಯುಟ್ಟರೂ ಚೆನ್ನಾಗಿ ಕಾಣುತ್ತಿದ್ದಳು. ಈ ಸೀರೆಯಲ್ಲಂತು ಅತ್ಯಂತ ಚೆಲುವೆ.

"ಇದು ಚೆನ್ನಾಗಿಲ್ಲ" ತಲೆ ಕೊಡವಿದ.

ನೂರು ಸೀರೆಗಳಲ್ಲಿ ಇದನ್ನು ಆರಿಸಿ ಅವಳಿಗಾಗಿ ಪ್ಯಾಕ್ ಮಾಡಿಸಿದ್ದ. ಈಗ ಚೆನ್ನಾಗಿಲ್ಲ ಎನ್ನುವುದಕ್ಕೆ ಕಾರಣ? ಗೊಂಬೆಯಂತೆ ಒಂದು ಕಡೆ ಕೂತಳು.

ಅವನೇ ವಾರ್ಡ್‌ರೋಬ್‌ನಲ್ಲಿದ್ದ ಸೀರೆಗಳನ್ನೆಲ್ಲ ಚೆಲ್ಲಾಡಿ ಪಾಚಿಯ ಕಲರ್ ಷಿಫಾನ್ ಸೀರೆಯನ್ನು ತೆಗೆದು ಅವಳ ಮುಂದೆ ಹಾಕಿದ.

"ಇದ್ನ ಉಟ್ಕೋ, ಪಿಕ್ಚರ್ ಷುರುವಾದ್ಮೇಲೆ ಹೋಗಿ ನೋಡೋ ಪೈಕಿ ನಾನಲ್ಲ. ಐದು ನಿಮಿಷದಲ್ಲಿ ಕಾರು ಹತ್ರ ಇರ್ಬೇಕು" ಹೇಳಿ ಹೋದ. ಒಬ್ಬ ಮೇಲಧಿಕಾರಿ ತೀರಾ ಸ್ಟ್ರಿಕ್ಟಾಗಿ ತನ್ನ ಕೈ ಕೆಳಗಿನ ವ್ಯಕ್ತಿಗೆ ಆದೇಶಿಸುವಂತಿತ್ತು.

ತಾರದ ಮನಸ್ಸಿಗೆ ನೋವಾಯಿತು. ಕಟುವಾದ ಮಾತು, ಅಧಿಕಾರ ಚಲಾಯಿಸಿಕೊಂಡು ಬೆಳೆದವಳಲ್ಲ. ಅಂಥ ಅವಕಾಶಗಳು ತಾನೇ ಎನಿತ್ತು? ಗಳ ಗಳ ಅಳಬೇಕೆನಿಸಿತು. ಪುಟ್ಟ ಹುಡುಗಿಯಲ್ಲ. ಇಪ್ಪತ್ತೆರಡಕ್ಕೆ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಮುಗಿಸಿ ತಂದೆ ಕೆಲಸ ಮಾಡುತ್ತಿದ್ದ ಕಾಲೇಜಿನಲ್ಲಿಯೆ ಉಪನ್ಯಾಸಕಿಯಾಗಿದ್ದಳು.

"ಅಕ್ಕ, ಕರೀತಾರೆ" ಗೋಪಿ ಬಂದು ಕರೆದಾಗಲೇ ವಾಸ್ತವಕ್ಕೆ ಬಂದಿದ್ದು. "ನೀನ್ಹೋಗು...." ಅವನನ್ನು ಕಳಿಸಿ ಅದೇ ಪಾಚಿ ಕಲರ್‌ನ ಪಿಫಾನ್ ಸೀರೆಯುಟ್ಟು ಹೊರಗೆ ಬಂದಳು. ಒಂದು ರೀತಿಯಲ್ಲಿ ಆರಾಮಾಗಿಯೂ ಇತ್ತು.

ಬಹಳ ಖುಷಿಯಿಂದಲೇ ಹೊರಟ ವಸಂತ. ಥಿಯೇಟರ್ ಬಳಿ ಮೊದಲ ತರಗತಿಯ ಡಿಗ್ರಿಯ ತುಂಟ ವಿದ್ಯಾರ್ಥಿನಿ ಸಿಕ್ಕಿದ್ದು ಎಡವಟ್ಟಾಯಿತು.

"ನಿಮ್ಮ ಹಸ್ಬೆಂಡ್ ತುಂಬ ಹ್ಯಾಂಡ್‌ಸಮ್" ಅವನತ್ತ ನೋಡಿ ಅಣಕಿಸಿದಳು. ಬೇರೆಯ ಸಮಯದಲ್ಲಿ ಹೇಗೆ ತೆಗೆದುಕೊಳ್ಳುತ್ತಿದ್ದನೋ ಮುಖದಲ್ಲಿ ಇರುಸು ಮುರುಸು ಪ್ರಕಟಿಸಿದ. "ಹೊತ್ತಾಯ್ತು....." ಹೊರಟೇಬಿಟ್ಟ.

ತುಂಬಿದ ಗೃಹಗಳಲ್ಲಿ ಪ್ರದರ್ಶಿತವಾಗುತ್ತಿರುವ ಚಿತ್ರ.

ಚಲನಚಿತ್ರ ಷುರುವಾದ ಅರ್ಧಗಂಟೆಯ ತರುವಾಯ ಎ.ಸಿ.ಗಳು ಆಫ್ ಆಯಿತು. ಪ್ರೇಕ್ಷಕರನ್ನು ವಂಚಿಸುವ ಉದ್ದೇಶವೋ ಅಥವಾ ವಿದ್ಯುಚ್ಛಕ್ತಿಯ ಕೊರತೆಯ ಪರಿಣಾಮವೋ ಕೂತವರಿಗೆ ಬಿಸಿ ತಟ್ಟಲಾರಂಭಿಸಿತು. ಕೆಲವರು ಗೊಣಗಿದರಷ್ಟೆ. ಧೈರ್ಯವಾಗಿ ಪ್ರತಿಭಟಿಸಲು ಯಾರು ಮೇಲೇಳಲಿಲ್ಲ. ಇದು ಸಹಜ ಎನ್ನುವಂತೆ ಒಗ್ಗಿಕೊಂಡಿದ್ದರು ಜನ.

"ಭಯಂಕರವಾದ ಸೆಕೆ...... ನಾನ್ಸೆನ್ಸ್... ಡ್ಯಾಮಿಟ್" ಗೊಣಗುತಲೇ ಎದ್ದು ಹೋದವನು ಐದು ನಿಮಿಷದ ನಂತರ ಹಿಂದಿರುಗಿದ. "ಈ ಸೆಕೆಯಲ್ಲಿ ಹೇಗ ಸಿನಿಮಾ ನೋಡುವುದು" ದುಸುದುಸು ಎಂದ. ಸಿನಿಮಾ ಮುಗಿದು ಹಾಲ್ ಖಾಲಿಯಾಗುವವರೆಗೆ ಕಿಂಚಿತ್ ಕೂಡ ಚಲನಚಿತ್ರ ನೋಡಿದ ಅನುಭವವಾಗಲಿಲ್ಲ.

ದಾರಿಯಲ್ಲಿ ಒಂದು ಹೋಟಲ್ ಬಳಿ ಕಾರು ನಿಲ್ಲಿಸಿದ. "ಒಂದೇ ಒಂದ್ಮಾತು ಕೂಡ ಆಡಲಿಲ್ಲ. ಇನ್ನು ಜೊತೆಯಲ್ಲಿ ಹೋಗಿದ್ದರ ಪ್ರಯೋಜನವೇನು ?" ಸ್ವಿಚ್ ಕೀ ತೆಗೆದು ಜೇಬಿಗೆ ಸೇರಿಸುತ್ತ ಕೇಳಿದಾಗ ನಿರುತ್ತರಳಾದಳು. ಅತಿಯಾದ ವ್ಯಂಗ್ಯವಿತ್ತು ಅವನ ಮಾತಿನಲ್ಲಿ.

"ಸೆಕೆಯ ಮಧ್ಯೆ ಮಾತೇ ಬೇಡವೆನಿಸಿತು."

ಮಡದಿಯ ಮಾತಿಗೆ ಗಕ್ಕನೆ ತಿರುಗಿದ. "ಸ್ವಲ್ಪ ನೀನು ಯಾಕೆ ನನ್ನ ಅರ್ಥ ಮಾಡ್ಕೋಬಾರ್ದು ? ನಂಗೆ ಇಂಥ ಮಾತುಗಳು ಇಷ್ಟವಾಗೋಲ್ಲ" ಜೇಬಿನಿಂದ ಕೀ ತೆಗೆದು ಮೇಲಕ್ಕೆಸೆದು ಹಿಡಿದ. ಸ್ತಬ್ಧವಾಯಿತು ಅವಳ ಮನ.

ಎ.ಸಿ.ನಲ್ಲಿ ಕೂಡುವುದಕ್ಕಿಂತ ಗಾರ್ಡನ್‌ನಲ್ಲಿ ಕೂತು ಹೊರಗಿನ ತಂಗಾಳಿ, ಗಿಡಗಳ ಚೆಲುವನ್ನು ಆಸ್ವಾದಿಸುತ್ತ ಏನಾದರೂ ತೆಗೆದುಕೊಳ್ಳಬೇಕೆಂಬುದು ಅವಳ ಭಾವನೆ. ಅದು ವಸಂತನಿಗೆ ಅರ್ಥವಾಗದು. ಅಕಸ್ಮಾತ್ ಅರ್ಥವಾದರೂ ಅದಕ್ಕೆ ವಿರುದ್ಧವಾದುದನ್ನೆ ಆರಿಸಿಕೊಳ್ಳಬಲ್ಲ.

ಮೆನು ಕಾರ್ಡನ್ನು ಅವಳತ್ತ ಸರಿಸಿ "ಏನು ತಗೋತೀಯಾ?" ಎಂದವನು "ಆ್ಯಪಲ್ ಜ್ಯೂಸ್ ತಗೊಳ್ಳೋಣ" ಅವನೇ ಹೇಳಿದ.

ಆ್ಯಪಲ್ ಜ್ಯೂಸ್ ಬಂತು. ಅವಳಿಗೆ ಕುಡಿಯಬೇಕೂಂತ ಅನ್ನಿಸಲಿಲ್ಲ. ಸೌಜನ್ಯ ಸೇತುರಾಮ್ ಮೊಮ್ಮಗಳಲ್ಲಿ ಬೆಳೆಸಿದ ಗುಣ - ಮೌನವಾಗಿ

ಕುಡಿದಳು.

ಹೊರಗಿನ ಬಾಲ್ಕನಿಯಲ್ಲಿ ಕೂತಿದ್ದ ಸೇತುರಾಮ್ ನೂರು ಕಣ್ಣುಗಳಲ್ಲಿ ಅವರನ್ನ ನೋಡಿದರು. ಮಗ ಮಾಮೂಲಾಗಿದ್ದರೂ ಶಾರದಾಳ ಕಣ್ಣುಗಳು ಮನದಲ್ಲಿ ಜಿಜ್ಞಾಸೆಯಿದೆಯೆಂದು ಒತ್ತಿ ಹೇಳಿದವು. ಚಿಂತಿತರಾದರು. ಬಹಳ ಮಟ್ಟಿಗೆ ಮಗನೆ ಅದಕ್ಕೆ ಕಾರಣನೆಂದು ಅವರಿಗೆ ಗೊತ್ತು.

"ಹೇಗಿತ್ತು ಫಿಲಂ ?" ವಿಚಾರಿಸಿದರು.

ಏನು ಹೇಳಬೇಕೆಂದು ಅವಳಿಗೆ ತೋಚಲಿಲ್ಲ. ದುಸದುಸ, ಗೊಣಗುವಿಕೆಯಲ್ಲಿ ಒಂದೇ ಒಂದು ದೃಶ್ಯವನ್ನು ಸರಿಯಾಗಿ ನೋಡಲಾಗಿರಲ್ಲಿಲ್ಲ. ಸಂಬಂಧವಿಲ್ಲದ ಮಾತುಗಳ ಪಿಸುಗುಡುವಿಕೆ. ರಂಗೇಗೌಡರು, ಶಾಂತ, ಬಂದ ವಿದ್ಯಾರ್ಥಿಗಳ ಜೊತೆಯಾಡಿದ ಮಾತುಗಳ ಪ್ರಸ್ತಾಪವೇ.

"ಸಾರಿ..... ಅಂಕಲ್" ಒಳಗೆ ಹೋದಳು.

"ಹೇಗಿತ್ತು ಫಿಲಂ ?" ಮಗನನ್ನೇ ಕೇಳಿದರು.

"ಪರ್ವಾಗಿಲ್ಲ... ಅನ್ನಿಸ್ತು" ಎಂದ.

ಇದು ಅವರಿಗೆ ಸರಿಯೆನಿಸಲಿಲ್ಲ. ಡೈನಿಂಗ್ ಹಾಲ್‌ನಲ್ಲಿಯು ಗಂಭೀರವಾಗಿಯೇ ಇದ್ದಳು ಶಾರದ. ಪ್ರತಿಯೊಂದು ಪದಾರ್ಥಕ್ಕೂ ಒಂದೊಂದು ಹೆಸರಿಡುತ್ತ ಮಾತಾಡುತ್ತ ಊಟ ಮಾಡುವ ಮಗನನ್ನು, ಗಂಭೀರವಾಗಿದ್ದ ಸೊಸೆಯನ್ನು ಬದಲಿಸಿ ಬದಲಿಸಿ ನೋಡಿದರು ಸೇತುರಾಮ್. ಇಬ್ಬರ ಮನೋಲೋಕಗಳು ಬೇರೆ ಬೇರೆಯೆನಿಸಿತು. ಇದು ಸ್ವಲ್ಪ ಸಹಜವೇ! ಸಾಮರಸ್ಯದಿಂದ ಸರಿಪಡಿಸಿಕೊಳ್ಳಬಹುದು.

ಸ್ವಲ್ಪ ಬೇಗನೇ ಊಟ ಮುಗಿಸಿ ಎದ್ದ ಶಾರದ ಮತ್ತೆ ಅವರುಗಳ ಊಟವಾಗುವವರೆಗೂ ಕೂತವಳು, ಅಡಿಗೆಯ ಮನೆಗೆ ಹೋದಳು. ಮಿಕ್ಸಿಗೆ ಅಕ್ಕಿ ಹಾಕುತ್ತಿದ್ದ ಗೋಪಿಯನ್ನು ನೋಡಿ ಕನಿಕರಗೊಂಡಳು.

"ನಾನು ಈ ಕೆಲ್ಸ ಮಾಡ್ತೀನಿ, ಹೋಗಿ ಊಟ ಮಾಡು" ಹೇಳಿದವಳು ತಾನೇ ಅವನನ್ನು ಕೂಡಿಸಿ ಬಡಿಸಿದ್ದು "ಇನ್ನಷ್ಟು ಪಲ್ಯ ಹಾಕ್ಕೋ, ತರಕ್ಕಾರಿ ಆರೋಗ್ಯಕ್ಕೆ ಒಳ್ಳೇದು."

ಗೋಪಿಗಂತು ಸಂತೋಷವೋ ಸಂತೋಷ. ಇಲ್ಲಿ ಅವನಿಗೆ ಯಾವುದೇ ಕೊರತೆ ಇಲ್ಲ. 'ಊಟ ಮಾಡ್ಕೋಗು' ಎಂದು ಕಾಶೀಪತಿ ಹೇಳಿದರೇ,

ಅಪರೂಪಕ್ಕೆ 'ಊಟ ಆಯಿತೇನೋ ?' ಎಂದು ಕೇಳುತ್ತಿದ್ದ ವಸಂತ. ಅಷ್ಟು ಬಿಟ್ಟರೇ ಇಂಥ ಮುತುವರ್ಜಿ ವಹಿಸುವವರು ಯಾರು?.

ಇವಳು ದೋಸೆ ಹಿಟ್ಟು ರುಬ್ಬಿ ಮುಗಿಸುವ ವೇಳೆಗೆ ಗೋಪಿ ಊಟ ಮುಗಿದಿತ್ತು."ಅಕ್ಕ, ನಿನ್ನದೇನಾದ್ರೂ ಕೆಲ್ಸ ಇದ್ದರೆ ಹೇಳು, ಮಾಡಿ ಕೊಡ್ತೀನಿ. ಅಷ್ಟಿಷ್ಟು ಐರನ್ ಬರುತ್ತೆ. ಐರನ್‌ಬಾಕ್ಸ್ ಮುಟ್ಟಿದ್ರೆ ಚಿಕ್ಕೆಜಮಾನ್ರು ಬೈಯ್ತಾರೆ. ಒಂದ್ಸಲ....." ಒಮ್ಮೆ ಅವನು ಷಾಕ್ ಹೊಡೆಸಿಕೊಂಡ ಘಟನೆ ರಸವತ್ತಾಗಿ ಹೇಳತೊಡಗಿದಾಗ ನಕ್ಕಳು. ವಸಂತನ ಕಿವಿ ಚುರುಕು. ಅವನ ಕಿವಿಗೆ ತಲುಪಿಯೇ ತಲುಪಿತು.

ರೂಮಿಗೆ ಹೋಗಿ ಕಾಶೀಪತಿಗಳನ್ನು ಮಾತಾಡಿಸಿಕೊಂಡೇ ಬೆಡ್‌ರೂಂಗೆ ಬಂದಿದ್ದು. ಎರಡು ಕೈಗಳನ್ನ ಬೆಸೆದುಕೊಂಡು ತಲೆಯ ಕೆಳಗಿಟ್ಟುಕೊಂಡು ಭಾವಣಿ ದಿಟ್ಟಿಸುತ್ತಿದ್ದ ವಸಂತ ವಾರೆಗಣ್ಣಿಂದ ಅವಳತ್ತ ನೋಡಿದ. ಅಡಿಗೆಯ ಮನೆಗೆ ಹೋಗಿದ್ದು ಅವನಿಗೆ ಇಷ್ಟವಾಗಲಿಲ್ಲ. ಆದರ ಅಗತ್ಯವಿತ್ತಾ, ಎನ್ನುವ ಪ್ರಶ್ನೆ ಅವನದು.

ಬಳೆಗಳನ್ನ ತೆಗೆದು ಬಾಕ್ಸ್‌ಗೆ ಹಾಕಿ ಡ್ರಾಯರ್‌ನೊಳಕ್ಕೆ ತಳ್ಳಿ ಮಂಚದ ಬಳಿಗೆ ಬರುವ ವೇಳೆಗೆ ಒಂದು ಬಾಂಬ್ ಸಿಡಿಸಿದ.

"ಅಪ್ಪ ಫಿಲಂ ಬಗ್ಗೆ ಕೇಳಿದಾಗ ಏನು ಹೇಳಲೇ ಇಲ್ಲ"

ಅಲ್ಲಿಗೇ ಬಿಟ್ಟು ಬಿಡಬಹುದಾದ ವಿಷಯವನ್ನು ಇಲ್ಲಿಗೆ ಎಳೆ ತಂದಿದ್ದು ಅವಳಿಗೆ ಇಷ್ಟವಾಗಲಿಲ್ಲ. "ಸಂಗೆ ಅನ್ನಿಸಿದ್ದು ಹೇಳ್ದೆ" ಹಾಸಿಗೆಯ ಮೇಲೆ ಉರುಳಿಕೊಂಡಳು. ಅವಳ ಮೂಡ್ ಪೂರ್ತಿ ಆಫ್.

ಮಲಗಿದ್ದವನು ಎದ್ದು ಕೂತ.

"ಯಾವ್ದೇ ಮಾತು ಆಡೋಕೆ ಮೊದ್ಲು ಯೋಚ್ಸಬೇಕು. ಅವ್ರೇನು ತಿಳ್ಕೊಳ್ಳೋಲ್ಲ. ದಿಸ್ ಈಸ್ ಟೂ ಮಚ್" ನೇರವಾಗಿಯೇ ಆರೋಪಿಸಿದ.

ತುಟಿ ಕಚ್ಚಿ ಕಣ್ಮುಚ್ಚಿಕೊಂಡಳು. ಇದ್ದಿದ್ದು ತಾತ, ಮೊಮ್ಮಗಳು ಮನೆಯಲ್ಲಿ. ಕಿರಿಕಿರಿ, ಬೈಗಳು, ಜಗಳವಾಡುವಂಥ ವಾತಾವರಣ ಇರಲಿಲ್ಲ. ಅಭ್ಯಾಸಕ್ಕಾಗಿಯೇ ಶಾಲಾ ಕಾಲೇಜುಗಳಿಗೆ ಹೋಗುತ್ತಿದ್ದರಿಂದ ನೇರ ಘರ್ಷಣೆಗಳು ಇರಲಿಲ್ಲ. ಅವಳ ಬುದ್ಧಿವಂತಿಕೆಯ ವಿಷಯದಲ್ಲಿ ಅನಾವಶ್ಯಕವಾಗಿ ಮತ್ಸರಪಡುವ ಯಾರಾದರೂ ಕುಹಕಿಗಳು ಏನಾದರೂ ಅಂದುಕೊಂಡರೂ ಗಮನಕೊಟ್ಟಿರಲಿಲ್ಲ. ಅವೆಲ್ಲ ಪರೋಕ್ಷವಾದ್ದುದ್ದು.

ಆದರೆ ವಸಂತ ನೇರವಾಗಿ ವಾದಕ್ಕೆ ಇಳಿಯುತ್ತಿದ್ದ. ಇದು ಮಾನಸಿಕ ಕ್ರೌರ್ಯ.

ಗಂಡನ ಯಾವ ಮಾತುಗಳಿಗೂ ತುಟಿ ತೆರೆಯಲಿಲ್ಲ. ಸಾಕಷ್ಟು ಓದಿಕೊಂಡವಳು. ದಂಪತಿಗಳ ಮಧ್ಯೆ ಇರಬೇಕಾದ್ದು ಒಲವೇ ವಿನಃ ಕದನವಲ್ಲ. ಇಲ್ಲಿ ಮಿತ್ರತ್ವ ಅನಿವಾರ್ಯವೇ ಹೊರತು ಕದನವಲ್ಲ.

"ವಾಟ್ ಯು ಮೀನ್, ನಾನು ಇಂಥ ಉತ್ಪ್ರೇಕ್ಷೆಯನ್ನು ಸಹಿಸೋಲ್ಲ. ತುಂಬ ಕಲೀತಿದ್ದೀನಿ ಅನ್ನೋ ಅಹಂಕಾರ ನಿಂಗೆ" ಹಲ್ಲುಮಿಡಿ ಕಚ್ಚಿ ಕೋಪದಿಂದ ಅಬ್ಬರಿಸಿದ. ಅವನ ಈ ದನಿ ರೂಮಿನ ಗೋಡೆಗಳಿಗೆ ಬಡಿದು ಶಾರದಳ ಕಿವಿಗಳಿಗೆ ಅಪ್ಪಳಿಸಿದಾಗ ತೀರಾ ಕರ್ಕಶವೆನಿಸಿತು.

ಎದ್ದು ಕೂತು ಅವನತ್ತ ನೋಡಿದಳು, ಅವನ ಕಣ್ಣುಗಳಲ್ಲಿ ಇದ್ದಿದ್ದು ಬರೀ ಆವೇಶ. ಅದರಲ್ಲಿ ಕನಿಷ್ಠ ಆಲೋಚನೆ ಇದ್ದಿದ್ದರೂ ಬೇರೆ ವಸಂತನೆ ಆಗಬಹುದಿತ್ತು.

"ಮಲಕ್ಕೊಳ್ಳಿ, ನನ್ನ ಮಾತಿನಲ್ಲಿ ಯಾವ್ದೇ ದುರುದ್ದೇಶವಿಲ್ಲ. ಅನಾವಶ್ಯಕವಾಗಿ ಯಾಕೆ ಈ ಹಾರಾಟ ? ನಂಗೆ ಯಾರೊಂದಿಗೂ ಜಗಳವಾಡಿ ಅಭ್ಯಾಸವಿಲ್ಲ" ಎಂದು ಹೇಳಿ ಮಲಗಿಬಿಟ್ಟಳು.

ಅರ್ಧಗಂಟೆಯ ನಂತರ ದೊಡ್ಡ ದೀಪ ಆರಿ ಮಂದ ಬೆಳಕಿನ ಸಣ್ಣ ವಿದ್ಯುತ್‌ದೀಪ ಹತ್ತಿಕೊಂಡಿತು. ಈಗ ಅವನ ತಲೆಯಲ್ಲಿ ಹತ್ತಿಕೊಂಡಿದ್ದು ಬಯಕೆ. ಸೊಬಗಿನ ಮಡದಿ ಸಾಧಾರಣ ಪಾಚಿಕಲರ್‌ನ ಸೀರೆಯಲ್ಲಿ ಮತ್ತಷ್ಟು ಚೆಲುವಾಗಿದ್ದಳು.

ಕೈ ಹಾಕಿ ಬಲವಂತದಿಂದ ಎಳೆದುಕೊಂಡಾಗ ಮೊದಲ ಸಲ ಅವನ ತೋಳುಗಳನ್ನ ನಿರಾಕರಿಸಿದಳು "ಪ್ಲೀಸ್, ಲೀವ್ ಮಿ ಅಲೋನ್" ಅವನ ಕೈಗಳು ಸಡಿಲವಾದವು. ಇದೊಂದು ದೊಡ್ಡ ಅವಮಾನವೆ.

ಹೆಚ್ಚು ಕಡಿಮೆ ಅವನು ಇಡೀ ರಾತ್ರಿ ನಿದ್ರಿಸಲಿಲ್ಲ. ಇದರ ಪರಿಣಾಮ ಮುಂದಿನ ಮೂರು ದಿನ ಅವಳೊಂದಿಗೆ ಮಾತಾಡಲಿಲ್ಲ. ಬಿಗಿದುಕೊಂಡೇ ಇದ್ದ. ಅವಳಾಗಿ ಮಾತಾಡಿಸಿದರೇ 'ಹಾ, ಹ್ಞೂ' ಅಷ್ಟೆ.

"ತಿಂಡಿ ತಗೋ ಬನ್ನಿ, ಅಂಕಲ್ ಕಾಯ್ತ ಇದ್ದಾರೆ" ಮಂಚದ ಮೇಲೆ ಕೂತು ಮ್ಯಾಗಝೀನ್ ತಿರುವುತ್ತಿದ್ದವನಿಗೆ ಹೇಳಿದ್ದಷ್ಟೆ, ವ್ಯಂಗ್ಯ ನೋಟ ಹರಿಸಿ "ಗಂಡನ ಊಟ ತಿಂಡಿಗಳಿಗಾಗಿ ಕಾಯೋ ಹೌಸ್‌ವೈಫ್ ಏನಿಲ್ಲ, ನೀನು. ಇಲ್ದ ಫಾರ್ಮಾಲಿಟೀಸ್ ಬೇಡ. ಅಪ್ಪನ ಬಲವಂತಕ್ಕೆ ಬಂದ್ಯಾ?"

ಇರಿಯುವಂತಿತ್ತು ವಸಂತನ ಮಾತುಗಳು.

ತುಟಿ ಕಚ್ಚಿ ಟೇಬಲಿನ ಮುಂದೆ ಕೂತಳು. ಚಪಾತಿ ಮುರಿಯಲಾಗಲಿಲ್ಲ. ನಾಲ್ಕು ದಿನದಿಂದ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಕಾಶೀಪತಿ ಆತಂಕಗೊಂಡರು.

"ವಸಂತ ಬರಲಿಲ್ವಾ ?" ಪ್ರಶ್ನಿಸಿದರು.

"ಇಲ್ಲ, ಏನೋ ಓದ್ತಾ ಇದ್ದಾರೆ. ಅಂಕಲ್ ಇವತ್ತು ಹೊತ್ತಾಯ್ತು, ಕ್ಯಾಂಟಿನ್‌ನಲ್ಲಿ ಏನಾದ್ರೂ ತಗೋತೀನಿ" ಎದ್ದೇಬಿಟ್ಟಳು.

ಕೆಲವೊಮ್ಮೆ ಅವಳನ್ನು ವಸಂತ್ ಒಯ್ದು ಕಾಲೇಜಿನ ಬಳಿ ಡ್ರಾಪ್ ಮಾಡಿದ್ದ. ದಾರಿಯುದ್ದಕ್ಕೂ ಏನೇನೋ ಮಾತುಗಳು. ಪ್ರೊಫೆಸರ್ ರಂಗೇಗೌಡರ ಬಗ್ಗೆ ಟೀಕೆ, ಅಂದು ಬಂದ ಕಾಲೇಜಿನ ವಿದ್ಯಾರ್ಥಿಗಳ ಬಗ್ಗೆ ಟೀಕೆ,ಇವೇ ಮಾತುಗಳು. ಕಾರು ಹತ್ತುವಾಗ ಸರಿಯಾಗಿದ್ದರೂ ಅಲ್ಲಿ ಇಳಿಸುವ ವೇಳೆಗೆ ಅವಳಿಂದ ಒಂದು ಕಿಲೋಮೀಟರ್ ದೂರ ಮಾನಸಿಕವಾಗಿ ಹಿಂದೆ ನಿಲ್ಲುತ್ತಿದ್ದ ಯಾಕೆ? ಈ ಪ್ರಶ್ನೆಗೆ ಯಾರು ಉತ್ತರ ಹೇಳಬೇಕು? ಮಡದಿಯ ಮೇಲಿನ ಉತ್ಕಟವಾದ ಪ್ರೀತಿಯೋ ಅಥವಾ ಅವಳ ಬೌದ್ಧಿಕ ಬೆಳವಣಿಗೆಯ ಬಗ್ಗೆ ಮತ್ಸರವೋ ! ಅರ್ಥವಾಗದ ಸ್ಥಿತಿ. ಭದ್ರವಾಗಿ ಅವರಿಬ್ಬರ ನಡುವೆ ಬೆಸುಗೆ ಮೂಡಬೇಕಾದ ಈ ದಿನಗಳಲ್ಲಿ..... ಇಂಥ ಕ್ಷೋಭೆ! ಹಿರಿಯ ಜೀವ ಬಹಳ ನೊಂದಿತು.

ಗೇಟಿನವರೆಗೂ ಹೋಗಿ ಶಾರದನ ಬೀಳ್ಕೊಟ್ಟವರು ಅಲ್ಲೇ ನಿಂತರು. ವಾರಕ್ಕೆ ಒಂದೆರಡು ಸಲವಾದರೂ ಸೇತುರಾಮ್‌ನ ನೋಡೋಕೆ ಹೋಗುತ್ತಿದ್ದರು.

"ನಿಮ್ಗೆ ಯೋಚನೆಯೇ ಬೇಡ. ನಿಮ್ಮನ್ನ ಮರೆಯೋ ಹಂಗೆ ವಸಂತ್ ನೋಡ್ಕೋತಾನೆ" ಎಷ್ಟೋ ಸಲ ಈ ಮಾತನ್ನ ಅಂದಿದ್ದರು. ಅದು ಸಾಧ್ಯವಾಗಿದೆಯೇ ? ಅನುಮಾನವಾಯಿತು. ಯಾಕೆ? ಎಲ್ಲಿದೆ ತಪ್ಪು ?

ಮಗನ ಜೊತೆಯಲ್ಲಿ ಕೂತು ತಿಂಡಿ ತಿಂದ ನಂತರ "ವಸಂತ ಒಂದಿಷ್ಟು ಮಾತಾಡೋದಿದೆ, ಬಾ" ರೂಮಿಗೆ ಹೋದರು.

ಇದು ಹೀಗೆಯೇ ಮುಂದುವರಿಯುವುದು ಅವರಿಗೆ ದೊಡ್ಡ ಪ್ರಮಾದವಾಗಿ ಕಂಡಿತು. ಸಮಾಜ, ಮಗ, ಎಲ್ಲರ ಭಯಕ್ಕಿಂತ ಮೇಲೆ ಹೋಗಿ ಅವರಿಗಾಗಿ ಕಾದು ಕುಳಿತ ಆನಂದನ ಭಯ.

ವಸಂತ ಬಂದ. ಕಾಲೇಜು ಬಿಲ್ಡಿಂಗ್‌ನ ಬಗ್ಗೆ

ಪ್ರಸ್ತಾಪಿಸಬಹುದೆಂದುಕೊಂಡಿದ್ದ "ಬಿಲ್‌ಗಳನ್ನು ಸರ್‍ಯಾಗಿ ಪೇ ಮಾಡ್ದೇ ಇರೋ ಕಾರಣಕ್ಕೆ....ಕೆಲ್ಸ ನಿಲ್ಸಿಸಿರೋದು. ಹೆಚ್ಚು ದಿನ ಅದನ್ನ ಮುಂದುವರಿಸೋಕ್ಕಾಗೋಲ್ಲ. ಅದು ನಮ್ಮ ಪ್ರಿಸ್ಟೀಜ್ ಪ್ರಶ್ನೆ" ಅವನೇ ಮೊದಲು ಷುರು ಮಾಡಿದ.

ಅಲ್ಲವೆಂದು ಕೈಯಾಡಿಸಿ ಕೂರುವಂತ ಸನ್ನೆ ಮಾಡಿದರು "ನಿನ್ನ ಹೊರಗಿನ ವ್ಯವಹಾರಗಳ ವಿಚಾರದಲ್ಲಿ ನಂಗೆ ಭಯವಿಲ್ಲ. ನನ್ನ ಸಲಹೆ, ಸಹಕಾರಗಳು ಕೂಡ ಅನಗತ್ಯ. ಅಷ್ಟರ ಮಟ್ಟಿಗೆ ಬೆಳೆದಿದ್ದೀಯ, ಆದರೆ...." ಮಾತು ನಿಲ್ಲಿಸಿದರು.

ವಸಂತನಿಗೆ ಸ್ವಲ್ಪ ಅರ್ಥವಾಯಿತು. ಅವನ ಪ್ರಕಾರ ಶಾರದನೆ ಪೂರ್ತಿ ತಪ್ಪಿತಸ್ಥಳು. 'ಹೆಚ್ಚು ಕಲಿತವಳು, ತಾನು ಬುದ್ಧಿವಂತೆ ಎನ್ನುವ ಅಹಂಕಾರ' ಇದು ಅವನ ಅಭಿಪ್ರಾಯ. ಇದಕ್ಕೆ ತಂದೆಯಿಂದ ಅನುಮೋದನೆ ಸಿಗಬೇಕು, ಸಿಗುತ್ತೆ !.

"ಪ್ರೇಮ, ಪ್ರೀತಿಯ ನಡುವೆ ಮುನಿಸು ಅಗತ್ಯ. ಅದು ಊಟದಲ್ಲಿರೋ ಉಪ್ಪಿನಕಾಯಿಯ ಹಾಗೇ. ಆದರೆ ಪೂರ್ತಿ ಉಪ್ಪಿನಕಾಯಿಯಾದರೇ ಪ್ರಮಾದ. ಅದು ಎಲೆಯ ಕೊನೆಯಲ್ಲಿರಬೇಕೇ ವಿನಃ ಎಲೆಯನ್ನು ಆವರಿಸಿಕೊಳ್ಳಬಾರ್ದು, ಪೂರ್ತಿ ನಗು, ಸಂತೋಷ ಅರಳಬೇಕಾದ ಸಮಯದಲ್ಲಿ ನೀವಿಬ್ಬರೂ ಮುಖ ಬಿಗಿದು ಓಡಾಡೋದು ಎಷ್ಟು ಚೆನ್ನ" ಪೀಠಿಕೆ ಹಾಕಿದರು.

"ನನ್ನಿಂದ ತಪ್ಪು ಆಗಿದ್ಯಾ ?" ಕಟುವಾದ.

"ಇಲ್ಲ, ನೀವಿಬ್ರೂ ತಪ್ಪು ಮಾಡೋಲ್ಲ. ತಪ್ಪು ಮಾಡ್ಬಾರ್ದು ಕೂಡ. ಹೊಸ ಸಂಬಂಧ, ಹೊಸ ಪರಿಚಯ ಯಾವ್ದೂ ಇಲ್ಲ. ಮಾತಾಡಿದ್ದೀರಾ, ಓಡಾಡಿದ್ದೀರಾ-ಒಬ್ಬರನ್ನೊಬ್ರು ಚೆನ್ನಾಗಿ ಅರ್ಥ ಮಾಡ್ಕೊಂಡಿದ್ದೀರೆಂಬುದೆ ನನ್ನ ಭಾವನೆ. ನೀವಿಬ್ರ ಮಧ್ಯೆ ವಿರಸ ಬರೋಕೆ ಕಾರಣವಿಲ್ಲ" ಅವರು ಎಲ್ಲಾ ಪಾಸಿಟಿವ್ ಪಾಯಿಂಟ್‌ಗಳನ್ನು ಮಾತ್ರ ಗುರುತು ಹಾಕಿದರು.

ಸುಮ್ಮನೆ ಕೂತ. ಕಾಶೀಪತಿಗಳು ಕೂಡ ಮತ್ತೆ ಮಾತಾಡಲಿಲ್ಲ. ಇಂಥದ್ದೇ ತಪ್ಪು, ಇದೇ ಅಪರಾಧವೆಂದು ಶಾರದಳ ಮೇಲೆ ಆರೋಪ ಹೊರೆಸುವುದು ಕಷ್ಟವೆನಿಸಿತು.

"ಅಂಥದೇನಿಲ್ಲ !" ಎಂದ ಸುಲಭವಾಗಿ.

"ಏನು ಇಲ್ಲದಿದ್ದರೇ ಸಂತೋಷವೆ. ಗಂಡ, ಹೆಂಡಿರ ಮಧ್ಯದ ಜಗಳ,

ವಿರಸ ಬೇಗ ಮುಕ್ತಾಯವಾಗ್ಬೇಕು. ನಿಮಿಷಗಳು ಗಂಟೆಗಳಲ್ಲಿ ಮುಗಿದರೇ ಒಳ್ಳೇದು, ದಿನಗಟ್ಟಲೆ ಮುಂದುವರಿದರೆ ಕಂದಕವೇರ್ಪಡುತ್ತದೆ. ಇದು ನಿನ್ನ ಮನಸ್ಸಿನಲ್ಲಿ ಇರ್ಲಿ" ಹೇಳಿದರು.

ಅವನಿಗೆ ಅವಮಾನವೆನಿಸಿತು. ಕೂತ ಕೂತ ಕುದಿದ. ಇದಕ್ಕೆಲ್ಲ ಕಾರಣ ಶಾರದಾನೆ ! ತನ್ನ ಇಷ್ಟವಂತೆ ನಡೆದುಕೊಳ್ಳುವುದಕ್ಕೆ ಅವಳಿಗೇನು ಕಷ್ಟ ?

"ಇದ್ನ ನಂಗಿಂತ ನೀವು ಶಾರದ ಹತ್ರ ಪ್ರಸ್ತಾಪಿಸಬೇಕಿತ್ತು" ಎಂದು ಹೇಳಿ ಹೋದ.

ಆಲೋಚಿಸುವಂತಾಯಿತು ಕಾಶೀಪತಿಗಳಿಗೆ. ಇದು ತೀರಾ ಅನಿರೀಕ್ಷಿತವಲ್ಲ. ಶಾರದ, ವಸಂತನ ನಡುವೆ ತಕ್ಷಣ ಘರ್ಷಣೆಗಳೇನು ಷುರುವಾಗದು. ಆಮೇಲೆ ಒಗ್ಗಿಕೊಳ್ಳುತ್ತಾರೆ-ಇದು ಸ್ವಾಭಾವಿಕವಾದುದ್ದು ಎಂಬುದು ಮಾತ್ರ ಅವರ ತಲೆಯಲ್ಲಿತ್ತು.

ವಸಂತ ಹೋದ ಮೇಲೆ ಗೋಪಿ ಸಾಮಾನಿನ ಚೀಟಿ ಹಿಡಿದು ಬಂದ "ನಾನೇ ಎಲ್ಲ ಪಟ್ಟಿ ಮಾಡಿದ್ದೀನಿ" ಗೆಲುವಿನಿಂದ ಅವರ ಮುಂದಿಡಿದ. ಕರುಣೆಯಿಂದ ನೋಡಿದರು, ಅವನಪ್ಪ ಇಲ್ಲಿ ಬಿಟ್ಟು ಹೋಗಿ ಮೂರು ವರ್ಷವಾಗಿತ್ತು. ಆಗಾಗ ಬಂದು ಇವನ ಸಂಬಳದ ಹಣ ಪಡೆದುಕೊಂಡು ಹೋಗುವಷ್ಟರ ಮಟ್ಟಿಗಿನ ಸಂಬಂಧವಷ್ಟೆ ಉಳಿದುಕೊಂಡಿತ್ತು. ಅವನು 'ಏನು' ಎನ್ನುತ್ತಿರಲಿಲ್ಲ. ಇವನು ಹೋಗಬೇಕೆಂದೇನು ಅನ್ನುತ್ತಿರಲಿಲ್ಲ, ಸದ್ಯಕ್ಕಂತು ಅವನು ಇಲ್ಲಿನ ಖಾಯಂ ನಿವಾಸಿ.

"ನಿಂಗೆ ಪಟ್ಟಿ ಮಾಡೋಕೆ ಯಾರು ಹೇಳಿದ್ದು ?"

ಪಟ್ಟಿ ಕೈಯಲ್ಲಿಡಿದು ನೋಡಿದರು, ಅಡ್ಡಾದಿಡ್ಡಿ ಅಕ್ಷರಗಳು, ಕೆಲವು ಕಾಗುಣಿತ ತಪ್ಪುಗಳೂ ಇದ್ದವು.

"ಅಕ್ಕ ಹೇಳಿದ್ರು" ಸಂಕೋಚದಿಂದ ನುಡಿದ.

ಕೆಲವು ತಪ್ಪುಗಳನ್ನು ತೋರಿಸಿ ತಲೆಯ ಮೇಲೆ ಮೊಟಕಿ "ನಿಮ್ಮಪ್ಪ ನಾಲ್ಕು ವರ್ಷ ಸ್ಕೂಲಿಗೆ ಹೋಗಿದ್ದ ಅಂತಾನೆ, ನೆಟ್ಟಗೆ ಉಪ್ಪು ಅನ್ನೋದು ಬರ್‍ಯೋಕೆ ಬರೋಲ್ಲ" ಮೃದುವಾಗಿ ಬಯ್ದರು. ಇದೊಂದು ಬದಲಾವಣೆ ಒಳ್ಳೆಯದೇ ತಮಗ್ಯಾಕೆ ತೋಚಲಿಲ್ಲವೆಂದುಕೊಂಡರು.

ಮೌನವಾಗಿ ಮನೆಯಲ್ಲಿ ಉಳಿದುಬಿಟ್ಟರು. ಶಾರದ ಬಳಿ ಮಾತಾಡುವುದೋ ಬೇಡವೋ ಎನ್ನುವ ಜಿಜ್ಞಾಸೆ ಅವರಲ್ಲಿ. ಕಡೆಗೆ

ಬೇಡವೆನಿಸಿತು.

ಸಂಜೆ ಯಾವುದೋ ಕಲ್ಚರಲ್ ಪ್ರೋಗ್ರಾಂ ಇದೆಯೆಂದು ಫೋನ್ ಮಾಡಿದವಳು ಬಂದಿದ್ದು ಏಳರ ನಂತರವೆ. ಬಂದ ವಸಂತ ಬಾಲ್ಕನಿಯಲ್ಲೆ ಕೂತಿದ್ದ. ಬಂದಾಗಿನಿಂದ ನಾಲ್ಕು ಕಪ್ ಕಾಫೀ ಮುಗಿಸಿದ್ದನ್ನು ನೋಡಿದರೇ ಒಂದು ರೀತಿಯ ಟೆನ್‌ಷನ್‌ನಲ್ಲಿದ್ದಾನೆಂದು ತಿಳಿದುಕೊಳ್ಳಬಹುದಿತ್ತು.

ಅವಳತ್ತ ನೋಡಿ ವಾಚ್ ಕಡೆ ನೋಡಿದ.

"ಯಾವಾಗ್ಬಂದ್ರಿ ? ಒಂದಿಷ್ಟು ಮುಖ ತೊಳ್ದು ಬರ್ತೀನಿ" ಮುಗುಳ್ನಗೆ ಬೀರಿ ರೂಮಿಗೆ ಬಂದವಳೇ ಎರಡು ನಿಮಿಷ ಕೂತಳು.

"ಈಗ ಎಷ್ಟು ಟೈಮ್ ?" ವಾಚನ್ನ ಅವಳ ಮುಂದಿಡಿದ.

ಗಡಿಯಾರವನ್ನು, ಅವಳ ಮುಖವನ್ನು ಬದಲಿಸಿ ಬದಲಿಸಿ ನೋಡಿ "ಏಳು ಹತ್ತು....." ಎಂದಳು ಸಹನೆಯಿಂದ.

"ಇವ್ನಿಂಗ್ ಕಾಲೇಜೇನಾದ್ರೂ ಷುರು ಮಾಡಿದ್ದಾರ ?" ಸ್ವರದಲ್ಲಿ ಎಷ್ಟು ತೀಕ್ಷ್ಣತೆ ಇತ್ತೆಂದರೆ ಮುಖಕ್ಕೆ ಬಂದು ಅಪ್ಪಳಿಸಿದಂತಾಯಿತು. "ನಿಮ್ಮ ಪ್ರಶ್ನೆಗೆ ಉತ್ತರ ಹೇಳೋ ಅಗತ್ಯವಿಲ್ಲ" ತಣ್ಣಗೆ ಹೊರಗೆ ಬಂದಳು.

ಜೀವನದಲ್ಲಿ ಮೊದಲ ಸಲ ದಂಡಿಸಿದ ವ್ಯಕ್ತಿ ವಸಂತ. ತಾನು ಪುಟ್ಟ ಹುಡುಗಿಯಲ್ಲ, ಕಾಲೇಜಿನಲ್ಲಿ ಕಲಿಯುವ ಜವಾಬ್ದಾರಿ ಇಲ್ಲದ ಯುವತಿಯಲ್ಲ. ಒಬ್ಬ ಉಪನ್ಯಾಸಕಿ.

ಮತ್ತೆ ಅವಳು ರೂಮಿನತ್ತ ತಲೆ ಹಾಕಲಿಲ್ಲ. ಎರಡು ದಿನದ ಹಿಂದೆಯೇ ಇನ್ವಿಟೇಷನ್ ಹಿಡಿದು ಬಂದು ಇಂಥ ಪ್ರೋಗ್ರಾಂ ಇದೆಯೆಂದು ಹೇಳಿದ್ದು ಮಾತ್ರವಲ್ಲ ಮಧ್ಯಾಹ್ನ ಮನೆಗೆ ಫೋನ್ ಮಾಡಿ "ಅಂಕಲ್ ಬರೋದು ಲೇಟಾಗುತ್ತೆ" ಅಂದಿದ್ದಳು.

ಎಂಟರ ಸುಮಾರಿಗೆ ಕಾಶೀಪತಿಗಳು ಬಂದರು. ಕಾಂಪೌಂಡ್‌ನಲ್ಲಿ ಗಿಡಗಳ ನಡುವೆ ಓಡಾಡುತ್ತಿದ್ದ ಸೊಸೆಯನ್ನು ನೋಡಿ "ನಿನ್ನ ಕಾಲೇಜ್ ಕಡೆನೆ ಹೋಗ್ಬಂದೇ. ಕೆಲವರು ಸ್ನೇಹಿತರು ಸಿಕ್ಕರು. ನೀನು ಹೋದ ವಿಷ್ಯ ನಿನ್ನ ಕೊಲೀಗ್ ಶಾಂತ ಹೇಳಿದ್ರು. ವಸಂತ್ ಬಂದಿಲ್ವಾ ?".

ತಕ್ಷಣ ಅವಳಿಗೆ ಮಾತಾಡಲಾಗಲಿಲ್ಲ. ಅವಳಿಗೆ ದುಃಖವಾಗಿತ್ತು. ಅಳಬೇಕೆನಿಸಿತು. ಅತ್ತರೆ ಸಮಾಧಾನ ಮಾಡುವವರು ಯಾರು ? ದುಃಖದ ಕಟ್ಟೆಯೊಡೆದು ಧುಮ್ಮಿಕ್ಕಲು ಸಿದ್ಧವಾದ ಕಣ್ಣೀರನ್ನು ಹಾಗೆಯೇ

ಹಿಡಿದಿಟ್ಟಿದ್ದಳು.

"ಬಂದಿದ್ದಾರೆ" ಅಷ್ಟೆ ಹೇಳಿದ್ದು.

ಕಣ್ಣಂಚಿನ ತುಂತುರು ಕಾಣದಿರಬಹುದು, ಮುಖ ನೋವನ್ನು ಹೊರ ಹಾಕಿತು. ಅಲ್ಲೇ ಇದ್ದ ಬೆತ್ತದ ಛೇರ್ ಮೇಲೆ ಕೂತರು.

"ಕುಡ್ಯೋಕೆ ಏನಾದ್ರೂ ತರಲಾ ?" ಕೇಳಿದಳು ಮೃದುವಾಗಿ.

"ಬಿಸಿ ಬಿಸಿ ಕಾಫಿ ತಗೊಂಡ್ಬಾ" ಎಂದರು.

ಅವರು ಮಾನಸಿಕವಾಗಿ ಸುಧಾರಿಸಿಕೊಳ್ಳಬೇಕಿತ್ತು. ಶಾರದ ಕೂಡ ರಿಲ್ಯಾಕ್ಸ್ ಆಗಬೇಕಿತ್ತು. ಅದಕ್ಕೆ ಕಾಫೀಯೊಂದು ನೆವವಾಗಿತ್ತು.

ಹಾರುತ್ತ ಹೊರಗೆಬಂದ ಗೋಪಿ "ಏನಾದ್ರೂ ತಗೊಂಡ್ ಬರ್ಲಾ ?" ವಿಚಾರಿಸಿದವನು ಮಂಕಾಗಿ ನಿಂತ. ಬಂದಾಗಿನಿಂದ ಶಾರದ ನೀರು ಕೂಡ ಕುಡಿದಿರಲಿಲ್ಲ.

"ನಂಗೆ ಬೇಡ, ಒಂದೇ ಸಲ ಊಟ ಮಾಡ್ತೀನಿ" ಎಂದಿದ್ದಳು.

"ಶಾರದ ತಗೊಂಡ್ಬರ್ತಾಳೆ. ನೀನ್ಹೋಗಿ ವಸಂತನಿಗೆ ಏನಾದ್ರೂ ಬೇಕಾದರೇ ವಿಚಾರ್ಸು" ಕಳಿಸಿ, ತಲೆಯೆತ್ತಿ ಆಕಾಶದ ಕಡೆ ನೋಡಿದರು. ಪರಿಶುಭ್ರವಾಗಿತ್ತು. ಶೋಭಿಸುವ ನಕ್ಷತ್ರಗಳು ಪೈಪೋಟಿ ನಡೆಸುವ ಚಿತ್ರ.

ಕಾಫೀ ಹಿಡಿದು ಬಂದವಳು ಅವರ ಎದುರಿನಲ್ಲಿಯೇ ಕೂತು "ಕಾಫೀಗೆ ಸ್ವಲ್ಪ ಸಕ್ಕರೆ ಕಡ್ಮೆ ಹಾಕಿದ್ದೀನಿ".

ಕಪ್ ಕೈಯಲ್ಲಿಡಿದವರು ಮನೆಯೊಳಕ್ಕೆ ಉದ್ದಕ್ಕೂ ನೋಟ ಹರಿಸಿ "ವಸಂತ ಎಲ್ಲಿ ? ಫೈಲ್‌ಗಳ್ನ ತಂದಿಟ್ಟುಕೊಂಡಿದ್ದಾನೆ ?" ಕೇಳಿದರು.

"ನೋಡ್ಬರ್ತೀನಿ" ಎದ್ದು ಹೋದಳು.

ಅವರ ಪ್ರಶ್ನಾರ್ಥಕ, ಪರೀಕ್ಷಾತ್ಮಕ ನೋಟವನ್ನೆದುರಿಸುವುದು ಕಷ್ಟ. ನೇರವಾಗಿ ರೂಮಿಗೆ ಹೋಗಿದ್ದು.

"ಅಂಕಲ್, ನಿಮ್ಮನ್ನ ಕೇಳಿದ್ರು"

ಒಮ್ಮೆ ಅವಳತ್ತ ದೀರ್ಘವಾಗಿ ನೋಡಿದವನು "ನಾನು ರೂಮಿನಲ್ಲಿರೋದು ಅವ್ರಿಗೆ ಗೊತ್ತಿಲ್ವಾ ?" ಒಂದು ಪ್ರಶ್ನೆ, ಸದಾ ಪ್ರಶ್ನೆಗಳ ಮೂಡ್‌ನಲ್ಲಿಯೆ ಇರುವ ವಸಂತ ಬರೀ ಪ್ರಶ್ನೆಯಾಗಿಬಿಡುವ ಭಯ ಮೂಡಿತು.

"ನಾನೇ ಹೇಳೀ, ದಯವಿಟ್ಟು ಹೋಗಿ ನೋಡಿ."

ಅವನು ಬಾಯಿ ತೆರೆಯುವ ಮುನ್ನ ಅದೃಶ್ಯಳಾಗಿದ್ದಳು ಶಾರದ. ಹಲ್ಲುಮುಡಿಯನ್ನು ಕಚ್ಚಿಡಿದ. ಆದ ತಪ್ಪಿಗೆ ಅವಳು 'ಸಾರಿ' ಕೇಳಿ ಅಳುತ್ತ ನಿಲ್ಲಬೇಕಿತ್ತು. ಆಗ ತಾನು ಸಂತೈಸಬೇಕಿತ್ತು. ಇಂಥ ಒಂದು ಅವಕಾಶ ಹಾಳಾಯಿತು.

ರಾತ್ರಿಯ ಹಂತದ ಅಡಿಗೆಯ ಮುಕ್ತಾಯವನ್ನು ತಾನು ವಹಿಸಿಕೊಂಡು ಚಪಾತಿ ಹಿಟ್ಟನ್ನು ಸಣ್ಣ, ಸಣ್ಣದಾಗಿ ಉಂಡೆ ಮಾಡಿ ಒಂದೆಡೆ ಇಟ್ಟು, ತರಕಾರಿ ಬೇಯಲು ಕುಕ್ಕರ್‌ಗೆ ಹಾಕಿದಳು, ಅಡಿಗೆ ಹೊಸದಲ್ಲ. ತಾತ, ಮೊಮ್ಮಗಳು ಸೇರಿಯೇ ಅಡಿಗೆ ಮಾಡುತ್ತಿದ್ದುದು.

"ಅಕ್ಕ, ನಂಗೆ ಹಬ್ಬದ ಅಡಿಗೆಗಳು ಮಾಡೋಕೆ ಬರೋಲ್ಲ. ನಿಮ್ಗೆ ಬರುತ್ತ?" ನೆಲವನ್ನೊರೆಸುತ್ತ ಗೋಪಿ ಕೇಳಿದಾಗ ಅವಳಿಗೆ ನಗು "ಹಬ್ಬದ ಅಡಿಗೆ ಕಲಿಯೋದರ ಜೊತೆಗೆ ಸರ್‍ಯಾಗಿ ಒಂದಿಷ್ಟು ಅಕ್ಷರ ಕಲೀ. ಬರೀ ಸೊಟ್ಟ ಸೊಟ್ಟಗೆ ಬರ್ದಿದ್ದೀಯಾ! ಆ ಅಕ್ಷರಗಳ್ನ ಓದೋಕೆ ದೊಡ್ಡ ವಿದ್ವಾಂಸರು ಬೇಕಾಗ್ತಾರೆ" ನಗೆಯಾಡಿದಳು.

ಪೂರ್ತಿ ಅಡಿಗೆ ಮಾಡಿ ಮುಗಿಸಿ ತಟ್ಟೆ ಹಾಕಿಯೇ ಬಂದು ಕರೆದಿದ್ದು. "ಬನ್ನಿ, ಊಟ ಮಾಡೋಣ. ಪೂರ್ತಿ ನಂದೇ ಅಡಿಗೆ. ಅಕಸ್ಮಾತ್ ಅಲ್ಪ ಸ್ವಲ್ಪೂ ಕೆಟ್ಟಿದ್ರೂ....." ಬಗ್ಗಿದಳು ಅವನ ಮುಖದ ಬಳಿ. ಈ ಮನಸ್ತಾಪದಿಂದ ಯಾವ ಸಾಧನೆಯಾಗದೆಂದು ಅವಳಿಗೆ ಗೊತ್ತು. ಇಡೀ ಮನೆಯ ಶಾಂತಿ ಕದಡಿಹೋಗುತ್ತೆ. ಸಹನೆಯ ಅಗತ್ಯವನ್ನ ಮನಗಂಡಳು.

ಉರಿ ಉರಿಯ ನೋಟವೇ. ಅವಳ ಶಾಂತ ಮುಖದ ಮುಂದೆ ಸ್ವಲ್ಪ ಮೆತ್ತಗಾದ "ನೀನು ಸ್ವಲ್ಪ ಬದಲಾಗ್ಬೇಕು" ತೋಳು ಚಾಚಿ ಹತ್ತಿರಕ್ಕೆಳೆದುಕೊಂಡ. ಇನ್ನೊಂದು ಪ್ರಶ್ನೆ. ಬಂದ ಸಮೀಪ ಬಂದ, ವಸಂತನ ಪ್ರತಿಯೊಂದು ಮಾತಿಗೂ ಒಂದು ಪ್ರಶ್ನೆ ಮೂಡುತಿತ್ತು. ಈ ಪ್ರಶ್ನೆಯ ಸರಮಾಲೆ ಅವಳನ್ನು ಹಿಂಸಿಸುತ್ತಿತ್ತಷ್ಟೆ.

ಅಷ್ಟರಲ್ಲಿ ಕಾಶೀಪತಿಗಳು ಕೂಗಿದ್ದರಿಂದ ಬಚಾವಾದಳು. ಮೆಲ್ಲಗೆ ಅವನ ತೋಳುಗಳಿಂದ ಹೊರ ಬಂದು "ಅಂಕಲ್ ಊಟಕ್ಕೆ ಕಾಯ್ತ ಇದ್ದಾರೆ" ಹೇಳಿ ಅದೃಶ್ಯಳಾದಳು.

ಅವಳೇ ಬಡಿಸಿದಳು ಪ್ರಯತ್ನಪೂರ್ವಕವಾಗಿ ನಗುತ್ತ. "ಇವತ್ತು ಪಲ್ಯ ಅಕ್ಕ ಮಾಡಿದ್ದು" ಮೊಸರಿನ ಪಾತ್ರೆ ಹಿಡಿದು ಬಂದ ಗೋಪಿ ಹೇಳಿದ ಉತಾಹದಿಂದ.

ಈಗಾಗಲೇ ರುಚಿ ನೋಡಿದ ವಸಂತನ ನಾಲಿಗೆ ಶಭಾಷ್ ಗಿರಿ ಕೊಟ್ಟಂತಾಗಿತ್ತು. ವಾರೆ ನೋಟ ಹರಿಸಿದವನು "ಬೆಂದೇ ಇಲ್ಲ" ಪಲ್ಯದ ಬಗ್ಗೆ ಅವನ ಕಾಮೆಂಟ್ಸ್.

ತಿಂದಿದ್ದ ಕಾಶೀಪತಿಗಳಿಗೆ ಸುಳ್ಳೆಂದು ಗೊತ್ತು.

"ನಿಂಗೆ ಹಸಿವಾಗಿಲ್ಲ-ಹಸಿವಾಗಿದ್ದವರಿಗೆ ಮಾತ್ರ ಊಟದ ರುಚಿ. ನಂಗೆ ಇನ್ನಷ್ಟು ಬಡಿಸಮ್ಮ, ಎಕ್ಸಲೆಂಟಾಗಿದೆ. ಆನಂದನ ಮಗ್ಳು ಅಲ್ವಾ, ಅವ್ಳು ಅಷ್ಟೆ ಪೊಗದಸ್ತಾಗಿ ಅಡಿಗೆ ಮಾಡೋಳು. ಆ ರುಚಿಗಾಗಿಯೇ ಹೇಳಿದಂಗೆ ಕೇಳ್ತಾ ಇದ್ದೆ" ನೆನಸಿಕೊಂಡರು. ಇದು ಸುಳ್ಳಲ್ಲ.

ತನ್ನ ಅಸಮಾಧಾನ ತೋರಿಸಲೆಂದೇ ಅರ್ಧ ಊಟದಲ್ಲಿಯೇ ಎದ್ದು ಹೋದ ವಸಂತ. ಮಗ ಹೋದತ್ತಲೇ ನೋಡಿದರು. ಇದು ಏನೇನು ಸರಿಯಲ್ಲವೆನಿಸಿತು. ಏನಾಗಿದೆ ಮದುವೆಯಾದ ಮೇಲೆ ಇವನಿಗೆ ? ಇವನ ಕಲ್ಪನೆಯಲ್ಲಿ ವಿವಾಹಕ್ಕೆ ಸಿಗುವ ಪ್ರಾಶಸ್ತ್ಯವೇನು ?.

"ಕೆಲವು ಬಿಲ್‌ಗಳು ನಿಂತು ಟೆನ್‌ಷನ್ ಮಾಡ್ಕೊಂಡಿದ್ದಾನೆ. ನೀನು ಊಟ ಮಾಡು" ಶಾರದಾಗೆ ಹೇಳಿದರು.

ಸೇತುರಾಮ್‌ನ ಪ್ರೀತಿಯ ಮಾತು, ಜೋಕ್‌ಗಳ ನಡುವೆ ಅವಳು ಊಟ ಮಾಡುತ್ತಿದ್ದುದು. ಇಂಥ ಸಂದರ್ಭಗಳು, ಸನ್ನಿವೇಶಗಳನ್ನು ಕಂಡರಿಯಳು. ಇದಕ್ಕೆ ಹೊಂದಿಕೊಳ್ಳುವುದು ಕಷ್ಟವೆನಿಸಿತು. ಆದರೆ ಕಾಶೀಪತಿಗಳ ಮಾತನ್ನು ತಳ್ಳಿಹಾಕಲು ಇಷ್ಟಪಡಲಿಲ್ಲ. ಬಡಿಸಿಕೊಂಡ ಚಪಾತಿಗಳನ್ನ ಮಾತ್ರ ತಿಂದು ಮುಗಿಸಿದ್ದು.

"ಅವ್ನಿಗೆ ಬ್ರೇಡ್ ಟೋಸ್ಟ್ ಇಷ್ಟ" ಹೇಳಿದರು ಕಾಶೀಪತಿಗಳು.

ಬ್ರೆಡ್ ಟೋಸ್ಟ್ ಹಿಡಿದು ಹೋದಾಗ ನಿರಾಕರಿಸಿದ "ನಾನು ಊಟದಿಂದ ಒಂದ್ಸಲ ಎದ್ದ ಮೇಲೆ ಮತ್ತೇನು ತಿನ್ನೋಲ್ಲ. ಇದ್ನೆಲ್ಲ ನೆನಪಿನಲ್ಲಿಟ್ಕೋ" ಆವೇಶದಲ್ಲಿ ಹೇಳಿದ.

ಟೋಸ್ಟ್ ಹಿಂದಕ್ಕೆ ತಂದಿದ್ದನ್ನು ಗಮನಿಸಿದರು ಕಾಶೀಪತಿಗಳು. ಏನಾಗಿದೆ ಇವನಿಗೆ ? ತೀರಾ ತಲೆಯನ್ನು ಬಿಸಿ ಮಾಡಿಕೊಂಡರು, ಭಯ ಕೂಡ.

* * * *

ಕ್ಲಾಸ್ ಮುಗಿಸಿಕೊಂಡು ಬರುತ್ತಿದ್ದಾಗ ಶಾಂತ ಸಿಕ್ಕರು.

"ವಿವಾಹವಾದ್ಮೇಲೆ ತುಂಬ ಬಿಜಿಯಾಗ್ಬಿಟ್ರಿ" ಎಂದು ಬಲವಂತದಿಂದ ಹೊರಗೆ ಕರೆದೊಯ್ದು ಕಾಫೀ ಕೊಡಿಸಿದರು.

"ಹೇಗಿದೆ ದಾಂಪತ್ಯ ?" ಕೇಳಿದರು.

ಶಾರದ ನಸು ನಗೆ ಬೀರಿದಳು. ತನಗಿಂತ ಅನುಭವಸ್ಥೆ ಮಾತ್ರವಲ್ಲ, ಮತ್ತೊಂದು ಮೆಟ್ಟಲೇರಿದವರು ಏರುವಿಕೆಯೋ, ಇಳಿಯುವಿಕೆಯೋ, ಜಾರುವಿಕೆಯೋ, ಅಂತು ಪ್ರೊಫೆಸರ್ ರಂಗೇಗೌಡರಿಂದ ಡೈವೋರ್ಸ್ ಪಡೆದ ಹೆಣ್ಣು.

"ಎಲ್ಲಾ ಮಾಮೂಲಿ !" ಅಷ್ಟೆ ಹೇಳಿದ್ದು.

ದಾಂಪತ್ಯ ತೀರಾ ವೈಯಕ್ತಿಕವಾದದ್ದು. ಅದರ ರೂಪುರೇಶಿಗಳು ಡಣಾಡಂಗುರವಾಗುವುದೇನು ಅವಳಿಗೆ ಬೇಕಿಲ್ಲ. ಮೊದಲು ತುಂಬ ಗಂಭೀರವಾಗಿರುತ್ತಿದ್ದ ಶಾಂತ ಎಮೋಷನಲ್ಲಾಗಿ ವರ್ತಿಸುತ್ತಾರೆಂದು ಎಲ್ಲರು ಹೇಳುತ್ತಿದ್ದರು.

"ನಮ್ಮ ಪ್ರೊಫೆಸರ್ ಈಗ ತಮ್ಮ ಸ್ಟೂಡೆಂಟ್ ಜೊತೆ ಓಡಾಟ ನಡೆಸಿದ್ದಾರೆ. ನಿಮ್ಗೆ ಗೋತ್ತಾ ?" ಕೇಳಿದರು.

ಅವರಿವರು ಅಂದಿದ್ದು ಅವಳ ಕಿವಿಗೆ ಬಿದ್ದಿತ್ತು. ಈಗ ಶಾಂತಳ ಬಾಯಿಂದ ಪ್ರಸ್ತಾಪವಾದಾಗ ಮತ್ತಷ್ಟು ಪುಷ್ಟಿ ದೊರೆತರೂ, ಆ ಬಗ್ಗೆ ಮಾತಾಡಲು ಅವಳಿಗೆ ಇಷ್ಟವಾಗಲಿಲ್ಲ. ಅವರ ಜೊತೆಯಲ್ಲಿ ಓಡಾಡುತ್ತಿದ್ದ ಮಾಧವಿ ಈತ್ತೀಚೆಗೆ ಕಾಲೇಜಿಗೆ ಸೇರಿಕೊಂಡ ತತ್ವಶಾಸ್ತ್ರದ ವಿದ್ಯಾರ್ಥಿನಿ. ತುಂಬ .... ತುಂಬ.... ಬುದ್ಧಿವಂತೆ. ಹೆಚ್ಚು ಓದಿಕೊಂಡಿದ್ದಾಳೆ ಎಂದು ಎಲ್ಲರು ಅಂದುಕೊಳ್ಳುವುದನ್ನು ಇವಳು ಕೇಳಿದ್ದಳು.

ಇವಳ ಮೌನವನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಂಡ ಪ್ರೊಫೆಸರ್ ಶಾಂತ "ನಿಮ್ಮಗಮನ ಆ ಕಡೆ ಹೋಗಿರಲಾರ್ದು. ಆದರೆ ಇಡೀ ಕಾಲೇಜಿಗೆ ಗೊತ್ತಿರೋ ವಿದ್ಯೆ. ಮೊನ್ನೆ ಗಾಂಧಿ ಚೌಕದಲ್ಲಿ ಪ್ರೊಫೆಸರ್ ಹೆಗಲ ಮೇಲೆ ಕೈ ಹಾಕಿಕೊಂಡು ಪುಟು ಪುಟು ಹೋಗುತ್ತಿದ್ದಳು".

ಪ್ರೊಫೆಸರ್ ಶಾಂತ ಕೈ ಹಿಡಿದುಕೊಂಡ ಶಾರದ "ನಿಮ್ಮನಿರಾಶೆ ನಂಗೆ ಅರ್ಥವಾಗುತ್ತೆ. ಮರ್ರೋದ್ಬಿಟ್ಟು ಬೇರೆ ದಾರಿ ಇಲ್ಲ. ಆ ಸ್ಟೂಡೆಂಟ್, ಅವರ ಮಧ್ಯೆ ನಾವೇ ಒಂದು ಸಂಬಂಧ ಕಲ್ಪಿಸಿಕೊಳ್ಳೋದ್ಬೇಡ" ಸಾಂತ್ವನದ ದನಿಯಲ್ಲಿ ಹೇಳಿದಾಗ ಪ್ರೊಫೆಸರ್ ಶಾಂತ ಕರ್ಚಿಫ್‌ನಿಂದ ಕಣ್ಣು, ಕೆನ್ನೆಗಳನ್ನು ಉಜ್ಜಿ ಉಜ್ಜಿ ಕೆಂಪಗೆ ಮಾಡಿಕೊಂಡಳು. "ನಾನು ಎಲ್ಲಾ ಕಳಕೊಂಡೆ.

ಆ ಮನುಷ್ಯ ಡೈವೋರ್ಸ್‌ಗೆ ನನ್ನ ಒಪ್ಪಿಸಬಾರ್ದಿತ್ತು" ನಿಸ್ಸಹಾಯಕತೆಯಲ್ಲಿ ನುಡಿದಳು.

"ಬಲವಂತವಾಗಿ ಒಪ್ಪಿಸಿದ್ರಾ ?" ಕೇಳಿದಳು.

ಈ ಪ್ರಶ್ನೆ ಉತ್ತರಿಸಲು ತಡಮಾಡಿದರು. ಆಕೆಗೂ ಆಗ ಪ್ರೊಫೆಸರ್ ರಂಗೇಗೌಡರ ಜೊತೆಯಲ್ಲಿನ ಬದುಕು ಸಾಕಾಗಿತ್ತು. ತಂಗಿ, ತಾಯಿ ಅದಕ್ಕೆ ತುಪ್ಪ ಹಾಕಿದ್ದರು. ಅವರಿಬ್ಬರ ಮಧ್ಯದ ಕಂದಕ ಎಷ್ಟು ಆಳವಾಗಿತ್ತೆಂದರೆ 'ದೇವರೇ ಬಂದರೂ ಮುಚ್ಚಲಾರ' ಇದನ್ನ ಶಾಂತ ಅನೇಕ ಸಲ ಅಂದಿದ್ದರು. ಒಬ್ಬರ ಮುಖ ಒಬ್ಬರು ನೋಡಿಕೊಂಡು ಬದುಕುವುದು ಸಾಧ್ಯವಿಲ್ಲವೆಂದು ತೀರ್ಮಾನಕ್ಕೆ ಬಂದ ನಂತರವೇ ಒಮ್ಮತ್ರದ ಅಭಿಪ್ರಾಯಕ್ಕೆ ಬಂದಿದ್ದು. ಬೇರೆಯಾಗಿದ್ದು.

"ಇಲ್ಲ, ನಂಗೂ ಅವ್ರ ಜೊತೆ ಜೀವನ ಬೇಕಿರಲಿಲ್ಲ. ಒಮ್ಮತ್ರದಿಂದ್ಲೇ ಡೈವೋರ್ಸ್ ತಗೊಂಡಿದ್ದು" ಶಾಂತ ಪ್ರಾಮಾಣಿಕವಾಗಿ ಒಪ್ಪಿಕೊಂಡರು.

"ಏನು ತಿಳ್ಕೋಬೇಡಿ, ಮೇಡಮ್. ಮಾಧವಿ ಅವ್ರ ಜೊತೆ ಓಡಾಡದಿದ್ರೆ.... ನಿಮ್ಮಲ್ಲಿ ಇಂಥ ಅಭಿಪ್ರಾಯ ಮೂಡುತ್ತಿರಲಿಲ್ವೇನೋ. ನಂಗಿಂತ ವಯಸ್ಸಿನಲ್ಲಿ ಹಿರಿಯರು, ಆಳವಾದ ಅನುಭವವುಳ್ಳವರು. ಮತ್ತೆ ಇತಿಹಾಸ ಮರುಕಳಿಸ್ಬಾರ್ದು. ಪ್ರೊಫೆಸರ್, ಮಾಧವಿ ಅವರುಗಳ ಬಗ್ಗೆ ಅವ್ರು ಯೋಚ್ಸಿಕೊಳ್ಳಿ. ನಿಮ್ಗೆ ಯೋಚ್ಸೋಕೆ ಸಾಕಷ್ಟು ವಿಷ್ಯಗಳಿವೆ" ಎಂದಳು ಶಾರದ.

"ನಂಗೆ ತುಂಬ ಧೈರ್ಯ ನೀಡಿದ್ದೀರಿ. ತುಂಬ.... ತುಂಬ..... ಥ್ಯಾಂಕ್ಸ್" ಎಂದು ಅವಳ ಕೈ ಹಿಡಿದುಕೊಂಡರು.

ಮಾರನೆದಿನ ಮಧ್ಯಾಹ್ನದ ಬಿಡುವಿನಲ್ಲಿ ಬಲವಂತವಾಗಿ ಹತ್ತಿರದಲ್ಲೇ ವಿದ್ಯಾನಗರದಲ್ಲಿದ್ದ ತನ್ನ ಮನೆಗೆ ಕರೆದೊಯ್ದರು. ಪ್ರೊಫೆಸರ್ ಶಾಂತ. ಆಕೆಯ ವಯಸ್ಸು ಮುವತ್ತೈದರ ನಲವತ್ತರ ಒಳಗೆ. ಬೇಗ ಸಿಟ್ಟಿಗೇಳುವುದು ಒಂದು ದೌರ್ಬಲ್ಯ. ಅದನ್ನು ಬಿಟ್ಟರೆ ಸುಗುಣೆಯೆ.

ಮುಂದಿನ ಭಾಗಕ್ಕೆ ಆರ್. ಸಿ. ಸಿ. ಮಾಡಿಸಿ ಹಿಂದೆ ಮಂಗಳೂರು ಹೆಂಚನ್ನು ಎತ್ತರದಲ್ಲಿ ಹೊದ್ದಿಸಿದ ಸ್ವಲ್ಪ ಹಳೆಯ ಮನೆಯಾದರೂ ತುಂಬ ಗಟ್ಟಿ ಮುಟ್ಟಾಗಿತ್ತು. ಕೆಂಪನೆಯ ನೆಲ ಫಳಫಳ ಹೊಳೆಯುತಿತ್ತು. ವರಾಂಡದಲ್ಲಿ ನೆಲಕ್ಕೆ ಹಾಸಿದ್ದ ಚಾಪೆಯ ಮೇಲೆ ಕೂತಿದ್ದ ಅಕ್ಕನನ್ನು ಪರಿಚಯಿಸಿದಳು.

"ಇವ್ರು ನಮ್ಮಕ್ಕ ಪಾರ್ವತಿ. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಬಾಟನಿ ಪ್ರೊಫೆಸರ್ - ನಾಲ್ಕು ದಿನ ರಜ ಹಾಕಿ ಬಂದಿದ್ದಾಳೆ" ಎಂದವಳು "ಇವ್ರು ಪ್ರೊಫೆಸರ್ ಅನಂದ್‌ರಾವ್ ಮಗ್ಳು. ಫಿಲಾಸಫಿ ಓದಿಕೊಂಡೋರು, ಅವ್ರ ಹಾಗೆ ಭಾಷಣ ಮಾಡೋರೆ ಅಪರೂಪ ಅಂತಾರೆ, ಇಂದಿಗೂ ಅವ್ರ ಉಪನ್ಯಾಸ ಕೇಳಿದವರು ಅಂಥವರ ಮಗಳು, ಅವರಷ್ಟೆ ಬುದ್ಧಿವಂತೆ. ಚಿನ್ನದ ಪದಕ ಗಳಿಸಿದ ಏಕೈಕ ಉಪನ್ಯಾಸಕಿಯೆಂದರೆ ನಮ್ಮ ಕಾಲೇಜಿನಲ್ಲಿ ಇವರೊಬ್ಬರೇ, ಈಚೆಗೆ ಇವ್ರ ವಿವಾಹವಾದದ್ದು. ಅವರ ಪತಿಯವರದ್ದು ದೊಡ್ಡ ಕನ್‌ಸ್ಟ್ರಕ್ಷನ್ ಕಂಪನಿ" ಬಹಳ ದೀರ್ಘವಾಗಿಯೆ ಪರಿಚಯಿಸಿದಾಗ ಸಂಕೋಚವೆನಿಸಿತು.

"ತುಂಬ ಸಂತೋಷ" ಎಂದರು.

ಕನ್ನಡಕದ ಹಿಂದಿನ ಆಕೆಯ ಕಣ್ಣುಗಳ ಆತ್ಮೀಯತೆ ವ್ಯಕ್ತಪಡಿಸಲಾರದೆ ಸೋತಿತು. ಶಾಂತಗಿಂತ ಸ್ವಲ್ಪ ಎತ್ತರ, ತೆಳ್ಳನೆಯ ಮೈಕಟ್ಟಾದುದ್ದರಿಂದ ಮತ್ತಷ್ಟು ಎತ್ತರವಾಗಿ ಕಾಣುತ್ತಿದ್ದರು. ಮೂಗಿನ ಮೇಲೆ ಹುಬ್ಬುಗಳ ಮಧ್ಯೆ ಒಂದು ಬೊಟ್ಟು, ತಲೆಬಾಚಿ ಜಡೆ ಹಾಕುವುದರಲ್ಲಾಗಲಿ, ಉಟ್ಟಿದ್ದ ಸೀರೆಯಲ್ಲಾಗಲಿ ನಿರಾಸಕ್ತ-ಭಾವ ಕಾಣುತಿತ್ತು. ಹಾಕಿದ್ದ ಎರಡೆರಡು ಬಂಗಾರದ ಬಳೆಗಳು ಮುಂಗೈಗೆ ಏರುತಿತ್ತು. ಹೊಸ ಮಾದರಿಯ ಅಲಂಕಾರ ಆಕೆಯ ಬಳಿ ಸುಳಿದಂತಿರಲಿಲ್ಲ.

"ಶಾಂತ ಮೇಡಮ್ ನನ್ನ ಬಗ್ಗೆ ತುಂಬ ಹೇಳ್ಬಿಟ್ರು. ನಮ್ಮ ತಂದೆಯ ಬಗ್ಗೆ ಆಡಿದ ಮಾತುಗಳು ನಿಜವಿರಬಹುದ್ದು" ಅಲ್ಲಿ ಚಾಪೆಯ ಮೇಲೆ ಪಾರ್ವತಿಯ ಬಳಿ ಕೂತಳು. ಅಷ್ಟರಲ್ಲಿ ಇನ್ನೊಂದು ಹುಡುಗಿ ಬಂದು ಬಾಗಿಲ ಬಳಿ ನಿಂತಿತು. "ಇವ್ಳು ಲಕ್ಷ್ಮಿ ಎಲ್ಲಾ ಹಳೆಯ ಕಾಲದ ಹೆಸರುಗಳೆ. ನಮ್ಮ ತಾಯಿ ಸಂಪ್ರದಾಯಸ್ಥೆ. ಸದಾ ಮಡಿ, ಹುಡಿಯ ಜೊತೆ ಲಲಿತಾ ಸಹಸ್ರನಾಮ, ಸೌಭಾಗ್ಯಲಕ್ಷ್ಮಿ ವ್ರತ ಇಂಥದ್ದು ನಡೆಯುತ್ತಲೇ ಇರುತ್ತೆ ಮನೆಯಲ್ಲಿ" ಅಭಿಮಾನದಿಂದ ಹೇಳಿಕೊಂಡಳು.

"ಯಾವ ಕ್ಲಾಸಿನಲ್ಲಿ ಓದುತಿದ್ದೀರಿ ?" ಶಾರದ ಕೇಳಿದಳು.

ಅವಳು ಸಂಕೋಚದಿಂದಲೋ ಏನೋ ಹಿಂದಕ್ಕೆ ಸರಿದು ಹೋದಳು. ಪಾರ್ವತಿಯ ತುಟಿಯಂಚಿನಲ್ಲಿ ಕಿರು ನಗೆ ಮಿನುಗಿತು. "ಅವ್ಳಿಗೆ ನಾಚ್ಕೇ! ಹೆಣ್ಣು ಮಕ್ಕಳಲ್ಲಿ ಇವಳೊಬ್ಳು ಓದಲಿಲ್ಲ. ಎಸ್. ಎಸ್. ಎಲ್. ಸಿ. ಯಲ್ಲಿ ಫೇಲಾದಳು. ಇವ್ಳು ಎಲ್ಲಾ ಸಬ್‌ಜೆಕ್ಟ್‌ಗಳಲ್ಲಿ ತೆಗೆದ ಮಾರ್ಕ್ಸ್

ಕೇಂದ್ರ ಗ್ರಂಥಾಲಯ ಬೆಂಗಳೂರು-1

ಹತ್ತಕ್ಕಿಂತ ಕಡಿಮೆಯೇ. ಮಾರ್ಕ್ಸ್‌ಕಾರ್ಡ್ ನೋಡಿ ನಮ್ಮಪ್ಪ ಆಕಾಶ, ಭೂಮಿ ಒಂದು ಮಾಡಿದ್ರು. ತಮ್ಮ ಪ್ರತಿಷ್ಠೆ ಹಾಳಾಯಿತೆಂದು ಬಹಳ ದಿನಗಳವರೆಗೂ ಕೂಗಾಡೋರು. ನಮ್ಗಿಂತ ಅವ್ಳು ಬುದ್ಧಿವಂತೆನೇ. ಮನೆಗೆ ಹೆಚ್ಚು ಸಹಾಯಕಳಾಗಿರೋದು ಅವಳೇ" ಅರ್ಥಗರ್ಭಿತವಾಗಿ ನುಡಿದಳು.

ಹಾರ್ಲಿಕ್ಸ್ ಲೋಟಗಳನ್ನು ಹಿಡಿದು ಬಂದ ಶಾಂತ ತಾಯಿ "ನೀನು ಅನಂದರಾವ್ ಮಗ್ಳು ಅಲ್ವಾ ! ಅವ್ರ ಹೆಸರನ್ನು ತುಂಬ ಕೇಳಿದ್ದೆ. ನಿಮ್ಮ ತಾತ ಅಮೆರಿಕಾಗೆ ಹೋದರಂತೆ" ತಾವು ಎಲ್ಲಾ ತಿಳಿದವರಂತೆ ಹೇಳಿದರು.

"ಹೌದು !" ಅವರ ಎಲ್ಲಾ ಮಾತುಗಳಿಗೂ ಚುಟುಕು ಉತ್ತರ.

ಮೂವರು ಹಾರ್ಲಿಕ್ಸ್ ಕುಡಿದ ನಂತರ ಆಕೆಯೆ ಒಯ್ದರು ಗ್ಲಾಸ್‌ಗಳನ್ನು. "ನಮ್ಮ ತಾಯಿನ ಕಂಡರೇ ನಮ್ಗೆಲ್ಲ ತುಂಬ ಪ್ರೀತಿ" ಶಾಂತಳ ದನಿಯಲ್ಲಿ ಅಭಿಮಾನವಿತ್ತು.

ಪಾರ್ವತಿ ಮೌನವಾಗಿ ಕೂತಿದ್ದರು. ಇವರುಗಳು ಮಾತಾಡುವಾಗ ಶಾರದಾಗೆ ಮಾತಿಗೆ ಎಳೆಯಬೇಕೆನಿಸಿತು.

"ನಿಮ್ಮ ಹಸ್ಬೆಂಡ್ ಮೈಸೂರಿನಲ್ಲಿ ಇದ್ದಾರ ?"

"ನಾನು ಮದ್ವೆನೇ ಆಗಿಲ್ಲ" ಸ್ಪಷ್ಟವಾಗಿತ್ತು ಪಾರ್ವತಿಯ ಉತ್ತರ. ಕುತೂಹಲಕ್ಕಾಗಿಯಾದರೂ ಕಾರಣ ಕೇಳಲಿಲ್ಲ "ನಮ್ಮ ತಂದೆ ಈ ಕಾಲೇಜಿಗೆ ಬರೋ ಮೊದ್ಲು.... ಮೈಸೂರಿನಲ್ಲಿ ಸ್ವಲ್ಪ ದಿನ ಇದ್ರಂತೆ. ನಾನು ಒಂದೆರಡ್ವರ್ಷದ ಮಗು ಇರ್ಬೇಕು. ಯಾವ್ದೂ ನೆನಪಿಲ್ಲ". ತಾನೇ ಹೇಳಿದಳು.

711922CR

ಶಾಂತ ಇವಳನ್ನು ಕಳುಹಿಸಲು ಆಟೋ ಸ್ಟ್ಯಾಂಡ್‌ವರೆಗೂ ಬರುವಾಗ "ನಮ್ಮಕ್ಕನದು ಒಂದು ರೀತಿಯಲ್ಲಿ ವಿಚಿತ್ರ ಧೋರಣೆ. ನಮ್ಮಪ್ಪ ಎಷ್ಟೋ ವರಗಳನ್ನು ತಂದು ಅವಳ ಮುಂದೆ ನಿಲ್ಲಿಸಿದರೆಂದರೆ ಎಣಿಕೆಗೆ ಸಿಗದಷ್ಟು. ಇಷ್ಟವಾಗಲಿಲ್ಲವೋ, ಉತ್ಪ್ರೇಕ್ಷೆಯೋ, ಈ ಪ್ರದರ್ಶನದ ಬಗ್ಗೆ ತಾತ್ಸಾರವೋ ಬೇಡವೆಂದಳು. ಇಂದಿಗೂ ಅವಳಿಗೆ ಪಶ್ಚಾತಾಪವಿಲ್ಲ. ಸಿಡುಕಿಲ್ಲ, ಸೆಡವಿಲ್ಲ, ಕಿರಿಕಿರಿ ಇಲ್ಲ, ಸ್ವಾರ್ಥವಿಲ್ಲ. ಆ ಕಾಲೇಜಿನಲ್ಲಿಯೇ ಅವಳು ಬೆಸ್ಟ್ ಪ್ರೊಫೆಸರ್. ಅವಳಷ್ಟು ಸರಳವಾಗಿ ನಡೆದುಕೊಂಡರೂ ವಿದ್ಯಾರ್ಥಿಗಳು ಅವ್ಳ ಮುಂದೆ ನಿಲ್ಲೋಕೆ ಹಿಂಜರಿಯುತ್ತಾರೆ. ಎಂದಾದ್ರೂ ವಿವಾಹದ ಸುದ್ದಿ ಎತ್ತಿದರೇ ಮುಗುಳ್ನಗುತ್ತಾಳೆ. ನಿಂಗಿಂತ ನಾನು ಸುಖವಾಗಿದ್ದೀನಿ ಅಂತಾಳೆ. ಅವಳು ಧೈರ್ಯವಾದಿ. ತರ್ಕಬದ್ಧವಾಗಿರುತ್ತೆ

ಪಾರ್ವತಿಯ ಮೌಲ್ಯಗಳು." ಹೇಳಿಕೊಂಡಳು.

ಆಟೋದಲ್ಲಿ ಕೂಡಿಸಿ ಕೈಯಾಡಿಸಿದಳು. ಪಾರ್ವತಿಯ ಬಗ್ಗೆ ಗೌರವ ಮೂಡಿತು. ಮನೆ ತಲುಪುವವರೆಗೂ ಅವಳ ಬಗ್ಗೆನೆ ಚಿಂತಿಸಿದಳು. ಕಾರು ಕಾಂಪೌಂಡ್‌ನಲ್ಲಿಯೇ ಇದ್ದುದ್ದರಿಂದ ವಸಂತ ಬಂದಿರಬಹುದೆಂದು ಕೊಂಡಿದ್ದು ನಿಜವಾಯಿತು.

ಕಾಲು ಮೇಲೆ ಕಾಲು ಹಾಕಿಕೊಂಡು ಷೂ ಕಾಲನ್ನು ಅಲ್ಲಾಡಿಸುತ್ತ ಮುಖದ ಮುಂದೆ ಪೇಪರ್ ಹಿಡಿದು ಕೂತಿದ್ದ.

"ಹಲೋ, ಯಾವಾಗ್ಬಂದಿದ್ದು ?" ಕೇಳಿದಳು.

ಮುಖದ ಮುಂದಿನಿಂದ ಪೇಪರ್ ತೆಗೆಯಲು ಇಲ್ಲ, ಉತ್ತರಿಸಲೂ ಇಲ್ಲ. ಷೂ ಮೆಟ್ಟಿದ ಕಾಲಿನ ಚಲನೆ ಸ್ವಲ್ಪ ಜಾಸ್ತಿಯಾಯಿತು. ಈ ತಿರಸ್ಕಾರ ನೇರವಾಗಿ ಚುಚ್ಚಿತು ಶಾರದನ. ಮೌನವಾಗಿ ರೂಮಿಗೆ ಹೋದಳು.

ಉಡುಪು ಬದಲಾಯಿಸಿ ಮುಖ ತೊಳೆದು ಅಡಿಗೆಯ ಮನೆಗೆ ಬಂದಾಗ ಗೋಪಿ ಮಂಕಾಗಿ ನಿಂತಿದ್ದ, ಅತ್ತ ಗುರುತುಗಳು ಕೆನ್ನೆಯ ಮೇಲೆ.

"ಯಾಕೋ, ಗೋಪಿ ?" ಕೇಳಿದಳು.

"ಅಣ್ಣನವ್ರು ಹೊಡೆದರು" ಅದಕ್ಕೆ ಅವನು ಕೊಟ್ಟ ಕಾರಣ ನೋಡಿ ಶಾರದ ಎದೆ ಧಸ್ಸಕ್ಕೆಂದಿತು. ಅವನು ಮನೆಯಲ್ಲಿರುವವರ ಹೆಸರುಗಳನ್ನು ಮಾತ್ರ ಪೆನ್ಸಿಲ್‌ನಿಂದ ಪೇಪರ್ ಮೇಲೆ ಬರೆಯುತ್ತಿದ್ದ ಅಷ್ಟೇ. ಅದೊಂದು ದೊಡ್ಡ ಅಪರಾಧವಾಗಿತ್ತು ವಸಂತನ ಪಾಲಿಗೆ.

ತಲೆ ಸವರಿ "ಅವ್ರು ತಿಂಡಿ ತಗೊಂಡ್ರಾ ?" ವಿಚಾರಿಸಿದಾಗ ಇಲ್ಲವೆಂದು ತಲೆಯಾಡಿಸಿದ. ಬಹಳ ತಾಳ್ಮೆಯಿಂದ ತಾನೇ ತಿಂಡಿಯನೊಯ್ದು ಅವನು ಮುಂದಿನ ಟೀಪಾಯಿ ಮೇಲಿಟ್ಟಳು "ತಿಂಡಿ ತಗೊಳ್ಳಿ".

ವಸಂತನಿಗೂ ಹಸಿದಿತ್ತು. ಮುಖದ ಮುಂದಿನಿಂದ ಪೇಪರ್ ಇಳಿಯಿತು. ಒಮ್ಮೆ ದೀರ್ಘವಾಗಿ ನೋಡಿ ಟೊಮಾಟೋ ಬಾತ್‌ನ ತಟ್ಟೆಯೆತ್ತಿಕೊಂಡ. ರುಚಿಯಾಗಿತ್ತು, ಆರಾಮಾಗಿ ನಾಲ್ಕು ಸ್ಪೂನ್ ತಿನ್ನೋ ವೇಳೆಗೆ ಎರಡು ಸಲ ಅವಳನ್ನು ಅಡಿಗೆ ಮನೆಗೆ ಅಟ್ಟಿದ. ಮೊಸರು ತುಪ್ಪ ಬೇಕೆಂದು. ಮುಕ್ಕಾಲರಷ್ಟು ಖಾಲಿಯಾದ ಪ್ಲೇಟಿಗೆ ತುಪ್ಪ ಹಾಕಿಸಿಕೊಂಡು, ಮೊಸರು ಸುರಿದುಕೊಂಡ.

ಮೊದಲ ಸ್ಪೂನ್ ಅವಳ ಬಾಯಿಗೆ ಹೋಗುವ ಮುನ್ನ ಟೀಪಾಯಿ ಮೇಲಿನ ಟ್ರೇನಲ್ಲಿ ಪ್ಲೇಟ್ ಕುಕ್ಕಿದ "ಬರೀ ಉಪ್ಪುಪ್ಪು, ಇದ್ನ ಯಾರು ತಿನ್ನಬೇಕು ?"

ಬಾಯಿಯುವರೆಗೂ ಹೋಗಿದ್ದ ಸ್ಪೂನ್ ಪ್ಲೇಟಿಗೆ ಇಳಿಯಿತು "ಹೇಗಾಯ್ತು ಉಪ್ಪು ?" ಎಂದವಳೇ ಒಂದು ಮಾತಾಡದೆ ತಟ್ಟೆಗಳನ್ನು ಒಳಗೆ ಒಯ್ದಳು. ಆಮೇಲೆ ತಿನ್ನಬೇಕೆನಿಸಲಿಲ್ಲ.

ಕಾಫೀ, ಟೀ ತಂದಾಗ ಬೇಡವೆಂದವನು "ಸಂಜೆಗಳಲ್ಲಿ ಹಾರ್ಲಿಕ್ಸ್ ಕೊಡ್ಬೇಕೂಂತ ಗೊತ್ತಾಗೋಲ್ಲ. ನೀನು ಗೋಲ್ಡ್ ಮೆಡಲಿಸ್ಟ್ ಅನ್ನೋ ಬಿಗುಮಾನ ಬೇಡ. ನಿಂಗೆ ಸಾಮಾನ್ಯ ಜ್ಞಾನವೇ ಇಲ್ಲ. ಮೊದ್ಲು ಮಡದಿಯಾಗಿ ನಿನ್ನ ಡ್ಯೂಟಿ ಏನೂಂತ ತಿಳ್ಕೋ" ಟೀಕಿಸಿದ.

ಆ ವೇಳೆಗೆ ಬಾಗಿಲಿಗೆ ಬಂದ ಕಾಶೀಪತಿಗಳಿಗೆ ಕೇಳಿಸಿತು. ಮಗ ಅಹಂಕಾರಿಯಾಗಿ ಮಾತ್ರವಲ್ಲ ಮೂರ್ಖನಾಗಿ ಕಂಡ. ತೀರಾ ಮೃದುವಾದ ಹುಡುಗಿಯನ್ನು ನೋಯಿಸುವುದೇಕೆ ?

"ಏನದು ?" ಎಂದರು.

"ಏನಿಲ್ಲ...." ಎಂದು ಮುಖ ತಿರುವಿದ.

"ನಂಗೆ ಎಲ್ಲಾ ಕೇಳಿಸ್ತು. ದೊಡ್ಡದಾಗಿ ಪಾಠ ಹೇಳ್ತಾ ಇದ್ದೀಯಾ ! ಅದೇನಿದ್ರೂ ರೂಮಿನಲ್ಲಿ ಇರ್ಬೇಕು. ಪ್ರೀತಿಯಿಂದ ಹೇಳಬೇಕೇ ವಿನಹಃ ಆರ್ಭಟದಿಂದಲ್ಲ, ನಿನ್ನಿಂದ ಬುದ್ಧಿವಾದ ಹೇಳಿಸಿಕೊಳ್ಳುವಂಥ ಹುಡ್ಗಿಯಲ್ಲ, ಶಾರದ ಛೆ, ನಿನ್ನ ಸ್ವಭಾವ ನಂಗಿಷ್ಟವಾಗ್ಲಿಲ್ಲ" ಬೇಸರ ವ್ಯಕ್ತಪಡಿಸಿ ಒಳಗೆ ಹೋದರು.

ಹಾರ್ಲಿಕ್ಸ್ ಹಿಡಿದು ಬಂದ ಸೊಸೆಯನ್ನು ತಡೆದು "ಗೋಪಿ ತಗೊಂಡ್ಹೋಗಿ ಕೊಡ್ಲಿ, ಮಡದಿ ಕೈನ ಹಾರ್ಲಿಕ್ಸ್‌ಗೂ ಅವ್ನ ಕೈನ ಹಾರ್ಲಿಕ್ಸ್‌ಗೂ ವ್ಯತ್ಯಾಸ ತಿಳ್ಕೊಳ್ಳಿ. ಈ ಗಂಡಸರನ್ನು ಪಳಗಿಸಬೇಕಾದರೆ ಕೆಲವು ಪಟ್ಟುಗಳು ಬೇಕು" ತಮಾಷೆ ಮಾಡಿದರು. ಮಗನನ್ನು ಚೆನ್ನಾಗಿ ಅಭ್ಯಸಿಸಿದ್ದರು. ಮದುವೆಯಾದ ಮೇಲೆ ಪೂರ್ತಿ ಬದಲಾಗಿದ್ದ. ಯಾಕೆ? ಬಹುಶಃ ಹಿಂದೆ ಮಗನ ಇಂಥ ನಡವಳಿಕೆ ತಮ್ಮ ಗಮನಕ್ಕೆ ಬಂದಿಲ್ಲವೇ?.

ತಮ್ಮ ರೂಮಿನಲ್ಲಿ ಹೋಗಿ ಕೂತುಬಿಟ್ಟರು ಕಾಶೀಪತಿಗಳು. ಹೆಂಡತಿ ಸತ್ತ ಮೇಲೆ ಇನ್ನೊಂದು ಹೆಣ್ಣಿಗೆ ಯೋಚನೆ ಮಾಡದೇ ಮಗನನ್ನು ಬೆಳೆಸಿದ್ದರು. ಬದುಕಿನಲ್ಲಿ ಅವರಿಗೆ ಬಿದ್ದಿದ್ದು ಎರಡು - ಹೊಡೆತಗಳು

ಗೆಳೆಯ ಆನಂದರಾವ್ ಮತ್ತು ಹೆಂಡತಿಯ ಸಾವು. ಸರಿದ ಕಾಲ ಅವರನ್ನು ಚೇತರಿಸಿಕೊಳ್ಳುವಂತೆ ಮಾಡಿತ್ತು. ಹಲವಾರು ಸಮಸ್ಯೆಗಳು ಬಂದರೂ ಅವು ಯಾವುವೂ ಸಮಸ್ಯೆಗಳಾಗಿ ಕಂಡಿರಲಿಲ್ಲ. ಮಗನ ಮಾತಿನ ವೈಖರಿ, ನಡೆದುಕೊಳ್ಳುವ ರೀತಿ ಅವರನ್ನು ಸಮಸ್ಯೆಯಲ್ಲಿ ಕೆಡವಿತ್ತು.

ಆದರೆ ಅಂದಿನ ರಾತ್ರಿ ಬೆಡ್ ರೂಮಿನಲ್ಲಿಯೇ ಗಲಾಟೆ ತೆಗೆದ "ನಾನು ಕಾಲೇಜು ಬಳಿ ಬಂದಿದ್ದೆ !" ಹೇಳಿದ.

ಶಾರದಾಗೆ ಆಶ್ಚರ್ಯವೇ. ಮದುವೆಯಾಗುವ ಮುನ್ನ ಒಂದೆರಡು ಸಲ ಬಂದಾಗಲೇ ಸೂಕ್ಷ್ಮವಾಗಿ ಎಚ್ಚರಿಸಿದ್ದಳು. "ನಾನು ಇಲ್ಲಿ ಉಪನ್ಯಾಸಕಿ. ವಿದ್ಯಾರ್ಥಿಗಳ ನಾಲಿಗೆಗೆ ವಸ್ತು ಆಗ್ಬಾರ್ದು, ಬರ್ಬೇಕೂಂತ ಅನ್ನಿಸಿದ್ರೆ... ಮನೆಗೆ ಬನ್ನಿ."

ಅಂದಿನ ನಂತರ ಮತ್ತೆಂದು ಮದುವೆಯಾದ ಮೇಲು ಕಾಲೇಜಿಗೆ ಬಂದಿರಲಿಲ್ಲ. ಈಗ ಇದ್ದಕ್ಕಿದಂತೆ ಬಂದಿದ್ದು ಯಾಕೆ ? ಅದಕ್ಕೂ ಅವಳು ತಲೆ ಕೆಡಿಸಿಕೊಳ್ಳಲಿಲ್ಲ.

"ನಾನು ಪ್ರೊಫೆಸರ್ ಶಾಂತ ಅವರ ಮನೆಗೆ ಹೋಗಿದ್ದೆ"

ಮಂಚದ ಕಟ್ಟಿಗೆ ಪೂರ್ತಿಯಾಗಿ ಒರಗಿದ್ದವನು ಓರೆ ನೋಟದಿಂದ ಅವಳತ್ತ ನೋಡಿ "ಯಾಕೆ, ಆಕೆ ಮತ್ತೇನಾದ್ರೂ ವಿವಾಹವಾಗ್ತ ಇದ್ದಾರ ?" ತೀರಾ ವ್ಯಂಗವಾಗಿತ್ತು ಮಾತು.

ಅನಗತ್ಯವಾಗಿ ಬೇರೆಯವರ ಬಗ್ಗೆ ವ್ಯಂಗವಾಗಿ ಮಾತಾಡುವುದು ಅವಳಿಗಿಷ್ಟವಾಗದು. ವಾದ ಬೆಳೆಸಲು ಇಚ್ಛಿಸಲಿಲ್ಲ.

"ಗೊತ್ತಿಲ್ಲ, ನಾನಂತು ಸುಮ್ನೆ ಹೋಗಿದ್ದೆ" ಎಂದಳು.

ಅವಳಕ್ಕ ಪಾರ್ವತಿಯ ಬಗ್ಗೆ ಅವಳಲ್ಲಿ ಎಷ್ಟೋ ಹೇಳಿಕೊಳ್ಳಬೇಕೆಂಬ ಉತ್ಸಾಹ ಕಡಿದುಹೋಗಿತ್ತು. ಸದಾ ಮಾತುಗಳ, ಬಾಣಗಳೇ, ಯಾವುದೇ ವ್ಯಕ್ತಿ, ವಿಷಯ ಬಂದರೂ ತೀರಾ ನೆಗೆಟಿವ್ ಆಗಿ ಅನಾಲಿಸಿಸ್ ಮಾಡುತ್ತಿದ್ದ. ಇದರಿಂದ ಅವಳ ಮನಸ್ಸಿಗೇ ನೋವೆ. ಆದರಿಂದಲೆ ಕಡಿಮೆ ಮಾತಾಡುತ್ತಿದ್ದಳು. ಅವಳ ಭಾವನೆಗಳನ್ನು ಹಂಚಿಕೊಳ್ಳುವಂಥ ವ್ಯಕ್ತಿಯಲ್ಲ ವಂಸತ.

"ಬೆಳಿಗ್ಗೆ ಹೋಗೋವಾಗ ಹೇಳಬಹುದಿತ್ತಲ್ಲ ! ನಿನ್ನ ತಾತ ಇದ್ದಲ್ಲ ಸೈರಿಸಿಕೊಳ್ಳುತ್ತಿದ್ದರೇನೋ, ಇದು ಗಂಡನ ಮನೆ" ಎಂದ ಸಣ್ಣಗೆ.

ಮಂಚದ ಮೇಲೆ ಕೂತಿದ್ದವಳು ಎದ್ದು "ನಾನು ಪುಟ್ಟ ಮಗುವಲ್ಲ. ಅದ್ನ ನೀವು ಮನಸ್ಸಿನಲ್ಲಿಟ್ಕೊಂಡ್ ಮಾತಾಡಿದರೇ ಸಾಕು." ಕೆನ್ನೆಯು ಮೇಲೆ ಇಳಿದ ಕಂಬನಿಯ ಬಿಂದುಗಳನ್ನು ತೊಡೆದುಕೊಂಡು ಹೊರಗೆ ಬಂದಳು.

ಮನೆಯ ಎಲ್ಲಾ ದೀಪಗಳು ಆರಿದ್ದವು. ಸೋಫಾ ಮೇಲೆ ಕುಸಿದಂತೆ ಕೂತಳು. ಬರೀ ಕೆಲವು ದಿನಗಳ ದಾಂಪತ್ಯ ಬದುಕಿನಲ್ಲಿ ಇಷ್ಟೊಂದು ಮಾನಸಿಕ ಕ್ಷೋಭೆ-ಭಯವೆನಿಸಿತು. ಎಷ್ಟೋ ಹೊತ್ತು ಹಾಗೆಯೇ ಕೂತಿದ್ದಳು. ಸಾಮರಸ್ಯ ಸಾಧಿಸಲು ಬರೀ ಹೆಣ್ಣು ಮಾತ್ರ ಹೆಣಗಬೇಕೆ.

ಅರ್ಧ ರಾತ್ರಿ ಕಳೆದ ನಂತರವೆ ಅವಳು ರೂಮಿಗೆ ಹೋಗಿ ಮಲಗಿದ್ದು.

* * * *

ಗಂಡನೊಟ್ಟಿಗೆ ಬಂದ ಆಕೆ ದಂಪತಿಗಳನ್ನು ಆಹ್ವಾನಿಸಿದರು "ನಾಳೆ ನೀವಿಬ್ರೂ ಅಲ್ಲಿಗೆ ಊಟಕ್ಕೆ ಬರ್ಬೇಕು. ಕಾಯ್ತ ಇರ್ತೀವಿ" ಬಹು ಅಕ್ಕರೆಯಿತ್ತು ದನಿಯಲ್ಲಿ.

ವಸಂತ ಕೂಡ ಮನೆಯಲ್ಲಿ ಮಾತ್ರವಲ್ಲ ಎದುರಿಗೆ ಇದ್ದ. ಅವನತ್ತ ನೋಡಿದಾಗ ಸುಮ್ಮನೆ ರೂಮಿಗೆ ಹೋದ.

"ಖಂಡಿತ ಬರ್ತಾರೆ, ಬಿಡಿ. ನಾಳೆಯೊಂದು ದಿನ ನೀನು ಕಾಲೇಜಿಗೆ ರಜ ಹಾಕ್ಕೋ, ಇನ್ನು ವಸಂತನಿಗೆ ನಾನು ಹೇಳ್ತೀನಿ" ಕಾಶೀಪತಿಗಳೆ ಭರವಸೆ ಕೊಟ್ಟರು.

ಅವರು ಹೊರಡುವಾಗ "ಈ ಮುದ್ಕನ್ನ ಯಾಕೆ ಮರೆತ್ರೀ. ನಾನೊಬ್ಬ ಹೆಚ್ಚಿಗಾದ್ನ ನಿಮ್ಮ ಊಟಕ್ಕೆ" ಹಾಸ್ಯ ಮಾಡಿದರು.

ಆಕೆ ಕೆನ್ನೆಗೆ ಹಾಕಿಕೊಂಡರು. ಅವರ ಮಟ್ಟಿಗೆ ಕಾಶೀಪತಿಗಳು ತುಂಬ ದೊಡ್ಡ ಶ್ರೀಮಂತರೇ, ಇಂಥವರು ಬರುವುದು ಭಾಗ್ಯವೇ. ಆಹ್ವಾನಿಸಲು ಅವರೇ ಸಂಕೋಚಪಟ್ಟಿದ್ದರು.

"ದಯವಿಟ್ಟು ಕ್ಷಮ್ಸಿ, ನೀವು ಬರ್ತೀರೋ, ಇಲ್ಲವೋ ಅನ್ನುವ ಅನುಮಾನದಿಂದ ಸ್ವಲ್ಪ ಹಿಂಜರಿದ್ವಿ" ಶ್ರೀಧರ ಮೂರ್ತಿಗಳು ತಮ್ಮ ತಪ್ಪು ಒಪ್ಪಿಕೊಂಡರು.

ರಾತ್ರಿಯೆಲ್ಲ ಬಯಕೆಯು ಉಪ್ಪರಿಗೆ ಏರಿದ್ದರಿಂದ ಬೆಳಿಗ್ಗೆ ಸಂತೋಷದಿಂದ, ಸಂತೃಪ್ತನಾಗಿ ನಡೆದುಕೊಳ್ಳುವುದರ ಜೊತೆಗೆ ನಗು

ನಗುತ್ತಾ ಉಪಹಾರ ಸೇವಿಸಿದ್ದು ಸೊಸೆ, ಮಾವನಿಗೆ ಸಮಾಧಾನ ತಂದಿತ್ತು. ಕಾಶೀಪತಿಗಳಂತು ಎಷ್ಟು ದೇವರುಗಳಿಗೆ ಹರಕೆಯೊತ್ತಿದ್ದರೋ !

ಅಲ್ಲಿ ತಾತ ಇಲ್ಲದಿರಬಹುದು. ಹುಟ್ಟಿದ, ಬೆಳೆದ ಮನೆ. ತುಂಬ ... ತುಂಬ... ಸಂತೋಷವೇ. ವಸಂತನೊಂದಿಗೆ ತನ್ನ ನೆನಪುಗಳನ್ನೆಲ್ಲ ಹಂಚಿಕೊಳ್ಳಬೇಕು. ಅಲ್ಲಿನ ಪ್ರತಿಯೊಂದು ವಸ್ತುಗಳು ಅವಳ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಪಾತ್ರವಹಿಸಿದಂಥವೆ.

"ಅತ್ತೆ ನಮ್ಮನ್ನ ಬರೋದಿಕ್ಕೆ ಹೇಳಿದ್ದಾರೆ" ರೂಮಿಗೆ ಬಂದ ಕೂಡಲೇ ಹೇಳಿದರು. ಫೈಲ್‌ನ ಪುಟಗಳನ್ನು ತಿರುವುತ್ತಿದ್ದವನು ಅನಾಸಕ್ತಿಯಿಂದ "ನಾಳೆ ಇಡೀ ದಿನ ನಾನು ಎಂಗೇಜ್. ಎಲ್ಲಿಗೂ ಬರೋಕ್ಕಾಗೋಲ್ಲ" ಸ್ವಚ್ಛಂದವಾಗಿ ಗಾಳಿಯಲ್ಲಿ ಹಾರಾಡುತ್ತಿದ್ದ ಬೆಲೂನ್‌ಗೆ ಸೂಜಿ ಚುಚ್ಚಿದಂತಾಗಿ 'ಘುಸ್' ಎಂದಿತು. ಅದನ್ನು ಹೊರಗಡೆ ಅವರಿಗೆ ಹೇಳಿದ್ದರೇ ಚೆಂದವೆನಿಸಿತು.

ಮೌನವಾದಳು. ಇದು ಅವನ ಸ್ವಭಾವ. ಅವನ ಕನ್‌ಸ್ಟ್ರಕ್ಷನ್ ಕಂಪನಿಯಲ್ಲಿ ಸಾಕಷ್ಟು ಕೆಲಸವಿತ್ತು, ಅಷ್ಟೇ ನುರಿತ ಇಂಜಿನಿಯರ್ಸ್ ಮೇಸ್ತ್ರಿಗಳು ಇದ್ದುದ್ದರಿಂದ ಇವನ ಕೆಲಸ ಕಡಿಮೆಯೇ. ಎಲ್ಲಾದರೂ ಹೋಗಬೇಕಾದ ಸಮಯದಲ್ಲಿ ಇಂಥ ನೆವಗಳನ್ನೊಡ್ಡುತ್ತಿದ್ದ.

ಫೈಲನ್ನು ಮುಚ್ಚಿ "ನೀನೇನು ಮಾಡ್ತೀಯಾ ?" ಕೇಳಿದ.

"ನಾನು ಹೋಗ್ತೀನಿ" ಆವೇಗವಿಲ್ಲದ ತಣ್ಣನೆಯ ದನಿಯಲ್ಲಿ ಉಸುರಿದಳು. ಅವನ ತಲೆ ಬಿಸಿಯಾಯಿತು. ವಸಂತನ ಕಲ್ಪನೆ ಬೇರೆ ಇತ್ತು. ವೈಯಾರ ಮಾಡಿಯೋ, ಬಿನ್ನಾಣ ಮಾತುಗಳಿಂದಲೋ ತನ್ನನ್ನು ಬೆರಗು ಗೊಳಿಸಿ ಧೈನ್ಯದಿಂದ ಕೇಳಿಕೊಳ್ಳಬೇಕು. ಈ ಕಲ್ಪನೆ ಚದರಿ ಹೋಯಿತು. "ನಾನು ಬರೋಲ್ಲ ಅಂದೆನಲ್ಲ" ದನಿಯೆರಿಸಿದ.

"ತುಂಬ ಬಿಜಿ ಅಂದರೆಲ್ಲ.... ಅಂಕಲ್ ಕೂಡ ಪ್ರಾಮಿಸ್ ಮಾಡಿದ್ದಾರೆ. ನಾನು ಎರಡು ತಿಂಗ್ಳಿಂದ ನಮ್ಮ ಮನೆ ಕಡೆ ಹೋಗಿಲ್ಲ. ಭಾನುವಾರ ಹೋಗಿ ಬರೋದೂಂತ ಅಂದ್ಕೊಂಡಿದ್ದೆ. ಹೇಗೂ ಇನ್ವಿಟೇಷನ್ ಸಿಕ್ಕಿದೆ, ಹೋಗ್ಬರೋದು" ನಿಶ್ಚಿಂತೆಯಿಂದ ಹೇಳಿದಳು ಶಾರದ.

ಅವುಡುಗಳನ್ನು ಕಚ್ಚಾಡಿದ 'ಅಹಂ'ಗೆ ಬಿದ್ದ ಬಲವಾದ ಪೆಟ್ಟು ಇದನ್ನು ಅವನ ಮುಖ ನೋಡಿಯೇ ಅರ್ಥಮಾಡಿಕೊಂಡಳು.

"ಸ್ವಲ್ಪ ಅರ್ಥ ಮಾಡ್ಕೊಳ್ಳಿ. ನೀವು ಬಂದರೇ....ಸಂತೋಷ. ನಾನು ಹೋಗೋದು ಮಾತ್ರ ಅಪರಾಧವಲ್ಲ" ನುಡಿದು ಹೊರ ಬಂದಳು.

ಪ್ರತಿಯೊಂದು ಸಣ್ಣ ವಿಷಯಕ್ಕೂ ಘರ್ಷಣೆಗೆ ಇಳಿಯುತ್ತಿದ್ದ.

ಇದನ್ನು ಪ್ರತಿಷ್ಠೆಯಾಗಿ ತಗೊಂಡ. ರಾತ್ರಿ ಊಟದ ಸಮಯದಲ್ಲಿ ತಂದೆಯ ಮುಂದೆಯೇ "ನಾಳೆ ಶಾರದ ಅವ್ರ ಮನೆಗೆ ಹೋಗೋದ್ಬೇಡ" ಹೇಳಿ ಕೈ ತೊಳೆದು ಎದ್ದು ಹೋದ.

ಕಾಶೀಪತಿಗಳು ದಿಗ್ಭ್ರಮೆಗೊಂಡರು. ಇದು ಯಾವ ವರಸೆ? ಶಾರದಾಗೆ ದೂರದ ಬಂಧುಗಳು, ಅಷ್ಟು ಲಕ್ಷಣವಾಗಿ ಬಂದು ಕರೆದು ಹೋಗಿದ್ದಾರೆ. ಹೋಗದಿದ್ದರೇ ಹೇಗೆ ?

ಶಾರದ ತಲೆ ಬಗ್ಗಿಸಿಕೊಂಡು ಬಲವಂತದಿಂದ ಊಟ ಮಾಡುತ್ತಿದ್ದರು. ಸದಾ ನಗುವಿನ ತಾವರೆ ಅರಳುತ್ತಿದ್ದ ಅವಳ ಮುಖದಲ್ಲಿ ಕಾರ್ಮೋಡಗಳ ಸಮೂಹ.

ಕೈ ತೊಳೆದುಕೊಂಡು ನೇರವಾಗಿ ಮುಂದಿನ ಅವನ ಕನ್‌ಸಲ್ಟಿಂಗ್ ರೂಮಿಗೆ ಹೋದರು. ಫೈಲುಗಳನ್ನು ಮುಂದೆ ಹಾಕಿಕೊಂಡು ಕೂತಿದ್ದ.

"ಯಾಕೆ ಹೋಗ್ಬಾರ್‍ದು ? ನೀವಿಬ್ರೂ ಬರ್‍ತೀರಾಂತ ಅವ್ರಿಗೆ ಭರವಸೆ ಕೊಟ್ಟಿದ್ದೀನಿ. ಸುಮ್ನೆ ಇಲ್ದ ತಲೆಹರಟೆ ಮಾಡದೇ ಇಬ್ರೂ ಹೋಗ್ಬನ್ನಿ" ಸಮಾಧಾನದಿಂದ ಬುದ್ಧಿ ಹೇಳಿದರು ಕಾಶೀಪತಿಗಳು.

"ನಾಳೆ ಕಾಲೇಜು ಕಟ್ಟಡ ನೋಡೋಕೆ, ಅದ್ಕೆ ಸಂಬಂಧಪಟ್ಟ ದೊಡ್ಡ ಸಮೂಹನೆ ಬರ್‍ತಾ ಇದೆ. ನಾನು ಆ ಸಮಯದಲ್ಲಿ ಅಲ್ಲಿರಬೇಕು".

ಆ ಬಗ್ಗೆ ಮಗನ ಬಳಿ ವಾದ ಮಾಡುವುದರಿಂದ ಪ್ರಯೋಜನವಿಲ್ಲವೆನಿಸಿತು.

"ಹೋಗ್ಲಿ, ಶಾರದ ಹೋಗ್ತಾಳೆ ಬಿಡು" ಎಂದರು.

"ಇನ್ನೊಂದ್ಸಲ ಹೋದರಾಯ್ತು" ಹಾರಿಸುವ ಮಾತಾಡಿಸಿದ.

"ಏನೇನೋ ಮಾತಾಡ್ಬೇಡ. ಇಂಥ ನಿರ್ಬಂಧಗಳಿಂದ ದಾಂಪತ್ಯದಲ್ಲಿ ಬಿರುಕು ಮೂಡುತ್ತೆ. ಅಲ್ಲಿ ಅವ್ಳ ಸ್ವಂತದವ್ರು ಯಾರು ಇಲ್ಲದಿದ್ರೂ ಆ ಮನೆಯ ಮೇಲೆ ಮಮಕಾರ ಇರುತ್ತೆ. ಇಂಥ ವಿಷ್ಯಗಳಿಗೆ ನೀನು ಅಡ್ಡಿ ಬರ್ಬೇಡ" ಗಟ್ಟಿಯಾಗಿ ಹೇಳಿದರು.

"ಅಪ್ಪ, ನನ್ನ ಶಾರದ ಮಧ್ಯೆ ನೀವು ಬರ್ಬೇಡಿ. ಅವ್ಳು ನನ್ನ ಇಷ್ಟಾನಿಷ್ಟಗಳನ್ನು ಪಾಲಿಸಲೇಬೇಕು. ಪಾಲಿಸ್ತಾಳೆ ಕೂಡ. ಎಷ್ಟಾದ್ರೂ ಅವ್ಳು ಹೆಣ್ಣು. ನನ್ನ ಹೆಸರು, ರಕ್ಷಣೆ ಅವ್ಳಿಗೆ ಬೇಕೇ ಬೇಕು" ಧಿಮಾಕಿನ ಮಾತು.

ಹೆಣ್ಣಿಲ್ಲದ ಮನೆಯಲ್ಲಿ ಬೆಳೆದವ. ಪೂರ್ತಿಯಾಗಿ ತಾಯಿಯ ಪ್ರೀತಿ ಸಿಕ್ಕಿಲ್ಲ. ಕೈ ಹಿಡಿದ ಮಡದಿಯಿಂದಲ್ಲಾದರೂ ಪೂರ್ಣ ಪ್ರೀತಿ ಪಡೆದುಕೊಳ್ಳಲಿಯೆನ್ನುವುದು ಅವರ ಆಸೆ, ಆಕಾಂಕ್ಷೆ. ಯಾಕೋ ಮೂಲಕ್ಕೆ ಪೆಟ್ಟು ಬೀಳುತ್ತಿದೆಯೆನಿಸಿತು.

"ಕೈ ಹಿಡಿದ ಹೆಂಡತಿಯ ಬಗ್ಗೆ ಇಂಥ ಭಾವನೆ ಬೆಳೆಸಿಕೊಳ್ಳೋದು ಸರಿಯಲ್ಲ" ಎಂದರಷ್ಟೆ.

'ಹಾ ಹ್ಞೂ' ಎನ್ನದೆ ತನ್ನ ಕೆಲಸದಲ್ಲಿ ಮಗ್ನನಾಗಿದ್ದ. ಕೂತುಬಿಟ್ಟರು. ಇದು ಎಲ್ಲಿಗೆ ಹೋಗಿ ಮುಟ್ಟಬಹುದು. ತಾನು ಹೆಚ್ಚು ಓದಿದವಳು, ಗೋಲ್ಡ್ ಮೆಡಲ್ ಪಡೆದವಳೆಂಬ ಧಿಮಾಕ್ ಶಾರದಾಗೆ ಎಂದೂ ಇರಲಿಲ್ಲ. ರಜಗಳಲ್ಲಿ ಅವಳೇ ಪೂರ್ತಿಯಾಗಿ ಅಡಿಗೆ ಕೆಲಸ ಮಾಡುತ್ತಿದ್ದುದು. ತಾತ, ಮೊಮ್ಮಗಳು ಸೇರಿ ಹೊಸ ರುಚಿ ತಯಾರಿಸುತ್ತಿದ್ದರು. ಅವಳಿಗೆ ಕಾಲೇಜು, ಪಾಠ ಪ್ರವಚನ ವಿಷಯಗಳಲ್ಲಿ ಎಷ್ಟು ಆಸ್ಥೆಯೋ, ಅಷ್ಟೇ ಅಕ್ಕರೆ, ಮನೆ, ಮನೆಯವರ ಬಗ್ಗೆ. ಅವಳು ಈ ಮನೆಗೆ ಕಾಲಿಟ್ಟನಂತರ ಇವರ ಊಟ, ತಿಂಡಿ ಗಮನಿಸುತ್ತಿದ್ದವಳು ಅವಳೇ. 'ಬುದ್ಧಿಯ ತರ್ಕವು ಹೃದಯದ ತರ್ಕದ ಮುಂದೆ ಕುಸಿದು ಬೀಳುತ್ತೆ.' ಒಮ್ಮೆ ಸೇತುರಾಮ್ ಇದನ್ನು ಆಡಿದಾಗ ಶಾರದನು ಅಲ್ಲೇ ಕೂತಿದ್ದಳು. ಅವಳು ಕೂಡ ವಿರುದ್ಧವಾಗಿ ಪ್ರತಿಭಟಿಸಿರಲಿಲ್ಲ.

ಅಂದು ರಾತ್ರಿ ಸೇತುರಾಮ್ ಫೋನಿನಲ್ಲಿ ಮೊಮ್ಮಗಳೊಂದಿಗೆ ಮಾತಾಡಿದವರು, "ಇಲ್ಲಿ ಎಲ್ಲಾ ಚೆನ್ನಾಗಿದೆ. ನಂಗ್ಯಾಕೋ ಇಷ್ಟವಾಗ್ತ ಇಲ್ಲ. ಆದಷ್ಟು ಬೇಗನೇ ಬರ್ತೀನಿ" ಭರವಸೆ ಕೊಟ್ಟಾಗ ಬಿಕ್ಕುವಂತಾಯಿತು ಅವಳಿಗೆ. ಅತ್ಯಂತ ದುರ್ಬಲವಾಗೇನು ಬೆಳೆಸಿರಲಿಲ್ಲ ಶಾರದಾನ.

ರಾತ್ರಿ ವಸಂತನ ಕೈ ಅವಳ ಮೈ ಮೇಲೆ ಬಿದ್ದಾಗ ಶಾರದಳ ಶರೀರ ಪೂರ್ತಿ ಮರಗಟ್ಟಿದಂತಾಯಿತು. ಅವಳ ಭಾವನೆಗಳ ಮೇಲೆ ದಾಳಿ ನಡೆಸಿದ್ದ, ಸತತವಾಗಿ. ಇಲ್ಲಿ ಅವಳ ಮನಸ್ಸು, ಹೃದಯ, ಭಾವನೆ ಅಂಥದಕ್ಕೆ ಒಂದು ಚೂರೂ ಬೆಲೆ ಇರಲಿಲ್ಲ.

"ಶಾರದ....." ಅವಳನ್ನು ತನ್ನಡೆಗೆ ತಿರುಗಿಸಿಕೊಂಡ.

"ಏನಾಗಿದೆ, ನಿಂಗೆ ?" ಸ್ವಲ್ಪ ಖಾರವಿತ್ತು ಅವನ ಸ್ವರದಲ್ಲಿ. ಅದನ್ನು ಬಾಯಿ ಬಿಟ್ಟು ಹೇಳುವ ಅಗತ್ಯ ಕಾಣಲಿಲ್ಲ. ಕೈಯನ್ನು ಸರಿಸಿ ತನ್ನ ಪಾಡಿಗೆ ತಾನು ಮಲಗಿದಳು.

ಕೆಲವು ವಿಷಯಗಳಲ್ಲಿ ವಸಂತ ಹಟಮಾರಿ.

"ಏನಾಗಿದೆ ನಿಂಗೆ ?" ಮತ್ತದೇ ಪ್ರಶ್ನೆ.

ಅವಳು ಉತ್ತರಿಸುವುದಕ್ಕೆ ಹೋಗಲಿಲ್ಲ. ಬೆಳಿಗ್ಗೆ ಎದ್ದು ಬಂದಾಗ ಅವಳಿಗೆ ಒಂದಿಷ್ಟು ತಲೆ ನೋವಿನ ಜೊತೆ ಗೋಪಿ ಕೈಗೆ ಸೀಳು ಗಾಯ ಮಾಡಿಕೊಂಡು ಕಾಶೀಪತಿಗಳಿಂದ ಬ್ಯಾಂಡೇಜ್ ಕಟ್ಟಿಸಿಕೊಂಡು ಒಂದು ಕಡೆ ಕೂತಿದ್ದ. ಶಾರದ ಮುಖ ನೋಡಿದ ಕೂಡಲೇ ಕಣ್ತುಂಬಿ ತಲೆ ಬಗ್ಗಿಸಿದ.

"ಚಾಕುನಿಂದ ಬೆಟ್ಟು ಕತ್ತರಿಸಿಕೊಂಡೆ".

ಕೈ ಹಿಡಿದು ಕುಯ್ದು ಜಾಗವನ್ನು ಪರೀಕ್ಷಿಸಿ "ಅಂಕಲ್ ಏನಾದ್ರೂ ಹೇಳಿದ್ರಾ?" ಕೇಳಿದಳು. ಅವನಿಗೆ ನಗು ಬಂದುಬಿಟ್ಟಿತು.

"ತೆಪ್ಪಗ ಒಂದ್ಕಡೆ ಕೂತ್ಕೋ. ನಾನು ಅಡಿಗೆ ಮಾಡಿ ಹಾಕ್ತೀನಿ. ನಿನ್ನ ಕೈನ ಅಡಿಗೆ, ತಿಂಡಿ ತಿಂದು ನನ್ನ ನಾಲಿಗೆ ಜಡ್ಡುಗಟ್ಟಿ ಹೋಗಿದೆ" ಬಯ್ದು ಹೋದುದನ್ನು ಹಾಗೆಯೇ ತಿಳಿಸಿದಾಗ ಅವಳ ತುಟಿಯಂಚಿನಲ್ಲು ನಗು ಅರಳಿತು.

"ಹಾಗೆ.... ಮಾಡು" ಅಡಿಗೆ ಮನೆಗೆ ಹೋದಳು.

ಕಾಫೀ ಬೆರೆಸುತ್ತಿದ್ದ ಕಾಶೀಪತಿಗಳು "ಗುಡ್ ಮಾರ್ನಿಂಗ್, ಇವತ್ತು ನನ್ನ ಅಡಿಗೆನೆ .... ಬೇಡ... ತಿಂಡಿಗೆ ಸಹಾಯ ಮಾಡು. ಬೇಡ, ನನ್ನ ಕೈನ ತಿಂಡಿ ರುಚಿ ನೋಡು, ಎದ್ದಿಲ್ಲವಾ, ಪತಿ ಮಹಾಶಯ" ಮಗನ ಬಗ್ಗೆ ವಿಚಾರಿಸಿದರು.

"ದಯವಿಟ್ಟು ನೀವು ಹೊರಗಡೆ ಹೋಗಿ ಕೂತ್ಕೊಳ್ಳಿ." ಅವರನ್ನು ಕೈ ಹಿಡಿದು ತಂದು ಹೊರಗೆ ಕೂಡಿಸಿ ತಾನೇ ಕಾಫೀ ಬೆರೆಸಿಕೊಂಡು ಹೋಗಿ ಕೊಟ್ಟಳು "ಅದನ್ನ ಕುಡೀರಿ, ಒಂದ್ಸಲ ನೀವು ನನ್ತಂದೆ ಸೇರಿ ಕೂಟು ಮಾಡಿದ್ರಂತೆ. ತಾತ ಆಗಾಗ ನೆನಸಿಕೊಳ್ಳೋರು" ನೆನಪಿಸಿದ ಕೂಡಲೇ ಜೋರಾಗಿ ನಗತೊಡಗಿದರು. ಅವಳ ನಗೆ ಕೂಡ ಸೇರಿತು. ಆ ದಿನದ ಸನ್ನಿವೇಶ ಅಷ್ಟು ರಸವತ್ತಾಗಿತ್ತು. ಬಹುಶಃ ಆನಂದರಾವ್ ಬದುಕಿದ್ದರೇ ಇವರಿಬ್ಬರಿಗಿಂತ ಜೋರಾಗಿ ನಗೋರು.

ರೂಮಿನಿಂದ ಹೊರ ಬರುತ್ತಿದ್ದ ವಸಂತನ ಕಿವಿಗೆ ನಗು ಅಪ್ಪಳಿಸಿದಾಗ ಒಂದು ರೀತಿಯ ಅಸೂಯೆ. ಮುಖ ಸಿಂಡರಿಸಿಕೊಂಡೇ ಅಡಿಗೆ ಮನಗೆ

ಬಂದವನು ಕಪ್ ಎತ್ತಿ ಹಾಕಿದ.

"ಇದ್ವರ್ಗೂ ಕಾಫೀ ಆಗಿಲ್ವಾ ?" ಗೋಪಿಯನ್ನು ಕೇಳಿದ.

ಅವರಿಬ್ಬರ ನಗುವಿನಲ್ಲಿ ಪಾಲುದಾರನೆನ್ನುವಂತೆ ಅಷ್ಟು ದೂರದಲ್ಲಿ ನಿಂತಿದ್ದ ಅವನನ್ನು ಬಡಿದು ಎಚ್ಚರಿಸಿದಂತಾಯಿತು.

"ನನ್ನ ಕೈ ನೋವಾಗಿದೆ. ದೊಡ್ಡೆಜಮಾನ್ರು ಮಾಡಿದ್ರು" ಸಪ್ಪೆಗೆ ಹೇಳಿದ. ಬಾತ್‌ರೂಂಗೆ ಹೋಗಿ ಬಾಗಿಲು ಮುಚ್ಚಿಕೊಂಡ ಇವಳು ಕಾಫೀ ಒಯ್ಯುವ ವೇಳೆಗೆ.

"ಕಾಫೀ ಕುಡ್ದು ಹಲ್ಲು ಬ್ರಷ್ ಮಾಡ್ಕೊಬಹ್ದು" ಹೊರಗಿನಿಂದ ಹೇಳಿದಳು "ನೀನೇ .... ಕುಡೀ..." ಒರಟಾಗಿತ್ತು ದನಿ ಈ ಮಾತಿನ ಅಗತ್ಯವಿತ್ತಾ ?

ಮದುವೆಗೆ ಮುನ್ನ ಅವಳ ಕಣ್ಣಲ್ಲಿ ಕಣ್ಣಿಟ್ಟು "ನಾನು ನಿನ್ನ ಎಷ್ಟೊಂದು ಪ್ರೀತಿಸ್ತಾ ಇದ್ದೀನಿ ಗೊತ್ತಾ ?" ಆಗ ಮೌನವಾಗುತ್ತಿತ್ತು ಭಾಷೆ. ಅಧ್ಯಯನದಲ್ಲಿ ನಿರತಳಾಗಿದ್ದ ಶಾರದ ಪ್ರೇಮ, ಪ್ರೀತಿಯ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ತಂದೆ ನಿಶ್ಚಯಿಸಿದ ಗಂಡು, ಆ ಬಗ್ಗೆ ತುಂಬು ಒಲವನ್ನು ವ್ಯಕ್ತಪಡಿಸಿದವರು ಸೇತುರಾಮ್, ಕಾಶೀಪತಿಗಳು ಇಷ್ಟು ಸಾಕಿತ್ತು ವಿವಾಹಕ್ಕೆ.

ಸೊಸೆಯ ಮುಖ ನೋಡಿಯೇ ಅವನ ಕೋಪ ಮುಗಿದಿಲ್ಲವೆನಿಸಿದಾಗ ಬೇಸರದಿಂದ "ಹೋಗೋಣಾಂತ.... ಅಂದ್ನ ?" ವಿಚಾರಿಸಿದರು ಹಿಂಜರಿಯುತ್ತಲೇ.

"ಒಂದ್ಸಲ ಹೇಳಿದ್ಮೇಲೆ ಮತ್ತೆ ಮತ್ತೆ ಪ್ರಸ್ತಾಪಿಸೋದು ಸರಿಯಲ್ಲವೇನೋ!" ಅನುಮಾನ ವ್ಯಕ್ತಪಡಿಸಿದಳು. ಒಂದು ಹಿರಿಯ ಜೀವ ನೋವು ಅನುಭವಿಸುವುದು ಬೇಡವೆನ್ನುವುದು ಅವಳ ಉದ್ದೇಶ.

"ಒಂದ್ಸಲ.... ಕೇಳಮ್ಮ" ಎಂದರು.

ಅವರ ಮುಖವನ್ನು ನೋಡಿ ದೈನ್ಯತೆ ಇತ್ತು. ಮನಸ್ಸು ಮೃದುವಾಯಿತು. "ಕೇಳ್ತೀನಿ" ಎಂದಳು ಅವರನ್ನು ನೋಯಿಸಲಾರದೆ "ಥ್ಯಾಂಕ್ಯೂ... ಥ್ಯಾಂಕ್ಯೂ ವೆರಿಮಚ್."

ಸ್ನಾನ ಮುಗಿಸಿಕೊಂಡು ಬಂದು ಮೈಯೆಲ್ಲ ಟಾಲ್ಕಂ ಸುರಿದುಕೊಳ್ಳುತ್ತಿದ್ದ ವಸಂತ ವಾರೆಗಣ್ಣಿಂದ ಗಮನಿಸಿದ ಮಡದಿಯನ್ನು.

"ಬರ್ತೀರಾ, ತಾನೇ ?" ಕೇಳಿದಳು.

ವೇಗವಾಗಿ ಹಿಂದಕ್ಕೆ ತಿರುಗಿದವ "ನಿಂಗೆ ಕಾಮನ್ ಸೆನ್ಸ್ ಇಲ್ವಾ, ಒಂದ್ಸಲ ಬರೋಲ್ಲಾಂತ ಹೇಳಿದ್ಮೇಲೆ ಮುಗ್ದುಹೋಯ್ತು. ನಿಂಗಂತು ಕೆಲ್ಸವಿಲ್ಲ. ವಿದ್ಯಾರ್ಥಿಗಳು ಕಾರಿಡಾರ್‌ನಲ್ಲಿ ಓಡಾಡ್ತಾರೆ, ನೀವುಗಳು ಒಟ್ಟಾಗಿ ಕೂತು ಹರಟೆಯೊಡೆಯುತ್ತೀರಾ" ಹಂಗಿಸಿದ.

ತಲೆ ತಿರುಗಿದಂತಾಯಿತು ಶಾರದಾಗೆ. ಆ ಪ್ರೊಫೆಷನ್‌ನ ತುಂಬ ಇಷ್ಟಪಟ್ಟು ಆಯ್ದುಕೊಂಡಿದ್ದು. ಅವನ ಪ್ರಕಾರ ಕಾಲೇಜುಗಳಲ್ಲಿ ನಡೆದಿದ್ದರೇ, ಅವಳಂಥ ಒಬ್ಬ ಸ್ಟೂಡೆಂಟ್ ಕೂಡ ಹೊರ ಬರಲು ಸಾಧ್ಯವಿರಲಿಲ್ಲ.

"ನಿಮ್ಮ ಪ್ರಕಾರ ಏನು ನಡ್ಯೋಲ್ಲ. ಕೆಲವು ಹತ್ತು ವಿದ್ಯಾರ್ಥಿಗಳು ಕಾಲೇಜಿನ ಕಾರಿಡಾರ್‌ನಲ್ಲಿ ಓಡಾಡಿದ ಮಾತ್ರಕ್ಕೆ ಯಾರೋ ಒಂದಿಬ್ಬರು ಉಪನ್ಯಾಸಕರು ಕೂತು ಮಾತಾಡಿದಕ್ಕೆ ಇಡೀ ಕಾಲೇಜಿನ ಬಗ್ಗೆ ನಿಂದನೆ ಬೇಕಿಲ್ಲ. ಐ ಡೋಂಟ್ ಲೈಕ್ ಇಟ್" ಎಂದಳು. ಶಾರದ ಕಂಠ ಭಾರವಾಯಿತು 'ಛೆ...' ಎನಿಸಿತು.

ಸದಾ ಹರ್ಟ್ ಆಗುವಂತೆ ಮಾತಾಡುವ ವಸಂತನ ಉದ್ದೇಶದ ಹಿನ್ನೆಲೆ ಏನು ?

ಹಾಲ್‌ನಲ್ಲಿಯೆ ಕೂತು ಮುಖದ ಮುಂದೆ ಪೇಪರ್ ಹಿಡಿದ ಕಾಶೀಪತಿಗಳು ಪೇಪರನ್ನು ಪಕ್ಕಕ್ಕೆ ತೆಗೆದರು. ಅಲ್ಲಲ್ಲಿ ಆವರಿಸಿಕೊಂಡಿದ್ದ ಅವಳ ಮುಖದ ಮೇಲಿನ ಕಾರ್ಮೋಡಗಳು ಮತ್ತಷ್ಟು ದಟ್ಟವಾಗಿದ್ದವು. ಅಡ್ಡಡ್ಡ ತಲೆಯಾಡಿಸಿ ಅಡಿಗೆ ಮನೆಗೆ ಹೋದಳು.

ಕೈ ಹಿಡಿದ ಕೂತಿದ್ದ ಗೋಪಿ ಕೇಳಲೋ ಬೇಡವೋಂತ "ಅಕ್ಕ, ಅಣ್ಣ ಬೇಗ ಕೋಪ ಮಾಡ್ಕೋತಾರೆ ?" ಕೇಳಿದ.

ಅವನ ಪ್ರಶ್ನೆಗೆ ಉತ್ತರ ನೀಡುವ ಮನಸ್ಥಿತಿಯಲ್ಲಿರಲಿಲ್ಲ. ಮೌನವಹಿಸಿದಳು. ಕಣ್ಣಂಚು ಒದ್ದೆಯಾಗದಂತೆ ಕುಕರ್‌ನ ಜೋಡಿಸಿಟ್ಟಳು.

"ಅವ್ನಿಗೆ ಬೇರೆ ಅಪಾಯಿಂಟ್‌ಮೆಂಟ್ ಇದೆಯಂತೆ. ನಾವು ಹೋಗ್ಬರೋಣ, ಬೇಗ ರೆಡಿಯಾಗು" ಕಾಶೀಪತಿಗಳು ಹೇಳಿ ಅದೃಶ್ಯರಾದರು. ಮಗನ ಮುಂದೆ ವಾದ ಮಾಡಿದ್ದು ಸೊಸೆಗೆ ಗೊತ್ತಾಗಬಾರದೆಂದು ಅವಳ ಪ್ಲಾನ್.

ಮುಖ ಗಡಿಗೆ ಮಾಡಿಕೊಂಡಿದ್ದ ವಸಂತ "ತಿಂಡಿ ಬೇಡ,

ಹೋಟಲ್‌ನಲ್ಲಿ ತಿಂದ್ಕೋತೀನಿ. ಸದ್ಯಕ್ಕೆ ನಿಮ್ಮನ್ನ ಡ್ರಾಪ್ ಮಾಡೋದೊಂದು ದೊಡ್ಡ ಕೆಲಸ" ವಾಚ್ ಕಡೆ ನೋಡಿಕೊಂಡ.

ಡೋರ್ ತೆಗೆದವಳು ಮುಚ್ಚಿ "ಆಟೋ, ಟ್ಯಾಕ್ಸಿ ಸಿಕ್ಕುತ್ತೆ. ನೀವು ಹೋಗ್ಬನ್ನಿ" ಎಂದಳು. ಒಂದು ಒಳ್ಳೆಯ, ಸಮಾಧಾನದ ಮಾತನ್ನು ವಸಂತ ಆಡಿದ್ದರೇ ಚೆನ್ನಿತ್ತು. "ಎಷ್ಟೊಂದು ದುರಹಂಕಾರ, ಆಟೋದಲ್ಲೇ ಹೋಗಿಕೋ" ಕಾರು ಸ್ಟಾರ್ಟ್ ಮಾಡಿಕೊಂಡು ಹೊರಟೇಬಿಟ್ಟ.

ಕಾಶೀಪತಿಗಳಿಗೆ ತಲೆಯೆತ್ತದಂತಾಯಿತು.

"ಬನ್ನಿ.... ಅಂಕಲ್" ಮುಂದಕ್ಕೆ ನಡೆದಳು.

"ಟ್ಯಾಕ್ಸಿಯಲ್ಲಿ ಹೋಗ್ಬಿಡೋಣ" ಕಾಶೀಪತಿಗಳು ಸೂಚಿಸಿದರು.

"ಅಂಕಲ್ ಒಂದಿಷ್ಟು ಹಣ್ಣು ಹೂ ತಗೊಂಡರೇ ಹೇಗೆ?" ಶಾರದಳ ಮಾತಿಗೆ "ಭೇಷಕ್ಕಾಗಿರುತ್ತೆ, ನಂಗೆ ಇದು ಹೊಳೆಯಲೇ ಇಲ್ಲ ಮೆಚ್ಚಿಗೆ ಸೂಚಿಸಿದರು."

ಟ್ಯಾಕ್ಸಿ ಹಿಡಿದು ದಾರಿಯಲ್ಲಿ ಒಂದು ಕಡೆ ನಿಲ್ಲಿಸಿ ಹೂ, ಹಣ್ಣು ಕೊಂಡು ಬಂದು ಟ್ಯಾಕ್ಸಿ ಹತ್ತಿದ ಕಾಶೀಪತಿಗಳು "ಆನಂದನಿಗೆ ಮಲ್ಲಿಗೆ ಹೂವೆಂದರೆ ಇಷ್ಟ. ವಿವಾಹವಾದ ಹೊಸದರಲ್ಲಿ ದಿನಾ ಮಲ್ಲಿಗೆ ದಂಡೆಗಳನ್ನು ಒಯ್ಯೋನು. ಇಬ್ಬರ ಜಾತಕಗಳಲ್ಲು ಸಂತಾನ ಯೋಗ ಅಲ್ಪ. ಅವ್ನು ಬೇಗ ಹಿಂಬಾಲಿಸಿದ. ನಾನು ಮಾತ್ರ ಇಲ್ಲಿ ಪರದಾಡ್ತ ಇದ್ದೀನಿ" ಹೇಳಿಕೊಂಡರು. ದಿನದಲ್ಲಿ ಒಂದೆರಡು ಸಲವಾದರೂ ಗೆಳೆಯನನ್ನು ಜ್ಞಾಪಿಸಿಕೊಳ್ಳುವ ಅವರುಗಳ ಸ್ನೇಹ ಎಷ್ಟರಮಟ್ಟಿನದು ಎಂದು ಆಶ್ಚರ್ಯವಾಗುತಿತ್ತು ಶಾರದಾಗೆ.

ಬಹಳ ನಿರೀಕ್ಷೆ ಇಟ್ಟುಕೊಂಡು ಕಾದಿದ್ದ ಶ್ರೀಧರಮೂರ್ತಿ ದಂಪತಿಗಳಿಗೆ ನಿರಾಸೆಯಾಯಿತು. "ಅಳಿಯಂದಿರು ಬರ್ತಾರೇಂತ ಅಂದುಕೊಂಡಿದ್ದಿ" ಮಾವ, ಸೊಸೆ ತಕ್ಷಣ ಮಾತಾಡಲಿಲ್ಲ.

"ಸರ್ಕಾರಿ ನೌಕರಿ ಅಲ್ಲ ನೋಡಿ ಸ್ವಂತ ಉದ್ದಿಮೆಗಳೂಂದ್ರೆ ಎಷ್ಟು ಶ್ರಮ-ಸಾಧನೆ ಕೂಡ ಸಾಲ್ದೂಂತ ಅನ್ನಿಸುತ್ತೆ" ಶ್ರೀಧರಮೂರ್ತಿಗಳೇ ಮಾತಾಡಿ ಇವರಿಬ್ಬರನ್ನು ಉಸಿರಾಡುವಂತೆ ಮಾಡಿದರು.

ಶ್ರೀಧರಮೂರ್ತಿಗಳು ಸ್ವಲ್ಪ ಹಿರಿಯರೇ ವಯಸ್ಸಿನಲ್ಲಿ ಕಾಶೀಪತಿಗಳಿಗಿಂತ. ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ ವಿಶ್ರಾಂತಿ

ಜೀವನ ನಡೆಸುತ್ತಿರುವವರು. ಮಕ್ಕಳೆಲ್ಲ ಬೇರೆ ಬೇರೆ ಕಡೆ ಇದ್ದರು. ಇವರು ಸ್ವಂತ ಮನೆ, ಒಂದಿಷ್ಟು ತೋಟ ಇದ್ದುದ್ದರಿಂದ ಹಳ್ಳಿಯಲ್ಲಿ ಉಳಿದಿದ್ದರು. ಸೇತುರಾಮ್‌ಗೆ ನೆಂಟರು ಅವರೇ 'ಹಳ್ಳಿ ಮನೆ ನೋಡಿಕೊಳ್ಳೋಕೆ ಜನ ಇದ್ದಾರೆ. ನಾನು ಬರೋವರ್ಗ್ಗೂ ನೀವುಗಳು ಬಂದು ಇಲ್ಲಿರೀಂತ' ಅವರೇ ಒಪ್ಪಿಸಿದ್ದರು. ಆದರೂ ಹಳ್ಳಿಯ ಮೇಲಿನ ವ್ಯಾಮೋಹದಿಂದ ಮುಕ್ತರಾಗಿರಲಿಲ್ಲ.

ಕಾಶೀಪತಿಗಳು, ಶ್ರೀಧರಮೂರ್ತಿಗಳೊಂದಿಗೆ ಮಾತಿಗೆ ಕೂತಾಗ, ಮನೆ ಹಿತ್ತಲು ಎಲ್ಲಾ ಕಡೆ ಓಡಾಡಿ ತನ್ನ ರೂಮಿಗೆ ಬಂದಾಗ, ಅಂದು ತಾನು ತೆಗೆದಿರಿಸಿ ಧೂಳು ಒರೆಸಿದ್ದ ಅನಂದರಾವ್ ಫೋಟೋ, ಮತ್ತೆ ಅದೇ ಸ್ಥಾನದಲ್ಲಿತ್ತು. ಪ್ರತಿಯೊಂದು ವಸ್ತು ಅದರದರ ಸ್ಥಾನದಲ್ಲಿಯೇ ಇತ್ತು.

"ನಾನೇನಾದ್ರೂ ಸಹಾಯ ಮಾಡ್ಲಾ, ಅಜ್ಜಿ?" ಕೋಸಂಬರಿಗೆ ಕಾಯಿ ತುರಿಯುತ್ತಿದ್ದ ತುಳಸಿಯವರನ್ನು ಕೇಳಿದಾಗ "ಅಂಥದೇನಿಲ್ಲ, ಅರ್ಧ ಕೆಲ್ಸ ನಿನ್ನ ತಾತನೆ ಮಾಡಿ ಕೊಡ್ತಾರೆ. ಒಂದು ಗಳಿಗೆ ಕೂತು ಅಭ್ಯಾಸವಿಲ್ದ ಮನುಷ್ಯ" ಅಭಿಮಾನದಿಂದ ಹೇಳಿಕೊಂಡ ಮಾತು.

ಪಾತ್ರೆಯಲ್ಲಿದ್ದ ನಿಂಬೆಯ ಪಾನಕವನ್ನು ಲೋಟಗಳಿಗೆ ಸುರಿದು "ಅವ್ರಿಗೂ ಕೊಟ್ಟು, ನೀನು ತಗೋ...... ನಾನು ಕೋಸಂಬರಿಗೆ ಕಾಯಿ ಬೆರೆಸಿ ಬಂದ್ಬಿಡ್ತೀನಿ" ಹೊರಗೆ ಕಳಿಸಿದರು ಬಲವಂತದಿಂದ.

ಪಾನಕದ ಲೋಟಗಳನ್ನು ಅವರುಗಳಿಗೆ ಕೊಟ್ಟು ತಾನು ಅಲ್ಲೇ ಕೂತಳು. ಸೇತುರಾಮ್ ಕೂಡುತ್ತಿದ್ದ ಆರಾಮಾಸನದಲ್ಲಿ ಶ್ರೀಧರಮೂರ್ತಿಗಳು ಕೂತಿದ್ದರು.

ಪಾನಕ ಚಪ್ಪರಿಸಿ ಕುಡಿದ ಕಾಶೀಪತಿಗಳು "ನಿಮ್ಮ ವಯಸ್ಸೆಷ್ಟು?" ಕೇಳಿದ. ಬತ್ತದ ಉತ್ಸಾಹ, ಮುಖದ ಮೇಲಿನ ದೃಢತೆಯನ್ನು ನೋಡಿ ಪ್ರಶ್ನಿಸಿದ್ದು.

"ನನ್ನ ಆಯುರ್ಮಾನ ಬೈಬಲ್ ಹೇಳುವ ಪ್ರಕಾರ 'Three Scores and ten' (ಮೂರು ಇಪ್ಪತ್ತು ಜೊತೆಗೆ ಹತ್ತು) ಎಪ್ಪತ್ತರ ಮನುಷ್ಯ ನಾನು 'Life is a brief candle' ಆದುದ್ದರಿಂದಲೇ ಬಾಳಿಗೆ ಇಷ್ಟೊಂದು ಮಹತ್ವ ಬಂದಿದೆ" ಅತ್ತಿತ್ತ ನೋಡಿ ಹೆಂಡತಿ ಇಲ್ಲವೆಂದು ತಿಳಿದು "ಬೇಸರವಾದಾಗ, ರಾತ್ರಿ ಮಲಗುವಾಗ ಮತ್ತೆ ಏಳಬಾರದೆಂಬ ಬಯಕೆ ಬರುತ್ತೆ. ಅದು 'ಒನ್ ವೇ ಟಿಕೆಟ್' ಅಲ್ಲ 'ನೋ ರಿಟರ್ನ್ ಟಿಕೆಟ್'

ಅದಕ್ಕೆ ಮತ್ತೆ ಮತ್ತೆ ಬದುಕುವ ಆಸೆ ಹುಟ್ಟುತ್ತೆ" ಸಾವಿನ ಬಗ್ಗೆ ಒಂದು ದೀರ್ಘ ಚಿಂತನೆಯನ್ನು ನಡೆಸಿದರು.

"ಈಗ ಇರೋ ವಯಸ್ಸು ಏನೇನು ಸಾಲ್ದು. ಮನುಷ್ಯನಿಗೆ ವಿವೇಕ ಬರಲು, ಪಕ್ವವಾಗಲು ಮೂರು ನೂರು ವರ್ಷಗಳಾದ್ರೂ ಬೇಕೂಂತ ಬರ್ನಾಡ್ ಷಾ ಅಂದರು. ಕೆಲವೊಮ್ಮೆ ಆಗ್ಲೂ ಮನುಷ್ಯನಿಗೆ ವಿವೇಕ ಬರುತ್ತೆಂತ ಏನು ಗ್ಯಾರಂಟಿ, ಜೀವನವೇ ವಿಸ್ಮಯಕಾರಿ ವಿಚಿತ್ರ. ಕೆಲವೊಮ್ಮೆ ಏನೇನು ಅರ್ಥವಾಗದು" ಕಾಶೀಪತಿಗಳ ಮಾತು ಫಿಲಾಸಫಿಯ ಕಡೆ ಸಾಗಿತು.

"ನೀವು ಪೂರ್ತಿ ಫಿಲಾಸಫಿ ಕಡೆ ವಾಲಿದಂತಿದೆ" ಶ್ರೀಧರಮೂರ್ತಿಗಳ ಮೆಚ್ಚಿಗೆ, ಮಾತಿನಿಂದಲೆ ಇಷ್ಟವಾಗಿದ್ದರು.

ಕಾಶೀಪತಿಗಳ ಮುಖ ಗಂಭೀರವಾಯಿತು. ತತ್ವಶಾಸ್ತ್ರವನ್ನು ಅಭ್ಯಾಸ ಮಾಡಿದ್ದ, ತತ್ವಶಾಸ್ತ್ರವನ್ನು ಬೋಧಿಸುತ್ತಿದ್ದ ಮಗನ ಮಾತುಗಳು ಯಾವಾಗಲು ಫಿಲಾಸಪಿಯ ಕಡೆಗಿರುತಿತ್ತು.

"ನಂಗೆ ಫಿಲಾಸಪಿ ಕಂಡರಾಗೋಲ್ಲ" ಒಮ್ಮೆ ಸಿಡುಕಿದ್ದರು.

"ಯಾಕೆ ?" ತಂದೆಯನ್ನು ನಗುತ್ತಾ ಪ್ರಶ್ನಿಸಿದ್ದರು ಆನಂದ್‌ರಾವ್ "ಫಿಲಾಸಫಿಯಿಂದ ಸುಖ ಸಂತೋಷ ಹಾಳು. ಅದ್ನ ಕಾಲೇಜಿನಲ್ಲಿ ಬೋಧಿಸೋಕೆ ಇಟ್ಕೋ. ನೀನು ಅದ್ನ ಅಳವಡಿಸಿಕೊಂಡರೇ ಮನೆಯ ತುಂಬ ಸಂತೋಷ ಹಾಳಾಗುತ್ತೆ" ರೇಗಿಕೊಂಡಿದ್ದರು.

ಆನಂದ್‌ರಾವ್ ತಂದೆಯ ಬಳಿ "ಸುಖ ಸಂತೋಷ ಉಳಿಸಿಕೊಳ್ಳೋರು ಫಿಲಾಸಫಿ ಬೇಕು. ಅದೇ ಸುಖ ಸಂತೋಷನ ಕಳ್ದುಕೊಂಡ್ಮೇಲು ಫಿಲಾಸಫಿ ಬೇಕು, ಒಂದಿಷ್ಟು ಶಾಂತಿಯಿಂದ ಬದುಕಲು" ಸಮರ್ಥಿಸಿಕೊಳ್ಳುತ್ತಿದ್ದರು.

ಅದನ್ನೆಲ್ಲ ನೆನಸಿಕೊಂಡು ಅವರೆದೆ ಭಾರವಾಯಿತು. ನೀನು ಇನ್ನು ಸ್ವಲ್ಪ ಕಾಲ ಬದ್ಕಿರಬೇಕಿತ್ತು 'ಎಂದು' ಅಂದುಕೊಂಡರು.

ಮಾತುಕತೆಯ ನಡುವೆ ಎರಡು ಸಲ ಬಂದು ಹೋದ ತುಳಸಿಯವರು, ಮೂರನೆ ಸಲ ಬಂದು "ಅಡಿಗೆ ಆರಿ ತಂಗಳಾಗುತ್ತೆ. ಒಂದ್ಸಲ ಅಳಿಯಂದಿರಿಗೆ ನೀವು ಯಾಕೆ ಫೋನ್ ಮಾಡಿ ವಿಚಾರಿಸ್ಬಾರ್ದು?" ಎಂದರು.

ಅದು ಶ್ರೀಧರಮೂರ್ತಿಗೆ ಸರಿಯೆನಿಸಿದರೂ, ತಮಗಿಂತ ಶಾರದ ಮಾಡುವುದು ಸೂಕ್ತವಾಗಿ ಕಂಡಿತು.

"ಶಾರದ ನೀನು ಫೋನ್ ಮಾಡು. ಏನಂತೀರಾ ಕಾಶೀಪತಿಗಳೇ, ಸಾವಿರ ಕುದುರೆ ಸರದಾರನಾದರೂ ಹೆಂಡ್ತಿ ಮಾತು ಕೇಳ್ಬೇಕಲ್ಲ" ನಗೆ ಹರಿಸಿದರು. ಕಾಶೀಪತಿಗಳ ಮುಖದ ಮೇಲೆ ಹರಡಿದ್ದು ಪೆಚ್ಚು ನಗೆ. ಒಮ್ಮೆ ಮುಖದ ಮೇಲೆ ಕರ್ಚಿಫ್‌ನಿಂದ ಕೈಯಾಡಿಸಿದರು.

ಅವಳಿಗೂ ವಸಂತ ಬಂದರೇ ಚನ್ನೆನಿಸಿತು. ಆದರೆ ಆ ಮಾತು, ನೋಟ, ನಡವಳಿಕೆಯಿಂದ ಇಡೀ ವಾತವರಣವನ್ನೆ ಕಲುಕಿಬಿಡಬಲ್ಲ. ಇದು ಯಾರಿಗೆ ಬೇಕು ?

ಫೋನಿನ ಬಟನ್‌ಗಳನ್ನೊತ್ತಿದಳು. "ಹಲೋ, ನಾನು ಕಂಪನಿ ಮ್ಯಾನೇಜರ್, ಯಜಮಾನ್ರು ಮನೆಗೆ ಹೋಗಿದ್ದಾರೆ. ತೀರಾ ಅರ್ಜೆಂಟಿದ್ರೆ ಅಲ್ಲಿಗೆ ಫೋನ್ ಮಾಡಿ. ಬರೀ ಫೋನೆತ್ತದೇ ಕೆಲ್ಸವಾದ್ರೆ ಉಳಿದ ಕೆಲಸ ಮಾಡೋದಾದ್ರೂ... ಹೇಗೆ ?" ರಿಸೀವರ್ ಇಟ್ಟೇ ಬಿಟ್ಟ. ಅದಕ್ಕೆ ಸಕಾರಣವಿರಬೇಕೆಂದುಕೊಂಡಳು.

ಮನೆಯ ನಂಬರ್‌ಗೆ ಬಟನೊತ್ತಿದಳು. ಎತ್ತಿದ್ದು ಗೋಪಿ. "ಹಲೋ....." ಎಂದ ಕೂಡಲೇ "ನಾನು ಗೋಪಿ, ಅಣ್ಣನವರು ರೆಸ್ಟ್ ತಗೋತಾ ಇದ್ದಾರೆ. ಡಿಸ್ಟರ್ಬ್ ಮಾಡ್ಬೇಡಾಂತ ಹೇಳಿದ್ದಾರೆ. ಏನೇ ಇನ್‌ಫರ್ಮೇಷನ್ ಇದ್ರೂ ಗುರುತು ಹಾಕ್ಕೊಂಡ್ ಆಮೇಲೆ ಕೊಡಬೇಕಂತೆ" ಹೇಳಿದ.

ಕ್ಷಣ ಸ್ಥಬ್ಧಳಾದಳು.

"ಆಮೇಲೆ ನಾನೇ ಫೋನ್ ಮಾಡ್ತೀನಿ" ಇಟ್ಟೇಬಿಟ್ಟವಳು. ಶ್ರೀಧರಮೂರ್ತಿಗಳತ್ತ ತಿರುಗಿ "ಅವ್ರು ಆಫೀಸ್‌ನಲ್ಲಿಲ್ಲ" ತಿಳಿಸಿದ್ದು ಶಾಂತ ಸ್ವರದಲ್ಲಿ.

ಬಹಳ ಪ್ರೀತಿಯಿಂದ ಬಡಿಸಿದರು ತುಳಸಿ. ಎಂಟು ಮಕ್ಕಳ ತಾಯಿ, ಒಬ್ಬರು ಜೊತೆಯಲ್ಲಿಲ್ಲ. ಆಗಾಗ ಬಂದು ಹೋಗುತ್ತಾರೆ. 'ಎಲ್ಲಾ ಚೆನ್ನಾಗಿದ್ದಾರೆ' ಎನ್ನುವ ತೃಪ್ತಿ ಆ ತಾಯಿಗೆ.

ಕಿರಿಕಿರಿ, ಮನಸ್ತಾಪ, ಮೊನಚು ಮಾತುಗಳಲ್ಲಿ ತೃಪ್ತಿಯಾದ ಊಟ ಮಾಡುವುದೆ ಅವಳಿಂದಾಗುತ್ತಿರಲಿಲ್ಲ. ಇಂದು ಪ್ರೀತಿಯಿಂದ ಬಡಿಸುವ ಕೈ, ಆರಾಮಾಗಿ ತಮ್ಮ ತಮ್ಮ ಸಿಹಿ ನೆನಪುಗಳನ್ನು ಕೆದಕಿ ಮಾತಾಡುವ ಕಾಶೀಪತಿಗಳು - ಶ್ರೀಧರಮೂರ್ತಿ. ಇಂಥ ವಾತಾವರಣ ಹಾಯೆನಿಸಿತು.

ಇವರುಗಳು ಮನೆಗೆ ಬಂದಾಗ ಮೂರು ಗಂಟೆ. ವಸಂತ ಇನ್ನು ಊಟ ಮಾಡಿರಲಿಲ್ಲ. ಆರಾಮಾಗಿ ಮಲಗಿದ್ದ. ನಿದ್ದೆ ಬರಲು ಸಾಧ್ಯವೇ? ಅಸಹನೆ, ಅಸಮಾಧಾನವಿರುವ ಮನುಷ್ಯನ ಮನಃಶಾಂತಿ ಮೊದಲು ಭಗ್ನವಾಗುತ್ತೆ. ನಂತರವೇ ಬೇರೆಯವರ ಮೇಲೆ ಪ್ರಭಾವ ಬೀರುವುದು.

ಇಂಥ ಜೀವನ ಬೇಡವೆನಿಸಿತು ಶಾರದಾಗೆ. ತಾನೇ ಒಂದಿಷ್ಟು ಕಾಂಪ್ರಮೈಸ್ ಆಗುವ ನಿರ್ಧಾರಕ್ಕೆ ಬಂದಳು.

"ಊಟ ಮಾಡ್ಬನ್ನಿ, ಆಗ್ಲೇ ಮೂರ್ಗಂಟೆ ಆಯ್ತು" ಹೇಳಿದಳು. ಅಂಗಾತ ಮಲಗಿದ್ದವನು ದುರುದುರು ನೋಡಿದ "ನನ್ನ ಊಟ ನನ್ನ ಇಷ್ಟ. ತಿನ್ನೋವಾಗ ನನ್ನ ನೆನಪು ಆಗಲಿಲ್ವಾ ! ಕಾಲೇಜಿಗೆ ಹೋದವರೆಲ್ಲ ಗೋಲ್ಡ್ ಮೆಡಲಿಸ್ಟ್‌ಗಳೇ. ಆ ಅಹಂಕಾರ ನನ್ಮುಂದೆ ಬೇಡ" ದನಿಯೇರಿಸಿದ.

ಇಡೀ ಅವಳ ಮೈಯೇ ಬಿಸಿಯೇರಿದಂತಾಯಿತು. ಮಾತು ಎಲ್ಲಿಂದ... ಎಲ್ಲಿಗೆ ? ತಾನು ಚಿನ್ನದ ಪದಕ ಪಡೆದ ಅತ್ಯಂತ ಪ್ರತಿಭಾವಂತೆ ಎನ್ನುವ ನೆನಪು ಕೂಡ ಅವಳಿಗೆ ಬರುತ್ತಿರಲಿಲ್ಲ. ಅಂಥದ್ದರಲ್ಲಿ ಈ ಹಂಗಿಸುವಿಕೆ ! - ಸುಮ್ಮನೆ ಹೊರಗೆ ಬಂದು ಕೂತಳು. ಆ ಬೆಡ್ ರೂಂನಲ್ಲಿ ಬೆಂಕಿ ಹೊಗೆಯಾಡುತ್ತಿದೆಯೆನ್ನುವ ಅನುಭವವಾಗುತಿತ್ತು ಶಾರದಾಗೆ.

ಆಮೇಲೆ ಹತ್ತೇ ನಿಮಿಷಕ್ಕೆ ಊಟದ ಟೇಬಲ್ಲಿಗೆ ಬಂದ ವಸಂತ ಬಡಿಸಿಕೊಂಡು ಊಟ ಮಾಡಿದ, ಸ್ವಲ್ಪ ಜೋರಾಗಿ ಗೊಣಗುತ್ತಲೇ ಒಂದಿಷ್ಟು ಗೋಪಿಗೆ ಬೈಗಳು. ಕೂತ ಕಡೆ ಕಲ್ಲಾಗಿದ್ದಳು. ಇಂಥ ವಿಶಿಷ್ಟ ಅನುಭವಗಳನ್ನು ಪಡೆಯಲೆಂದು ದಾಂಪತ್ಯ ಜೀವನ ಪ್ರವೇಶಿಸಬೇಕಿತ್ತು.

ಆಮೇಲೆ ಹತ್ತೇ ನಿಮಿಷಕ್ಕೆ ಪ್ರೊಫೆಸರ್ ಶಾಂತಯಿಂದ ಫೋನ್ ಬಂತು "ಒಂದಿಷ್ಟು ಮಾತಾಡೋದಿದೆ, ನಾನೇ ಅಲ್ಲಿಗೆ ಬರ್ಲಾ ? ಅಥವಾ ನೀವೇ ಕಾಲೇಜು ಹತ್ರ ಬರ್ತೀರಾ ?" ಕೇಳಿದಳು. ಆತಂಕ ದುಃಖ ಎರಡು ಇತ್ತು ಆಕೆಯ ದನಿಯಲ್ಲಿ.

"ಯಾಕೆ ತುಂಬ ಗಾಬ್ರಿಯಾಗಿದ್ದೀರಾ ? ಮನೆಗೆ ಬನ್ನಿ" ಆಹ್ವಾನಿಸಿ ಫೋನಿಟ್ಟಳು. ಆ ವೇಳೆಗೆ ಪ್ರತ್ಯಕ್ಷವಾಗಿದ್ದ ವಸಂತ "ಯಾರಿಂದ ಫೋನ್ ?" ಅವನ ಕೇಳಿಕೆಗೆ ಆಶ್ಚರ್ಯಗೊಂಡಳು.

"ಪ್ರೊಫೆಸರ್ ಶಾಂತ ಅವರದ್ದು" ಎಂದಳು.

ವಸಂತ ತನ್ನ ಪಾಡಿಗೆ ತಾನು ಹೋದ. ಕಾರು ಹೊರಟ ನಂತರವೆ

ಅವನು ಹೊರಗೆ ಹೋಗಿದ್ದು ಗೊತ್ತಾಗಿದ್ದು. ಹಸನ್ಮುಖನಾಗಿದ್ದಾಗ ಹೆಂಡತಿಯ ಕೆನ್ನೆ ರಂಗೇರಿಸಿಯೇ ಹೋಗುತ್ತಿದ್ದುದ್ದು. ಬಹುಶಃ ಅಂಥ ದಿನಗಳು ಅಪರೂಪ.

ಪ್ರೊಫೆಸರ್ ಶಾಂತ ತನ್ನ ತಂಗಿಯೊಂದಿಗೆ ಆಟೋದಿಂದ ಇಳಿದರು. ಬಂದು ಇವಳ ಎರಡು ಕೈಗಳನ್ನು ಹಿಡಿದುಕೊಂಡು ಕಣ್ಣೀರಿಟ್ಟರು. "ನನ್ನ ಈ ಸ್ಥಿತಿಯಲ್ಲಿ ಧೈರ್ಯ ತುಂಬೋರೆ ಇಲ್ಲ. ಅದ್ಕೇ ನಿಮ್ಹತ್ರ ಓಡ್ಬಂದೆ. ಪ್ಲೀಸ್ ಹೆಲ್ಪ್ ಮಿ".

ಶಾಂತ ಅವಳ ಕೈಗಳನ್ನು ಎಷ್ಟು ಭದ್ರವಾಗಿ ಹಿಡಿದುಕೊಂಡಿದ್ದಳೆಂದರೇ, ಕೈಗಳು ಕೆಂಪಾಗಿ ನೋವೆನಿಸಿತು. ಅಷ್ಟೊಂದು ಎಕ್ಸೈಟ್ ಆಗಿದ್ದರು ಆಕೆ. ಇವರಿಬ್ಬರನ್ನು ನೋಡುತ್ತ ನಿಂತಿದ್ದಳು ಅವಳ ತಂಗಿ ಲಕ್ಷ್ಮಿ.

ಮುಂದಿನ ರೂಮಿಗೆ ಶಾಂತನ ಕರೆದೊಯ್ದು ಕೂಡಿಸಿ ಬಂದ ಶಾರದ, ಲಕ್ಷ್ಮಿನ ಹಾಲ್‌ನಲ್ಲಿದ್ದ ಸೋಫಾ ಮೇಲೆ ಕೂಡಿಸಿ ಸುಧಾ, ತರಂಗ ಕೊಟ್ಟು "ಒದ್ಕೊಂಡು... ಕೂತಿರು" ಹೇಳಿ ಬಂದಳು.

ಶಾಂತ ಅತ್ತು ಅತ್ತು ಕಣ್ಣುಜ್ಜುತ್ತಿದ್ದರು. ವಯಸ್ಸಿನ ತಾರತಮ್ಯವೋ, ಅವಳು ಈ ಕಾಲೇಜಿನಲ್ಲಿ ಓದುತ್ತಿದ್ದಾಗ ಅಧ್ಯಾಪಕಿಯಾಗಿದ್ದರೆಂಬ ಗೌರವವೋ, ಹೆಚ್ಚು ಸ್ನೇಹ ಬೆಳೆದಿರಲಿಲ್ಲ ಅವರಿಬ್ಬರಲ್ಲಿ.

"ಈಗ್ಹೇಳಿ ಮೇಡಮ್, ಏನು ವಿಷ್ಯ ?" ಒತ್ತಾಯಿಸಿದಳು.

ಪ್ರೊಫೆಸರ್ ರಂಗೇಗೌಡರು ಮಾಧವಿಯನ್ನು ಮದುವೆಯಾಗುತ್ತಿದ್ದಾರೆನ್ನುವ ಸುದ್ದಿ. ಜೊತೆ ಜೊತೆಯಾಗಿ ಓಡಾಡುತ್ತಿದ್ದುದು ಎಲ್ಲರಿಗೂ ಗೊತ್ತು. ಮಾಧವಿ ತುಂಬ ಬೋಲ್ಡ್ ಹುಡುಗಿ, ಯಾವುದೇ ವಿಷಯವನ್ನಾಗಲಿ ನೇರವಾಗಿ ಚರ್ಚಿಸಬಲ್ಲಳು.

"ಇದು ಬರೀ ರೂಮರ್ ಇರ್ಬಹ್ದು. ಐವತ್ತು ಮೇಲ್ಪಟ್ಟ ವಯಸ್ಸಿನ ಪ್ರೊಫೆಸರ್ ಈ ಸಣ್ಣ ಹುಡ್ಗಿಯನ್ನು ಮದ್ವೆಯಾಗುವ ತೀರ್ಮಾನ ತಗೊಳ್ಳಲಾರರು. ಧ್ಯೇಯವಾದಿ, ವಿಚಾರವಾದಿ" ತನ್ನ ಅಭಿಪ್ರಾಯ ವ್ಯಕ್ತಪಡಿಸಿದಳು ಶಾರದ.

ಶಾಂತ ಮತ್ತಷ್ಟು ಕಣ್ಣುಜ್ಜಿ ಕೆಂಪಗೆ ಮಾಡಿಕೊಂಡರು. "ವಿಷ್ಯ ತಿಳಿದಾಗ, ನಾನು ಹಾಗೇ ಅಂದ್ಕೊಂಡೇ. ಆದರೆ ಆ ಹುಡ್ಗಿ ಇನ್ವಿಟೇಷನ್ ಹಂಚುತ್ತಾ ಇದ್ದಾಳೆ, ಕಾಲೇಜಿನಲ್ಲೆಲ್ಲ. ಪ್ರಿನ್ಸಿಪಾಲರೇ ನನ್ಮುಂದೆ ಹಿಡಿದರು ಆಹ್ವಾನ

ಪತ್ರಿಕೆಯನ್ನು. ಅವರು ಪ್ರೊಫೆಸರ್‌ಗೆ ಬುದ್ಧಿ ಹೇಳುವ ಆಶ್ವಾಸನೆ ಕೊಟ್ಟಿದ್ದಾರೆ. ಈ ವಿಷ್ಯದಲ್ಲಿ ನೀವು ನಂಗೆ ಹೆಲ್ಪ್ ಮಾಡ್ಬೇಕು" ಕೇಳಿಕೊಂಡರು.

ಶಾರದ ಮೌನವಹಿಸಿದಳು. ಪ್ರೊಫೆಸರ್ ರಂಗೇಗೌಡರು, ಶಾಂತ ಕಾನೂನು ರೀತ್ಯಾ ಬೇರ್ಪಟ್ಟ ದಂಪತಿಗಳು. ಅಂಥದ್ದರಲ್ಲಿ ಈಕೆಯ ಹೋರಾಟಕ್ಕೆ ಏನು ಫಲ ಸಿಗಬಹುದು ?

."ನಾನೇನು ಹೆಲ್ಪ್ ಮಾಡ್ಬಲ್ಲೆ ?" ದನಿ ತಗ್ಗಿಸಿ ಕೇಳಿದಳು.

ಅತ್ತಿತ್ತ ನೋಡಿ ಕಣ್ಣೊರೆಸಿಕೊಂಡ ಶಾಂತ "ನಿಮ್ತಂದೆ ಆನಂದರಾವ್ ಅವರಲ್ಲಿ ಗೌರವ, ಅಭಿಮಾನವಿದೆ. ಪ್ರೊಫೆಸರ್, ನಿಮ್ಮ ಬಗ್ಗೇನು ಬಹಳ ಒಳ್ಳೆ ಅಭಿಪ್ರಾಯವಿದೆ. ಎಷ್ಟೋ ಸಲ ನನ್ಮುಂದೆನೆ ಅದ್ನ ವ್ಯಕ್ತಪಡಿಸಿದ್ದರು. ಅವ್ರಿಗೆ ಸ್ವಲ್ಪ ಬುದ್ದಿ ಹೇಳಿ" ಕೇಳಿಕೊಂಡರು.

ಸಂಧಿಗ್ಧದಲ್ಲಿ ಸಿಲುಕಿದಂತಾಯಿತು ಶಾರದಾಗೆ. ಅವಳು ಆ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ, ಅಧ್ಯಾಪಕರಾಗಿದ್ದವರು. ಈಗ ಕೊಲೀಗ್ ತನ್ನಂಥ ಚಿಕ್ಕವಳು. ಇಂಥ ವಿಷಯದಲ್ಲಿ ಏನು ಬುದ್ಧಿ ಹೇಳುವುದು?

"ಮೇಡಮ್...." ಎಂದು ಉಗುಳು ನುಂಗಿದಳು.

"ಅವ್ರ ಮೇಲೆ ನಂಗಿನ್ನು ಪ್ರೀತಿ ಇದೆ. ಅದಿನ್ನ ಸತ್ತಿಲ್ಲ. ಇಂದಲ್ಲ ನಾಳೆ ನಾವಿಬ್ರೂ ಒಂದಾಗೋ ಕನಸ್ಸು ಕಾಣ್ತಾ ಇದ್ದಾಗ್ಲೇ ಬಂದು ವಕ್ಕರಿಸಿದೆ, ಈ ಪೆಡಂಭೂತ. ಗಂಟೆಗಟ್ಟಲೇ ಕೂತು ಅವರೊಂದಿಗೆ ಮಾತಾಡ್ತಾಳೆ. ಚರ್ಚಿಸ್ತಾಳೆ, ಅವರಿಬ್ಬರಲ್ಲಿ ಬೌದ್ಧಿಕ ಸಮಾನತೆ ಇದೆಯಂತೆ" ಅತ್ಯಂತ ನೋವು, ವ್ಯಂಗ್ಯದಿಂದ ಹೇಳಿಕೊಂಡರು ಶಾಂತ.

ನಿಸ್ಸಾಹಾಯಕತೆ ಕಾಡಿತು ಶಾರದಳಲ್ಲಿ. ಇಂಥ ಪ್ರಯತ್ನ ಮಾಡುವುದು ಕೂಡ ಹುಚ್ಚುತನವೆನಿಸಿತು. ಒಮ್ಮೆ ಪ್ರೊಫೆಸರ್ ಶಾಂತ ಅವರ ಮೇಲೆ ರೇಗಾಡಿ ಬುದ್ಧಿ ಹೇಳಿದ್ದು ಇಡೀ ಕಾಲೇಜಿಗೆ ಗೊತ್ತು.

ಒಳಗೆ ಹೋಗಿ ನೀರು, ಹಾರ್ಲಿಕ್ಸ್ ತಂದಿತ್ತಳು. ಸ್ವಲ್ಪ ಸಮಾಧಾನಕ್ಕೆ ಬಂದ ನಂತರ ಒಂದು ಪ್ರಶ್ನೆ ಇಟ್ಟಳು.

"ಪ್ರೀತಿ ಅಂದರೇನು ? ಅದಕ್ಕೊಂದು ಡೆಫೆನೇಷನ್ ಕೊಡಿ. ಓದು, ಸಾಹಿತ್ಯ, ತತ್ವಶಾಸ್ತ್ರಗಳ ಬಗ್ಗೆ ಮಾತಾಡುವ ಪ್ರೊಫೆಸರ್ ಜೀವಂತ ಮನುಷ್ಯರ ವಿಷಯದಲ್ಲಿ ಹೆಚ್ಚಾಗಿ ಚಿಂತಿಸುವುದಿಲ್ಲವೆನಿಸುತ್ತೆ. ಅವರವ್ರ ದೃಷ್ಟಿಕೋನ ಅವರವರದು. ನೀವು ಈ ಶತಮಾನದ ಕೊನೆಯವರ್ಗೂ ಕಾದರೂ ಅವ್ರು

ನಿಮ್ಮತ್ರ ತಿರ್ಗಿ ನೋಡಲಾರರು. ಯಾಕೆ ಅಂಥ ಆಸೆ ಇಟ್ಕೋತೀರಾ?" ಕೇಳಿದಳು.

ಪ್ರೊಫೆಸರ್ ಶಾಂತ ಗಳಗಳ ಅತ್ತರು. ಅಷ್ಟೊಂದು ವಿದ್ಯಾರ್ಥಿಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಂಡು ಪಾಠ ಮಾಡುವ ಆಕೆ ಆಕಾಶದಲ್ಲಿರುವ ಚಂದ್ರನಿಗೆ ಕೈ ಚಾಚುವಂತಿತ್ತು. ಅವರಿಬ್ಬರ ನಡುವೆ ಅಷ್ಟೊಂದು ಅಂತರವಿದೆಯೆಂದು ರಂಗೇಗೌಡರೇ ಹೇಳಿದ್ದರು. ಹಾಗೆಂದು ಶಾಂತನ ದ್ವೇಷಿಸುವ ಮಟ್ಟದವರಲ್ಲ, ಆ ದಿನಗಳ ನೆನಪು ಕೂಡ ಇಷ್ಟವಾಗದು.

ಬಹಳ ಹೊತ್ತು ಇಬ್ಬರು ಮಾತಾಡಿದರು. ಶಾಂತರ ಬಡಬಡಿಕೆ ಒಂದು ಹಂತದಲ್ಲಿ ನಿಂತು ನಂತರ ಸರಾಗವಾಗಿ ವಿವೇಕಿಯಂತೆ ಸಂಭಾಷಣೆಗೆ ತೊಡಗಿದರು.

"ನೀನು ನಂಗಿಂತ ಚಿಕ್ಕವಳಾದ್ರೂ ಬುದ್ಧಿವಂತೆ. ಆದಷ್ಟು ಅಂಥ ಕನಸ್ಸನ್ನು ಕಾಣೋದು ಬಿಡ್ತೀನಿ. ಆದರೆ ಮೊನ್ನೆ ಮೊನ್ನೆ ಕಾಲೇಜಿಗೆ ಕಾಲಿಟ್ಟ ಆ ಪುಟ್ಟ ಹುಡ್ಗಿಯ ತಲೆ ಕೆಡ್ಸಿದ್ದಾರೆ".

ಆ ಆಪಾದನೆಯನ್ನು ತಳ್ಳಿಹಾಕಿದಳು ಶಾರದ.

"ಪ್ರೊಫೆಸರ್ ಅಷ್ಟು ಕೆಳದರ್ಜೆಯ ಮನುಷ್ಯನಲ್ಲ. ಗತ್ತು, ಮಾತು, ವಾದದ ವೈಖರಿ, ವಿಚಾರ ಮಂಡಿಸುವ ರೀತಿ ಕೆಲವು ಅಭಿಮಾನಿಗಳನ್ನು ಹುಟ್ಟು ಹಾಕಿದೆ. ಅಂಥವರಲ್ಲಿ ಮಾಧವಿ ಒಬ್ಬರಾಗಿರಬೇಕು. ಇನ್ನು ನಾಲ್ಕು ಹೆಜ್ಜೆ ಮುಂದೆ ಹೋಗಿದ್ದಾಳೆ. ಪ್ರೊಫೆಸರದು ನಿರಾಕರಿಸಲಾರದ ದೌರ್ಬಲ್ಯ ಅಷ್ಟೆ. ಅವರವ್ರ ಆಲೋಚನೆಗೆ ಬಿಡಿ" ಒಂದು ಮುಕ್ತಾಯಕ್ಕೆ ತಂದಳು.

ಶಾಂತ ಸುಮ್ಮನೆ ಕೂತುಬಿಟ್ಟರು. ಭಾವನಾವೇಗದ ಪ್ರವಾಹಕ್ಕೆ ಒಂದು ಅಣೆಕಟ್ಟು ಹಾಕಿ ನಿಲ್ಲಿಸಿದಂತಾಗಿತ್ತು. ಮನಸ್ಸು ವರ್ತಮಾನವನ್ನು ಸುತ್ತಿ ಬಂತು. ತಾನು ಹೇಗೆ ಅಂಥ ಕನಸ್ಸನ್ನು ಕಂಡೆ ? ಪ್ರೊಫೆಸರ್ ಜೊತೆಗೂಡಿ ಬಾಳ್ವೆ ನಡೆಸಲು ಸಾಧ್ಯವೇ?

ಸಾಕಷ್ಟು ಹೊತ್ತು ಮಾತಾಡದೆ ಕೂತರು ಶಾಂತ. ವಿಚಾರದ ಅತ್ಯುತಪ್ಪತೆಯ ಸ್ಥಿತಿಯಲ್ಲಿ ತನಗೇ ನಂಬಿಕೆ ಇಲ್ಲವೆಂದು ಪ್ರೊಫೆಸರ್ ಬಳಿ ವಾದ ಮಾಡಿದ್ದಳು. ಗೆಲವು ತಾನಂತೆ ಒಲಾಡಿದ್ದರೂ ಜಯ ಅವರನ್ನೇ ಅಪ್ಪುತಿತ್ತು.

"ತುಂಬ ಥ್ಯಾಂಕ್ಯೂ.... ಶಾರದ. ಇದ್ನೆಲ್ಲ ಅಮ್ಮನ ಬಳಿ ಹೇಳಿಕೊಳ್ಳೋಕೆ ಭಯ. ಅಕ್ಕನಿಗೆ ಇದೆಲ್ಲ ಅರ್ಥವೇ ಆಗೋಲ್ಲ. ಇನ್ನು ನಮ್ಮ ಲಕ್ಷ್ಮಿಗೆ ಹೇಳಿದರೆ ಅರ್ಥವಾಗೋಲ್ಲ. ಸಹೋದ್ಯೋಗಿಗಳಿಗೆ ಹೇಳ್ಕೊಂಡ್ರೆ..... ನಗೆಪಾಟಲು. ವಿಚಿತ್ರವಾದ ಸ್ಥಿತಿಯಲ್ಲಿದ್ದೆ. ಈಗ ಒಂದಿಷ್ಟು ನೆಮ್ದಿ ಆಯ್ತು. ನಿಮ್ಮಲ್ಲಿ ದೃಢವಾದ ಸಂಕಲ್ಪ ಶಕ್ತಿ ಇದೆ. ಮಾತಿನಲ್ಲಿ ತೂಕವಿದೆ. ಬರ್ತೀನಿ" ಮೇಲೆದ್ದಳು.

ಹಾಲ್‌ಗೆ ಕರೆದೊಯ್ದು ಕೂಡಿಸಿ, "ಏನಾದ್ರೂ ತಿಂಡಿ ಮಾಡ್ತೀನಿ. ಅಪರೂಪಕ್ಕೆ ಬಂದಿದ್ದೀರಿ" ಹೊರಟಾಗ ಶಾಂತ ತಡೆದರು "ಹೊಸ್ದಾಗಿ ಏನು ಮಾಡೋದ್ಬೇಡ. ಇಡೀ ದಿನ ಏನು ತಿಂದಿಲ್ಲ. ಏನಿದ್ದರೇ ಅದೇ ಕೊಡಿ" ಸರಳವಾಗಿ ಹೇಳಿದರು.

ಡೈನಿಂಗ್ ಹಾಲ್‌ಗೆ ಹೋಗಿ ಇಬ್ಬರಿಗೆ ಆಗುವಷ್ಟು ಅಡಿಗೆ ಇದೆಯೆಂದು ಖಾತರಿಪಡಿಸಿಕೊಂಡ ನಂತರ, ಅವರನ್ನು ಕರೆದೊಯ್ದಳು. ಸಿಂಕ್‌ನಲ್ಲಿ ಕೈ ತೊಳೆದ ನಂತರ ಟವಲು ಕೊಟ್ಟಳು.

"ನಮ್ಮಮ್ಮ ಗುಡ್ ಕುಕ್, ನಮ್ಗೆ ಸರ್ಯಾಗಿ ಅಡಿಗೆ ಮಾಡೋಕೆ ಬರೋಲ್ಲ. ನಮ್ಮಿಬ್ರಗಿಂತ ಲಕ್ಷ್ಮಿ ಪರ್ವಾಗಿಲ್ಲ. ನಮ್ಮಕ್ಕನಿಗೆ ಇಂಥದ್ದೆ ಇರ್ಬೇಕು, ಇದ್ನೆ ತಿನ್ನಬೇಕೂಂತ ಅನ್ನೋದೇನಿಲ್ಲ. ಹೊಟ್ಟೆ ಹಸಿದಾಗ ಏನಾದರೂ ಇದ್ದರಾಯ್ತು. ಮತ್ತೆ ಹಸಿವಾಗೋವರ್ಗೂ ಆ ಕಡೆ ಗಮನ ಕೊಡೋಲ್ಲ" ಶಾಂತ ನೋಡುತ್ತಲೇ ಉಪ್ಪಿನಕಾಯಿ ರುಚಿ ನೋಡಿದರು.

ಹುಳಿ, ತಿಳಿ ಸಾರು, ಒಂದು ಪಲ್ಯ ಇಷ್ಟನ್ನೇ ಬಡಿಸಿದ್ದು. ಅಕ್ಕ, ತಂಗಿ ಸಂಕೋಚವಿಲ್ಲದೆ ಊಟ ಮಾಡಿದರು. ಆ ವೇಳೆಗೆ ವಿಶ್ರಾಂತಿ ಮುಗಿಸಿ ರೂಮಿನಿಂದ ಹೊರ ಬಂದ ಕಾಶೀಪತಿಗಳು ಆತ್ಮೀಯವಾಗಿ ಮಾತಾಡಿಸಿದರು.

ಹೊರಡುವ ಮುನ್ನ ಪ್ರೊಫೆಸರ್ ಶಾಂತ ನೆನಪಿಸಿಕೊಂಡಂತೆ "ನಿಮ್ಮ ಹಸ್ಬೆಂಡ್‌ನ ಕರೀರಿ. ರಿಸೆಪ್ಷನ್‌ನಲ್ಲಿ ನೋಡಿದ್ದು. ಮುಖ ಪರಿಚಯವೆ ಮರ್‍ತುಹೋಗುತ್ತೆ" ಹೇಳಿದರು.

ಶಾರದ ರೂಮಿಗೆ ಹೋದಳು. ವಸಂತನದು ನಿದ್ದೆಯಲ್ಲ ನಟನೆಯೆಂದು ಅವಳ ಅರಿವಿಗೆ ಬಂತು.

"ಪ್ರೊಫೆಸರ್ ಶಾಂತ ಮೇಡಮ್ ಬಂದಿದ್ದಾರೆ. ನಿಮ್ಮನ್ನ

ಮಾತಾಡಿಸ್ಬೇಕಂತೆ" ತೋಳು ಮೇಲೆ ಕೈಯಿಟ್ಟು ಹೇಳಿದಳು. ಪಕ್ಕಕ್ಕೆ ತಿರುಗಿದವನು ಒಮ್ಮೆಲೆ ಅವಳತ್ತ ಗಕ್ಕನೆ ನೋಟ ಹರಿಸಿದ. ಚಿರತೆಯ ಕಣ್ಣೋಟವೆನಿಸಿದಾಗ ಅವಳೆದೆ ಝಲ್ಲೆಂದಿತು.

"ಮಲಗಿದ್ದವರ್ನ ಡಿಸ್ಟರ್ಬ್ ಮಾಡ್ಬಾರ್ದೂಂತ ಕೂಡ ಗೊತ್ತಿಲ್ಲ. ನಿಂಗೆ ಕಾಮನ್‌ಸೆನ್ಸ್ ಪಾಠ ಹೇಳಿ ಕೊಡ್ಬೇಕು, ಡ್ಯಾಮಿಟ್..." ಗದರಿದ.

ಅವಳ ಕಣ್ಣಿಂದ ಫಳಕ್ಕೆಂದ ಹನಿಗಳು ಮುತ್ತುಗಳಂತೆ ಕೆನ್ನೆಯ ಮೇಲೆ ಜಾರಿಯೇ ಬಿಟ್ಟಿತು. ಇದನ್ನು ಸೇತುರಾಮ್ ನೋಡಿದ್ದರೆ ಎದೆಯೊಡೆದು ಪ್ರಾಣ ಬಿಡುತ್ತಿದ್ದರು. ಗಹಗಹಿಸಿದ ಅವನ ಮನ ತಾತ್ಕಾಲಿಕವಾಗಿ ನೊಂದಿತು. ಕಣ್ಣೀರು ತೊಡೆದುಕೊಂಡು ಹೊರ ಬಂದಳು.

"ಸಾರಿ ಮೇಡಮ್, ಅವ್ರು ನಿದ್ದೆಯಲ್ಲಿದ್ದಾರೆ."

ಶಾರದ ಹೇಳಿದ್ದು ಅಪ್ಪಟ ಸುಳ್ಳೆಂದು ಕಾಶೀಪತಿಗಳಿಗೆ ಮಾತ್ರ ಗೊತ್ತಾಯಿತು. ಕೋಪದಿಂದ ಅವುಡುಗಳನ್ನು ಕಚ್ಚಿಡಿದರು. ರಪರಪನೆ ಕೆನ್ನೆಗೆ ತಟ್ಟಿಬಿಡಲೇ ? ಹಾಗೇ ಮಾಡಲು ತಮ್ಮಿಂದ ಸಾಧ್ಯವೇ?

ಗೋಪಿ ಆಟೋ ಸ್ಟಾಂಡ್‌ಗೆ ಹೋಗಿ ಆಟೋ ತಂದ. ಶಾರದ ಕೈ ಹಿಡಿದು ಕೃತಜ್ಞತೆಯ ನೋಟ ಹರಿಸಿದರು ಶಾಂತ. ಪ್ರಪಾತವೇ ನುಗ್ಗಿ ಬರುತ್ತಿದೆಯೆಂದು ಭಯಗ್ರಸ್ತರಾಗಿ, ದುಃಖದಿಂದ ಬಂದ ಆಕೆ ಹಗುರವಾದ ಮನಸ್ಥಿತಿಯಿಂದ ಹಿಂದಿರುಗಿದರು.

ಕಾಶೀಪತಿಗಳು ಕಾಫೀ ಮುಗಿಸಿಕೊಂಡು ಕ್ಲಬ್‌ಗೆ ಹೋಗುವ ಮುನ್ನ ಒಮ್ಮೆ ರೂಮಿನಲ್ಲಿ ಇಣುಕಿ "ವಸಂತ, ಹುಷಾರಾಗಿದ್ದೀಯಾ?" ಕೇಳಿದರು. ಇಡೀ ದಿನ ಎಂಗೇಜ್ ಎಂದು ಹೇಳಿದವನು ಪೂರ್ತಾದಿನ ಮನೆಯಲ್ಲೇ ಇದ್ದ.

"ಏನಿಲ್ಲ, ಒಂದಿಷ್ಟು ತಲೆ ನೋವು" ಎಂದು ಮಗ್ಗಲು ಬದಲಾಯಿಸಿದ. "ಒಂದ್ಮಾತ್ರೆ ತಗೊಂಡು ಕಾಫೀ ಕುಡಿ ಎಲ್ಲಾ ಸರ್ಹ್ಯೋಗುತ್ತೆ." ಹೇಳಿ ತಮ್ಮ ಪಾಡಿಗೆ ತಾವು ಹೋದರು.

ಎರಡು ಸಲ ರೂಮಿನವರೆಗೂ ಹೋದವಳೇ ಹಿಂದಕ್ಕೆ ಬಂದ ಶಾರದ, ಮತ್ತೆ ಅಮೃತಾಂಜನ ಹಿಡಿದು ಹೋಗಿ 'ಒಂದಿಷ್ಟು ಅಮೃತಾಂಜನ ಹಚ್ಚೇನಿ, ಬೇಗ ಕಮ್ಮಿ ಆಗುತ್ತೆ ನಯವಾಗಿ ಹೇಳಿದಳು.'

"ನಂಗೆ ಬೇಡ, ನೀನೇ ಹಚ್ಕೊಂಡು ಮಲಕ್ಕೋ!" ತಟ್ಟನೇ ಎದ್ದು

ಹೋದ. ಹೇಗೆ ಇವನನ್ನು ಸಮಾಧಾನಿಸುವುದು? ನಗು ನಗುತ್ತಾ ನೋಡಿಕೊಳ್ಳುವುದು? ಇಡೀ ಜಗತ್ತೆ ಅವಳ ತಲೆಯ ಮೇಲೊರಗಿ ದಂತಾಯಿತು.

ಬದುಕು ತೀರಾ ಶೂನ್ಯವೆನಿಸಿತು, ಬಹಳ ಹೊತ್ತು ಒಂದೇ ಕಡೆ ಕೂತಳು. ಅಷ್ಟರಲ್ಲಿ ಫೋನ್ ಎಚ್ಚರಿಸಿತು. ಅವಳ ಚಿಕ್ಕಪ್ಪ ಇದ್ದರು ಲೈನ್‌ನಲ್ಲಿ.

"ಹೇಗಿದ್ದಿ? ಇಲ್ಲಿಗೆ ಬರೋ ವಿಷ್ಯ ಏನಾಯ್ತು? ನನ್ನ ಫ್ರೆಂಡ್ ಒಬ್ರು ಮುಂಬಯಿನಲ್ಲಿದ್ದಾರೆ. ಅವ್ರ ಮೂಲಕ ವೀಸಾ, ಪಾರ್ಸ್‌ಪೋರ್ಟ್ ರೆಡಿ ಮಾಡಿಸ್ತೀನಿ. ನೀವುಗಳು ಬಂದ್ಮೇಲೆ ಅಪ್ಪ ನನ್ನ ಕಳ್ಸೋದು" ಅಮೇರಿಕನ್ ಶೈಲಿಯ ಇಂಗ್ಲೀಷ್‌ನಲ್ಲಿ ಹೇಳಿದರು.

"ಕಾಲೇಜಿಗೆ ರಜೆ ಬಂದಾಗ ಬರ್ತೀನಿ. ಈ ಸಲದ ವೆಕೇಷನ್ ನಲ್ಲಿಯಂತು ಗ್ಯಾರಂಟಿ" ಪ್ರಯತ್ನ ಪೂರ್ವಕವಾಗಿ ಉತ್ಸಾಹ ತುಂಬಿಕೊಂಡು ಮಾತಾಡಿದಳು. ಆಮೇಲೆ ಸೇತುರಾಮ್ ಒಂದು ಸಲಹೆ ಕೊಟ್ಟರು "ನೀನು ಪಿ.ಯು.ಸಿ ನಲ್ಲಿದ್ದಾಗ ಬರೆದ ಪದ್ಯಗಳನ್ನೆಲ್ಲ ಸೂಟ್‌ಕೇಸ್‌ಗೆ ತುಂಬಿದ್ದೀನಿ. ಒಮ್ಮೆ ಕಣ್ಣಾಡಿಸಿ, ಒಂದಿಷ್ಟು ತಿದ್ದೋ ಕೆಲ್ಸ ಮಾಡಿ ಅಚ್ಚು ಹಾಕ್ಸು. ನಿನ್ನ ಒಂದೆರಡು ಪದ್ಯಗಳನ್ನು ಇಲ್ಲಿನ ಕನ್ನಡ ಸಂಘದ ಶ್ರೀಪತಿಗಳಿಗೆ ಕೊಟ್ಟೆ. ಅವ್ರು ಈ ತಿಂಗಳಿನ ಪತ್ರಿಕೆಯಲ್ಲಿ ಅಚ್ಚು ಹಾಕುತ್ತಾರಂತೆ. ಅವರು ಅದ್ನೆಲ್ಲ ಓದಿ ತುಂಬ ಹೊಗಳಿದ್ರು" ಎಂದರು. ಶೂನ್ಯದಲ್ಲಿ ಬದುಕುತ್ತಿದ್ದವಳ ಮಧ್ಯೆ ಒಂದು ಸಣ್ಣ ಕ್ಯಾಂಡಲ್ ಹಚ್ಚಿದಂತಾಯಿತು. ಅದರ ಪ್ರಕಾಶದಲ್ಲಿ ಸಮಸ್ತವನ್ನು ನೋಡುವಂತಾಯಿತು.

"ಯಾರ್ದ್ದು ಫೋನ್ ?" ವಿಚಾರಿಸಿದ ಬಂದವನು.

ಅವನು ಕೇಳದಿದ್ದರೂ ಹೇಳಬೇಕೆಂಬ ಉದ್ದೇಶ ಶಾರದಾಗೆ ಇತ್ತು. "ಅಂಕಲ್ ಫೋನ್ ಮಾಡಿದ್ದು, ಅವ್ರ ಆಹ್ವಾನವನ್ನು ನೆನಪಿಸಿದ್ರು", ಎಂದಳು.

"ಮೂರೂವರೆ ನಿಮಿಷದಷ್ಟು ಕಾಲ ಮಾತಾಡಿದ್ದು ಇದೇನಾ ?" ಅಂತರಾಳದಲ್ಲಿದ್ದುದ್ದನ್ನು ಬಗೆದು ಹೊರ ತೆಗೆಯುವಂತಿತ್ತು ಅವನ ಪ್ರಶ್ನೆಯ ಧಾಟಿ "ನಿಮ್ಮ ಪ್ರಶ್ನೆಗೆ ಉತ್ತರ ಕಷ್ಟ. ನೀವು ಇಲ್ಬಂದು ಕೂತು ಎಷ್ಟೊತ್ತು ಆಯ್ತು ? ಅವೆಲ್ಲ ಬರೀ ಸಿಲ್ಲಿ ಪ್ರಶ್ನೆಗಳು" ನಿರಾಂತಕವಾಗಿ ನುಡಿದಳು.

"ನಂದು ಸಿಲ್ಲಿ ಪ್ರಶ್ನೆಗಳಾ ? ಮೈಂಡ್ ಯುವರ್ ಟಂಗ್ ಇಷ್ಟೊಂದು

ದಾಕ್ಷಿಣ್ಯದ ಹೆಣ್ಣೆಂತ ಅಂದುಕೊಳ್ಳಲಿಲ್ಲ. ಬಿಹೇವ್ ಯುವರ್‌ಸೇಲ್ಫ್" ಹ್ಲೂಂಕರಿಸಿದ.

ಗೋಪಿ ಬಂದು ಗುಬ್ಬಚ್ಚಿಯಂತೆ ಗೋಡೆಗೊರಗಿ ನಿಂತಿದ್ದು ನೋಡಿ ಎದ್ದು ಹೋಗಿ ಕಾಂಪೌಂಡ್‌ನಲ್ಲಿ ನಿಂತಳು. ಪ್ರಕೃತಿಯ ಸಾನಿಧ್ಯ ಸದಾ ಸುಖಕರ, ಆಹ್ಲಾದಕರ. ಹತ್ತೇ ನಿಮಿಷದಲ್ಲಿ ದಡದಢ ಹೊರ ಬಂದವನು ಕಾರು ಹತ್ತಿದ. ವೇಗದಿಂದ ಕಣ್ಮರೆಯಾಯಿತು.

ಶಾರದ ನಿಂತೇ ಇದ್ದಳು.

"ಅಕ್ಕ, ನೀವು ತುಂಬ .... ತುಂಬ ಒಳ್ಳೆಯೋರು, ಆದ್ರೂ ಅಣ್ಣ ಯಾಕೆ ರೇಗಾಡ್ತಾರೆ?" ಗೋಪಿ ಭಯಪಡುತ್ತಲೇ ಕೇಳಿದಾಗ ಕೋಪಕ್ಕಿಂತ ಸಂಕೋಚವಾಯಿತು. ಈ ಮನುಷ್ಯ ಯಾಕೆ ಸಮಸ್ಯೆಯಾಗುತ್ತಿದ್ದಾನೆ ? ತನ್ನ ಮೇಲೆ ಇಷ್ಟವಿರಲಿಲ್ಲವಾ ? ಬೇರೆ ಯಾರನ್ನಾದರೂ ಮದುವೆಗೆ ಮುನ್ನ ಪ್ರೇಮಿಸಿದ್ದನೇ ? ಇವಕ್ಕೆಲ್ಲ ಉತ್ತರವನ್ನು ವಸಂತ ಹೇಳಬೇಕು.

"ಗೋಪಿ, ಹೋಗಿ ಕೆಲಸ ನೋಡು" ಅವನನ್ನು ಕಳಿಸಿದಳು.

ಆದರೆ ರಾತ್ರಿ ಸ್ವಲ್ಪ ಖುಷಿಯಾಗಿಯೇ ಮನೆಗೆ ಬಂದ ವಸಂತ ದೊಡ್ಡ ಬಾರ್ಡರ್‌ನ ಒಂದು ಕಂಚಿ ಸೀರೆಯ ಜೊತೆ ಎರಡು ಮೈಸೂರು ಸಿಲ್ಕ್ ಸೀರೆಗಳನ್ನು ತಂದಿದ್ದ. ಅವನ ಮುಖದ ಮೇಲೆ ವಿಪರೀತ ಗರ್ವ.

ಊಟದ ಸಮಯದಲ್ಲಿ ತಂದೆಯೊಡನೆ "ವಿಜಯಾ ಕಾಂಪ್ಲೆಕ್ಸ್, ಸ್ಟೇಡಿಯಂ ಕಂಟ್ರಾಕ್ಟ್ ನಮ್ಮ ಕಂಪನಿಗೆ ಸಿಕ್ಕಿದೆ" ಹರ್ಷದಿಂದ ಹೇಳಿದ.

ಕಾಶೀಪತಿಗಳಿಗೂ ಸಂತೋಷವೇ. ಕನ್‌ಸ್ಟ್ರಕ್ಷನ್ ಕ್ಷೇತ್ರದಲ್ಲಿ ಅವರ ನಿರೀಕ್ಷೆಗೂ ಮೀರಿ ಬೆಳೆಯುತ್ತಿರುವುದು ಆನಂದದಾಯಕ. ಸಮಾಜದಲ್ಲಿ ಪ್ರತಿಷ್ಠೆ ಬೆಳೆದಿದೆ. ಹೊರ ಜಗತ್ತಿನಲ್ಲೂ ಕೂಡ ತಾನೊಬ್ಬ ಪ್ರತಿಷ್ಠಿತ ವ್ಯಕ್ತಿಯೆನ್ನುವಂತೆ ನಡೆದುಕೊಳ್ಳುತ್ತಿದ್ದ.

"ತುಂಬ... ತುಂಬ..... ಸಂತೋಷ. ಶಾರದ, ನೋಡಿದ್ಯಾ" ಹೆಮ್ಮೆಯಿಂದ ಹೇಳಿದಾಗ ಅಭಿಮಾನದಿಂದ ಗಂಡನ ಕಡೆ ನೋಡಿದಳು. ದಾಂಪತ್ಯದ ಅರ್ಥ ಕಷ್ಟ, ಸುಖಗಳಲ್ಲಿ ಪಾಲು ಮಾತ್ರವಲ್ಲ ಒಬ್ಬರ ಭಾವನೆ, ಆಸೆ, ಆಕಾಂಕ್ಷೆಗಳನ್ನು ಇನ್ನೊಬ್ಬರು ಗೌರವಿಸಬೇಕು. ಇದು ಸೇತುರಾಮ್ ಅವಳಿಗೆ ಹೇಳಿಕೊಟ್ಟ ಪಾಠ.

"ಸೀರೆಗಳನ್ನು ನೋಡಿದ್ಯಾ?" ಊಟದ ಟೇಬಲ್ಲು ಎನ್ನುವುದನ್ನು ಮರೆತು

ಟೇಬಲ್ಲು ಕೆಳಗಿನ ಅವನ ಕಾಲುಗಳು ಕುಣಿದವು. "ಇಲ್ಲ...." ಅವಳದು ತಣ್ಣನೆಯ ಪ್ರತಿಕ್ರಿಯೆ. ಒಂದು ಸಂಸಾರಿಕ ಚಲನಚಿತ್ರದ ದೃಶ್ಯದಂತೆ ತಟ್ಟನೆ ಓಡಿ ಆ ಸೀರೆಗಳನ್ನು ಬಿಚ್ಚಿ ಮೈಮೇಲೆ ಹಾಕಿಕೊಂಡು ತಂದ ಗಂಡನ ಕೊರಳಿಗೆ ಹಾರವಾಗುವ ಚಿತ್ರ ಅವನ ಕಲ್ಪನೆಯಲ್ಲಿ ಇತ್ತು.

ವಸಂತನಿಗೆ ಕೋಪ ಬಂತು. ಆದರೆ ಪ್ರದರ್ಶಿಸಲು ಹೋಗಲಿಲ್ಲ. ಬಹಳ ಒಳ್ಳೆಯ ಮೂಡ್‌ನಲ್ಲಿದ್ದ ಹೆಂಡತಿಯ ಪೂರ್ಣ ಸಹಕಾರವಿಲ್ಲದಿದ್ದರೇ ಸುಖ ಬರೀ ಮರೀಚಿಕೆಯೆಂದು ಅವನ ಅನುಭವಕ್ಕೆ ಬಂದಿತ್ತು.

ಬೆಡ್‌ರೂಂಗೆ ಬಂದ ನಂತರ ಒಂದೊಂದು ಸೀರೆಯನ್ನು ಬಿಚ್ಚಿ ಒಡಲು, ಸೆರಗನ್ನು ತೋರಿಸಿ ಅದರ ಬೆಲೆಯನ್ನು ಒಂದು ಹತ್ತು ಸಲವಾದರೂ ಜಪಿಸಿದ.

"ಎಷ್ಟೊಂದು ಗ್ರಾಂಡಾಗಿ ಕಾಣುತ್ತೆ, ಗೊತ್ತಾ ! ಈ ಸೀರೆಯಿಂದ್ಲೆ ನಮ್ಮ ಸ್ಟೇಟಸ್ ರೆಕಗ್ನೈಸ್ ಆಗೋದು" ಸಮಾಜದ ಬಗ್ಗೆ ಬಹಳಷ್ಟು ಕೊರೆದ.

ದಟ್ಟವಾದ ಬಣ್ಣ, ದೊಡ್ಡ ಅಂಚು ಅವಳಿಗೆ ಸಾಧಾರಣವಾಗಿ ಇಷ್ಟವಾಗದು. ಸೀತುರಾಮ್ ಮದುವೆಯಲ್ಲಿ ಕೂಡ ಅವಳು ಇಷ್ಟಪಡುವ ಸೀರೆಗಳನ್ನು ಮಾತ್ರ ಖರೀದಿಸಿದ್ದರು.

"ನಾಳೆ ಕಾಲೇಜಿಗೆ ಉಟ್ಟುಕೊಂಡ್ಹೋಗು" ಎಂದ.

ಎದೆಯ ಮೇಲೆ ಕೈ ಇಟ್ಟುಕೊಂಡಳು. ಕಾಲೇಜಿನ ಕೆಲವು ವಿದ್ಯಾರ್ಥಿಗಳು ಎಷ್ಟು ಘಟಿಂಗರೆಂದು ಗೊತ್ತು. ಅವರ ಹಾಸ್ಯ ಯಾವ ಮಟ್ಟ ಮುಟ್ಟುತ್ತದೆಯೋ ಹೇಳಲಾಗದು.

ಬಹಳ ದಿನಗಳ ನಂತರ ಪ್ರಶ್ನೆ, ಕಿರಿಕಿರಿಗಳು ಇಲ್ಲದ ಒಂದು ಒಳ್ಳೆಯ ರಾತ್ರಿಯೇ ದಂಪತಿಗಳಿಗೆ, ಬೆಳಿಗ್ಗೆ ಏಳುವಾಗಲೂ ಅವಳನ್ನು ಆವರಿಸಿಯೇ ಇದ್ದ ವಸಂತ ಬೇಸರಿಸಿದ.

"ಬಿಡಿ, ಏಳಾಯ್ತು ! ಅಂಕಲ್ ವಾಕ್ ಮುಗ್ಸಿಕೊಂಡು ಬರೋ ವೇಳೆಗೆ ಕಾಫೀ ರೆಡಿಯಾಗಿರಬೇಕು". ಅವನ ಕೈಯನ್ನು ಸರಿಸಿ ಹೊರ ಬಂದಳು. ದಿಂಬನ್ನು ಅಷ್ಟು ದೂರಕ್ಕೆ ಎಸೆದ ವಸಂತ "ನಾನು ವಿವಾಹವಾಗಿರೋದು ನಂಗೊಸ್ಕರ" ಸಿಡಿಗುಟ್ಟಿದ. ಅವಮಾಯಕನಾಗಿ ಕಾಣಲಿಲ್ಲ. ಮೂರ್ಖತನವೆನಿಸಿತು.

ಸ್ನಾನ ಮುಗಿಸಿ ಬರುವ ವೇಳೆಗೆ ಗೋಪಿ ಕೈ ಹಿಡಿದು ನಿಂತಿದ್ದ. ಈಗ

ಅವಳಿಗೆ ಅರ್ಥವಾಯಿತು. ಸೊಂಟಕ್ಕೆ ಸೆರಗನ್ನು ಸಿಕ್ಕಿಸಿ ಈರುಳ್ಳಿ, ಹಸಿ ಮೆಣಸಿನಕಾಯಿ ಹೆಚ್ಚಿ ಉಪ್ಪಿಟ್ಟಿಗೆ ಇಟ್ಟು ಕಾಫೀ ಬೆರೆಸಿ ಗೋಪಿಗೊಂದು ಕಪ್ ಕೊಟ್ಟು ಮತ್ತೊಂದು ಕಪ್‌ನ ಆಗತಾನೇ ಮನೆಗೆ ಬಂದ ಕಾಶೀಪತಿಗಳಿಗೆ ಕೊಟ್ಟು ಇನ್ನೊಂದು ಕಪ್ ತಂದಳು.

"ನೀವ್ಯಾಕೆ, ಮುಂಜಾನೆ ಎದ್ದು ಜಾಗಿಂಗ್‌ಗೆ ಹೋಗ್ಬಾರ್ದು, ಕಾಫೀ ರೆಡಿ ಇದೆ" ಟೀಪಾಯಿ ಮೇಲಿಟ್ಟು ಹೊರ ಬಂದಳು. ವಸಂತನ ಕೊಸರಾಟಗಳು ಆಗ ಬೇಡವೆನಿಸಿತ್ತು.

ಕಾಫೀ ಕುಡಿದು ಪೇಪರ್ ಓದೋದು ಬಿಟ್ಟು ಅಡಿಗೆ ಮನೆಗೆ ಬಂದ ಕಾಶೀಪತಿಗಳು "ಇವ್ನ ಕೈ ವಾಸಿಯಾಗೋವರ್‍ಗೂ ನಾನು ಕುಕ್ ಅಂದ್ಕೋ. ನೀನು ಕಾಫೀ ಕುಡಿದ್ಯಾ ?" ಅವರೇ ಒಂದು ಕಪ್ ಬೆರೆಸಿ ಅವಳಿಗೆ ಕೊಟ್ಟು ತರಕ್ಕಾರಿ ಹೆಚ್ಚಲು ಕೂತರು.

ಅವರ ಸುದ್ದಿಯ ವ್ಯಾಪ್ತಿ ವಿಶಾಲವಾದದ್ದು. ಅಮೆರಿಕಾ ಅಧ್ಯಕ್ಷ ಕ್ಲಿಂಟನ್‌ನಿಂದ ಹಿಡಿದು ನರಹಂತಕ ಕಾಡುಗಳ್ಳ ವೀರಪ್ಪನ್‌ವರೆಗೂ ಮಾತಾಡುತ್ತಿದ್ದರು, ಚರ್ಚಿಸುತ್ತಿದ್ದರು. ಅವಳ ಅಭಿಪ್ರಾಯ ಕೇಳುತ್ತಿದ್ದರು. ಯಾವುದೇ ವಿಷಯವಾದರೂ ಧಾರಾಳವಾಗಿ ಮಾತಾಡಬಲ್ಲ ಮಾತುಗಾರರು.

ಮಾವ, ಸೊಸೆ ಕೂಡಿಯೇ ಅಡಿಗೆ ಮುಗಿಸಿದರು. ಮೇಲಕ್ಕೆ ಕಟ್ಟಿದ್ದ ಕೂದಲನ್ನು ಬಿಚ್ಚಿ ಬೆನ್ನ ಮೇಲೆ ಹರವಿಕೊಂಡು ಅವಸರವಾಗಿ ರೂಮಿಗೆ ಬಂದವಳು ಎರಡೇ ನಿಮಿಷದಲ್ಲಿ ಜಡೆ ಹೆಣೆದುಕೊಂಡಳು.

"ಇಷ್ಟೊಂದು ಉದ್ದ ಜಡೆ ಬೇಕಾ ?" ಪ್ರಶ್ನಿಸಿದ. ಅವಳ ಮಾರುದ್ದ ಜಡೆಯನ್ನು ನೋಡುತ್ತ "ಇಲ್ಲಿ ಬೇಕೂ, ಬೇಡ ಅನ್ನೋ ಪ್ರಶ್ನೆ ಎಲ್ಲಿದೆ ? ಉದ್ದವಾದ ಕೂದಲಿದೆ, ಉದ್ದವಾದ ಜಡೆ ಅಷ್ಟೆ" ಮುಖಕ್ಕೆ ಕ್ರೀಮ್ ಹಚ್ಚುತ್ತ ಹೇಳಿದಳು. ಆ ಕಾಲೇಜಿನಲ್ಲಿ ನಾಲ್ವರು ಮಹಿಳಾ ಪ್ರಾಧ್ಯಾಪಕಿಯರಿದ್ದರು. ಅವರೆಲ್ಲರು ತುಂಡಾಗಿ ಕೂದಲನ್ನು ಕಟ್ ಮಾಡಿಸಿಕೊಂಡು ಕ್ಲಿಪ್ ಹಾಕುತ್ತಿದ್ದವರೇ ಇವಳ ಗಮನ ಆ ಕಡೆ ಹರಿಯುತ್ತಲೇ ಇರಲಿಲ್ಲ. ದಟ್ಟವಾದ ಕೂದಲಿನ ಮೇಲೆ ಒಂದು ರೀತಿಯಲ್ಲಿ ವ್ಯಾಮೋಹ ಕೂಡ.

ಸೋಷಿಯಾಲಜಿ ಡಿಪಾರ್ಟ್‌ಮೆಂಟಿನ ಕನಕ ಕೆಲವೊಮ್ಮೆ "ಉದ್ದದ

ಜಡೆ ಓಲ್ಡ್ ಆಯ್ತು. ಯಾವುದಾದದ್ರೂ ಬ್ಯೂಟಿ ಪಾರ್ಲರ್‌ಗೆ ಹೋದರೆ ನಿಮ್ಮ ನಿಲುವು, ಬಣ್ಣಕ್ಕೆ ಅನುಗುಣವಾಗಿ ಹೇರ್ ಕಟ್ ಮಾಡ್ತಾರೆ. ಅಷ್ಟು ಸಣ್ಣ ರಿಸ್ಕ್ ತಗೊಂಡ್ರೆ... ಮತ್ತಷ್ಟು ಬ್ಯೂಟಿಯಾಗಿ ಕಾಣ್ತೀರಿ" ಇವಳ ಸುಂದರ ನಿಲುವನ್ನು ಗಮನಿಸಿ ಸಲಹೆ ಕೊಟ್ಟಾಗ ನಕ್ಕು ಬಿಟ್ಟಿದ್ದಳು.

"ಸಾರಿ, ನಂಗೆ ಅಂತದಕ್ಕೆ ಟೈಮ್ ಇಲ್ಲ. ನಮ್ಮಮ್ಮ ಅಜ್ಜಿಗೆ ತುಂಬ ಕೂದಲಿತ್ತಂತೆ. ನಂಗೂ ಬಳುವಳಿಯಾಗಿ ಬಂದಿದೆ. ಆರಾಮಾಗಿ ನನ್ನ ಮಟ್ಟಿಗೆ ಜಡೆ ಹೆಣೆದುಕೊಳ್ಳೋಕೆ ಕಡ್ಮೆ ಸಮಯ ಸಾಕು. ಇಲ್ಲಿ ಯಾರ ಉಸಾಬರಿನು ಇಲ್ಲ".

ಕನಕ ಒಂದು ತರಹ ನೋಡಿದ್ದಳು. ಆನಂದರಾವ್ ಬಗ್ಗೆ ಇತರರು ಹೇಳುತ್ತಿದ್ದ ಮಾತುಗಳನ್ನು ಕೇಳಿದ ನಂತರ ಕೆಲವರು ಶಾರದ ಬಳಿ ಮಾತಾಡಲು ಹಿಂಜರಿಯುತ್ತಿದ್ದರು. ಅವಳ ಬೌದ್ಧಿಕ ಸೌಂದರ್ಯದ ಮುಂದೆ ತಾವೆಲ್ಲ ಎಲ್ಲಿ ಸಣ್ಣವರಾಗಿ ಬಿಡುತ್ತೀವೋ ಎನ್ನುವ ಹೆದರಿಕೆ. ಆದರೆ ಅವಳು ತಾನು ಬಹಳ ಬುದ್ಧಿವಂತೆಯೆನ್ನುವಂತೆ ಮಾತಾಡುತ್ತಿರಲಿಲ್ಲ. ಬೇರೆಯವರ ಭಾಷೆಗಿಂತ ಅವಳ ಮಾತುಗಳು ಸರಳವಾಗಿರುತ್ತಿದ್ದವು.

ಮೇಲೆದ್ದ ವಸಂತ ಅಲ್ಲಿಯೇ ಇದ್ದ ನೇರಳೆ ಬಣ್ಣದ ಅಂಗೈಗಿಂತ ಜಾಸ್ತಿ ಜರಿ ಇದ್ದ ಸೀರೆಯನ್ನು ಅವಳ ಭುಜದ ಮೇಲೆ ಹಾಕಿ "ಇವತ್ತು ಇದ್ನ ಉಟ್ಕೊಂಡ್ ಹೋಗು" ಎಂದ. ಅಚ್ಚರಿಯಿಂದ ನೋಡಿದಳು. ಇಷ್ಟು ದೊಡ್ಡ ಸೀರೆಯುಟ್ಟು ಕಾಲೇಜಿಗೆ ಹೋಗಲು ಒಂದು ಕಾರಣ ಬೇಕು. ಅದು ಭಾರದ ಜರಿ ಸೀರೆ ಮುಜುಗರವೆ.

"ಬೇಕಾದ್ರೆ ಉಟ್ಕೊಂಡ್ ನಿಮ್ಮ ಮುಂದೆ ಕೂತ್ಕೋಬಹ್ದು. ಕಾಲೇಜಿಗಂತು ಉಟ್ಕೊಂಡ್ಹೋಗೋಕ್ಕಾಗೋಲ್ಲ. ಎಲ್ಲರ ಮುಖದಲ್ಲಿ ಪ್ರಶ್ನೆಗಳು ಮೂಡಿದರೂ ಕೆಲವರಾದ್ರೂ ಕೇಳ್ತಾರೆ. ಯಾಕೆ ಅಂಥ ಗೊಂದಲ" ಸೀರೆಯನ್ನು ಮಡಚಿ ಹ್ಯಾಂಗರ್‌ಗೂ ಹಾಕಿ ವಾರ್ಡ್‌ರೋಬ್‌ನೊಳಗಿಟ್ಟಳು.

"ನೀನು ಓಬಿಡಿಯೆಂಟ್ ಅಲ್ಲ" ಎಂದ ತೀಕ್ಷ್ಣವಾಗಿ.

"ಹಾಗೆಂದರೇನು ? ನಾನು ಸಮಸ್ಯೆನ ನಿಮ್ಮ ಮುಂದೆ ಇಟ್ಟೆನಲ್ಲ, ಮನೆಯಲ್ಲಿರೋವಾಗ ಉಟ್ಕೊತೀನಿ. ಇಲ್ಲಿ ವಿವಾಹ ಸಮಾರಂಭ ಮುಂತಾದ ಕಡೆ ಹೋಗೋವಾಗ ಉಟ್ಕೋಬಹ್ದು ಧಾರಾಳವಾಗಿ."

ವಸಂತನ ಮೂಗಿನ ಕೋಪದ ಕೆಂಪು ಕಡಿಮೆಯಾಗಲಿಲ್ಲ. ತುಂಬ ದಾಷ್ಟೀಕದ ಹೆಣ್ಣಾಗಿ ಕಂಡಳು. ಅವಳ ಮಾತು, ಭಾವನೆ, ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವ ವಿವೇಕವಿಲ್ಲ ಅವನಿಗೆ.

"ಇವತ್ತು ನೀನು ಉಟ್ಕೊಂಡ್ಹೋಗ್ಬೇಕು. ಹೆಂಡತಿ ಗಂಡನ ಇಷ್ಟಾನಿಷ್ಟಗಳ್ನ ಅರ್ಥ ಮಾಡ್ಕೋಬೇಕು. ಅದು ಸುಖೀ ದಾಂಪತ್ಯ, ಇದು ನಿನ್ನ ಮೈಂಡ್‌ನಲ್ಲಿ ಇರ್ಲಿ" ಕೆನ್ನೆ ಸವರಿ ಟವಲನ್ನು ಹೆಗಲ ಮೇಲೆ ಹಾಕಿಕೊಂಡು ಬಾತ್‌ರೂಮಿಗೆ ಹೋದ.

ಹನ್ನೊಂದು ಸಾವಿರ ಬೆಲೆಯ ದಟ್ಟ ಚಿನ್ನದ ಅಂಚಿದ್ದ ಸೀರೆಯನ್ನು ಉಟ್ಟು ನೆರಿಗೆಗಳ ಸದ್ದು ಮಾಡುತ್ತ ಕಾಲೇಜಿನಲ್ಲಿ ಹೇಗೆ ಪಾಠ ಮಾಡುವುದು? ಅದನ್ನ ಅವಳ ಮನಸ್ಸು ಒಪ್ಪಲಿಲ್ಲ. ತೆಗೆದ ವಾರ್ಡ್‌ರೋಬ್ ಬಾಗಿಲನ್ನು ಮುಚ್ಚಿದಳು.

ಬೇಗ ಬೇಗ ತಿಂಡಿ ಮುಗಿಸಿ ಅಡಿಗೆಯನ್ನು ಟೇಬಲ್ಲು ಮೇಲೆ ಮುಚ್ಚಿಟ್ಟು ರೆಡಿಯಾಗಿ ಹೊರಟು ನಿಂತಾಗಲೂ ವಸಂತ ಬಾತ್ ರೂಮಿನಿಂದ ಬಂದಿರಲಿಲ್ಲ. ಬೇಕಾಗಿಯೇ ನಿಧಾನ ಮಾಡುತ್ತಾನೆನ್ನುವ ಅರಿವು ಅವಳಿಗೆ ಬಂದಿರಲಿಲ್ಲ.

"ಕಾಲೇಜಿಗೆ ಹೋತಾಯ್ತು, ಹೊರಡ್ತಾ ಇದ್ದೀನಿ" ಕೂಗಿ ಹೇಳಿ ಹೊರ ಬಂದಳು. "ಅವ್ನ ಸ್ನಾನ ಮುಗಿದಿಲ್ಲ, ತಾನೇ ! ನಿಧಾನವಾಗಿ ಮಾಡಿಕೊಳ್ಳಿ, ಇಂಜಿನಿಯರ್ ಬಂದು ಕಾಯ್ತ ಇದ್ದಾರೆ, ಆಟೋ ತರಿಸಿದ್ದೀನಿ, ನೀನು ಹೋಗು" ಕಾಶೀಪತಿಗಳೇ ಹೇಳಿದರು.

ಆ ದೊಡ್ಡ ಅಂಚಿನ ಸೀರೆಯೇ ಅಟ್ಟಿಸಿಕೊಂಡು ಬಂದಂತಾಯಿತು. ಪ್ರಿನ್ಸಿಪಾಲರ ರೂಮಿನತ್ತ ಹೊರಟವಳಿಗೆ ಮೊದಲು ಎದುರಾದುದ್ದು ರಂಗೇಗೌಡರು.

"ಗುಡ್ ಮಾರ್ನಿಂಗ್ ಸರ್" ಎಂದಳು.

ವಿಶ್ ಮಾಡಿ ಮುಂದಕ್ಕೆ ಹೊರಟವರು ನಿಂತು "ಶಾರದ, ಒಂದಿಷ್ಟು ಮಾತಾಡೋದಿದೆ, ಯಾವಾಗ ಸಿಕ್ತಿ ?" ಈ ಕಾಲೇಜಿನ ಸ್ಟೂಡೆಂಟ್ ಆಗಿದ್ದವಳು ಎನ್ನುವ ಸ್ನೇಹ, ಸಲಿಗೆ, ಜೊತೆಗೆ ಬುದ್ಧಿವಂತೆ ಎನ್ನುವ ಅಭಿಮಾನ, ಬೇರೆ ವಿಷಯಗಳಲ್ಲಿ ತಲೆ ಹಾಕಳು ಎನ್ನುವ ಗೌರವ ಕೂಡ.

"ಬೆಳಿಗ್ಗೆ ಎರಡು ಪಿರಿಯಡ್ ಇದೆ" ಎಂದಳು ನಿಧಾನವಾಗಿ.

"ಮಧ್ಯಾಹ್ನ ನಾನು, ನೀನು, ಮಾಧವಿ ಚೋ ರೆಸ್ಟೋರೆಂಟ್‌ನಲ್ಲಿ ಜೊತೆಯಾಗಿ ಊಟ ಮಾಡೋಣ" ಸೂಚಿಸಿದರು.

"ಸ್ವಲ್ಪ ಅನುಮಾನಿಸಿದಳು. ಪ್ರೊಫೆಸರ್ ರಂಗೇಗೌಡರು ಕೆಲವರಿಗೆ ಗೌರವ, ಕೆಲವರಿಗೆ ಈರ್ಷೆ, ಸಣ್ಣ ಹುಡುಗಿ ಮಾಧವಿಯನ್ನು ಕಟ್ಟಿಕೊಂಡು ಓಡಾಡುವುದು ಹೆಚ್ಚು ಜನರಿಗೆ ಸೇರಿರಲಿಲ್ಲ".

"ಹೋಗ್ಲಿ ಡಿಪಾರ್ಟ್‌ಮೆಂಟ್ ರೂಂಗೆ ಬಾ. ಮಾಧವಿನು ಇರ್ತಾಳೆ" ಎಂದು ಹೇಳಿ ತಲೆ ಬಗ್ಗಿಸಿಕೊಂಡು, ತಮ್ಮಲ್ಲಿ ತಾವೇ ಮಾತಾಡಿಕೊಳ್ಳುತ್ತ ಹೊರಟರು.

ಇವಳು ಹೋಗುವುದೇನು ಬೇಕಿರಲಿಲ್ಲ. ಮಾಧವಿನೆ ಬಂದು ಕಾಯುತ್ತಿದ್ದಳು ಕ್ಲಾಸ್ ರೂಮಿನಿಂದ ಹೊರ ಬರಲು. ಒಂದು ಗುಂಪಿನ ಹುಡುಗರು 'ಓ' ಎಂದರು ನಂತರ ಸುಮ್ಮನಾದರು. ವಯಸ್ಸಿನಲ್ಲಿ ಶಾರದ ಚಿಕ್ಕವಳಾದರೂ ಕೆಲವು ಹಿರಿಯ ಪ್ರೊಫೆಸರ್‌ಗಳಿಗಿಂತ ವಿದ್ಯಾರ್ಥಿಗಳನ್ನು ಚೌಕಟ್ಟಿನಲ್ಲಿ ನಿಲ್ಲಿಸಬಲ್ಲವಳಾಗಿದ್ದಳು.

"ಬನ್ನಿ ಮೇಡಮ್" ಪುಟು ಪುಟು ಹೈ-ಹೀಲ್ಡ್ ಚಪ್ಪಲಿಗಳನ್ನು ಕುಣಿಸುತ್ತ ಬಂದ ಮಾಧವಿ, ಇವಳಿಗಿಂತ ಒಂದು ನಾಲ್ಕು ಇಂಚು ಕಡಿಮೆ ಉದ್ದವಿದ್ದಳು. ಕತ್ತಿನವರೆಗೂ ಕತ್ತರಿಸಿದ ಕೂದಲು. ತೊಟ್ಟ ಡ್ರೆಸ್ ಕೂಡ ವಿಚಿತ್ರವಾಗಿತ್ತು. ಹಳದಿ ಕಣ್ಣುಗಳಂತೆ ಕಾಣುವ ಅವಳ ಕಣ್ಣುಗಳಲ್ಲಿ ಮಿಂಚಿತ್ತು. ಒಟ್ಟಿನಲ್ಲಿ ಆಕರ್ಷಕವಾದ ಯುವತಿ.

"ಪ್ರೊಫೆಸರ್.... ಎಲ್ಲಿ ?" ಕೇಳಿದಳು.

"ರೂಮಿನಲ್ಲಿ ನಿಮಗಾಗಿ ಕಾಯ್ತ ಇದ್ದಾರೆ" ಕರೆದೊಯ್ದಳು. ಪ್ರೊಫೆಸರ್ ಒಂಟಿಯಾಗಿಯೇ ಕೂತಿದ್ದವರು ಕಿರು ನಗೆ ಬೀರಿದರು. ಕ್ರಾಪ್‌ನಲ್ಲಿ ಇಣಕಿದ್ದ ಬೆಳ್ಳಿಯ ಕೂದಲು ಅವರ ಮುಖದ ಪ್ರೌಢತೆಗೆ ಮೆರಗನ್ನು ನೀಡಿತ್ತು.

"ಬಾ... ಬಾ... ಶಾರದ" ಆಹ್ವಾನಿಸಿದರು.

ಇಂದು ಮಾತ್ರ ಸ್ವಲ್ಪ ಗೊಂದಲದಲ್ಲಿದ್ದಂತೆ ಕಂಡರು. ಅವರೇ ಎದ್ದು ಮೂರು ಕಪ್‌ಗಳಿಗೆ ಫ್ಲಾಸ್ಕಿನಲ್ಲಿದ್ದ ಕಾಫಿಯನ್ನು ಬಗ್ಗಿಸಿ ಸ್ವತಃ ಅವರೇ ಮಾಧವಿ ಮತ್ತು ಶಾರದಾಗೆ ಒಂದೊಂದು ಕಪ್ ಕೊಟ್ಟು ತಾವೊಂದು ತಗೊಂಡರು.

"ಥ್ಯಾಂಕ್ಯೂ ಸರ್" ಎಂದಳು ಸಂಕೋಚದಿಂದ ಶಾರದ.

ಕಾಫೀ ಕುಡಿದು ಮುಗಿಸುವವರೆಗೂ ಯಾರು ಮಾತಾಡಲಿಲ್ಲ. ಸ್ವಲ್ಪ ತಲೆಯೆತ್ತಿ ಮೇಲೆ ನೋಡಿದ ಪ್ರೊಫೆಸರ್ ಮಾಧವಿಯತ್ತ ನೋಟ ಹರಿಸಿ.

"ಇವ್ರು ಶಾರದಾಂತ. ಇದೇ ಕಾಲೇಜಿನಲ್ಲಿ ಓದಿದೋರು. ಅವ್ರ ತಂದೆ ಕೂಡ ಇಲ್ಲೇ ಪ್ರಾಧ್ಯಾಪಕರಾಗಿದ್ದರು. ಫಿಲಾಸಫಿನ ಚೆನ್ನಾಗಿ ಓದಿಕೊಂಡಿದ್ದೋರು, ಎಲ್ಲರಿಗೂ ಬೇಕಾದ ವ್ಯಕ್ತಿ, ಉತ್ತಮ ವಾಗ್ಮಿಯಾಗಿದ್ದವರು. ಶಾರದಾಗೆ ಅವ್ರ ತಂದೆಯ ಎಲ್ಲಾ ಗುಣಗಳು ಇವೆ. ಇಂಗ್ಲೀಷ್ ಸಾಹಿತ್ಯವನ್ನು ಅವರಷ್ಟು ಅಭ್ಯಾಸ ಮಾಡಿದವರಾಗ್ಲಿ, ಬೋದಿಸುವವರಾಗ್ಲಿ ನಮ್ಮ ಕಾಲೇಜಿನಲ್ಲಿಲಾಂತ ಹೇಳಬಹುದು. ಇದಿಷ್ಟು ಅವರ ವ್ಯಕ್ತಿಗತ ಪರಿಚಯ" ಎಂದ ಕೂಡಲೇ ಕೂತಿದ್ದ ಕುರ್ಚಿ ಬಿಟ್ಟು ಎದ್ದು ನಿಂತ ಮಾಧವಿ ಮಧುರವಾಗಿ ನಕ್ಕಳು.

"ನೀವು ಹೇಳಿದಕ್ಕಿಂತ ಜಾಸ್ತಿನೇ ತಿಳ್ಕೊಂಡಿದ್ದೀನಿ, ಅವ್ರ ಬಗ್ಗೆ, ನನ್ನ ಬಗ್ಗೆ ನಾನೇ ಹೇಳ್ಕೊಂಡ್ ಬಿಡ್ಲಾ?"

"ಮಾಧವಿ, ಸ್ವಲ್ಪ ಹೊತ್ತು ಸುಮ್ಮನಿರು" ಗದರಿದರು.

ಬೈಯಿಸಿಕೊಂಡ ಪ್ರೌಢಶಾಲೆಯ ವಿದ್ಯಾರ್ಥಿಯಂತೆ ಕೂತಳು. ಆದರೂ ಮುಖದಲ್ಲಿ ತುಂಟತನ. ಶಾರದಾಗೆ ಶಾಂತ ಹೇಳಿದ್ದು ನೆನಪಾಯಿತು.

ಹದಿನೈದು ವರ್ಷದ ಹಿಂದೆನೇ ಅವಳ ತಂದೆ, ತಾಯಿ ಬೇರ್ಪಟ್ಟು ಬೇರೆ ಬೇರೆ ಕಡೆ ವಾಸಿಸುತ್ತಿದ್ದರು. ಇವಳು ಇದ್ದಿದ್ದು ತಾಯಿಯ ಬಳಿ. ಒಬ್ಬ ಅಣ್ಣ, ಇನ್ನೊಬ್ಬ ತಂಗಿ ಅವಳ ತಂದೆಯ ಬಳಿ ಇದ್ದರು. ಆಗಾಗ ಹುಡುಗರ ಓಡಾಟವಿದ್ದರೂ ಗಂಡ ಹೆಂಡತಿ ಸಂಧಿಸುತ್ತಿರಲಿಲ್ಲ. ಎರಡು ಕಡೆಯೂ ಆರ್ಥಿಕವಾಗಿ ಅನುಕೂಲವಾಗಿ ಇದ್ದುದ್ದರಿಂದ, ಯಾರಿಂದ ಯಾರೂ ಹಣದ ಸಹಾಯ ಬೇಡುವಂತಿರಲಿಲ್ಲ. ಈಚೆಗೆ ಅವಳ ತಂದೆ ಮುಂಬಯಿಯಲ್ಲಿ ಹೋಗಿ ನೆಲೆಸಿದ್ದರು.

ಇದಿಷ್ಟು ಅವಳ ಬದುಕಿನ ಹಿನ್ನೆಲೆ.

"ಅವ್ಳು ಸೈನ್ಸ್ ಸ್ಟೂಡೆಂಟ್, ಅವ್ಳು ಹೆಚ್ಚು ಓದೋದು ಇತಿಹಾಸ, ತತ್ವಶಾಸ್ತ್ರ, ಮಾನಸಿಕ ಶಾಸ್ತ್ರ, ಇವ್ಳು ನನ್ನೊತೆ ಓಡಾಡೋದು, ಚರ್ಚಿಸೋದು, ಕಾಲ ಕಳೆಯೋದರಿಂದ ಪ್ರತಿಯೊಬ್ಬರೂ ಒಂದೊಂದು ರೀತಿ ಮಾತಾಡಿಕೊತಾರೆ. ಅದ್ನ ತಪ್ಪೂಂತ ನಾನೇನು ಅನ್ನೋಲ್ಲ. ತಪ್ಪು ಮಾಡೋ ಪ್ರತಿಯೊಬ್ರು ಅಳುಕೋದು ಸಮಾಜಕ್ಕೇನೇ. ಅದ್ರಿಂದ ಒಳ್ಳೇದು

ಇದೆ; ಕೆಟ್ಟದ್ದು ಆಗುತ್ತೆ. ಇನ್ನು ಮೂರ್‍ನಾಲ್ಕು ವರ್ಷ ನನ್ನ ಸರ್ವಿಸ್ ಇದೆ. ವಾಲಂಟರಿ ರಿಟೈರ್‌ಮೆಂಟ್ ತಗೊಳ್ಳೋ ವಿಚಾರವಿದೆ. ನಂತರದ ನನ್ನ ಸಮಯವೆಲ್ಲ ತತ್ವಶಾಸ್ತ್ರದ ಅಧ್ಯಯನಕ್ಕೆ ಮೀಸಲಾಗಿಡಬೇಕೆಂದಿದ್ದೇನೆ. ನಾನು ಹೆಚ್ಚು ವಿಚಾರವಾದಿ. ಎಲ್ಲಿಯೋ ನನ್ನ ವಿಚಾರಗಳಲ್ಲಿ ತಪ್ಪಿದೆಯೆನಿಸುತ್ತೆ ಈಚೆಗೆ. ಕೂಲಂಕುಷವಾಗಿ ಕೂತು ಚರ್ಚಿಸಬೇಕು." ಏನೇನೋ ಹೇಳಿಕೊಂಡರು. ವಿನಯ ವಿದ್ಯಾರ್ಥಿಯಂತೆ ಅವರನ್ನು ನೋಡುತ್ತ ಕೇಳುತ್ತಿದ್ದಳು ಮಾಧವಿ. ತುಂಟತನದಿಂದ ಓಡಾಡುವ ಈ ಹುಡುಗಿ ಇಷ್ಟು ಗಂಭೀರವಾಗಿ ಕೂಡಬಲ್ಲಳು ಎನಿಸುವುದುಂಟು ಕೆಲವರಿಗೆ.

"ಮೂರ್ತಿ ಚಿಕ್ಕದಾದ್ರೂ ಕೀರ್ತಿ ದೊಡ್ಡದೆನಿಸುತ್ತೆ. ಮಾಧವಿ ಸಾಕಷ್ಟು ಓದಿದ್ದಾಳೆ. ಬೆಳೆದಿದ್ದಾಳೆ. ಬೌದ್ಧಿಕವಾಗಿ ನಮ್ಮಿಬ್ಬರ ಮಧ್ಯೆ ಸಾಮ್ಯವಿದೆ. ಬೌದ್ಧಿಕ ಅಸಮಾನತೆಯ ನನ್ನ ಮತ್ತು ಶಾಂತಳ ವಿವಾಹ ವಿಚ್ಛೇದನಕ್ಕೆ ದಾರಿಯಾಯ್ತು. ನಂಗೆ ಈಗ್ಲೂ ವಿವಾಹದ ಬಗ್ಗೆ ಯಾವ ಆಸಕ್ತಿಯೂ ಇಲ್ಲ", ಒಂದು ಪೀಠಿಕೆಯನ್ನು ಅವಳ ಮುಂದಿಟ್ಟರು.

ಅವರು ಹೇಳುತ್ತಿದುದ್ದನ್ನು ಬಹಳ ಶ್ರದ್ಧೆಯಿಂದ ಕೇಳಿಸಿಕೊಂಡಳು ಶಾರದ. ಅವಳು ಸಾಹಿತ್ಯದ ಸ್ಟೂಡೆಂಟ್. ಈಗ ಪಾಠ ಮಾಡುತ್ತಿದ್ದುದು ಪಾಶ್ಚಾತ್ಯ ಸಾಹಿತ್ಯ, ಅಲ್ಪಸ್ವಲ್ಪ ಓದಿಕೊಂಡಿದ್ದು ತತ್ವ ಶಾಸ್ತ್ರವನ್ನು.

ಮಧ್ಯದಲ್ಲಿ ಮಾಧವಿ ಬಾಯಿ ಹಾಕಿದಳು.

"ಡೋಂಟ್ ಮೈಂಡ್ ಮೇಡಮ್, ನಿಮ್ದು ಪ್ರೇಮದ ನಂತರದ ವಿವಾಹವಾ ?".

ಅವಳ ಪ್ರಶ್ನೆಗೆ ಏಕಾಏಕಿ ಉತ್ತರಿಸುವುದು ಕಷ್ಟವೆನಿಸಿತು. ವಸಂತ ಅವಳು ಕೂತು ಮಾತಾಡಿದ್ದರು, ಜೊತೆಯಲ್ಲಿ ಹೋಟಲ್‌ಗೆ, ಮೂವೀಗೆ ಹೋಗಿದ್ದರು. ವಸಂತ ಆಡುತ್ತಿದ್ದ ಮಾತುಗಳನ್ನು ಮೌನವಾಗಿ ಕೇಳುತ್ತಿದ್ದುದ್ದೇ ಹೆಚ್ಚು. ಅವನ ಮಾತುಗಳಲ್ಲಿ ಎಂದೂ ಆಸಕ್ತಿ ಹುಟ್ಟಿರಲಿಲ್ಲ, ಅಥವಾ ಇವಳಿಗೆ ಆಸಕ್ತಿಯುಂಟು ಮಾಡುವಂಥ ವಿಷಯಗಳನ್ನು ಮಾತಾಡಿರಲಿಲ್ಲ, ಇದು ಒಂದು ಮುಖ್ಯ ಕಾರಣವೇನೋ !.

"ಈ ಪ್ರಶ್ನೆಗೆ ಯಾಕೆ ಇಷ್ಟಂದು ಯೋಚಿಸ್ತಾ ಇದ್ದೀರಾ ? ನಾನು ನಿಮ್ಮ ಬಗ್ಗೆ ಅಲ್ಪ ಸ್ವಲ್ಪ ತಿಳ್ಕೊಂಡಿದ್ದೀನಿ. ವಸಂತ ನಿಮಗೋಸ್ಕರ ಕೆಲವು ಸಲ ಕಾಲೇಜಿಗೆ ಬಂದಿದ್ದುಂಟು", ತುಂಬ ದಿಟ್ಟವಾಗಿ ವಿವರ ನೀಡಿದಾಗ, ಶಾರದಳಲಿ ಗೊಂದಲ ಷುರುವಾಯಿತು.

"ವಿವಾಹಕ್ಕೆ ಮುನ್ನ ಅವ್ರನ್ನ ಪ್ರೇಮಿಸಿರಲಿಲ್ವಾ ?" ಅದೇ ಚುರುಕಿನ ಪ್ರಶ್ನೆ "ಪ್ರೇಮದ ಬಗ್ಗೆ ಕನ್‌ಫ್ಯೂಷನ್ ಷುರುವಾಗಿದೆಯಲ್ಲಾ ! ನೂರಕ್ಕೆ ತೊಂಬತ್ತು ಒಂಬತ್ತು ಚಲನಚಿತ್ರಗಳು ತಯಾರಾಗುವುದು ಪ್ರೇಮದ ಕತೆಗಳನ್ನು ಒಳಗೊಂಡೇ. ದುರಂತ ಚಿತ್ರಗಳು ಹೆಚ್ಚು ಸಕ್ಸಸ್ ಯುವ ಪ್ರೇಮಿಗಳ ದಂಡು ದಂಡಾಗಿ ನುಗ್ಗಿ ನಿರ್ಮಾಪಕ ಜೇಬು ಭರ್ತಿ ಮಾಡ್ತಾರೆ. ನಾನು ಹೇಳ್ತಾ ಇರೋದು ನಿಜ ತಾನೇ?" ಸ್ವಲ್ಪ ದೂರದಲ್ಲಿ ಕೂತಿದ್ದವಳು ಛೇರನ್ನು ಶಾರದಳ ಮುಂದೆ ಎಳೆದು ಹಾಕಿಕೊಂಡು ಕೂತಳು.

ಬಹುಶಃ ಅಟೆಂಡರ್ ಒಂದು ವಿಷಯ ಮುಟ್ಟಿಸದಿದ್ದರೇ ಮಾಧವಿಯ ವಾದ ಇನ್ನಷ್ಟು ಮುಂದಕ್ಕೆ ಸಾಗುತಿತ್ತೇನೋ!

"ನಿಮ್ಮ ಯಜಮಾನ್ರು ಹುಡ್ಕಿಕೊಂಡು ಬಂದಿದ್ದಾರೆ"

'ಯಾರಿರಬಹುದು ?' ವಿವಾಹದ ನಂತರ ಇಲ್ಲಿಗೆ ಬರುವ ಪ್ರಮೇಯವೆ ಇರಲಿಲ್ಲ. ಪ್ರೊಫೆಸರ್ ಶಾಂತ ಮನೆಗೆ ಹೋದಾಗ ಒಮ್ಮೆ ತಾನು ಕಾಲೇಜಿನ ಬಳಿ ಬಂದಿದ್ದೆ ಎಂದು ಹೇಳಿಕೊಂಡಿದ್ದ.

"ಹೋಗ್ಬನ್ನಿ ಶಾರದ, ನಾಳೆ ಭೇಟಿಯಾಗೋಣ. ಹೇಗೂ ಮಾಧವಿನ ಪರಿಚಯ ಮಾಡ್ಸಿದ್ದೀನಲ್ಲ, ಬಿಡುವಿದ್ದಾಗ ಬಂದು ಹಿಡೀತಾಳೆ. ನೀವು ಇನ್ನ ಹೋಗಿ" ಅವರೇ ಕಳಿಸಿದರು.

"ನಿಮ್ಮವರನ್ನು ಒಂದಿಷ್ಟು ಪರಿಚಯ ಮಾಡ್ಕೊಡಿ." ಜೊತೆಯಲ್ಲೇ ಬಂದ ಮಾಧವಿ "ನನ್ನ ಪ್ರಶ್ನೆಗೆ ನೀವು ನಾಳೆಯಾದ್ರೂ ಉತ್ತರ ಹೇಳ್ಬೇಕು, ಮೇಡಮ್" ಎಂದಳು. ಇದೊಂದು ಎಚ್ಚರಿಕೆ ಗಂಟೆಯೆನ್ನುವಂತಿತ್ತು.

ಕಾರಿಗೆ ಒರಗಿ ನಿಂತಿದ್ದ ವಸಂತ ಕಣ್ಣಿಗೆ ಹಾಕಿದ್ದ ತಂಪು ಕನ್ನಡಕ ಕೂಡ ತೆಗೆಯಲಿಲ್ಲ. ವಿವಾಹಕ್ಕೆ ಮುನ್ನ ಕ್ಲಾಸ್ ತೆಗೆದುಕೊಂಡಿದ್ದವಳು ವಸಂತನ ಕರೆ ಬಂದಾಗ ನಿರಾಕರಿಸಿದ್ದಳು.

"ಮಾಧವಿ ಅಂತ ಈ ಕಾಲೇಜಿನ ಸ್ಟೂಡೆಂಟ್" ಪರಿಚಯಿಸಿದಾಗ "ಹಲೋ..." ಎಂದ ಅವುಡುಗಳನ್ನು ಬಿಗಿ ಹಿಡಿದು.

"ಗ್ಲಾಡು ಟು ಮೀಟ್ ಯು" ಎಂದಳು ಮಾಧವಿ.

ಅದಕ್ಕೆ ಒಂದು ಮುಗುಳ್ನಗೆಯ ಪ್ರತಿಕ್ರಿಯೆಯನ್ನು ಕೂಡ ತೋರದೆ ಕಾರನ್ನು ಹತ್ತಿದ.

"ಏನು ವಿಷ್ಯ ?" ವಿಂಡ್ ಬಳಿ ಬಗ್ಗಿದಳು ಶಾರದ.

"ಮೊದ್ಲು ಹತ್ತು" ಎಂದು ಸಿಡುಕಿದ.

"ಬರ್ತೀನಿ ಮಾಧವಿ, ಪ್ರೊಫೆಸರ್‌ಗೆ ಹೇಳು ನಾನು ನಾಳೆ ಬಂದು ಮೀಟ್ ಆಗ್ತೀನೀಂತ" ಆತ್ಮೀಯವಾಗಿ ಅವಳ ಕೈ ಹಿಡಿದು ಹೇಳಿ ಇನ್ನೊಂದು ಕಡೆ ಡೋರ್‌ನ ಮೂಲಕ ಕಾರಿನೊಳಕ್ಕೆ ತೂರಿದಳು.

"ಏನಿದೆ, ಈ ವ್ಯಕ್ತಿ ಯೊಳಗೆ ಪ್ರೇಮಿಸೋಕೆ" ಮಾಧವಿ ಮುಖ ತಿರುವಿಕೊಂಡು ಹಿಂದಿರುಗಿದಳು. ಹ್ಯಾಂಡ್‌ಸಮ್ ಒಂದೇ ಸಾಲದು ಗಂಡಸ್ಸಿಗೆ ಎಂದುಕೊಂಡಳು, ಮಾಧವಿ.

"ಎಲ್ಲಿಗೆ ?" ದಾರಿಯಲ್ಲಿ ಕೇಳಿದಳು.

ಇನ್ನಷ್ಟು ಕಾರಿನ ವೇಗ ಹೆಚ್ಚಿಸಿದ ವಸಂತ "ಯಾರು ಅವ್ಳು ?" ಕೇಳಿದ ಒಬ್ಬ ಸ್ಟೂಡೆಂಟ್ ಎಂದು ಪರಿಚಯಿಸಿದ್ದಳು. ಈಗ ಅನಾವಶ್ಯಕವಾದ ವಿವರಗಳು ಯಾಕೆ ? "ಈ ವರ್ಷ ನಮ್ಮ ಕಾಲೇಜಿಗೆ ಸೇರ್ಕೊಂಡಿದ್ದಾಳೆ" ಅಷ್ಟೆ ಹೇಳಿದ್ದು.

"ಅಧ್ನ, ಆಗ್ಲೇ ಕೂಡ ಹೇಳಿದ್ದೆ. ನಾನು ಕೇಳ್ತಾ ಇರೋದು ಡೀಟೈಲ್ಸ್" ಎಂದ ಸ್ಟೀರಿಂಗ್ ವ್ಹೀಲ್ ಮೇಲಿನಿಂದ ಎಡಗೈ ತೆಗೆದು ಕ್ರಾಪ್ ಸರಿ ಮಾಡಿಕೊಂಡ.

"ಈಗ ಎಲ್ಲಿಗೆ ಹೋಗ್ತಾ ಇರೋದು ?" ಕೇಳಿದಳು ತಾಳ್ಮೆಯಿಂದ.

"ಕಾಶ್ಮೀರಿ ಶಾಲುಗಳ ಪ್ರದರ್ಶನ ಮತ್ತು ಮಾರಾಟ ಇದೆ. ಈಗ ನೇರವಾಗಿ ಅಲ್ಲಿಗೆ ಹೋಗ್ತಾ ಇರೋದು" ತಣ್ಣಗೆ ಉಸುರಿದ.

ಶಾರದ ತಾಳ್ಮೆ ಸತ್ತಿತ್ತು. ಸ್ವಲ್ಪ ಕೂಡ ವಿವೇಕವಿಲ್ಲವಾ, ಈ ಮನುಷ್ಯನಿಗೆ? ಅವುಡುಗಳನ್ನು ಬಿಗಿದ "ನಂಗೆ ಮಧ್ಯಾಹ್ನ ಕ್ಲಾಸ್ ಇದೆ. ಅಲ್ಲಿಗೆ ಸಂಜೆ ಹೋಗಬಹುದಿತ್ತು. ಅಥ್ವಾ ಇನ್ನೊಂದು ದಿನ ಹೋಗ್ಬಹ್ದು. ದಯವಿಟ್ಟು ನನ್ನ ಕಾಲೇಜು ಹತ್ರ ಡ್ರಾಪ್ ಮಾಡ್ಬಿಡಿ" ನಯವಾಗಿ ರಿಕ್ವೆಸ್ಟ್ ಮಾಡಿಕೊಂಡಳು.

ಮತ್ತಷ್ಟು ವೇಗವಾಗಿ ಹೋದ ಕಾರು ಎರಡು ಕಿಲೋಮೀಟರ್ ಆಚೆ ನಿಂತಿತು. "ಇಳ್ದು, ಎಲ್ಲಿಗೆ ಬೇಕಾದ್ರೂ ಹೋಗು." ಅವಳ ಮೇಲೆನೇ ಬಗ್ಗಿ ಡೋರನ್ನು ಒರಟಾಗಿ ತಳ್ಳಿ "ಬೇಗ ಇಳೀ, ನಿನ್ನ ದುಡಿಮೆಯ ಹತ್ತರಷ್ಟು ಸಂಪಾದ್ನೇ ನಂಗಿದೆ."

ನಿಧಾನವಾಗಿ ಇಳಿದಳು. ಕಾರು ಕ್ಷಣದಲ್ಲಿ ಮಾಯವಾಯಿತು.

ಹತ್ತಿರದಲ್ಲಿ ಆಟೋ, ಟ್ಯಾಕ್ಸಿ ಸ್ಟಾಂಡ್ ಆಗಲೀ, ಬಸ್ ಸ್ಟಾಂಡ್ ಆಗಲೀ ಇರಲಿಲ್ಲ. ಜನಸಂದಣಿ ಇದ್ದರೂ ಕಾಡಿನಲ್ಲಿ ಬಿಟ್ಟಂತಾಗಿತ್ತು. ಅವಳು ಈಗ ಹತ್ತಿರದ ಆಟೋಸ್ಟಾಂಡ್, ಟ್ಯಾಕ್ಸಿಸ್ಟಾಂಡ್, ಅಥವಾ ಬಸ್ ಸ್ಟಾಂಡ್ ತಲುಪಬೇಕಿತ್ತು.

ಮಧ್ಯಾಹ್ನದ ಸಮಯ. ಎಲ್ಲರಿಗೂ ಊಟದ ವೇಳೆ. ಮೂರು ಕಿಲೋಮೀಟರ್‌ನಷ್ಟು ಹಾದಿ ಕ್ರಮಿಸಿದ ನಂತರ ಒಂದು ಆಟೋ ಬರುತ್ತಿದ್ದುದನ್ನು ಕಂಡು ಕೈ ಅಡ್ಡ ಹಿಡಿದು ನಿಲ್ಲಿಸಿದಳು.

"ಸ್ವಾತಿ ಕಾಲೇಜು....".

ಅವನು ಅನುಮಾನಿಸಿದ "ನಾನು ಆ ಕಡೆ ಹೋಗೋದೇ ಇಲ್ಲ., ಮೇಡಮ್, ಈ ಕಡೆ ಬರೋಕೆ ನಮ್ಗೇ ಪ್ಯಾಸೆಂಜರ್ಸ್ ಸಿಗೋಲ್ಲ" ತಲೆ ಕೆರೆದುಕೊಂಡ.

"ಓಕೆ, ಮೀಟರ್ ನೋಡೋಲ್ಲ, ನೀನು ಕೇಳಿದಷ್ಟು ಕೊಡ್ತೀನಿ. ನಂಗೆ ಮೂರುಕ್ಕಾಲುಗೆ ಕ್ಲಾಸ್ ಇದೆ, ಪ್ಲೀಸ್" ಎಂದಳು. ಸದ್ಯಕ್ಕೆ ಅವಳು ಕಾಲೇಜು ತಲುಪಬೇಕಿತ್ತು.

ಗೊಣಗುತ್ತ ನಿಧಾನವಾಗಿ ಅಷ್ಟು ದೂರ ಹೋದವನು ಹಿಂದಕ್ಕೆ ತಿರುಗಿಸಿಕೊಂಡು ಬಂದ. "ಹತ್ತಿ ಮೇಡಮ್, ಕೆಲವೊಮ್ಮೆ ಏನ್ಮಾಡ್ಹೋಕ್ಕಾಗುತ್ತೆ. ಮಾನವೀಯತೆ ಮುಖ್ಯವಾಗುತ್ತೆ" ತತ್ವಜ್ಞಾನಿಯಂತೆ ಮಾತಾಡಿದ.

ಕಾಲೇಜು ಕಾಂಪೌಂಡ್‌ನ ಬಳಿಗೆ ಬಂದಾಗಲೇ ತನ್ನಲ್ಲಿ ಪರ್ಸ್, ಪುಸ್ತಕ ಇಲ್ಲದಿರುವುದು ಅರಿವಿಗೆ ಬಂದಿದ್ದು. ಕಾರಿನಲ್ಲಿ ಉಳಿದುಹೋಗಿದೆ. ಇಂಥ ಪರಿಸ್ಥಿತಿ ಎಂದೂ ಒದ್ಗಗಿರಲಿಲ್ಲ.

ಇನ್ನೊಂದು ಆಟೋದಲ್ಲಿ ಬಂದು ಇಳಿದ ಪ್ರೊಫೆಸರ್ ಶಾಂತ "ಏನೀ... ಪ್ರಾಬ್ಲಮ್" ಎಂದು ಬಂದವರು ಪರ್ಸ್ ಇಲ್ಲದ್ದು ನೋಡಿಯೇ ಅರ್ಥ ಮಾಡಿಕೊಂಡಾಗ "ನೂರು ರೂಪಾಯಿ ಕೊಡಿ ಮೇಡಮ್. ನಾಳೆ ಹಿಂದಿರುಗಿಸ್ತೀನಿ" ಅವಳ ಮುಖ ನೋಡಿಯೇ ಕೊಟ್ಟರು.

ನೂರು ರೂಪಾಯಿನ ಆಟೋದವನ ಕೈಗೆ ಇಟ್ಟು "ತುಂಬ ಥ್ಯಾಂಕ್ಸ್" ಹೇಳಿದವಳು ಶಾಂತ ಅವರೊಂದಿಗೆ ಕಾಲೇಜಿನತ್ತ ಹೆಜ್ಜೆ ಹಾಕಿದ ಅವಳ ಮನದಲ್ಲಿ ನೂರು ಆಂದೋಲನ. ತಾನು ತಿಳಿದಿದ್ದಕ್ಕಿಂತ ವಸಂತ ಪೂರ್ತಿ ಬೇರೆ.

ಪಾಠ ಮುಗಿಸಿ ಹೊರಡುತ್ತಿದ್ದವಳನ್ನು ನೋಡಿ ಓಡಿ ಬಂದ ಪ್ರೊಫೆಸರ್ ಶಾಂತ ಅವಳ ಸ್ವಾಭಿಮಾನ ಕೆದಕಿ ನೋಯಿಸಲು ಇಷ್ಟವಿಲ್ಲದೆ ನಗುತ್ತ ನುಡಿದರು.

"ಇವತ್ತು ನಿಮ್ಮ ಮನೆಯ ಕಾಫಿಯ ಯೋಗವಿದೆ. ಒಂದಿಷ್ಟು ಆ ಕಡೆ ಹೋಗೋದಿದೆ, ಬನ್ನಿ ಹೋಗೋಣ" ಕರೆದೊಯ್ದರು.

ಇವರ ಮನೆಯ ಮುಂದೆ ಆಟೋ ನಿಂತಾಗ "ಶಾರದ, ನಿನ್ನ ಈ ತರಹ ನೋಡೇ ಇಲ್ಲ. ಯಾಕೋ ತೀರಾ ಅಪ್‌ಸೆಟ್ ಆಗಿದ್ದೀರಾ. ಒಂದಿಷ್ಟು ರೆಸ್ಟ್ ತಗೊಳ್ಳಿ, ಇನ್ನೊಂದು ದಿನ ಬಂದು ಕಾಫಿ ಕುಡೀತೀನಿ" ಅಂದರು.

ಆಟೋ ಮುಂದಕ್ಕೆ ಹೋಗಿ ಕಣ್ಮರೆ ಆಯಿತು. ಅತ್ತಲೇ ನೋಡುತ್ತ ಇದ್ದವಳ ದೇಹದಲ್ಲಿ ತೀರಾ ನಿರಸನವೆನಿಸಿತು. ಸೇತುರಾಮ್ ತಮ್ಮ ಕಣ್ಣುಗಳಿಗಿಂತ ಜೋಪಾನವಾಗಿ ಅವಳನ್ನು ಬೆಳೆಸಿದ್ದು. ತಾತ ತುಂಬು ಮಮತೆಯಲ್ಲಿ ಬೆಳೆದವಳು. ನೋಟುಗಳ ಜೊತೆಗೆ ಒಂದಿಷ್ಟು ಚಿಲ್ಲರೆ ಇದೆಯಾಂತ ಪರ್ಸ್ ತೆಗೆದು ನೋಡಿಯೇ ಕಳಿಸುತ್ತಿದ್ದುದ್ದು, ಪುಟ್ಟ ಶಾರದಳಿಂದ ಮದುವೆಯಾಗುವವರೆಗೂ ಏನಾಗಿದೆ ? ಏನಾಗುತ್ತ ಇದೆ ?.

ರೂಮಿಗೆ ಹೋದವಳೇ ಮಂಚದ ಮೇಲೆ ಕುಸಿದಳು. ಹೊಸ ಹೊಸ ಅನುಭವಗಳು ಅವಳ ಆತ್ಮವಿಶ್ವಾಸವನ್ನು ಕುಗ್ಗಿಸುವ ಪ್ರಯತ್ನ ಮಾಡುತಿತ್ತು. ಭಯಂಕರ ಬಿರುಗಾಳಿಯ ರೂಪದಲ್ಲಿ ದಾಳಿ ಮಾಡುತಿತ್ತು. ಈ ದಾಳಿಯನ್ನು ಮೆಟ್ಟಿ ನಿಲ್ಲುವ ಚೈತನ್ಯ ತನಗಿದೆಯೇ ?

"ಅಕ್ಕ, ತಲೆ ನೋವಾ ?" ಬಾಗಿಲಲ್ಲಿ ಇಣುಕಿದ ಗೋಪಿ "ಕಾಫಿ ತಂದಿದ್ದೀನಿ, ಕೊಡ್ಲಾ ?" ಬಹಳ ದೈನ್ಯತೆಯಿಂದ ಕೇಳಿದ. ಬರುವಂತೆ ಸನ್ನೆ ಮಾಡಿದಳು ಕಣ್ಣಲ್ಲಿ. ಸದ್ಯಕ್ಕೆ ಕಾಫಿ ಕೂಡ ಬೇಕಿರಲಿಲ್ಲ. ನಿರ್ವಾಜ್ಯ ಅಂತಃಕರಣದ ಪುಟ್ಟ ಹುಡುಗನನ್ನು ನೋಯಿಸಲಾರದೆ ಕುಡಿದಳು ಬಲವಂತವಾಗಿ.

"ಹೇಗಿದೆ, ಕೈ ನೋವು ?" ವಿಚಾರಿಸಿದಳು.

"ಈಗ ಪರ್ವಾಗಿಲ್ಲ, ಅಣ್ಣ ಎರಡು ಸಲ ಫೋನ್ ಮಾಡಿ ವಿಚಾರಿಸಿದ್ರು" ಎಂದ ಕೂಡಲೇ ಶಾರದಾಗೆ ಮನಃಪೂರ್ತಿ ಅಳಬೇಕೆನಿಸಿತು. "ಸ್ವಲ್ಪ ಹೊರ್ಗಡೆ ಹೋಗಿ ಕೂತ್ಕೊಂಡ್, ನಿಂಗೇನೇನು ಬರುತ್ತೇ ಅದೆಲ್ಲ ಬರೀ" ಕಳಿಸಿದಳು.

ರೂಮಿನ ಬೋಲ್ಟ್ ಹಾಕಿಕೊಂಡು ಹಾಸಿಗೆಯ ಮೇಲೆ ಕುಸಿದು ದಿಂಬಿನಲ್ಲಿ ಮುಖವನ್ನು ಹುದುಗಿಸಿ ಬಿಕ್ಕಿದಳು. ಅವಳಿಗೆ ಅತ್ತ ನೆನಪೇ ಇರಲಿಲ್ಲ. ಸೇತುರಾಮ್ ವಿಮಾನ ಹತ್ತಿದಾಗ ಪಕ್ಕಕ್ಕೆ ತಿರುಗಿ ಕಣ್ಣೀರನ್ನೊರೆಸಿಕೊಂಡಿದ್ದಳು,ಅಷ್ಟೆ, ಅಳುವಿನ ರಭಸ ಎಷ್ಟು ಜೋರಾಗಿತೆಂದರೆ, ಜಲಪಾತದಂತೆ ಧುಮುಕುತ್ತಿತ್ತು ಕಂಬನಿ. ಸಮಾಧಾನಿಸುವವರು ಯಾರು ಇಲ್ಲ. ದುಃಖದ ಆವೇಗ ಕಡಿಮೆಯಾಗಿ ಅಳು ನಿಂತು ಕಣ್ಣೀರು ಹಿಂಗಿತು.

"ಶಾರದ ಬಾಗಿಲು ತೆಗೀ" ವಸಂತನ ದನಿ.

ಬಾಗಿಲು ತೆರೆಯುವ ಮುನ್ನ ಸಿಂಕ್‌ನಲ್ಲಿ ಮುಖಕ್ಕೆ ತಣ್ಣೀರು ಎರಚಿಕೊಳ್ಳುತ್ತ ಬಂದು ಬಾಗಿಲು ತೆರೆದಾಗ, ರೌದ್ರಾವತಾರ ತಾಳಿದ.

"ಇಷ್ಟೊಂದು ದುರಂಹಂಕಾರ ಇರ್ಬಾರ್ದು, ನಾನು ಹಿಂದಕ್ಕೆ ಬರೋ ವೇಳೆಗೆ ನೀನು ಅಲ್ಲಿ ಇರಲೇ ಇಲ್ಲ. ಎಲ್ಲಿಗೆ ಹೋಗಿದ್ದೆ? ಎಷ್ಟು ಹೊತ್ತು ಹುಡುಕಾಡಿದೆ. ಮನೆಗೆ ನಾಲ್ಕು ಸಲ ಫೋನ್ ಮಾಡಿ ವಿಚಾರ್ಸಿಕೊಂಡೇ."

ಅವನ ಹಾರಾಟಕ್ಕೆ ಪ್ರತಿಕ್ರಯಿಸಲಿಲ್ಲ. ಎದುರಿನಲ್ಲಿರುವ ಇನ್ನೊಬ್ಬ ವ್ಯಕ್ತಿ ಹೇಳುವುದೇನು ಎಂದು ಚಿಂತಿಸಿದ ಮೂರ್ಖ ಅವನು 'ತಾನೇ ಸರಿ! ಮಿಕ್ಕವರೆಲ್ಲ ಸರಿ ಇಲ್ಲ' ಎನ್ನುವ ಧೋರಣೆಯ ವಸಂತ ಬದುಕಿನಲ್ಲಿ ಎಂದಾದರೂ ನೆಮ್ಮದಿಯಾಗಿರಲು ಸಾಧ್ಯವೇ ?

"ನಾನು ಮಾತಾಡ್ತಾನೆ ಇದ್ದೀನಿ. ಎಷ್ಟೊಂದು ಉತ್ಪೇಕ್ಷೆ" ವಾದಕ್ಕೆ ನಿಂತ. ನಿಧಾನವಾಗಿ ನೋಟವೆತ್ತಿದವಳು "ನಿಮ್ಗೆ ಕೇಳೋಕೆ ಸಹನೆ ಇದ್ಯಾ ? ತಪ್ಪು ಮಾಡಿದಾಗ ಒಪ್ಪುವ, ಪಶ್ಚಾತ್ತಾಪ ಗುಣ ಇರೋ ವ್ಯಕ್ತಿಗಳ್ನ ಮಾತ್ರ ಮನುಷ್ಯರು ಅಂತಾರೆ. ಛಿ, ನಿಮ್ಮ ಹತ್ರ ಮಾತಾಡೋಕು ಕೂಡ ನಂಗಿಷ್ಟವಾಗೋಲ್ಲ" ಹೊರಗೆ ಹೋದಳು.

ನಾಲ್ಕು ಅಂತಸ್ತಿನ ಮಹಡಿಯ ಮೇಲಿದ್ದವನನ್ನು ಅನಾಮತ್ತಾಗಿ ಎತ್ತಿ ಕೆಳಗೆ ಹಾಕಿದಂತಾಯಿತು. ಅಳಬೇಕಿತ್ತು. ತಪ್ಪಾಯಿತೆಂಧು ಅವನ ಕಾಲಿಗೆ ಬೀಳಬೇಕಿತ್ತು. ನೋವಿನಿಂದ ಕುಸಿದು ವ್ಯಥಿತಳಾಗಬೇಕಿತ್ತು. ಭಯದಿಂದ ನಡುಗಬೇಕಿತ್ತು. ಬಹುಶಃ ಅವನಿಗೆ ಇಂಥ ಕಲ್ಪನೆಗಳು ಇತ್ತೇನೋ, ಬಿಳಿ ಮೋಡಗಳಂತೆ ಚದುರಿ ಪರಿಶುಭ್ರ ಆಕಾಶವಾಯಿತು.

ಅಡಿಗೆ ಮನೆಯಲ್ಲಿ ಉಳಿದಿದ್ದ ಕೆಲಸ ಮುಗಿಸಿಕೊಂಡು ಬಂದು ಮುಂದಿನ ಬಾಲ್ಕನಿಯಲ್ಲಿ ಕೂತಳು. ಕಾಂಪೌಂಡ್‌ನಲ್ಲಿ ಒಂದೆರಡು ಸಂಪಿಗೆ

ಮರಗಳು ಇದ್ದಿದ್ದರಿಂದ ಗಾಳಿ ಸುವಾಸನೆಯನ್ನು ಹೊತ್ತು ತರುತಿತ್ತು. ಹಾಯೆನಿಸಿತು. ಎಷ್ಟು ಕಠಿಣ ಮನಸ್ಕನಾಗಿ ಉರಿಯುವ ಬಿಸಿಲಲ್ಲಿ ಇಳಿಸಿ ಬಂದಿದ್ದ, ಎಲ್ಲಿಗೂ ಎಟುಕದ ಸ್ಥಳದಲ್ಲಿ.

ಗಡಬಡಿಸಿಕೊಂಡು ಬಂದ ಕಾಶೀಪತಿಗಳು ಮೌನವಾಗಿ ಕೂತಿದ್ದ ಶಾರದ ಮುಂದೆ ಒಂದು ಬೆತ್ತದ ಛೇರ್ ಎಳೆದುಕೊಂಡು ಬಂದು ಹಾಕಿಕೊಂಡು ಕೂತರು. ಗೆಳೆಯ ಸಾಂಬಶಿವಯ್ಯ ಹೇಳಿದ ಮಾತು ಕೇಳಿ ಅವರೆದೆ ಧಸಕ್ಕೆಂದಿತ್ತು.

"ಶಾರದ..." ಎಂದ ಕೂಡಲೇ ಬೆಚ್ಚಿಬಿದ್ದಳು.

ಮುಖ ತೊಳೆದು ಪೌಡರ್ ಹಚ್ಚಿದರೂ ಕೆಂಪಗಾದ ಕೆನ್ನೆಗಳು ಕತೆ ಹೇಳುತಿತ್ತು. ಮುಖದಲ್ಲಿ ಮೌನ ನಡೆದದ್ದಾದರೂ ಏನು ?

"ಯಾಕೆ ತುಂಬ ಡಿಪ್ರೆಸ್ಡ್ ಆಗಿ ಕಾಣ್ತೀಯಾ ?"

ಏನು ಹೇಳುವುದು? ಹೇಗೆ ಹೇಳುವುದು? ಅವಳು ಸಣ್ಣ ಮನಸ್ಸಿನವಳಲ್ಲ. ದೂರು, ದುಮ್ಮಾನ ಹೇಳುವ ಅಭ್ಯಾಸವಿರಲಿಲ್ಲ ಶಾರದಾಗೆ.

"ಏನಿಲ್ಲ ಅಂಕಲ್, ಇವತ್ತು ಒಂದೆರಡು ಪಿರಿಯಡ್ ಹೆಚ್ಚಿಗೆ ತಗೊಂಡಿದ್ದೆ; ಪೋರ್ಷನ್ ಕವರ್ ಆಗ್ಬೇಕಲ್ಲ" ಒಂದು ಕಾರಣ ಕೊಟ್ಟಳು.

ಅದನ್ನು ನಂಬಲಿಲ್ಲ: ಸಾಂಬಶಿವಯ್ಯ ಮಗ ನೋಡಿದ್ದನ್ನು ಯತಾರ್ಥ ವಿವರಿಸಿದ್ದರು "ನ್ಯೂ ಎಂಡ್ ಪಾರ್ಕ್ ಚೌಕದಲ್ಲಿ ನಿನ್ಮಗ ಸೊಸೆಯನ್ನು ಏಕಾಏಕಿ ಇಳ್ಸಿ ಹೋದಾಗ, ನನ್ನ ಮಗ ಶೀನು ಯಾರಿಗೋಸ್ಕರನೋ ಕಾಯುತ್ತ ನಿಂತಿದ್ನಂತೆ. ಅಲ್ಲಿ ಆಟೋಗಳು ಬರೋಲ್ಲ, ಬಸ್ಸುಗಳು ಕಡ್ಮೆ. ಅದು ಬಸ್ಸು ನಿಲ್ಲೋ ಜಾಗಕ್ಕೆ ಬಹಳ ದೂರ. ಏನಯ್ಯ ಇದ್ಕೇ ಅರ್ಥ ? ನನ್ಮಗ ಪರಿಚಯವಿರ್ಲಿಲ್ಲ ಎಂದು ಬಾಯಿ ಬಂದಂಗೆ ಬೈಯ್ದೇ. ಅಂಥ ಸ್ಥಳದಲ್ಲಿ ಇಳ್ಸಿ ಹೋಗೋಕೆ ಆ ಹುಡ್ಗಿ ಮಾಡ್ದ ತಪ್ಪೇನು ? ನೂರು ಜನಕ್ಕೆ ಸಾವಿರ ಜನಕ್ಕೆ ಪಾಠ ಹೇಳಿ ಕೊಡೊಂಥ ಉದ್ಯೋಗದಲ್ಲಿದ್ದಾಳೆ. ವಸಂತನಿಗೆ ಸ್ವಲ್ಪವಾದ್ರೂ ಹೃದಯ ಇಲ್ವಾ ! ನಂಗೂ ಒಮ್ಮೊಮ್ಮೆ ನಿನ್ನ ಮನೆಗೆ ನನ್ನ ಮಗ್ಳುನ ಕೊಡೋ ಆಸೆ ಇತ್ತು. ದೇವರು ಕಾಪಾಡ್ದ" ಮೇಲೆ ನೋಡಿ ಕೈಗಳನ್ನು ಜೋಡಿಸಿದ್ದರು.

ಕಾಶೀಪತಿಗಳ ನೆಲದ ಕೆಳಗಿನ ಭೂಮಿ ಕುಸಿದ ಅನುಭವವಾಗಿತ್ತು. 'ಎಲ್ಲಿಂದ, ಎಲ್ಲಿಗೆ ಹೋಯ್ತು' ಧೃತಿ ಗೆಟ್ಟವರಂತೆ ಮನೆಗೆ ಓಡಿ ಬಂದಿದ್ದರು.

"ಕುಡ್ಕೋಕೆ... ಏನಾದ್ರೂ ತರ್ತೀನಿ" ಅವರ ನೋಟವನ್ನೆದುರಿಸಲಾರದೆ ಮೇಲೆದ್ದ ಅವಳನ್ನು ಕೈ ಹಿಡಿದು ಕೂಡಿಸಿ "ನನ್ನ ಗೆಳೆಯ ಸಾಂಬಶಿವಯ್ಯನ ಮಗ ನಿನ್ನ ಸೌತ್ ಎಂಡ್ ಸರ್ಕಲ್‌ನಲ್ಲಿ ನೋಡಿದ್ನಂತೆ, ಮಧ್ಯಾಹ್ನದ ಬಿಸಿಲಲ್ಲಿ. ಯಾರನಾದ್ರೂ ಭೇಟಿ ಮಾಡ್ಬೇಕಿದ್ರೆ ಟ್ಯಾಕ್ಸಿ ಮಾಡ್ಕೊಂಡ್... ಹೋಗಬಹುದಿತ್ತು."

ಕಣ್ಣುಗುಡ್ಡೆಗಳನ್ನು ಕಂಬನಿಯ ಪ್ರವಾಹ ಆವರಿಸಿಕೊಂಡಿತು. "ಸಾರಿ, ಅಂಕಲ್..." ಎದ್ದು ಹೋಗಿಬಿಟ್ಟಳು.

ರಾತ್ರಿ ಊಟದ ಟೇಬಲ್ಲು ಬಳಿ ಶಾರದ ಬರಲಿಲ್ಲ. ತಲೆ ಸಿಡಿಯುತಿತ್ತು. ಮಾನಸಿಕವಾಗಿ ಎಷ್ಟು ಆಘಾತಗೊಂಡಿದ್ದಳೆಂದರೆ ಸಿವಿಯರ್ ಹಾರ್ಟ್ ಅಟ್ಯಾಕ್‌ಗೆ ಒಳಗಾದ ಪೇಷಂಟ್‌ನಂತೆ ಸುಸ್ತಾಗಿದ್ದಳು. ಊಟ, ಮಾತು, ಯಾವುದು ಬೇಡವಾಗಿತ್ತು.

"ಅಕ್ಕ, ಊಟಕ್ಕೆ ಬರ್ಬೇಕಂತೆ" ಗೋಪಿ ಹೇಳಿ ಹೋದನಂತರ ವಸಂತ ಬಂದು ಇಣಕಿದ "ಇಲ್ಲಿ ತಿರುಗು ಮುರುಗಾಯ್ತು, ಬಾ ಊಟಕ್ಕೆ" ಎಂದ. ಅವಳು ಅಲ್ಲಾಡಲಿಲ್ಲ. ವಸಂತನಿಗೆ ರೇಗಿಹೋಯಿತು. 'ಸ್ಟುಪಿಡ್ ಲೇಡಿ' ಬಯ್ದುಕೊಂಡು ಹೋದ.

ಕಾಶೀಪತಿಗಳ ಮನಸ್ಸಿಗೆ ನೋವಾಗಿತ್ತು. ಒಂಟಿಯಾಗಿ ಹಾದಿಯಲ್ಲಿ ಇಳಿಸಿ ಹೋಗುವ ವಸಂತನ ಕೈಯಲ್ಲಿ ಶಾರದ ಬಾಳು ಎಷ್ಟು ಅಭದ್ರ. ಸಮಸ್ಯೆಗಳು ಮೂಡಿದಾಗ ಕೂತು ಪರಿಹರಿಸಿಕೊಳ್ಳಬೇಕೇ ವಿನಃ ಇಂಥ ನಿರ್ಣಯವನ್ನು ಜಾರಿಗೆ ತಂದ ಮಗ ಕಟುಕನಾಗಿ ಕಂಡ.

"ಊಟಕ್ಕೆ ಬರ್ಬೇಕಂತೆ" ಗೋಪಿ ಹೇಳಿದ.

"ಶಾರದ ಬಂದಿದ್ದಾಳೆ ?" ಕೇಳಿದರು.

ಮಂಕಾಗಿದ್ದ ಗೋಪಿ ತಲೆ ಅಡ್ಡ ಡ್ಡ ಆಡಿಸಿದ "ಅಕ್ಕ ಮಲ್ಗಿಬಿಟ್ಟಿದ್ದಾರೆ, ಮಾತಾಡ್ಲೇ ಇಲ್ಲ" ವಿಷಯ ಮುಟ್ಟಿಸಿದ. ಮತ್ತಷ್ಟು ನೊಂದರು ಕಾಶೀಪತಿಗಳು.

"ನಂಗೂ ಹಸಿವಿಲ್ಲ, ನೀನು ಊಟ ಮಾಡಿ ಮಲ್ಗು ! ಏನೇನೋ ಕೆಲ್ಸ ಮಾಡಿ ಕೈ ನೋಯಿಸ್ಕೋಬೇಡ" ಎಚ್ಚರಿಸಿದರು.

ಗೋಪಿ ಅಡಿಗೆಯ ಮನೆಯ ಬಾಗಿಲಿಗೆ ಹೋಗಿ ಕುಕ್ಕರುಗಾಲಿನಲ್ಲಿ ಗುಬ್ಬಚ್ಚಿಯಂತೆ ಕೂತ. ಪದೇ ಪದೇ ಗುರಗುಡುವ ವಸಂತನೆಂದರೆ ಅವನಿಗೆ ಸ್ವಲ್ಪವೂ ಇಷ್ಟವಿಲ್ಲ.

ವಸಂತ ಹೋಗಿ ಬಾಲ್ಕನಿಯಲ್ಲಿ ಓಡಾಡಿ ಬಂದ. ಕಾಶೀಪತಿಗಳ ಛೇರ್ ಖಾಲಿ. ವಯಸ್ಸಾದರೂ ಎಂದೂ ರಾತ್ರಿಯ ಊಟ ಬಿಟ್ಟವರಲ್ಲ. ಅವರ ಆರೋಗ್ಯ, ಜೀರ್ಣಶಕ್ತಿ ಎರಡು ಚೆನ್ನಾಗಿದ್ದರಿಂದ ಹೊಟ್ಟೆಗೆ ಮೋಸ ಮಾಡುತ್ತಿರಲಿಲ್ಲ. 'ನಾನು ಸಾಕಷ್ಟು ರೇಷನ್ ಕೋಟಾ ಪಡೆದುಕೊಂಡಿದ್ದೀನಿ' ಎಲ್ಲರ ಮುಂದೆ ತಮ್ಮನ್ನು ತಾವೇ ತಮಾಷೆ ಮಾಡಿಕೊಳ್ಳುತ್ತಿದ್ದರು.

"ಅಪ್ಪ, ಮಾಡ್ಬನ್ನಿ" ಕರೆದ.

ಟಾಲ್‌ಸ್ಟಾಯ್ಸ್ ಅವರ ಸಣ್ಣ ಕತೆಗಳನ್ನು ಓದುತ್ತಿದ್ದವರು ನೋಟವೆತ್ತಿ, ಕನ್ನಡಕ ತೆಗೆದು ಮಗನನ್ನು ನೋಡಿದರು ದೀರ್ಘವಾಗಿ.

"ಶಾರದ ಬಂದಿದ್ದಾಳ ?" ಕೇಳಿದರು.

"ಇಲ್ಲ, ಅವಳಿಗೆ ಕಾಲೇಜಿನಿಂದ ಮನೆಗೆ ಬರೋಕೆ ಸುಸ್ತು. ಇಂಥವರು ಯಾಕೆ ಗೃಹಿಣಿಪಟ್ಟ ಕಟ್ಟಿಕೋಬೇಕಿತ್ತು ? ಮೋಸಹೋದ್ವಿ ! ಇವ್ಳಿಂದ ಏನು ಪ್ರಯೋಜನವಾಗಿದೆ ?" ಕಹಿ ವ್ಯಕ್ತಪಡಿಸಿದ.

ಕೋಪದಿಂದ ಕಾಶೀಪತಿಗಳು ಕೆಂಪಾದರು.

"ಆ ಪ್ರಶ್ನೆನ ನಿಂಗೆ ಹಾಕ್ಕೋ. ನಿನ್ನ ಕೈಯಲ್ಲಿ ತಾಳಿ ಕಟ್ಸಿಕೊಂಡಿದ್ದಕ್ಕೆ ಅವಳು, ಅದಕ್ಕೆ ಪೂರ್ತಿ ಕಾರಣನಾದ ನಾನು ಪಶ್ಚಾತ್ತಾಪಪಡ್ಬೇಕು ಗೆಟ್.... ಔಟ್...." ಅಬ್ಬರಿಸಿದರು.

ತಂದೆಯ ಕೋಪಕ್ಕೆ ಬೆರಗಾದ. ಪೂರ್ತಿ ಕನ್‌ಸ್ಟ್ರಕ್ಷನ್ ಕಂಪನಿ ಅವನಿಗೆ ವಹಿಸಿಕೊಟ್ಟ ಮೇಲೆ ವ್ಯವಹಾರದಲ್ಲಿ ತಲೆ ಹಾಕುವುದು, ಬುದ್ಧಿ ಹೇಳುವುದು ಅದನ್ನೆಲ್ಲ ಎಂದೋ ಬಿಟ್ಟಿದ್ದರು. ಆದ್ದರಿಂದ ವಿರಸ, ಕೋಪ, ಬೈಗಳಿಗೆ ಅವಕಾಶವೇ ಇರಲಿಲ್ಲ, ಈಗ...

ಸದಾ ಪ್ರೀತಿ, ಅಭಿಮಾನದ ಹೊಳೆಯನ್ನೆ ಹರಿಸುತ್ತಿದ್ದ ತಂದೆಯಿಂದ ಬೈಗಳು ತಿಂದಿದ್ದಕ್ಕೆ ತೀರಾ ಅವಮಾನವಾಗಿತ್ತು. ಅವನ ಅವಿವೇಕ, ಅದಕ್ಕೆ ಕಾರಣಕರ್ತಳು ಎಂದು ಶಾರದ ಕಡೆ ಬೊಟ್ಟು ಮಾಡುತಿತ್ತು.

ಊಟ ಮುಗಿಸಿ ಹಾಲು ಕುಡಿದು ರೂಮಿನ ಒಳಕ್ಕೆ ಬಂದ ಮೇಲೆ ಕುದಿದ, ಶಾರದ ಉದ್ಧಟಳಂತೆ ಕಂಡಳು. ತನ್ನ ಮೇಲೆ ದೂರನ್ನು ತಂದೆಯ ಬಳಿಗೆ ಒಯ್ದು, ಅವಳು ಪ್ರತಿಸ್ಪರ್ಧಿಯಂತೆ ಕಂಡಳು. ಇದು ಸೊಕ್ಕು, ಇದನ್ನು ತಾನು ಮುರಿಯಬೇಕು, ಮುರೀತೀನಿ-ಮನದಲ್ಲೆ ಶಪಥ ಮಾಡಿದ.

ಮಡದಿ ತನ್ನನ್ನು ಮಾತಾಡಿಸಬೇಕು, ಕ್ಷಮೆ ಕೋರಬೇಕೆಂದು

ಬಯಸಿದನೇ, ವಿನಃ ಇದರಲ್ಲಿ ತನ್ನ ಸಣ್ಣ ತಪ್ಪೇನಾದರೂ ಇದೆಯೇ ಎಂದು ಆಲೋಚಿಸಲಿಲ್ಲ. ರಾತ್ರಿಯಲ್ಲಿ ಜ್ವರದಿಂದ ನರಳಿದರೂ ಅವಳನ್ನು ಮಾತಾಡಿಸಲು ಹೋಗಲಿಲ್ಲ. ನಿದ್ದೆಯಲ್ಲಿ ಅವಳ ನರಳಿಕೆ ಕೇಳಲಿಲ್ಲವೋ, ಅಥವಾ ಬೇಕೆಂದು ನಿರ್ಲಕ್ಷಿಸಿದನೋ ಅವರಿಬ್ಬರ ನಡುವೆ ಒಂದು ತೆರೆ ಎದ್ದಿತು.

ತಲೆ ಭಾರ, ಮೈ ಬಿಸಿ ಬಿಸಿಯೆನಿಸಿದರೂ ಎದ್ದು ಸ್ನಾನಕ್ಕೆ ಹೋದ. ಶಾರದ, ಹೊರಗೆ ಬಂದಿದ್ದು ಅರ್ಧಗಂಟೆಯ ತರುವಾಯ ಬರೀ ನೀರು ನೀರು ವಾಂತಿ, ಹೆಜ್ಜೆ ಎತ್ತಿಡುವುದೇ ಕಷ್ಟವೆನಿಸಿ ಕುಸಿದಾಗ, ಗೋಪಿಯ ಬೊಬ್ಬೆಯಿಂದ ತಂದೆ-ಮಗ ಓಡಿ ಬಂದಿದ್ದು.

ಎರಡು ದಿನವಾದರೂ ಜ್ವರ ಬಿಡದಿದ್ದಾಗ ಡಾಕ್ಟರರ ಸಲಹೆಯಂತೆ ನರ್ಸಿಂಗ್ ಹೋಂಗೆ ಸೇರಿಸಿದರು. ನಾಲ್ಕು ದಿನದ ಜ್ವರ ಅವಳ ಶರೀರ ತೀರಾ ದುರ್ಬಲಗೊಳಿಸಿತು. ಮಾನಸಿಕವಾಗಿ ತೀರಾ ಆಘಾತಗೊಂಡಿದ್ದ ಅವಳು ಬೇಗ ಚೇತರಿಸಿಕೊಳ್ಳಲಿಲ್ಲ. ಒಂದು ತಿಂಗಳು ನರ್ಸಿಂಗ್ ಹೋಂನಲ್ಲಿ ಉಳಿದುಬಿಟ್ಟಳು. ಮನೆಯ ವಾತಾವರಣಕ್ಕಿಂತ ಇದು ಸ್ವಲ್ಪ ಹಾಯೆನಿಸಿತು. ಮೊದಮೊದಲು ಸ್ವಲ್ಪ ಮೃದುವಾಗಿ ಮಾತಾಡುತ್ತಿದ್ದ ವಸಂತ, ಈಗ ನರ್ಸಿಂಗ್ ಹೋಂಗೆ ಮುಖ ಬಿಗಿದೇ ಬರುತ್ತಿದ್ದ. ಇದನ್ನು ಗಮನಿಸಿ ಗಮನಿಸಿ ಸಾಕಾದರು ಕಾಶೀಪತಿಗಳು.

ಅಂದು ಸಾಯಂಕಾಲ ಕ್ಲಬ್‌ಗೂ ಹೋಗದೆ ಮನೆಯಲ್ಲಿಯೇ ಕಾದು ಕೂತರು ಮಗನಿಗಾಗಿ. ಒಂದು ರೀತಿಯ ಟೆನ್‌ಷನ್. ಮಗ ಈಗ ಸಹಕರಿಸದಿದ್ದರೇ ಶಾರದ ಚೇತರಿಸಿಕೊಳ್ಳುವುದು ಹೇಗೆ ?

"ಯಜಮಾನ್ರೇ, ಅಕ್ಕನ್ನ ಯಾವಾಗ ಕರ್ಕಂಡ್ ಬರ್ತೀರಾ? ತುಂಬ ಬೇಜಾರಾಗಿದೆ" ಕಾಫಿ ತಂದಿಟ್ಟವನು ಬಿಕ್ಕಿ ಬಿಕ್ಕಿ ಅಳಲು ಷುರು ಮಾಡಿದಾಗ, ಅರಿವಾಗದಂತೆ ಒದ್ದೆಯಾಯಿತು ಅವರ ಕಂಗಳು.

"ನಿಮ್ಮಕ್ಕ ಎಲ್ಹೋಗ್ತಾರೆ ? ನಾಳಿದ್ದು ಬರ್ತಾರೆ."

"ಅಣ್ಣಾವ್ರು.... ಬಂದ್ರು" ಹೊರಗೆ ಓಡಿದ.

ಪ್ರತಿ ಸಲ ಕಾರು ಬಂದಾಗಲೂ ಗೋಪಿ ಓಡಿ ಹೋಗಿ ಗೇಟು ತೆರೆಯಬೇಕು. ಇದು ಪದ್ಧತಿ. ಆಕಸ್ಮಾತ್ ಗೋಪಿ ಇಲ್ಲದಿದ್ದಾಗ ಕಾಶೀಪತಿಗಳು, ಶಾರದನಾದರೂ ತೆಗೆಯಬೇಕಿತ್ತು. ಎಷ್ಟೋ ಸಲ ಮಗನ ಮೇಲೆ ರೇಗಿಕೊಂಡಿದ್ದರು.

"ಒಳಗಿದ್ದಾಗ ಕೆಲವೊಮ್ಮೆ ಕೇಳಿಸೋಲ್ಲ. ಕಾರ್‌ನಿಂದ ಇಳಿದು ಗೇಟು ತೆಗ್ದುಕೊಂಡು ಬರೋಕೇನು ?" ಕೆಲವೊಮ್ಮೆ ಹೇಳಿದ್ದು. ಪ್ರಯೋಜನಕ್ಕೆ ಬಂದಿರಲಿಲ್ಲ. ಅದನ್ನು ಕಾಶೀಪತಿಗಳು ವಿಪರೀತವಾಗಿಯೇನು ಭಾವಿಸಲಿಲ್ಲ.

ಮಗನೊಂದಿಗೆ ಇಂದು ಸವಿಸ್ತಾರವಾಗಿ ಮಾತಾಡಬೇಕೆನಿಸಿತು. ಶಾರದನ ನರ್ಸಿಂಗ್‌ಹೋಂಗೆ ಸೇರಿಸಿದ ನಂತರ 'ಮಗ ಅವಳನ್ನು ನ್ಯೂ ಎಂಡ್ ಸರ್ಕಲ್‌ನಲ್ಲಿ ಇಳಿಸಿದ್ದೇಕೆ ?' ಇದೊಂದು ಪ್ರಶ್ನೆಗೆ ಉತ್ತರ ಸಿಗುವ ಮುನ್ನವೇ ಒಂದು ಆಘಾತ ನಡೆದುಹೋಗಿತ್ತು.

"ನರ್ಸಿಂಗ್ ಹೋಂಗೆ ಹೋಗಿದ್ಯಾ ?" ಕೇಳಿದರು.

"ಅಲ್ಲಿಂದ಼್ೇ ಬರ್‍ತಾ ಇರೋದು" ಹೇಳಿ ರೂಮಿಗೆ ಹೋದ.

ಜ್ವರ ಕಮ್ಮಿಯಾಗಿದ್ದರು ಶಾರದ ಮಾನಸಿಕವಾಗಿ ಚೇತರಿಸಿಕೊಂಡಿಲ್ಲವೆಂದು ವಸಂತನಿಗೆ ಗೊತ್ತು. ಯಾಕೆ? ಉತ್ತರ ಗೊತ್ತಿದ್ದರೂ ಅವನ 'ಅಹಂ' ಅವಳನ್ನೆ ದೋಷಮುಕ್ತಳನ್ನಾಗಿ ಮಾಡುತಿತ್ತು.

ಗೋಪಿನ ಹೊರಗಡೆ ಕಳಿಸಿ ಮಗನ ಬರುವಿಗಾಗಿ ಹೊರಗೆ ಕಾದು ಕೂತಿದ್ದರು. ಅವರಿಬ್ಬರ ಮಧ್ಯದ ವಿರಸ ಚದುರಿ ಹೋಗಬೇಕು. ಇಲ್ಲದಿದ್ದರೇ ಶಾರದ ಚೇತರಿಸಿಕೊಳ್ಳಲಾರಳು.

"ಗೋಪಿ....." ಎಂದುಕೊಂಡೇ ಹೊರಗೆ ಬಂದ ವಸಂತ "ಅವ್ನ ಹೊರ್ಗಡೆ ಕಳ್ಸಿದ್ದೀನಿ. ನಾನೇ ಕಾಫಿ ತರ್ತೀನಿ" ಎಂದು ಹೋಗಿ ಎರಡು ಕಪ್ ಕಾಫಿ ಬೆರೆಸಿಕೊಂಡು ಬಂದರು.

ಕಪ್‌ಗಳು ಬರಿದಾಗುವವರೆಗೂ ಸುಮ್ಮನೆ ಕೂತರು. "ಶಾರದ ಹೇಗಿದ್ದಾಳೆ ?" ಕೇಳಿದರು. ಎರಡು ನಿಮಿಷ ಮೌನವಾಗಿದ್ದು "ಡಾಕ್ಟ್ರು, ಎಲ್ಲಾ ನಾರ್ಮಲ್ ಅಂದರು. ಮತ್ತೇನು, ನಾಳಿದ್ದು ಕರ್ಕೊಂಡ್ ಬರೋದು" ಕೆಮ್ಮಿ ಗಂಟಲು ಸರಿ ಪಡಿಸಿಕೊಂಡ. ಭಾವನೆಗಳ ಏರಿಳಿತವಿರಲಿಲ್ಲ ಅವನ ಮುಖದ ಮೇಲೆ.

"ನೀನು ಶಾರದನ ನ್ಯೂ ಎಂಡ್ ಸರ್ಕಲ್‌ನಲ್ಲಿ ಇಳ್ಸಿ ಬಂದಿದ್ದು ಯಾಕೆ! ಉತ್ತರ ಹೇಳಿ ಎದ್ದೋಗು" ಕಾಶೀಪತಿಗಳ ದನಿ ಕಠಿಣವಾಗಿತ್ತು.

ಅಂಥ ಬುದ್ದಿವಂತ, ವಿವೇಕಿ ಎರಡು ಅಲ್ಲ. ಸಂದರ್ಭವನ್ನು ವಿವರಿಸಿದಾಗ ದಿಗ್ಭ್ರಮೆಗೊಂಡರು ಕಾಶೀಪತಿಗಳು.

"ಹತ್ತು ನಿಮಿಷದಲ್ಲಿ ನಾನು ವಾಪಸ್ಸು ಬಂದೇ ! ಶಾರದ ಅಲ್ಲಿ ಇರಲೇ

ಇಲ್ಲ. ಎಂಥಾ... ಧಿಮಾಕು !" ಎಂದ. ಇಂದಿಗೂ ಆರೋಪ ಅವಳ ಮೇಲೆನೇ. ಸ್ವಲ್ಪ ಕೂಡ ಪಶ್ಚಾತ್ತಾಪ ಪಡದ ಮನಸ್ಸು.

ಕಾಶೀಪತಿಗಳು ತುಟಿ ಕಚ್ಚಿ ನೋವು, ಕೋಪ ನುಂಗಿದರು. ಈಗ ಅವರಿಗೆ ಸ್ವಲ್ಪ ದುಡುಕಿದರೂ ಮಗ, ಸೊಸೆಯ ನಡುವೆ ಅನ್ಯೋನ್ಯತೆ ಮೂಡದೆಂಬ ನಿರ್ಧಾರಕ್ಕೆ ಬಂದಿದ್ದರಿಂದ ಸಮಾಧಾನವಹಿಸಿದರು.

"ವಸಂತ್, ಸೇತುರಾಮ್ ಸಾವು ಶಾರದ ಪಾಲಿಗೆ ದೊಡ್ಡ ಆಘಾತವಾಗಿತ್ತು. ತಕ್ಷಣಕ್ಕೆ ನಾವು ತಿಳಿಸದಿದ್ರೂ... ಫೋನ್ ಮುಖಾಂತರ ಅವರನ್ನು ಸಂಪರ್ಕಿಸೋ ಪ್ರಯತ್ನ ಮಾಡ್ತಾಳೆ. ಈ ಸ್ಥಿತಿಯಲ್ಲಿ ನಿನ್ನ ಒಲವೇ ಅವಳಿಗೆ ಶ್ರೀರಾಮ ರಕ್ಷೆ. ಹೇಗೆ ಸಮಾಧಾನಿಸ್ತೀಯೋ ಏನೋ" ಮಗನ ಮೇಲೆ ಜವಾಬ್ದಾರಿ ವಹಿಸಿದರು.

ವಸಂತ ಸುಮ್ಮನೆ ಎದ್ದು ರೂಮಿಗೆ ಹೋದ. ಈಗಲೂ ಅವಳ ಒಂದೊಂದು ತಪ್ಪುಗಳನ್ನು ಲೆಕ್ಕ ಹಾಕುತ್ತಿದ್ದ. ತಾನು ಅಲ್ಲಿ ಇಳಿಸಿ ಹೋದರೂ ಬರುವವರೆಗೂ ಶಾರದ ಕಾಯಬೇಕಿತ್ತು. ತನಗಿಂತ ಅವಳಿಗೆ ಕಾಲೇಜ್ ಹೆಚ್ಚಾಯಿತು. ಇದೇ ಮೂಡ್‌ನಲ್ಲಿ ಬಹಳಷ್ಟು ಹೊತ್ತು ಕಳೆದ.

ರಾತ್ರಿ ಕಾಶೀಪತಿಗಳು ಅವನು ಕೂಡಿಯೇ ಹೋಗಿದ್ದು. ಪ್ರೊಫೆಸರ್ ರಂಗೇಗೌಡರು, ಮಾಧವಿ ನೋಡಲಿಕ್ಕೆ ಬಂದಿದ್ದರು. ಅವಳು ನರ್ಸಿಂಗ್ ಹೋಂಗೆ ಅಡ್ಮಿಟ್ ಆದನಂತರ ಮೂರನೇ ಸಲ ಬಂದದ್ದು. ಸ್ವಲ್ಪ ಮುಖ ಗಂಟಿಕ್ಕುವಂತಾಯಿತು ವಸಂತನಿಗೆ. ಹೊರಗೆ ಹೋಗಿಬಿಟ್ಟ. ಅವರುಗಳ ಜೊತೆ ಕಾಶೀಪತಿಗಳು ಮಾತಾಡಿದರು, ಹತ್ತು ನಿಮಿಷ. ಹೊರಟಾಗ ಕಾರಿನವರೆಗೂ ಬಂದು ಬೀಳ್ಕೊಟ್ಟರು. ಶಾರದ ನರ್ಸಿಂಗ್ ಹೋಂಗೆ ಸೇರಿದಾಗಿನಿಂದ ಕಾಲೇಜಿನ ಪ್ರಿನ್ಸಿಪಾಲ್, ಸಿಬ್ಬಂದಿಯಿಂದ ಹಿಡಿದು ಒಬ್ಬರಲ್ಲ ಒಬ್ಬರು ಬರುತ್ತಿದ್ದುದು ವಸಂತನ ಒಡಲಲ್ಲಿ ಬೆಂಕಿ ಹಚ್ಚಿದಂತಾಗಿತ್ತು. ಒಳ ಮುಖದಲ್ಲಿ ಕಿಡಿ ಕಾರುತ್ತಿದ್ದರೂ ಮೇಲ್ಮುಖವಾಗಿ ಏನು ಅನ್ನಲಾರದೆ ಹೋಗಿದ್ದ.

"ಯಾಕೆ ಬರ್ತಾರೆ, ಈ ಜನ? ಇವ್ರು ಬಂದು ನೋಡಿ ಹೋಗೋದ್ರಿಂದ ಅವ್ಳ ಆರೋಗ್ಯ ಸುಧಾರಿಸಿಬಿಡುತ್ತಾ ?" ಮುಜುಗರವನ್ನ ತಂದೆಯ ಮುಂದೆ ತೋಡಿಕೊಂಡಿದ್ದ.

ಅವರು ತುಟಿ ತೆರೆದಿರಲಿಲ್ಲ. ವಸಂತನಿಗೆ ಗೆಳೆಯರು ಇದ್ದಿದ್ದೇ ಕಡಿಮೆ. ಆಕಸ್ಮಾತ್ ಅವನ ಪರಿಚಯದವರು ಬಂದರೂ ರಾಜೋಪಚಾರ, ಗೋಪಿಗೆ

ಬೈಗಳು, ಶಾರದ ಬಗ್ಗೆ ಒಂದಿಷ್ಟು ಟೀಕೆ. ಇಂಥ ದೃಶ್ಯಗಳು ಪದೇ ಪದೇ ಕ್ರಿಯೇಟ್ ಆಗುತ್ತಿತ್ತು ಮನೆಯಲ್ಲಿ.

"ಬರ್ತೀವಿ, ಶಾರದ......" ಹೇಳಿ ಹೊರಟ ಅವರಿಗೆ ಕಾರಿಡಾರ್‌ನಲ್ಲಿ ವಸಂತ ಎದುರಾದರೂ ಮಾತಾಡಿಸಲಿಲ್ಲ "ಈಡಿಯಟ್... ರೋಗ್...." ಮಾಧವಿ ಮನದಲ್ಲಿಯೇ ಅಂದುಕೊಂಡಳು. ಅಂಥ ವ್ಯಕ್ತಿಯೊಂದಿಗೆ ಶಾರದ. ಸಾಂಗತ್ಯ-ಒಂದು ಕೆಟ್ಟ ಚಲನಚಿತ್ರವೆನಿಸಿತು.

ಬಂದ ವಸಂತ ಪ್ರೊಫೆಸರ್ ರಂಗೇಗೌಡರು ಎದ್ದು ಹೋದ ಛೇರ್‌ನಲ್ಲಿ ಕೂತು "ಯಾಕೆ ಬರ್ತಾನೆ, ಈ ಪ್ರೊಫೆಸರ್ ?" ಹಲ್ಲು ಕಡಿದ.

"ಏನು ವಸಂತ ನಿನ್ನ ಮಾತಿನ ಅರ್ಥ ? ರಂಗೇಗೌಡರು ಶಾರದ ಒಂದೇ ಕಾಲೇಜಿನಲ್ಲಿ ಕೆಲ್ಸ ಮಾಡೋರು. ಹುಷಾರಿಲ್ಲಾಂತ ತಿಳಿದ್ಮೇಲೆ ಬಂದು ನೋಡೋದು ಸಹಜ, ಸ್ವಾಭಾವಿಕ. ಅದು ನಿಂಗ್ಯಾಕೇ ಅರ್ಥವಾಗೋಲ್ಲ" ಎಂದರು ಕಾಶೀಪತಿಗಳು.

"ಮೂರು .... ಮೂರು ಸಲ ಬರೋದೇಕೆ ?" ಮತ್ತೆ ಅದೇ ಸಿಡಿಮಿಡಿ. ಕಾಶೀಪತಿಗಳು ಮತ್ತಷ್ಟು ಸಹನೆ ತಂದುಕೊಂಡರು "ಪ್ರಿನ್ಸಿಪಾಲ್ ನರೋತ್ತಮ್ ಪ್ರತಿ ದಿನ ಕಾಲೇಜಿಗೆ ಹೋಗುವ ಮುನ್ನ ಒಮ್ಮೆ ಶಾರದನ ನೋಡ್ಕೊಂಡ್ಹೋಗಿದ್ದಾರೆ" ಸಮರ್ಥಿಸಿಕೊಂಡರು.

ಗೊಣಗುಟ್ಟಿ ಎದ್ದು ಹೋದವನು ಹತ್ತು ನಿಮಿಷದ ನಂತರ ಮತ್ತೆ ಬಂದಾಗ ಕಾಶೀಪತಿಗಳು ಅವರುಗಳು ಮಾತಾಡಲಿಯೆಂದು ಎದ್ದು ಹೋದರು.

"ಯಾಕೆ ಒಂದು ತರಹ ಇದ್ದೀರಾ ?" ಅವಳೇ ಕೇಳಬೇಕಾಯಿತ್ತು. "ಇನ್ನು ಹೇಗಿರೋಕೆ ಸಾಧ್ಯ ? ನಾನು ಇರೋದೇ ಹೀಗೇ. ನಿಂಗೇನಾದ್ರೂ ದೃಷ್ಟಿದೋಷ ಬಂದಿದ್ಯಾ ? ನಿನ್ನ ಮುಖಕ್ಕೆ ಕನ್ನಡಕವೊಂದೇ ಕೊರತೆ" ಕೆಂಡಗಳ ಉಂಡೆಗಳ್ನ ಉರುಳಿದ್ದು.

ಭಾರವಾದ ಉಸಿರನ್ನ ಹಾಗೇ ಹಿಡಿದಿಟ್ಟಳು. ವಸಂತನ ಉಸಿರು ಕೂಡ ಕೆಂಡದ ಕಿಡಿಗಳನ್ನೆ ಕಕ್ಕುತಿತ್ತು. ಏನು ಮೋಡದ ಕಪ್ಪನೆಯ ತೆರೆಯೊಂದು ಮೇಲೆದ್ದಂತಾಯಿತು. ಆರಾಮಾಗಿ ಮಲಗಿ ಕಣ್ಮುಚ್ಚಿಕೊಂಡಳು.

ವಸಂತ ಹೊರಗೆ ಹೋದ. ಹಲ್ಲುಗಳನ್ನು ಬಿಗಿಯಾಗಿ ಕಚ್ಚಿಡಿದ. 'ನಗು ನಗುತ್ತ ಬೇರೆಯವರೊಂದಿಗೆ ಮಾತಾಡುವ ಶಾರದ ತನ್ನೊಂದಿಗೆ ಹಾಗೇಕೆ ವರ್ತಿಸುತಾಳೆ ? ' ಮೂರ್ಖನಾಗಿ ಯೋಚಿಸಿದ. ನಳನಳಿಸುವ

ಮಲ್ಲಿಗೆಯ ಕಂಪಿಗೆ ವಿಕಸಿಸುವ ಮೂಗು, ಕೆಟ್ಟ ವಾಸನೆ ಕಂಡಾಗ, ಎಷ್ಟು ರೀತಿಯ ವಿರೋಧ ವ್ಯಕ್ತಪಡಿಸುತ್ತದೆ. ಬದುಕು ಕೂಡ ಇದೇ ರೀತಿಯಲ್ಲವಾ?

"ಯಾಕೆ, ಒಬ್ಬೇ ನಿಂತಿದ್ದೀಯಾ ?" ಕಾಶೀಪತಿಗಳು ಬಂದು ಕೇಳಿದರು. "ಮತ್ತೇನು ಮಾಡ್ಲಿ ? ಅವ್ರಿಗೆ ನನ್ನೊತೆ ಮಾತಾಡೋಕೆ ಇಷ್ಟವಿಲ್ಲ. ಹೋಗೋಣ, ನಂಗೆ ಬೇಕಾದಷ್ಟು ಕೆಲ್ಸ ಇದೆ" ಆಕ್ರೋಶ ವ್ಯಕ್ತಪಡಿಸಿದ.

ಬಂದ ಕಾಶೀಪತಿಗಳು ಅವಳ ಬಳಿಯಲ್ಲಿ ಕೂತು "ವ್ಯವಹಾರದ. ಏರುಪೇರು ಒಂದೆರಡು ಗೌರ್ನಮೆಂಟ್ ಕಂಟ್ರಾಕ್ಟ್‌ಗಳು ತಪ್ಪಿಹೋಯ್ತೂಂತ ಟೆನ್‌ಷನ್. ನೀನೇನು ಮನಸ್ಸಿಗೆ ನೋವು ಮಾಡ್ಕೋಬೇಡ" ಎಂದರು.

"ನೀವು ಅವ್ರಿಗೆ ಒಂದಿಷ್ಟು ಹೆಲ್ಪ್ ಮಾಡಿ ಅಂಕಲ್. ಹಣ, ಹೆಸರಿಗಿಂತ ಮನಶಾಂತಿ ಕೂಡ ಮುಖ್ಯ. ನೀವೇ ತಿಳಿ ಹೇಳಿ, ನನ್ನಿಂದ ತಪ್ಪಾಗಿದ್ರೆ... ಸಾರಿ".

"ಓಕೇ, ಕಳುಸ್ತೀನಿ. ನೀನು ಒಂದೆರಡು ಮಾತುಗಳ್ನ ಹೇಳು. ನೀನು ನರ್ಸಿಂಗ್ ಹೋಂಗೆ ಬಂದ್ಮೇಲೆ ಸರ್‍ಯಾಗಿ ಊಟ ಮಾಡಿಲ್ಲ. ನೀನು ಬಂದ್ಮೇಲೆ ಎಲ್ಲಾ ಸರಿ ಹೋಗುತ್ತೆ" ಧೈರ್ಯದ ನುಡಿಗಳನ್ನಾಡಿದರು ಕಾಶೀಪತಿಗಳು.

'ಇದನ್ನು ನಂಬಬೇಕೆ ?' ಅವಳ ಮಿದುಳು ಪ್ರಶ್ನಿಸಿತು. ಮನಸ್ಸು 'ನಂಬಿದರೇ ನಿನ್ನ ಮನಸ್ವಾರ್ಥಕ್ಕೆ ಒಳ್ಳೇದು' ಬುದ್ಧಿ ಹೇಳಿತು.

ವೇಗವಾಗಿ ಬಂದ ವಸಂತ "ಯಾಕೆ, ಹೇಳಿ ಕಳಿಸಿದ್ದು ?" ಕೇಳಿದ. ನೋಟವೆತ್ತಿದ ಶಾರದ "ಕೂತ್ಕೊಳ್ಳಿ, ಯಾಕೆ ಸುಮ್ನೆ ಟೆನ್‌ಷನ್ ಮಾಡ್ಕೊಳ್ಳಿತೀರಾ ? ಎಷ್ಟೋ ಸಲ ಅಂಕಲ್ ನಿಮ್ಮನ್ನ ಹೊಗಳಿದ್ದಾರೆ. ಒಂದೆರಡು ದಿನ ಎಲ್ಲಾದ್ರೂ ಹೋಗ್ಬರೋಣ. ಅಂಕಲ್ ಮತ್ತು ನಮ್ಮ ಪ್ರಿನ್ಸಿಪಾಲರು ಇದೇ ಸಜೆಷನ್ ಕೊಟ್ಟಿದ್ದಾರೆ" ನವಿರಾಗಿ ಅವನ ಮನವೊಲಿಸುವಂತೆ ನುಡಿದಳು.

"ಪೂಸಿ ಹೊಡೆಯೋದು, ಸುತ್ತಾಡೋದು ಬಿಟ್ಟರೇ ಇನ್ನೊಂದು ಕೆಲ್ಸ ಇರೋಲ್ಲ ನಿಮ್ಗೇ. ನಾನೇನು ಸೋಮಾರಿಯಲ್ಲ. ಹೇಗೂ, ಮನೆಗೆ ಬರ್ತೀಯಲ್ಲ, ಆಮೇಲೆ ಈ ಮಾತುಗಳ್ನ ಆಡಬಹುದಿತ್ತು" ಒರಟಾಗಿ ಬಾಗಿಲನ್ನು ತಳ್ಳಿಕೊಂಡು ಹೋಗಿಬಿಟ್ಟ.

ನರ್ಸಿಂಗ್ ಹೋಂನಲ್ಲಿ ಇದು ತೀರಾ ವಿ.ಐ.ಪಿ.ಗಳಿಗಾಗಿ ಕಾದಿರಿಸಿದ್ದ ಅತಿ ಕಾಸ್ಟ್ಲಿ ರೂಮು. ಅದೇ ಬೇಕೆಂದು ತಗಾದೆ ಮಾಡಿದ್ದ ವಸಂತ.

ಇಲ್ಲಿ ಫ್ರಿಜ್‌ನಿಂದ ಸೋಫೆಸ್ಟಿಕೇಟೆಡ್ ಅನುಕೂಲಗಳೆಲ್ಲ ಇತ್ತು. ಇಂಥ ಏರ್ಪಾಟು ಮಾಡಿದ ಎಷ್ಟೋ ಅಪರೂಪದ 'ಪತಿ'ಗಳಲ್ಲಿ ತಾನೊಬ್ಬ ಎನ್ನುವ ಅಹಂಕಾರ.

ಮತ್ತೆ ಬಂದರು ಕಾಶೀಪತಿಗಳು.

"ಅಂಕಲ್, ತಾತ ಸಿಕ್ಕಿದ್ರಾ ? ನಾನು ಎರ್ಡು ಸಲ ಸಂಪರ್ಕಿಸಿದಾಗ್ಲೂ ಚಿಕ್ಕಪ್ಪನೇ ಸಿಕ್ಕಿದ್ದು. ಸ್ವಿಜರ್‌ಲೆಂಡ್‌ಗೆ ಹೋಗಿದ್ದಾರೆ. ತಮ್ಮನೇಬರ್ ಜೊತೆ ಅಂದ್ರು. ಮನೆಗೆ ಫೋನ್ ಮಾಡಿದ್ರಾ ?" ವಿಚಾರಿಸಿದಳು. ಬಂದಾಗಲೆಲ್ಲ ಅವಳು ಕೇಳುತ್ತಿದ್ದುದು ಇದೇ. ಸೇತುರಾಮ್ ಮಾತು, ಮಮತೆಗಾಗಿ ಕಾತರಿಸುತ್ತಿದ್ದಳು. ಆದರೆ ತನ್ನ ಅನಾರೋಗ್ಯ ತಿಳಿಸುವುದಕ್ಕೆ ಮಾತ್ರ ವಿರುದ್ಧ 'ಅಂಕಲ್ ನರ್ಸಿಂಗ್ ಹೋಂ, ಜ್ವರ ಅದೆಲ್ಲ ಏನು ತಿಳಿಸ್ಬೇಡಿ' ರಿಕ್ವೆಸ್ಟ್ ಮಾಡಿಕೊಂಡಿದ್ದಳು.

"ನಾನು ಮರ್ತ್ತೇ ಬಿಟ್ಟಿದ್ದೆ. ನೆನ್ನೆ ರಾತ್ರಿ ಕೂಡ ಫೋನ್‌ನಲ್ಲಿ ವಿಚಾರಿಸಿದರು. ಕಾಲೇಜಿನಿಂದ ಟೂರ್ ಹೋಗಿದ್ದಾಳೆ ಎಂದಿದ್ದಕ್ಕೆ ನೂರು ಪ್ರಶ್ನೆಗಳು. ನಂಗಂತು ಹೇಳಿ, ಹೇಳಿ ಸಾಕಾಯ್ತು. ನಿನ್ಜೊತೆ ಮಾತಾಡೋವರ್ಗೂ ನಾನು ಏನ್ಹೇಳಿದ್ರೂ ಅವ್ರಿಗೆ ಸಮಾಧಾನವಿಲ್ಲ' ಎಂದರು. ಸುಳ್ಳನ್ನು ಅತ್ಯಂತ ನವಿರಾಗಿ ಹೊಸೆದು ಅವಳ ಮುಂದಿಡುವುದು ಪ್ರಯಾಸವೆ.

ತಂದೆ, ಮಗ ನರ್ಸಿಂಗ್ ಹೋಂನಿಂದ ಬಂದಾಗ ಗಂಭೀರವಾಗಿದ್ದರು. ಇಬ್ಬರು ವಿಭಿನ್ನವಾಗಿ ಆಲೋಚಿಸುತ್ತಿದ್ದರು. 'ತಾನು ತಪ್ಪು ಮಾಡದ ವ್ಯಕ್ತಿ ಎನ್ನುವ ಭ್ರಮೆ' ವಸಂತನಿಗೆ. 'ಇವನ ಇಷ್ಟೊಂದು ಮೊಂಡುತನವನ್ನು ಹೇಗೆ ಸಹಿಸಿಯಾಳು ?' ಎನ್ನುವ ಸಂಧಿಗ್ಧತೆ ಕಾಶೀಪತಿಗಳಲ್ಲಿ.

"ನಾನು ಹೊರ್ಗಡೆ ಹೋಗ್ಬರ್ತೀನಿ" ಹೊರಟವನ ಭುಜದ ಮೇಲೆ ಕೈ ಹಾಕಿ ಕಾರಿನವರೆಗೂ ಬಂದ ಕಾಶೀಪತಿಗಳು "ವಸಂತ, ನೀನು ತುಂಬ ತಪ್ಪು ಮಾಡ್ತಾ ಇದ್ದೀಯಾ ಒಡೆದ ಕನ್ನಡಿಯಲ್ಲಿ ಒಳ್ಳೆ ಪ್ರತಿಬಿಂಬ ಕಾಣ ಸಿಗದು. ಶಾರದ ಮನಸ್ಸು ನಿನ್ನ ವಿಷ್ಯದಲ್ಲಿ ಒಡೆದ ಕನ್ನಡಿಯಂತಾಗ್ಬಾರ್ದು" ವಿವೇಕ ಬೋಧಿಸಿದರು.

"ನಾನು ಕೆಟ್ಟವನು ಅಂತ ನಿಮ್ಮ ಅಭಿಪ್ರಾಯನಾ ?" ಬಾಣದಂತೆ ಬಂತು ಅವನ ಪ್ರಶ್ನೆ "ಖಂಡಿತ ಅಲ್ಲ, ಆ ಲಿಸ್ಟ್‌ಗೆ ಸೇರಿಸೋಕ್ಕಾಗೋಲ್ಲ. ಜೈಲಿನಿಂದ ಹೊರ್ಗಡೆ ಇರೋಂಥ ಅಪರಾಧ ಮಾಡ್ತಾ ಇದ್ದೀಯಾ ? ಯಾಕೆ

ಆ ಹುಡ್ಗೀನ ದ್ವೇಷಿಸ್ತೀಯಾ?"

"ಯಾರು ನಿಮ್ಗೇ ದ್ವೇಷಿಸ್ತೀನೀಂತ ಹೇಳಿದ್ದು ? ನಾನು ಪ್ರೀತಿಸಿಯೇ ಅವಳ್ನ ವಿವಾಹವಾಗಿದ್ದು ! ಇನ್ನೊಬ್ಬ ಹೆಣ್ಣಿಗೆ ನನ್ನ ಹೃದಯದಲ್ಲಿ ಜಾಗವಿಲ್ಲ" ಕಡ್ಡಿ ಎರಡು ತುಂಡು ಮಾಡಿದಂತೆ ಹೇಳಿದ್ದು ಅವರಿಗೆ ಒಂದಿಷ್ಟು ಸಮಾಧಾನ ನೀಡಿತು.

ಆಕಾಶದತ್ತ ನೋಡಿದರು. ಅಲ್ಲಲ್ಲಿ ಗುಂಪುಗೂಡಿದ್ದ ಕರೀ ಮೋಡಗಳು ಮಳೆ ಬರುವ ಭ್ರಮೆ ಹುಟ್ಟಿಸುತಿತ್ತೇ ವಿನಃ ಮಳೆ ಸುರಿಸುವ ತಯಾರಿಯಲ್ಲಿರಲಿಲ್ಲ.

* * * *

ಬೆಳಿಗ್ಗೆ ಬೆಳಿಗ್ಗೆಯೇ ಪ್ರೋಫೆಸರ್ ರಂಗೇಗೌಡರು ಒಂಟಿಯಾಗಿಯೇ ಅವಳನ್ನು ನೋಡಲು ಬಂದರು. ಹತ್ತು ನಿಮಿಷ ಬಿಟ್ಟು ಮಾಧವಿ ಬಂದಳು.

"ಹೇಗಿದ್ದೀಯಾ, ಶಾರದ ?" ಆತ್ಮೀಯವಾಗಿ ವಿಚಾರಿಸಿದು.

"ಕ್ವೈಟ್ ಆಲ್‌ರೈಟ್, ಸರ್. ಬರೀ ರೆಸ್ಟ್‌ಗೋಸ್ಕರ ಇಲ್ಲಿ ಉಳ್ದುಕೊಂಡಿದ್ದು. ನಾಳೆ ದಿನ ಮನೆಗೆ ಹೋಗ್ತೀನಿ. ನಾಳಿದ್ದರಿಂದ ಕಾಲೇಜಿಗೂ ಬರ್ತೀನಿ" ಎಂದಳು ಉತ್ಸಾಹದಿಂದ.

"ತುಂಬ ಸಂತೋಷ. ನಾನು ಈಗಾಗ್ಲೇ ನನ್ನ ವಾಲಂಟರಿ ರಿಟೈರ್ಡ್‌ಮೆಂಟ್ ಪತ್ರ ಮ್ಯಾನೇಜ್‌ಮೆಂಟ್‌ಗೆ ಸಲ್ಲಿಸಿದ್ದೀನಿ. ಇನ್ನು ಉಳಿದ ನನ್ನ ದಿನಗಳ್ನ ಅಧ್ಯಯನ, ಪುಸ್ತಕ ಸಿದ್ಧ ಮಾಡೋಕೆ ಮೀಸಲಾಗಿಡ್ಬೇಕೂಂತ ತೀರ್ಮಾನ ಮಾಡಿದ್ದೀನಿ. ಅದ್ಕೆ ನಂಗೆ ಒಬ್ಬರ ಸಹಾಯ, ಸಹಕಾರ ಬೇಕು. ಅದ್ಕೆ ಮಾಧವಿ ಸಿದ್ಧವಾಗಿದ್ದಾಳೆ. ಸಮಾಜ ಏನಾದ್ರೂ ಅಂದುಕೊಳ್ಳಿ, ನಾವಿಬ್ರೂ ಕೂತೇ ಕೆಲ್ಸ ಮಾಡೋದು. ಇವಳೇನೋ, ನಿನ್ನತ್ರ ಪರ್ಸನಲ್ಲಾಗಿ ಮಾತಾಡ್ಬೇಕೂಂದ್ಲು. ನಾನ್ಬರ್ತೀನಿ" ವಾಚ್ ಕಡೆ ನೋಡಿ ಮೇಲೆದ್ದರು.

ಮಾಧವಿ ಹೊರಗಿನವರೆಗೂ ಹೋಗಿ ಬಿಳ್ಕೊಟ್ಟು ಬಂದು ಕೂತಳು. ತನ್ನ ಹ್ಯಾಂಡ್ ಬ್ಯಾಗ್‌ನಿಂದ ನಾಲ್ಕು ಸೇಬು ತೆಗೆದಿಟ್ಟವಳು ಒಂದನ್ನು ಒಯ್ದು ತೊಳೆದು ಬಂದು, ಬೀಗದ ಕೀ ಗೊಂಚ್‌ಲಿನ ಲಾಕೆಟ್‌ನಲ್ಲಿದ್ದ ಪುಟ್ಟ ಚಾಕ್‌ನಿಂದ ಕತ್ತರಿಸಿ ಒಂದು ಸಾಸರ್‌ಗೆ ಹಾಕಿ ಶಾರದಾಗೆ ಕೊಟ್ಟಳು.

"ನನ್ನ ಪ್ರಶ್ನೆಗೆ ಉತ್ತರ ಹೇಳಲೇ ಇಲ್ಲ ನೀವು" ತುಂಟತನದಿಂದ

ಕೇಳಿದಳು. ಸೇಬಿನ ಚೂರನ್ನು ಕೈನಲ್ಲಿ ಹಿಡಿದ ಶಾರದ ಸಂದಿಗ್ಧಕ್ಕೆ ಒಳಗಾದಳು. ಮಾಧವಿ ಆ ಚೂರನ್ನು ಅವಳ ಬಾಯಿಗೆ ತುರುಕಿ "ಸಾರಿ, ಮೇಡಮ್...... ವರ್ಷಾನುಗಟ್ಟಲೇ ಕೆಲವರ ಜೊತೆ ಇದ್ದರೂ ಸ್ನೇಹ, ಸಲಿಗೆ, ಆತ್ಮೀಯತೆ ಬೆಳೆಯೋಲ್ಲ. ಇನ್ನು ಕೆಲವರ ವಿಷಯದಲ್ಲಿ ವಾದಕ್ಕೆ, ವಿಚಾರಕ್ಕೆ ಸಿಕ್ಕದಷ್ಟು ಸ್ನೇಹದ ತುಡಿತವಿರುತ್ತೆ. ಈಗ ನಿಮ್ಮ ಬಗ್ಗೆ ಅಂತಹ ಭಾವನೆ" ನವಿರಾಗಿ ನಕ್ಕಳು. ಹದಿನೆಂಟು ದಾಟಿದ ವಯಸ್ಸಷ್ಟೇ ಅವಳದು. ಆದರೆ ವಯಸ್ಸಿಗೆ ಹೆಚ್ಚೆನಿಸುವಷ್ಟು ಓದಿದ್ದಳು.

ತಾನೇ ಒಂದೊಂದು ಸೇಬಿನ ಹೋಳನ್ನು ಶಾರದ ಬಾಯಿಗೆ ಹಾಕಿದಳು ಬಲವಂತದಿಂದ. ಪ್ಲೇಟು ಖಾಲಿಯಾದನಂತರ ತೊಳೆದಿಟ್ಟು, ರೂಮಿನ ಮುಂಭಾಗದಲ್ಲಿ 'No Admission' ಎನ್ನುವ ಬೋರ್ಡು ಇಟ್ಟು ಬಂದಳು. ಇಂಥ ಒಂದು ಅವಕಾಶವಿತ್ತು ಆ ನರ್ಸಿಂಗ್ ಹೋಂನಲ್ಲಿ.

"ನನ್ನ ಪ್ರಶ್ನೆಗೆ ಉತ್ತರ ಹೇಳಿ ಮೇಡಮ್ ? ನಿಮ್ದು ಲವ್ ಮ್ಯಾರೇಜಾ?" ಅವಳ ಪ್ರಶ್ನೆಗೆ ಶಾರದ ನಕ್ಕುಬಿಟ್ಟಳು "ಉತ್ತರ ನೀನೇ ಹುಡುಕ್ಕೋಬೇಕು. ನನ್ನ ತಂದೆ, ವಸಂತನ ತಂದೆ ತುಂಬ ಒಳ್ಳೆಯ ಸ್ನೇಹಿತರು. ಅವ್ರುಗಳು ವರ್ಷಗಳ ಹಿಂದೆ ಇಂಥ ನಿರ್ಧಾರ ತಗೊಂಡಾಗ, ನಾವಿಬ್ರೂ ಚಿಕ್ಕವರು. ಆಮೇಲೆ ನಾನು ಓದಿನಲ್ಲಿ ನಿರತಳಾದೆ. ತಕ್ಷಣ ಕೆಲ್ಸ ಕೊಟ್ಟರು. ಕಾಲೇಜು, ಪಾಠ, ವಿದ್ಯಾರ್ಥಿಗಳು ಈ ಬಿಜಿಯಲ್ಲಿ ಪ್ರೇಮದ ಬಗ್ಗೆ ಆಳವಾಗಿ ಆಲೋಚಿಸಲಾಗಲಿಲ್ಲ. ವಸಂತ ನಾನು ಮೀಟ್ ಮಾಡುತ್ತಿದ್ವಿ. ಅವ್ರು ನಮ್ಮ ಮನೆಗೆ ಬರ್‍ತಾ ಇದ್ರು. ನಾನು, ತಾತ ಅವ್ರ ಮನೆಗೆ ಹೋಗ್ತಾ ಇದ್ವಿ. ಆಮೇಲೆ ವಿವಾಹ" ಪೂರ್ತಿ ವಸ್ತು ಸ್ಥಿತಿಯನ್ನ ಮಾಧವಿಯ ಮುಂದಿಟ್ಟಳು.

ಗದ್ದಕ್ಕೆ ಕೈಯೂರಿ ಕೂತ ಅವಳು ಅತ್ಯಂತ ಸುಂದರ ಪ್ರತಿಮೆಯಂತೆ ಕಂಡಳು. 'ನೋಡಿ... ನೋಡಿ... ಬೆಳದಿಂಗಳ ಪುತ್ಥಳಿಯಂಥ ಹುಡ್ಗೀ ಬಲೆಗೆ ಹಾಕ್ಕೊಂಡ. ಆ ಮುದ್ಕನಿಗಿರೋ ಚಾರ್ಮಿಂಗ್ ನಮ್ಗಿಲ್ಲ. ನಾವೇನಾದ್ರೂ ಮಾತಾಡಿಸೋಕ್ಹೋದ್ರೆ ಚಪ್ಪಲಿ ತಗೋತಾಳೆ' ಕೆಲವು ಪುಂಡ ವಿದ್ಯಾರ್ಥಿಗಳು ಮಾತಾಡಿಕೊಳ್ಳುತ್ತಿದ್ದ ಮಾತುಗಳು ಇವು. ನಿಪುಣ ಶಿಲ್ಪಿ ಕೆತ್ತಿದಂಥ ಸುಂದರ ವಿಗ್ರಹದಂತಿದ್ದಳು.

"ನೀವು ಇಂಗ್ಲೀಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಜೊತೆ ಗೋಲ್ಡ್ ಮೆಡಲ್‌ಗಳನ್ನು ಪಡೆದುಕೊಂಡವರು. ಸಾಕಷ್ಟು ಓದಿದ್ದೀರಾ, ಪ್ರೇಮ

ಅಂದರೇನು ? ಕವಿಗಳು, ಸಾಹಿತಿಗಳು ಪದೇ ಪದೇ ಹೃದಯ ಎನ್ನುತ್ತಾರಲ್ಲ, ಆ ಹೃದಯ ಎನ್ನುವುದಾದರೂ ಏನು ? ಒಂದಿಷ್ಟು ವಿಶ್ಲೇಷಿಸಿ" ಒಂದು ವಾದವನ್ನ ಅವಳ ಮುಂದಿಟ್ಟಳು. ಮಾನವೀಯ ಸಂಬಂಧಗಳ ಕುಸಿತವನ್ನು ಕಂಡಳು ಅವಳ ಮಾತುಗಳಲ್ಲಿ. ಶಾರದ ಅವಳನ್ನು ನೋಡಿದಳು.

"ಮನಸ್ಸಿನ ಆಳದಲ್ಲಿರುವ ಆಸೆ, ಆಕಾಂಕ್ಷೆ, ಕಾಮನೆ, ಬಯಕೆಯ ಒಟ್ಟು ಗುಂಪಿಗೆ ಸಿಕ್ಕ ಸೂಕ್ತ ಹೆಸರು ಹೃದಯ. ಅದನ್ನು ಸಾಹಿತಿಗಳು ಮೊದಲು ಅಲಂಕಾರಿಕವಾಗಿ ಬಳಸುತ್ತಿದ್ದರೇನೋ ಈಗ ಜನಸಾಮಾನ್ಯರಲ್ಲಿ ಅದೇ ಸತ್ಯವಾಗಿ ಉಳಿದಿದೆ".

ಅವಳ ಸುಲಭ ವಿಶ್ಲೇಷಣೆಯನ್ನು ಶಾರದಳ ಮನಸ್ಸು ಒಪ್ಪಿಕೊಳ್ಳಲಿಲ್ಲ. ಭಾವುಕತೆಗೆ ಬಲವಾದ ಪೆಟ್ಟು ಕೊಟ್ಟಿದ್ದಳು.

"ಪ್ಲೇಟೋನ ತುಂಬ ಓದಿಕೊಂಡಿರಬೇಕು" ಶಾರದ ಹೇಳಿದಳು. "ಸ್ತ್ರೀ, ಪುರುಷರ ಸಮಾನತೆಗೆ ಹೆಚ್ಚು ಒತ್ತು ಕೊಟ್ಟೋನು ಪ್ಲೇಟೋ ನನ್ನ ಪ್ರಕಾರ ಮನುಷ್ಯನ ಮನೋಧರ್ಮಕ್ಕೆ ವಿರುದ್ಧವಾದ್ದುದ್ದು" ಪ್ರೇಮ ಅನ್ನುವುದು ಒಂದು ವಿಶಿಷ್ಟವಾದ, ಅಲೌಕಿಕವಾದ, ಅದ್ಭುತ ಅನುಭವ. "ಈ ವಿಚಾರದ ಮಧ್ಯೆ ಅವಳ, ಪ್ರೊಫೆಸರ್ ರಂಗೇಗೌಡರ ಮಧ್ಯದ ಸ್ನೇಹವನ್ನು ಪ್ರಸ್ತಾಪಿಸಬೇಕೆಂದುಕೊಂಡರೂ ಪ್ರಸ್ತಾಪಿಸಲಿಲ್ಲ. ಅನಗತ್ಯವಾಗಿ ಯಾರ ವೈಯಕ್ತಿಕ ಜೀವನದ ವಿಷಯಗಳನ್ನು ಕೆದಕುವುದು ಅವಳಿಗಿಷ್ಟವಿಲ್ಲ."

"ನನ್ನ ಪ್ರಕಾರ ವಿಚಾರದ ಸಾಹಚರ್ಯವೇ ಪ್ರೇಮ. ಸ್ತ್ರೀ ಪುರುಷರ ನಡ್ವೇ ಇರಬೇಕಾದ್ದು ಬೌದ್ಧಿಕ ಸಹಜೀವನ. ಅದೇ ಉತ್ತಮ ಮಟ್ಟದ ಪ್ರೇಮ. ನನ್ನ ಪ್ರೊಫೆಸರ್ ನಡುವೆ ಇರುವುದು ಅಂಥ ಸ್ನೇಹ" ಹೇಳುತಲೇ ಹೋದಳು. ಅವಳ ವಿಚಾರಧಾರೆಗೆ ಶಾರದ ದಂಗಾದಳು. ಇಡೀ ಭಾವುಕತೆಯನ್ನೆ ಅಲ್ಲಗೆಳೆದುಬಿಟ್ಟಿದ್ದಳು.

ಅಷ್ಟರಲ್ಲಿ ಪ್ರೊಫೆಸರ್ ರಂಗೇಗೌಡರು ಬಂದರು. ಅವಸರವಸರವಾಗಿ "ಮಾಧವಿ ನಿನ್ನ ಮಾತುಕತೆ ಮುಗೀತಾ ?" ಎದ್ದ ಅವಳು ಸ್ವಲ್ಪ ಬೇಸರದ ಮುಖ ಮಾಡಿ "ಇನ್ನು ಹೇಳೋದು, ಕೇಳೋದು ತುಂಬನೇ ಇತ್ತು. ಇನ್ನೊಂದ್ಸಲ ಭೇಟಿ ಮಾಡ್ತೀನಿ, ಶಾರದ ಮಿಸ್" ಪುಟ್ಟ ಕಾನ್‌ವೆಂಟ್‌ನ ಹುಡುಗಿಯಂತೆ ನುಡಿದಳು.

ಶಾರದ ಮುಗುಳ್ನಕ್ಕು, ಗಾಜಿನ ಹೂಜಿಯಲ್ಲಿಟ್ಟ ಒಂದು ಗುಲಾಬಿಯನ್ನು ಅವಳಿಗೆ ಕೊಟ್ಟಳು.

"ಥ್ಯಾಂಕ್ಯೂ... ಥ್ಯಾಂಕ್ಯೂ ವೆರಿಮಚ್" ಗುಲಾಬಿಯನ್ನು ಕೆನ್ನೆಗೊತ್ತಿಕೊಂಡಳು. "ನೀವು ಪಿ.ಯು.ಸಿಯಲ್ಲಿದ್ದಾಗ ಕವನಗಳ್ನ ಬರೆದಿದ್ದೀರಿ. ಕಾಲೇಜ್ ಮ್ಯಾಗಝೀನ್‌ನಲ್ಲಿ ಕೆಲವು ಪದ್ಯಗಳನ್ನು ನೋಡ್ದೇ ತುಂಬ ಖುಷಿ ಆಯ್ತು. ಮತ್ತೆ ಏನಾದ್ರೂ ಬರೀರೀ" ಗಲ ಗಲ ಮಾತಾಡಿದಳು. ಇಷ್ಟು ಹೊತ್ತು ಬೌದ್ಧಿಕತೆಯ ವಕಾಲತ್ತು ವಹಿಸಿಕೊಂಡಂತೆ ಮಾತಾಡಿದ ಹುಡುಗಿನಾ, ಇವಳು, ಎನಿಸಿತು ಶಾರದಾಗೆ.

ಪ್ರೊಫೆಸರ್ ರಂಗೇಗೌಡರು ಒಮ್ಮೆ ಮುಖದ ಮೇಲೆ ಕರ್ಚಿಪ್ ಆಡಿಸಿ "ನಾವಿಬ್ರೂ ವಿವಾಹವಾಗ್ತ ಇದ್ದೀವಿ. ಜನರ ಬಾಯಿ ಮುಚ್ಚಿಸೋಕೆ. ಒಂದತ್ತು ಜನ ಬರ್ಬಹುದು, ನೀನು, ವಸಂತ ಬನ್ನಿ, ಮಿಕ್ಕಿದೆಲ್ಲ ಫೋನ್‌ನಲ್ಲಿ ತಿಳಿಸ್ತೀನಿ" ಎಂದರು. ಮಾನಸಿಕ ಕುಸಿತ ಅವರ ಮುಖದಲ್ಲಿ ಕಂಡಿತು. ವಿವಾಹದ ಉದ್ದೇಶ ತಿಳಿಸಿದ್ದರಿಂದ ಪ್ರಶ್ನಿಸಬೇಕಿರಲಿಲ್ಲ.

"ಬೌದ್ಧಿಕ ಮೈತ್ರಿಯೊಂದೇ ನಮ್ಮ ವಿವಾಹಕ್ಕೆ ಕಾರಣ. ಇದೇ ಆದರ್ಶ ವಿವಾಹ" ಎಂದ ಮಾಧವಿ ಅವಳ ಕೈ ಹಿಡಿದು ಮುಂಗೈಗೆ ತುಟಿಯೊತ್ತಿ "ಇನ್ನೊಂದ್ಸಲ ಬರ್ತೀನಿ" ಹೊರಟಳು.

ಸ್ವಲ್ಪ ಮಟ್ಟಿಗೆ ಅರ್ಥವಾಗಿತ್ತು. ಕೀಳು ಉದ್ದೇಶವೆಂದಾಗಲೀ, ಅವಳದು ಬಾಲಿಶ ವರ್ತನೆಯಿಂದಾಗಲೀ ಎಂದುಕೊಳ್ಳುವುದು ಅವಳಿಂದ ಸಾಧ್ಯವಾಗದೆ ಹೋಯಿತು. ತೀರಾ ವಿಪರೀತವೆನಿಸಿತಷ್ಟೆ.

ಪ್ಲೇಟೋ ಹೇಳಿದ್ದನ್ನು ನೆನಪಿಸಿಕೊಂಡಳು "ಆದರ್ಶ ನಾಡಿಗೆ ಹೊಸ ಪೀಳಿಗೆಯ ಅವಶ್ಯಕತೆ ಇದ್ದಾಗ ಮಾತ್ರ ಸ್ತ್ರೀ ಪುರುಷರು ದಂಪತಿಗಳಂತೆ ಇರಬೇಕು. ಉಳಿದ ಕಾಲದಲ್ಲಿ ಅವರೆಲ್ಲರೂ ಸಮಾನ ಮಟ್ಟದ ಬೌದ್ಧಿಕ ಸಹಚಾರಿಗಳು."

ಎಷ್ಟೋ ಹೊತ್ತು ಹಾಗೆಯೇ ಕೂತುಬಿಟ್ಟಳು. ಹೊಸ ಹೊಸ ವಿಷಯಗಳು, ವಿಚಾರಗಳ ಮದ್ಯೆಯು ಪ್ರೊಫೆಸರ್ ರಂಗೇಗೌಡರ ಮತ್ತು ಮಾಧವಿ ವಿವಾಹದ ವಿಷಯದಲ್ಲಿ ಅಪಸ್ವರ ಕೇಳಿಸುತ್ತಿತ್ತು. ಈ ಮಂಥನದ ನಡುವೆ ವಸಂತನ ಪ್ರವೇಶವಾಯಿತು.

"ಹೇಗಿದ್ದಿ ?" ವಿಚಾರಿಸಿದ.

"ಚೆನ್ನಾಗಿದ್ದೀನಿ, ಇಂದೇ ಮನೆಗೂ ಬರಬಹುದಿತ್ತು. ಸಿಸ್ಟರ್‌ನ ವಿಚಾರಿಸ್ದೇ, ಇನ್ನು ಬಿಲ್ ರೆಡಿಯಾಗಿಲ್ಲಾಂದ್ರು, ಊಟ ಆಯ್ತ ?" ಕೇಳಿದಳು.

ಕಂಪನಿಯ ನೂರೆಂಟು ಸಮಸ್ಯೆಗಳನ್ನು ಹೇಳಿಕೊಂಡ. ಅವಳು ಏನೋ ಹೇಳಲು ಹೋದಾಗ ತಡೆದ "ನಿಂಗೆ ಅವೆಲ್ಲ ಅರ್ಥವಾಗೋಲ್ಲ. ಕಾಲೇಜಿನಲ್ಲಿ ಪಾಠ ಮಾಡಿದಷ್ಟು ಸುಲಭವಲ್ಲ" ಎಂದ. ಒಂದು ಹೊಡೆತ ಬಿದ್ದಂತಾಯಿತು ಅವಳಿಗೆ. ಹೇಗೆ ಈ ಮನುಷ್ಯನೊಂದಿಗೆ ಮಾತಾಡುವುದು? ವ್ಯವಹರಿಸುವುದು.

"ತಾತ, ಫೋನ್ ಮಾಡಿದ್ರಾ ?"

"ಅದೆಲ್ಲ ನಿನ್ನ ಅಂಕಲ್ ಡಿಪಾರ್ಟ್‌ಮೆಂಟ್, ಅದಕ್ಕೆಲ್ಲ ನಂಗೆ ಪುರಸತ್ತಿಲ್ಲ. ಊಟ ಆಯ್ತು ?" ಕೇಳಿದ.

'ಆಯಿತು' ಎಂದು ತಲೆದೂಗಿದಳು. ಪ್ರತಿ ಮಾತಿಗೂ ಫೈರಿಂಗ್, ಅನಗತ್ಯವಾಗಿ ಮಾತೇ ಬೇಡವೆನಿಸಿತು. ಹಣ್ಣಿನ ಬ್ಯಾಸ್ಕೆಟ್ ಅಲ್ಲಿಟ್ಟು ಹೊರ ನಡೆದು-ಹೊರಡುವುದಕ್ಕೆ ಮುನ್ನ ಮನೆಯಲ್ಲಿ ಹಾರಾಡಿ ಬರುತ್ತಿದ್ದ, ಬಂದ ನಂತರದ ಸ್ಥಿತಿ ಇದು.

ಹತ್ತು ನಿಮಿಷದ ನಂತರ ಹಿಂದಿರುಗಿ ಬಂದು ಕೂತ.

"ಯಾರು.... ಬಂದಿದ್ರು ?" ಮಾಧವಿ ತೆಗೆದಿಟ್ಟು ಫೋಟೋ ಫ್ರೇಮುಗಳತ್ತ ನೋಟ ಹರಿಸಿ ಕೇಳಿದ "ಪ್ರೊಫೆಸರ್ ರಂಗೇಗೌಡರು, ಮಾಧವಿ ಬಂದಿದ್ದರು" ಹೇಳಿ ದೀರ್ಘವಾಗಿ ಉಸಿರೆಳೆದುಕೊಂಡಳು.

"ಯಾಕೆ, ಬಂದಿದ್ದು ? ಮೊನ್ನೆ.. ಬಂದಿದ್ದರಲ್ಲ"

"ಕೆಲ್ಸಕ್ಕೆ ರಿಸೈನ್ ಮಾಡ್ತಾ ಇದ್ದಾರೆ. ಅದ್ಕೆ ಹೇಳಿ ಹೋಗೋಕೆ ಬಂದಿದ್ದು" ಅಷ್ಟು ಹೇಳಿ ಅವರ ವಿಷಯ ಮುಗಿಸಲು ನೋಡಿದಳು. ವಸಂತ ಬಡಪೆಟ್ಟಿಗೂ ಬಿಡುವ ಆಸಾಮಿಯಲ್ಲ "ಯಾಕಂತೆ ?"

"ಪ್ಲೀಸ್, ಅದೆಲ್ಲ, ನನ್ನ ಯಾಕೆ ಕೇಳ್ತೀರಾ ! ಬೇರೆಯವ್ರ ಪರ್ಸನಲ್ ಲೈಫ್ ಬಗ್ಗೆ ನಂಗೆ ಇಂಟರೆಸ್ಟ್ ಇಲ್ಲ. ಬೇರೆ ವ್ಯಕ್ತಿಗಳ ವೈಯಕ್ತಿಕ ವಿಷಯ ಬಿಟ್ಟು ಬೇರೆ ಏನಾದ್ರೂ ಕೇಳಿ, ಮಾತಾಡಿ" ಸ್ವಲ್ಪ ತಾಳ್ಮೆ ಕಳೆದುಕೊಂಡಳು.

"ಈ ನೆವಗಳು ಯಾಕೆ? ಡೈರೆಕ್ಟಾಗಿ ನನ್ಹತ್ರ ಮಾತಾಡೋಕೆ ಇಷ್ಟವಿಲ್ಲಾಂತ ಹೇಳು. ನಿನ್ನ ನಾಟಕಗಳು ನಂಗೆ ಅರ್ಥವಾಗುತ್ತೆ. ನಲವತ್ತೈದು ನಿಮಿಷಕ್ಕಿಂತ ಹೆಚ್ಚು ಹೊತ್ತು ಅವ್ರುಗಳು ಇಲ್ಲಿದ್ದಾರೆ. ಮೂಗಿಗಳಂಗೆ ಎದುರು ಬದುರು ಕೂತಿದ್ರಾ ?" ಛಾಟಿಯೇಟಿನಂತೆ ಅವನ ಮಾತುಗಳು ಬಂದು ಅಪ್ಪಳಿಸಿದವು.

"ನಾನು ಡೀಟೈಲ್ಸ್ ಕೊಡೋದು ಕಷ್ಟ. ಟೇಪ್‌ರೆಕಾರ್ಡರ್ ಕ್ಯಾಸೆಟ್ ಹಾಕಿಡಿ. ಯಾರಾದರೂ ಮಾತು ಷುರು ಮಾಡಿದ ಕೂಡ್ಲೇ ಆನ್‌ನಲ್ಲಿ ಇಡ್ತೀನಿ, ಆದ್ನ ನೀವು ಕೇಳಿಕೋ ಬಹುದ್ದು" ನೇರವಾಗಿಯೇ ಹೇಳಿದಳು.

"ಇನ್‌ಸಲ್ಟ್.... ಮಾಡ್ತೀಯಾ... ನನ್ನ, ನಿಂಗೆ ಇಷ್ಟೊಂದು ಪೊಗರು ಇರ್ಬಾರ್ದು. ನನ್ನ ಮುಖ್ಯವಾದ ಕೆಲ್ಸಗಳನ್ನೆಲ್ಲ ಬದಿಗೊತ್ತಿ ರಾತ್ರಿ-ಹಗ್ಲು ನರ್ಸಿಂಗ್ ಹೋಂಗೆ ಓಡಾಡಿದ್ದೀನಿ. ನಿಂಗೆ ಸ್ವಲ್ಪವಾದ್ರೂ ಕೃತಜ್ಞತೆ ಇರ್ಬೇಕಿತ್ತು ! ಗೋಲ್ಡ್ ಮೆಡಲಿಸ್ಟ್ ಅನ್ನೋ ದುರಹಂಕಾರ" ಬೈದ. ತುಟಿಗಳನ್ನು ಕಚ್ಚಿಡಿದಳು ಶಾರದ. ಮಾನಸಿಕವಾಗಿ ದಣಿದು ಹೋದಳು.

ವಸಂತ ಹೊರಟುಹೋದ. ಶಾರದಾಗೆ ತಲೆ ನೋವು ಷುರುವಾಯಿತು. ಸಿಸ್ಟರ್‌ಗೆ ಫೋನ್ ಮೂಲಕ ಕರೆಸಿಕೊಂಡು ತಲೆನೋವಿನ ಮಾತ್ರೆ ತರಿಸಿಕೊಂಡು ನುಂಗಿದಳು.

ಸಂಜೆಯ ಚೆಕ್‌ಅಪ್‌ಗೆ ಬಂದ ಡಾಕ್ಟರ್ "ಯಾಕೆ ಇಷ್ಟೊಂದು ಡಿಪ್ರೆಸ್ಡ್ ಆಗಿದ್ದೀರಾ ? ನಿಮ್ಗೆ ರೆಸ್ಟ್ ಬೇಕು" ಎಂದು ಇಂಜೆಕ್ಷನ್ ಚುಚ್ಚಿ ಹೋದರು. ಭಯಂಕರವಾದ ನಿದ್ದೆ ಆವರಿಸಿಕೊಂಡು ಬಂತು.

ರಾತ್ರಿ ಊಟ ತಗೊಂಡು ಬಂದ ಕಾಶೀಪತಿಗಳು ಗಾಬರಿಯಾದರು, ಕಣ್ಮುಚ್ಚಿ ಮಲಗಿದ್ದ ಸೊಸೆಯನ್ನು ಕಂಡು.

"ಸಂಜೆ ಡಾಕ್ಟ್ರು ರೌಂಡ್ಸ್‌ಗೆ ಬಂದಾಗ ತುಂಬ ಡಿಪ್ರೆಸ್ಡ್ ಆಗಿದ್ರು. ಅದ್ಕೇ ನಿದ್ದೆ ಮಾಡ್ಲೀಂತ ಫೆಥಾಡಿನ್ ಕೊಟ್ಟಿದ್ದಾರೆ. ಹತ್ತರ ಸುಮಾರಿಗೆ ಎಚ್ಚರವಾದರೇ ನಾನೇ ಊಟ ಮಾಡೋಕೆ ಹೇಳ್ತೀನಿ, ಡೋಂಟ್ ವರೀ" ಎಂದಳು.

ಕಾಶೀಪತಿಗಳು ಡಾಕ್ಟರ್ ಬಳಿ ಮಾತಾಡಿ ಬಂದರು. ಬೆಳಿಗ್ಗೆ, ಮಧ್ಯಾಹ್ನ ಚೆನ್ನಾಗಿದ್ದ ಶಾರದ ಡಿಪ್ರೆಸ್ಡ್ ಆಗೋಕೆ ಕಾರಣವೇನು? ಸಂಜೆ ವಸಂತ ನರ್ಸಿಂಗ್‌ಹೋಂಗೆ ಬಂದಿದ್ದು ನೆನಪಾಯಿತು.

ಅರ್ಥ ಮಾಡಿಕೊಂಡರು. ರಾತ್ರಿ ಆ ಬಗ್ಗೆ ಮಗನ ಬಳಿ ಏನು ಮಾತಾಡಲಿಲ್ಲ. ಹತ್ತರ ನಂತರ ಫೋನ್ ಬಂತು.

"ನಾನು ತುಂಬ ನಿದ್ದೆ ಮಾಡ್ಬಿಟ್ಟಿದ್ದೆ ಅಂಕಲ್ ನೀವು.... ಬಂದಿದ್ರಂತೆ" ಶಾರದ ಕೇಳಿದಳು.

"ಬಂದಿದ್ದೆ, ಹೇಗಿದ್ದೀಯಾ? ಊಟ ಆಯ್ತು? ನಾನು ಬರ್‍ಲಾ?"

ವಿಚಾರಿಸಿದರು. "ಊಟ ಆಯ್ತು, ನಿಮ್ಮದೆಲ್ಲ ಊಟ ಆಯ್ತು, ಬೆಳಿಗ್ಗೆ ನಾನೇ ಬಂದ್ಬಿಡ್ತೀನಲ್ಲ. ಅವರದ್ದು ಊಟ ಆಯ್ತ?" ವಿಚಾರಿಸಿಕೊಂಡಳು.

ಅಪ್ಪನನ್ನು ಇನ್ನೊಂದು ಫೋನ್‌ನಲ್ಲಿ ಕೇಳಿಸಿಕೊಂಡಿದ್ದ ವಸಂತ ಮಾತಾಡಲು ಇಚ್ಛಿಸಲಿಲ್ಲ. ನೇರವಾಗಿ ತನ್ನನ್ನೆ ಸಂಪರ್ಕಿಸಬೇಕಿತ್ತು ಎನ್ನುವುದು ಅವನ ಉದ್ದೇಶ. ಪ್ರೊಫೆಸರ್ ರಂಗೇಗೌಡರು, ಮಾಧವಿಯವರೊಂದಿಗೆ ನಡೆಸಿದ ಸಂಭಾಷಣೆ ತನಗೇ ವಿವರಿಸಿದ್ದರೇ ಅವಳ ಗಂಟೇನು ಹೋಗುತಿತ್ತು ? ಅಷ್ಟು ಕೇಳುವ ಹಕ್ಕು ತನಗಿಲ್ಲವೇ.

ಬೆಳಿಗ್ಗೆ ಸ್ವಲ್ಪ ಬೇಗ ಎದ್ದ ವಸಂತ ತಾನೇ ಹೋಗಿ ಮಡದಿಯನ್ನು ಕರೆತರುವುದಾಗಿ ಹೇಳಿದಾಗ ಕಾಶೀಪತಿಗಳಿಗೆ ಹರ್ಷವೋ.. ಹರ್ಷ. ಅವರಿಬ್ಬರು ನಗು ನಗುತ್ತ ಇರುವುದು ಅವರಿಗೆ ಬೇಕಿತ್ತು.

ದೊಡ್ಡ ಬಿಲ್‌ನ ಮೊತ್ತ ತೆತ್ತು ಮಡದಿಯೊಂದಿಗೆ ಹೊರ ಬಂದ.

"ಕಾಫೀ ತರ್ಬೇಕಿತ್ತಾ ?" ಕಾರು ಡೋರ್ ತೆರೆಯುವಾಗ ಕೇಳಿದ.

"ಏನು ಬೇಡ. ಹೇಗೂ ಮನೆಗೆ ಹೋಗ್ತಾ ಇದ್ದೀವಲ್ಲ, ಎಲ್ಲಾ ಒಟ್ಟಿಗೆ ಕುಡ್ಯೋಣ. ಅಂಕಲ್, ವಾಕ್ ಮುಗ್ಸಿಕೊಂಡು... ಬಂದಿದ್ರಾ?" ಒಂದಿಷ್ಟು ಕಾಂಪ್ರಮೈಸ್ ಆಗುವ ಮನಸ್ಸು ಮಾಡಿದಳು.

ಕಾರು ಸ್ಟಾರ್ಟ್ ಮಾಡಿದ ವಸಂತ "ಒಂದಿಷ್ಟಾದ್ರೂ ಕೋಪರೇಷನ್ ನೇಚರ್ ಇದ್ಯಾ ? ಹೋಟಲ್‌ನಲ್ಲಿ ಕಾಫೀ ಕುಡ್ದು ಹೋಗಿದ್ರೇ.. ಗಂಟೇನು ಹೋಗ್ತಾ ಇತ್ತು ?" ಅವನ ಸಿಡಿಮಿಡಿಗೆ ದಿಗ್ಭ್ರಮೆಗೊಂಡಳು. ಅವನು ಕೇಳಿದ್ದೇನು ?

"ಈಗ್ಲೂ ಕುಡ್ದು ಹೋಗೋಣ" ಎಂದಳು.

"ಒಟ್ಟಿಗೆ ಕಾಫೀ ಕುಡ್ಯೋ, ಆಸೆ ನಂಗೆ. ನಾನಾದ್ರೂ ಯಾಕೆ ಹಾಳು ಮಾಡ್ಲಿ? ನಾನು ಎಷ್ಟೂಂತ... ಕಾಂಪ್ರಮೈಸ್ ಆಗ್ಲೀ" ಕಾರಿನ ವೇಗ ಹೆಚ್ಚಿಸಿದ.

ಮನೆ ತಲುಪುವವರೆಗೂ ಮಾತಾಡಲಿಲ್ಲ ಶಾರದ. ಅವಳ ಶಾಂತವಾಗಿದ್ದ, ಸುಂದರವಾಗಿದ್ದ ಮನೋ ಉದ್ಯಾನವನಕ್ಕೆ ಅವನು ಎಸೆಯುತ್ತಿದ್ದುದು ಬೆಂಕಿಯ ಕೋಲುಗಳನ್ನು. ಅವುಗಳ ಗಾಯ ಮನಸ್ಸು, ಹೃದಯವನ್ನು ಉರಿಗೆ ಒಡ್ಡಿತ್ತು.

"ಬಾಮ್ಮ..... ಬಾ..." ಕಾಶೀಪತಿಗಳು ಕಾರಿ ಡಾರ್‌ವರೆಗೂ ಬಂದು ಎದುರುಗೊಂಡರು "ಮನೆಯೆಲ್ಲ ಬಣಗುಟ್ಟಿ ಹೋಗ್ಗಿತ್ತು..

ರಾಜ್ಯ ಕೇಂದ್ರ ಗ್ರಂಥಾಲಯ, ಬೆಂಗಳೂರು-1.

ಈಚೆ ಬಂದವ್ನು ಒಳ್ಗೇ ಬಂದಿದ್ದೇ ಇಲ್ಲ" ಎಂದ ಕೂಡಲೇ ಅಷ್ಟು ದೂರದಲ್ಲಿ ನಿಂತಿದ್ದ ಗೋಪಿ ಹತ್ತಿರಕ್ಕೆ ಬಂದ. "ಕೊಡಿ, ಅಕ್ಕ... ಬ್ಯಾಗ್‌ನ" ಬ್ಯಾಗುಗಳನ್ನು ಒಳಗೆ ಒಯ್ದ.

ಕಾಶೀಪತಿಗಳು ಮಗನ ಮುಖ ನೋಡಿದರು. ಅಲ್ಲಿ ಇದ್ದಿದ್ದು ಯಥಾ ಸ್ಥಿತಿ, ಸಂತೋಷದ ಕಾರಂಜಿಯನ್ನು ಕಾಣಬೇಕೆಂದು ಚಡಪಡಿಸುತ್ತಿದ್ದರು, ಪ್ರತಿ ನಿಮಿಷವು.

ಗೋಪಿ ಎಲ್ಲರಿಗೂ ಕಾಫೀ ತಂದಿಟ್ಟ. ಮೊದಲು ಕುಡಿದಿಟ್ಟ ವಸಂತ ರೂಮಿಗೆ ಎದ್ದು ಹೋದವನು, ನರ್ಸಿಂಗ್‌ಹೋಂಗೆ ಕಟ್ಟಿದ ಹಣದ ಬಿಲ್ಲನ್ನು ಟೀಪಾಯಿ ಮೇಲಿಟ್ಟು ಅದರ ಮೇಲೆ ಪೆನ್ನಿಟ್ಟ 'ನೋಡಲೀ' ಎಂಬುದು ಮಾತ್ರ ಅವನ ಉದ್ದೇಶ. ಅವಳದು ಕೆಳದರ್ಜೆಯ ಕುತೂಹಲವಲ್ಲ.

"ತಾತನಿಗೆ ಒಂದ್ಸಲ ಫೋನ್ ಮಾಡ್ತೀನಿ" ಮೇಲೆದ್ದಾಗ ಕಾಶೀಪತಿಗಳು ತಡೆದರು "ಅವ್ರೇ, ನಾಳೆ ಮಾಡ್ತೀನಿ ಅಂದಿದ್ದಾರೆ. ಅವ್ರು ಇಳ್ಕೊಂಡಿರೋ ರೆಸ್ಟೋರೆಂಟ್‌ನ ಫೋನ್ ನಂಬರ್ ಗೊತ್ತಿಲ್ಲ."

ಬ್ರೇಕ್‌ಫಾಸ್ಟ್‌ನ ನಂತರ ವಸಂತ ಆಫೀಸಿಗೆ ಹೊರಟಾಗ ಹೊರಗೆ ಬಂದು ನಿಂತಳು ಶಾರದ. ಒಂದು ಸಲ ಅವಳತ್ತ ನೋಟ ಹರಿಸಿದ. ಸುಂದರ ದಂತದ ಪ್ರತಿಮೆಯೇ.

"ಸಂಜೆ ಹೊರ್ಗಡೆ ಷಾಪಿಂಗ್‌ಗೆ ಹೋಗೋಣ" ಹೇಳಿದ.

ಶಾರದ ಮನಸ್ಸು ಅರಳಲಿಲ್ಲ. ಇದು ದಯಾಭಿಕ್ಷೆ ಎನ್ನುವಂತೆ ನಡೆದುಕೊಳ್ಳುತ್ತಿದ್ದ. ಹಣ ವ್ಯಯಿಸಿ ತಾನು ತಾಳಿ ಕಟ್ಟಿದ್ದನ್ನು ಪ್ರತಿಪಾದಿಸುತ್ತಿದ್ದನೇ ವಿನಃ ಅವಳ ಭಾವನೆ, ಆಸೆ, ಆಕಾಂಕ್ಷೆಗಳಿಗೆ ಅಲ್ಲಿ ಬೆಲೆ ಇರಲಿಲ್ಲ. 'ಆಯ್ಕೆ ನಿನ್ನದೇ ಎನ್ನುತ್ತಿದ್ದ. ಆದರೆ ಅವಳು ಆರಿಸುತ್ತಿದ್ದುದ್ದನ್ನು ಒಪ್ಪುತ್ತಿರಲಿಲ್ಲ, ತಿರಸ್ಕರಿಸುತ್ತಿದ್ದ. ಅವಳ ಅಭಿರುಚಿಯ ಬಗ್ಗೆ ಟೀಕೆ ಮಾಡುತ್ತಿದ್ದ.

ಒಳಗೆ ಬಂದು ಕೂತ ಶಾರದ ಮಿದುಳು ನಿಷ್ಕ್ರಿಯವಾಗಿತ್ತು. ಕಣ್ಣು ಮುಚ್ಚಿ ಸೋಫಾಗೆ ಒರಗಿದಳು. ಸೇತುರಾಮ್ ನೆನಪು ದಟ್ಟವಾದಂತೆ ಸೂಕ್ಷ್ಮವಾದ ಯಾತನೆ ಷುರುವಾಯಿತು.

"ಅಕ್ಕ, ಹಾರ್ಲಿಕ್ಸ್ ತಂದಿದ್ದೀನಿ" ಗೋಪಿ ದನಿಗೆ ಕಣ್ಣು ಬಿಟ್ಟಳು. "ಈಗೇನು... ಬೇಡವಾಗಿತ್ತು" ಎಂದರೂ ಅವನ ಕಣ್ಣುಗಳಲ್ಲಿನ ಪ್ರೀತಿಗೆ ಸೋತು ಲೋಟ ಪಡೆದುಕೊಂಡಳು.

"ತುಂಬ ವೀಕಾಗಿಬಿಟ್ಟಿದ್ದೀರಿ, ಅಕ್ಕ" ಎಷ್ಟು ಕಕ್ಕುಲತೆಯಿಂದ ಹೇಳಿದನೆಂದರೆ, ಅವನ ಕಣ್ಣಲ್ಲಿಯೇ ನೀರು ಬಂತು. ನೀವು ಮನೆಯಲ್ಲಿ ಇಲ್ದೇ, ನಂಗೆ ತುಂಬ ತುಂಬ ಬೇಜಾರಾಗಿತ್ತು. "ಅಳೋಕೆ ಷುರು ಮಾಡಿ ಬಿಟ್ಟ."

ಮೃದುವಾಗಿ ಅವನ ತಲೆಯ ಮೇಲೊಂದು ಹಾಕಿ, "ಹೋಗಿ ಮುಖ ತೊಳ್ಕೊಂಡ, ಐದು ನಿಮಿಷದಲ್ಲಿ ಇಲ್ಲಿರಬೇಕು" ಹೇಳಿದಾಗ ಓಡಿ ಒದ್ದೇ ಮುಖದಲ್ಲಿ ಹಿಂದಿರುಗಿದ.

"ಇವತ್ತು ನಿಮ್ಗೆ ಇಷ್ಟವಾದ ಅಡಿಗೆ ಮಾಡ್ತೀನಿ."

ಹಾರ್ಲಿಕ್ಸ್ ಲೋಟವನ್ನು ಅವನಿಗೆ ಕೊಟ್ಟು ಕುಡಿಯುವಂತೆ ಬಲವಂತ ಮಾಡಿದಳು. ಹೋದ ವೇಗದಲ್ಲಿಯೇ ಹಿಂದಿರುಗಿದ ವಸಂತ ಬಾಗಿಲಲ್ಲೇ ನಿಂತ. ಈ ದೃಶ್ಯ ಅವನಿಗೆ ಇಷ್ಟವಾಗದು. ಕೋಪದಿಂದ ಹಲ್ಮುಡಿಯನ್ನು ಬಿಗಿಯಾಗಿ ಕಚ್ಚಿಡಿದ.

ಅವನತ್ತ ನೋಡಿದ ಗೋಪಿ ಕುಡಿಯುತ್ತಿದ್ದ. ಅಕ್ಕರೆಯಿಂದ ಕೊಟ್ಟ ಹಾರ್ಲಿಕ್ಸ್ ಅವನಿಗೆ ಅಮೃತದಂತೆ ಉರಿಯುವ ಕಣ್ಣುಗಳಿಂದ ನೋಡಿ ರೂಮಿಗೆ ಹೋದ. ಯಾವುದಾದರೂ ಫೈಲು ಮರೆತಿರಬೇಕೆಂದುಕೊಂಡಳು ಹಿಂಬಾಲಿಸಿದಳಷ್ಟೆ.

"ನಿನ್ನ ಆರೋಗ್ಯ ಒಂದೆರಡು ಗಂಟೆಗಳಲ್ಲೇ ಬಹಳ ಸುಧಾರಿಸಿದೆ !" ವ್ಯಂಗ್ಯವಾದ ಇರಿತ. "ನನ್ನ ಕೆಲ್ಸ ಮಾಡೋಕೆ ನಿಂಗೆ ಅನಾರೋಗ್ಯ. ಕಾಲೇಜು, ಅಧ್ಯಯನ ! ಅವ್ನಿಗೆ ಹಾರ್ಲಿಕ್ಸ್ ಮಾಡಿ ಕೊಡೋಷ್ಟು ಪುರಸತ್ತು" ಬೀರುನಲ್ಲಿದ್ದನ್ನೆಲ್ಲ ಕಿತ್ತು ಕಿತ್ತು ಹೊರ ಹಾಕಿದ ಏನು, ಎತ್ತ ಎಂದು ನೋಡದೇ. ವಿವಾಹದಲ್ಲಿ ಉಡುಗೊರೆ ರೂಪದಲ್ಲಿ ಬಂದ ಬೆಳ್ಳಿ ಸಾಮಾನುಗಳೇ ಇದ್ದಿದ್ದು. ಎಲ್ಲಾ ಚೆಲ್ಲಾಡಿಬಿಟ್ಟವು ನಿಮಿಷಗಳಲ್ಲಿ. ಪುಟ್ಟ ಕೆಲಸ ಮಾಡುವ ಹುಡುಗನನ್ನು ಪ್ರತಿಸ್ಪರ್ಧಿಯಂತೆ ಭಾವಿಸಿದ.

ಶಾರದ ಮೌನವಾಗಿ ಮಂಚದ ಮೇಲೆ ಕೂತಳು.

ಎಲ್ಲವನ್ನು ಹಾಗೆಯೇ ಬಿಟ್ಟು ಹೊರಗೆ ಹೋದ. ಅವನ ಉದ್ದೇಶವೇನೋ ಅವಳಿಗೆ ಸ್ಪಷ್ಟವಾಗದೇ ಹೋಯಿತು. ನೂರರಲ್ಲಿ ಹೆಚ್ಚು ಪಾಲು ಗಂಡಸರು ಕೈ ಹಿಡಿದ ಹೆಂಡತಿಯರನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತ ಇರುತ್ತಾರೆ. ಅದು ಎಷ್ಟು ಜನಕ್ಕೆ ಸಾಧ್ಯವಾಗಿದೆ? ಆದರೆ ವಸಂತನದು ವಿಲಕ್ಷಣ ಪ್ರವೃತ್ತಿ.

ಸಮ, ಸಾಟಿ, ಯಾರು, ಏನು, ಎತ್ತ ಯಾರಾದರಾಗಲೀ ಪ್ರತಿಸ್ಪರ್ಧಿ ಎನ್ನುವಂತೆ ಉರಿದು ಬೀಳುತ್ತಿದ್ದ.

ಗೆಳೆಯರ ಮನೆಗೆ ಹೋಗಿದ್ದ ಕಾಶೀಪತಿಗಳು ಆಫೀಸ್‌ಗೆ ಹೋದಾಗ ಮಗ ಅಲ್ಲೇ ಇದ್ದುದ್ದನ್ನು ನೋಡಿ ಚಕಿತರಾದರು. "ಇವತ್ತು ನೀನೇನು ಆಫೀಸ್‌ಗೆ ಬರ್ಬೇಡ, ಶಾರದ ಜೊತೆ ಇರು" ಎಂದಿದ್ದರು.

"ಇವತ್ತೊಂದು ದಿನ ನಾನೇ ಮ್ಯಾನೇಜ್ ಮಾಡ್ಕೋತ್ತಾ ಇದ್ದೆ" ಹೊರಟು ಬಂದರು ಮನೆಗೆ. ಇಡೀ ಮನೆ ನಿಶ್ಯಬ್ದ. ವಗ್ಗರಣೆ, ಸಾರು, ಹುಳಿಗಳ ವಾಸನೆ ಕೂಡ ಇರಲಿಲ್ಲ.

"ಗೋಪಿ... ಗೋಪಿ.." ಎಂದರು ಆತಂಕದಿಂದ.

ಬಂದ ಗೋಪಿ ಗುಬ್ಬಚ್ಚಿಯಂತೆ ಮುದುರಿ ನಿಂತ. ವಸಂತನ ಬೆಡ್‌ರೂಂ ಕಡೆ ಕೈ ತೋರಿಸಿದ. ಎಸೆದಾಡುವ ಸದ್ದು ಕೇಳಿಸಿದರೂ ಅತ್ತ ಸುಳಿದಿರಲಿಲ್ಲ.

ಅವರ ಎದೆ ಹಾರಿತು. ಏನು ತಡೆದುಕೊಳ್ಳುವ ವಯಸ್ಸಲ್ಲ. ರೂಮಿನ ಬಳಿ ಧಾವಿಸಿ ಬಂದರು. ಬೋಲ್ಟ್ ಹಾಕಿರಲಿಲ್ಲ. ಎಸೆದಾಡಿದ ಬೆಳ್ಳಿ ಬಟ್ಟಲು, ಪಾತ್ರೆಗಳೆಲ್ಲ ಅಲ್ಲಲ್ಲೇ ಇದ್ದುವು. ಶಾರದ ವಿಗ್ರಹದಂತೆ ಕೂತಿದ್ದಳು.

"ಶಾರದ, ಏನಮ್ಮ ಇದೆಲ್ಲ ?" ಅವರ ಪ್ರಶ್ನೆ ಸುತ್ತಿಗೆಯಿಂದ ಹೊಡೆದಂತಾಯಿತು. ಚೇತರಿಸಿಕೊಂಡಳು ಬೇಗ "ಏನೋ ಹುಡುಕಾಡಿ, ಸಿಗದೇ ಇದ್ದಿದ್ದಕ್ಕೆ ಎರೆಚಾಡಿದ್ದಾರೆ. ನಿದ್ದೆಯ ಮಂಪರು ಇತ್ತು. ಸಾರಿ..... ಅಂಕಲ್" ಪ್ರತಿಯೊಂದನ್ನು ಆಯ್ದು ಆಯ್ದು ತೆಗೆದಿಡತೊಡಗಿದಳು.

ಈ ಪ್ರಕರಣಕ್ಕೆ ಬೇರೆ ಕಾರಣವಿದೆಯೆಂದುಕೊಂಡರೂ ಅದು ತೀರಾ ಕ್ಷುಲ್ಲಕವಾಗಿರುತ್ತದೆಯೆಂದೇ ಅವರ ಅಭಿಪ್ರಾಯ. ಇತ್ತೀಚಿನ ಅವನ ನಡವಳಿಕೆಯಿಂದ ಸ್ವಾರ್ಥ ಮನೋಭಾವದ (Self-}Centred) ವ್ಯಕ್ತಿಯೆಂದು ದೃಢಪಟ್ಟಿತ್ತು. ತನ್ನ ಬಗ್ಗೆ ಮಾತ್ರ ಆಲೋಚಿಸಿಕೊಳ್ಳಬಲ್ಲ, ಬೇರೆಯವರ ಬಗ್ಗೆ ಅವನ ಮನ ಮಿಡಿಯದು.

ನೇರವಾಗಿ ಅಡಿಗೆಯ ಮನೆಗೆ ಬಂದರು. ಅಳುತ್ತ ತರಕಾರಿ ಹೆಚ್ಚುತ್ತಿದ್ದ ಗೋಪಿ ಕಣ್ಣುಗಳು ಅತ್ತು ಅತ್ತು ಕೆಂಪಾಗಿತ್ತು.

"ಯಾಕೋ ಅತ್ತಿದ್ದೀಯಾ ?" ಗದರಿಸಿಯೇ ಕೇಳಿದರು.

ಮೊದ ಮೊದಲು ಬಾಯಿ ಬಿಡಲಿಲ. 'ನಿನ ಒದು ಹೊರಗಡೆ

ಹಾಕ್ತೀನಿ' ಜೋರು ಮಾಡಿದ ನಂತರ ಬಾಯಿ ಬಿಟ್ಟ. ಹಾರ್ಲಿಕ್ಸ್‌ನಿಂದ ಷುರುವಾದ ಕತೆ, ಎಸೆದಾಟದ ಸದ್ದಿನೊಂದಿಗೆ ಮುಕ್ತಾಯವಾಯಿತು.

ಹೊರಗಡೆ ಬಂದು ಸೋಫಾ ಮೇಲೆ ಕುಸಿದರು. ಯೋಚಿಸಿ ಯೋಚಿಸಿ ತಲೆ ಕೆಟ್ಟಾಗ ಕಣ್ಣೀರು ಸುರಿಸಿದರು. 'ಆನಂದ ಕ್ಷಮ್ಸಿಬಿಡೋ, ನಿನ್ಹತ್ರ ಬರೋಕು ನಂಗೆ ಧೈರ್ಯವಿಲ್ಲ.' ಹೆಂಡತಿ, ಸ್ನೇಹಿತ ಸತ್ತ ನಂತರ ಅವರೆಂದೂ ಇಷ್ಟು ದುಃಖಿಸಿರಲಿಲ್ಲ, ಕೂತ ಕಡೆಯಿಂದ ಅಲ್ಲಾಡಲಿಲ್ಲ.

"ಯಜಮಾನ್ರೆ, ತಟ್ಟೆ ಹಾಕಿದೆ" ಗೋಪಿಯ ಸ್ವರ ಕೇಳಿದಾಗಲೇ ಎಚ್ಚರಗೊಂಡಿದ್ದು. "ಅಣ್ಣ, ಅವ್ರು ಊಟಕ್ಕೆ ಕೂತಿದ್ದಾರೆ" ಸುದ್ದಿ ಮುಟ್ಟಿಸಿ ಹೋದ.

ವಸಂತ ಊಟಕ್ಕೆ ಕೂತಿದ್ದ.

"ಶಾರದ... ಎಲ್ಲಿ ?" ಕೇಳಿದರು.

"ಹಸಿವಿಲ್ಲ ಅಂದ್ಲು, ಆಮೇಲೆ ಮಾಡ್ಬಹ್ದು. ಹಸಿವು ಯಾರ ದುರಾಹಂಕಾರನು ಲಕ್ಷಿಸೋಲ್ಲ ಬಿಡಿ" ಉಡಾಫೆಯ ಮಾತಾಡಿದ.

ಕಾಶೀಪತಿಗಳು ಹೋಗಿ ಬಲವಂತ ಮಾಡಿ ಸೊಸೆಯನ್ನು ಕರೆ ತಂದರು. "ನಾನು ಕರೆದಾಗ್ಲೇ ಬಂದಿದ್ರೆ... ಅನಂದರಾವ್ ಗಂಟು ಹೋಗ್ತಾ ಇತ್ತಾ?" ಎಂದು ಕುಟುಕಿದ ತಣ್ಣಗೆ.

ಕಾಶೀಪತಿಗಳಿಗೆ ಎಂಥ ಕೆಟ್ಟ ಕೋಪ ಬಂತೂಂದರೇ ನಾಲ್ಕು ಬಾರಿಸಿ ಬಿಡಬೇಕೆನಿಸಿತು. ತುಟಿ ಕಚ್ಚಿದರು. 'ಅನ್ನ ಪರಬ್ರಹ್ಮ' ಎಂದು ನಂಬಿದವರು. ರಂಪ, ರಾದ್ಧಾಂತ ಅದರ ಮುಂದೆ ಸಲ್ಲದು. ಆದರೂ ಬಾಯಿಗಿಟ್ಟ ಪ್ರತಿ ಪದಾರ್ಥವು ಕಹಿಯೇ. ಅಂಥ ಕಹಿಯನ್ನು ತುಂಬಿಬಿಟ್ಟ ರುಚಿಕಟ್ಟಾದ ಅಡಿಗೆಗೆ. ನಾಲ್ಕು ತುತ್ತು ಬಲವಂತದಿಂದ ತಿಂದಳು ಶಾರದ.

ಮೂರನೆ ದಿನ ಕಾಲೇಜಿಗೆ ಹೋದಾಗ ಪ್ರಿನ್ಸಿಪಾಲರು ಸಂತಾಪ ವ್ಯಕ್ತಪಡಿಸಿದರು. "ಸೇತುರಾಮ್ ತೀರಿಕೊಂಡಿದ್ದು ಬಹು ದೊಡ್ಡ ನಷ್ಟ" ಅವಳಿಗೆ ಅಷ್ಟೇ ಕೇಳಿಸಿದ್ದು. ಪ್ರಜ್ಞೆ ತಪ್ಪಿ ಕುಸಿದಳು.

ರೆಸ್ಟ್ ರೂಮಿಗೆ ಒಯ್ದು ಡಾಕ್ಟರನ್ನು ಕರೆಸಿದರು. "ಷಾಕಾಗಿದೆ. ಅಷ್ಟೆ, ಬೇಗ ಚೇತರಿಸ್ಕೋತಾರ" ಎಂದರಷ್ಟೆ.

ವಿಷಯ ತಿಳಿದ ಕಾಶೀಪತಿಗಳು, ವಸಂತ ಕೂಡಿಯೇ ಬಂದರು. "ತಂದೆ ತಾಯಿ ಇಲ್ದ ಹುಡ್ಗೀನ ಸೇತುರಾಮ್ ಎಲ್ಲಾ ತಾನಾಗಿಯೇ

ಬೆಳೆಸಿದ್ರು" ಪ್ರಿನ್ಸಿಪಾಲರು ಹೇಳಿದಾಗ ಕಾಶೀಪತಿಗಳು ಮಗನ ಮುಖ ನೋಡಿದರು. 'ಒಂದು ಒಳ್ಳೆಯ ಸಮಯ ನೋಡಿ ಹೇಳು' ಎಂದಿದ್ದರು, ಅವನು ಆ ರಿಸ್ಕ್ ತಗೊಂಡಿರಲಿಲ್ಲ.

"ಹುಷಾರ್ ಇರ್ಲಿಲ್ಲ, ಅದಕ್ಕೆ ನಾವು ವಿಷ್ಯನಾ ಮುಚ್ಚಿಟ್ಟಿದ್ವಿ" ಕಾಶೀಪತಿಗಳು ಕಾರಣ ಕೊಟ್ಟರು, ವಸಂತ ಮಾತಾಡಲಿಲ್ಲ.

ಆಮೇಲೆ ಒಂದೇ ಒಂದು ಮಾತಾಡಲಿಲ್ಲ. ಶಾರದ. ತುಂಬು ಪ್ರೀತಿಯಿಂದ ಕಣ್ಣಲ್ಲಿ ಕಣ್ಣಿಟ್ಟುಕೊಂಡು ಬೆಳೆಸಿದ್ದರು. ನೆನಪುಗಳು ಎಷ್ಟರಮಟ್ಟಿಗೆ ಅವಳದು ಬಾಧಿಸಿತೆಂದರೆ, ಇನ್ನು ತನ್ನ ಪಾಲಿಗೆ ಜಗತ್ತೆ ಇಲ್ಲ ಎನ್ನುವಷ್ಟರ ಮಟ್ಟಿಗೆ ನಿರಾಸಕ್ತಳಾದಳು.

ದುಃಖದಲ್ಲಿದ್ದವರನ್ನು ಸಂತೈಯಿಸುವ ವಿಧಾನ ಗೊತ್ತಿಲ್ಲವೇನೋ, ವಸಂತಗೆ ರಾತ್ರಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲು ಮುಂದಾದ ಬಯಕೆಯ ರೂಪದಲ್ಲಿ. ಅವಳಿಗೆ ತಬ್ಬಿಬ್ಬು.

"ಐ ಡೊಂಟ್ ಲೈಕ್ ಇಟ್, ಲೀವ್ ಮಿ ಅಲೋನ್" ಮುಖವನ್ನು ಪಕ್ಕಕ್ಕೆ ಸರಿಸಿದಳು. ಅವಳಿಗೆ ವಸಂತ ಮನುಷ್ಯನಾಗಿ ಕಾಣಲಿಲ್ಲ, ಮೃಗವೆನಿಸಿದ. ಮಂಚದ ಕೊನೆಗೆ ಮುದುಡಿ ಮಲಗಿದಳು. ಪ್ರೀತಿ ತೋರಿಸುವುದೆಂದರೆ ಇದೇ ರೀತಿ ! ಬೇಡವೆಂದಿದ್ದು ಮಾತ್ರ ಅಪರಾಧ ಅವನ ಪಾಲಿಗೆ.

ಬೆಳಿಗ್ಗೆ ಸ್ವಲ್ಪ ಬೇಗನೇ ಎದ್ದ ಶಾರದ ಸ್ನಾನ ಮುಗಿಸಿ ಬಂದು ಕಾಶೀಪತಿಗಳಿಗೆ ತಾನೇ ಕಾಫಿ ಕೊಟ್ಟು "ಕಾಲೇಜ್‌ಗೆ ಹೋಗ್ತೀನಿ, ಅಂಕಲ್, ಪೋರ್ಷನ್ ಕವರ್ ಆಗಿಲ್ಲ. ಮನೆಯಲ್ಲಿರೋದು ಅಂದ್ರೆ ... ಬೋರ್" ಬೇಡಿಕೆಯನ್ನು ಮುಂದಿಟ್ಟಳು. ಅವಳು ಬೇಗ ಚೇತರಿಸಿಕೊಳ್ಳಬೇಕೆಂದರೇ ಕಾಲೇಜಿಗೆ ಹೋಗುವುದೇ ಸೂಕ್ತವಾಗಿ ಕಂಡಿತು.

"ಹೋಗ್ಬಾ, ತುಂಬ ಆಯಾಸ ಮಾಡ್ಕೋಬೇಡ" ಎಂದರು.

ಅದನ್ನು ವಸಂತನಿಗೂ ತಿಳಿಸಿದಳು. ರಾತ್ರಿಯ ಕೋಪ ಇಳಿದಿರಲಿಲ್ಲ. ತನಗೇ ನಿರಾಶೆ ಮಾಡಿದಳೆಂಬ ಕುದಿತ ಅವನಿಗಿತ್ತೇ ವಿನಃ ಅವಳ ಮನಸ್ಥಿತಿ ಹೇಗಿತ್ತೆಂದು ಚಿಂತಿಸಲು ಹೋಗಲಿಲ್ಲ.

ಡೈನಿಂಗ್ ಹಾಲ್‌ಗೆ ಬಂದಾಗ ಗೋಪಿ ಮಾತ್ರ ನಿಂತಿದ್ದ. "ನಾನು ಕರೆದು ಬರ್ತೀನಿ" ರೂಮಿಗೆ ಹೋದವಳು ವಸಂತನ ಎದೆಗೆ ತಲೆಯಾನಿಸಿ "ತಾತ, ನನ್ನ ಸರ್ವಸ್ವವು ಆಗಿದ್ರು, ಅವ್ರು ಇಲ್ಲ ಅಂದುಕೊಳ್ಳೋದೇ ನಂಗೆ

ಕಷ್ಟವಾಗಿದೆ" ಕಣ್ಣೀರು ಸುರಿಸಿದಳು.

"ಈ ನಾಟ್ಕ ನನ್ಹತ್ರ ಬೇಡ. ರಾತ್ರಿಯ ನಿನ್ನ ಅವಿಧೇಯತೆ ಕಾರಣ ಕೊಟ್ಟರೇ, ನಾನು ನಂಬಿಬಿಡೋಷ್ಟು ಮೂರ್ಖನಲ್ಲ" ಎಂದು ಕೋಪ ಕಾರಿದನೇ ವಿನಃ ಕಣ್ಣೀರು ತೊಡೆಯುವ ಪ್ರಯತ್ನ ಮಾಡಲಿಲ್ಲ.

ಬಾತ್‌ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡು ಶಾರದ ಬಿಕ್ಕಿ ಬಿಕ್ಕಿ ಅತ್ತಳು. "ತಾತ... ತಾತ..." ಅವಳ ಮೈನ ನರನರವು ಆಕ್ರಂದಿಸುತಿತ್ತು.

ಕಾಲೇಜಿಗೆ ಹೊರಟಾಗ ಕಾಶೀಪತಿಗಳು ಜೊತೆಯಾದರು. 'ತಪ್ಪೋ, ಸರಿಯೋ, ತಪ್ಪೊಪ್ಪಿಗೆಯಂತು ಒಪ್ಪಿಸಬೇಕು.'

"ಶಾರದ, ನಂಗೂ ನಿಮ್ಮ ತಾತ ತಂದೆ ಇದ್ದಂಗೆ. ನಾನು ಕೂಡ ಈಗ ಅನಾಥನೇ. ನೀನು ಹುಷಾರಾಗಿದ್ರೆ... ನಾನು, ನೀನೂ ಅವ್ರ ಕಡೆಯ ದರ್ಶನವನ್ನು ಹೋಗಿ ಪಡೆಯಬಹುದಿತ್ತು. ವಿಷ್ಯ ಮುಟ್ಟಿದ ದಿನ ಟೆಂಪರೇಚ್‌ರ್ ಜಾಸ್ತಿ ಇತ್ತು, ಅರೆ ಪ್ರಜ್ಞಾವಸ್ಥೆಯಲ್ಲಿದ್ದೆ. ಆಮೇಲೆ ಎರಡು ದಿನಕ್ಕೂ ನೀನು ಚೇತರ್ಸಿಕೊಳ್ಳಲಿಲ್ಲ. ನಿಸ್ಸಹಾಯಕನಾದೆ. ನಿನ್ನ ಮಟ್ಟಿಗೆ ದೊಡ್ಡ ತಪ್ಪೇ ! ಕ್ಷಮ್ಸಿಬಿಡಮ್ಮ" ಗಂಟಲು ಗದ್ಗದವಾಯಿತು, ಹನಿಗಣ್ಣಾದಳು.

"ಛೆ, ಬಿಡಿ ಅಂಕಲ್ ! ಅದು ಹೇಗೆ ತಪ್ಪಾಗುತ್ತೆ. ಅಲ್ಲಿ ಉದ್ದೇಶ ಒಳ್ಳೆದಿತ್ತು. ನಾನು ಅವ್ರ ಸಾವನ್ನು ನೋಡೋಕೆ ಒಪ್ತಾ ಇರ್ಲಿಲ್ಲ. ನನ್ನ ಮನಸ್ಸಿನಲ್ಲಿ, ನೆನಪುಗಳಲ್ಲಿ ಬದುಕೇ ಇದ್ದಾರೆ, ಅಷ್ಟು ಸಾಕು" ಎಂದಳು ಸರಳವಾಗಿ.

ಅಷ್ಟು ದೊಡ್ಡ ವಿಷಯವನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡಿದ್ದನ್ನು ಮೆಚ್ಚಿದರು. "ಶಾರದ.... ನೀನು ... ಶಾರದಾನೇ. ನಿನ್ನ ಜೊತೆಯಲ್ಲಿ ಬದ್ಕನ್ನು ಸರ್ಯಾಗಿ ಹಂಚಿಕೊಳ್ಳಲಾರದ ಅವ್ನು ಮೂರ್ಖ. ಮಗನನ್ನು ಬಯ್ದರು."

ಶಾರದ ತುಟಿಗಳನ್ನು ಭದ್ರವಾಗಿ ಕಚ್ಚಿಡಿದಳು.

"ಹಾಯ್ ಮಿಸ್... ಮೇಡಮ್" ಕೈಯಾಡಿಸುತಲೇ ಆಟೋದಿಂದ ಇಳಿದ ಮಾಧವಿ "ಕಾಲೇಜಿಗೆ ತಾನೇ, ಬನ್ನಿ ಮೇಡಮ್" ಅವಳ ಕೈಯಲ್ಲಿನ ಪರ್ಸ್ ಕಿತ್ತುಕೊಂಡೇ ಬಿಟ್ಟಳು.

ಕಾಶೀಪತಿಗಳಿಗೆ ಹೇಳಿ ಆಟೋ ಹತ್ತಿದ್ದು.

ಬಡ ಬಡ ಮಾತಾಡುತ್ತಿದ್ದ ಮಾಧವಿ ಒಂದು ಪ್ರಶ್ನೆಯಾಗಿದ್ದಳು. ತನಗೇ

ತಿಳಿಯದ ವಿಷಯುವೇ ಇಲ್ಲವೆಂದು ಹರಟುವ ಅವಳ ಬುದ್ಧಿಯನ್ನು ಅಳೆಯುವುದು ಬೇಕಿರಲಿಲ್ಲ.

"ಹೇಗೂ ಮೆರಿಟ್ ಸ್ಟೂಡೆಂಟ್, ಬೇರೆ ಕಡೆ ಜಾಬ್‌ಗೆ ಯಾಕೆ ಟ್ರೈ ಮಾಡ್ಬಾರ್ದು? ನಿಮ್ಮ ಅಂಕಲ್ ಅಮೆರಿಕಾದಲ್ಲಿದ್ದರಂತಲ್ಲ, ಅಲ್ಲಿನ ಕಾಲೇಜುಗಳಲ್ಲಿ ಕೂಡ ನಿಮ್ಗೆ ಕೆಲ್ಸ ಸಿಗ್ಬಹುದ್ದು !" ಮಾತು ಪ್ರಾರಂಭಿಸಿದಳು ಮಾಧವಿ.

ಹಿಂದೆ ಅವಳ ಚಿಕ್ಕಪ್ಪ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದರು. "ಇಲ್ಲಿ ತುಂಬ ಸ್ಕೋಪ್ ಕಡಿಮೆ. ಇನ್ನು ನಿನ್ನ ಸ್ಕಾಲರ್‌ಗೆ ಹತ್ತು ವಿದೇಶಿ ಯಾತ್ರೆಗಳನಾದ್ರೂ... ಮಾಡ್ಬಹುದಿತ್ತು. ನಿಮ್ಮ ಕಾಲೇಜಿನವ್ರು ಆ ಬಗ್ಗೆಯಲ್ಲ ತಲೆ ಕೆಡ್ಸಿಕೊಳ್ಳೋಲ್ಲ"

"ಇಲ್ಲ ಅಂಕಲ್, ಅಪ್ಪ ಅಧ್ಯಾಪಕರಾಗಿದ್ದ ಕಾಲೇಜು. ಅದೇ ಕಾಲೇಜಿನಲ್ಲಿ ಮುಂದುವರಿಯೋ ಇಚ್ಛೆ. ನಮ್ಮ ಕಾಲೇಜಿನ ವ್ಯವಸ್ಥಾಪಕ ವರ್ಗಕ್ಕೆ ವಿದ್ಯಾರ್ಥಿಗಳ ಮಟ್ಟವನ್ನು ಹೆಚ್ಚಿಸೋ ಉದ್ದೇಶ ಮಾತ್ರ" ಎಂದಿದ್ದಳು.

ಈಗ ಅದೇ ಅಭಿಪ್ರಾಯ ಬರುವಂಥ ವಿಷಯವೆತ್ತಿದ್ದರಿಂದ ನೇರವಾಗಿ ಉತ್ತರಿಸಿದ್ದು "ಅಂಥ ಯಾವ ಯೋಚನೇನು ಇಲ್ಲ. ಈ ಕಾಲೇಜಿನಲ್ಲೆ ರಿಟೈರ್ಡ್ ಆಗೋದು" ಎಂದಳು ನಗುತ್ತಾ ಶಾರದ.

"ಪ್ರೊಫೆಸರ್ ವಾಲಂಟರಿ ರಿಟೈರ್‌ಮೆಂಟ್‌ನ ಮಾನೇಜ್‌ಮೆಂಟ್ ಅಕ್ಸೆಪ್ಟ್ ಮಾಡಿಕೊಂಡಿದೆ. ಸೆಂಡ್‌ಆಫ್ ಪಾರ್ಟಿಯ ಬಗ್ಗೆ ಪ್ರೊಫೆಸರ್ ವಿರೋಧ. ನೋಡ್ಬೇಕು...." ಪೂರ್ತಿ ಜವಾಬ್ದಾರಿ ಹೊತ್ತಂತೆ ನುಡಿದಳು.

ಮೊದಲ ಎರಡು ಪಿರಿಯಡ್ ಮುಗಿಸಿಕೊಂಡು ಲೈಬ್ರರಿಗೆ ಹೋದವಳು ಮನೆಗೆ ಫೋನ್ ಹಚ್ಚಿ "ಅಂಕಲ್, ನಮ್ಮ ಮನೆಗೆ ಹೋಗ್ಬರ್ತೀನಿ, ಅವರು ಇದ್ದಾರ?" ವಿಚಾರಿಸಿದಳು.

"ಇಲ್ಲ, ಅವನಿಂದು ಮಿನಿಸ್ಟರ್‌ನ ನೋಡೋಕೆ ಹೋಗಿದ್ದಾನೆ. ನಾನು ಹೇಳ್ತೀನಿ, ಬಿಡು. ಬೇಗ್ಬಂದ್ರೆ ಅವನನ್ನೆ ಕಳಿಸ್ತೀನಿ, ನಿನ್ನ ಕರ್ಕೊಂಡ್ಬರೋಕೆ" ಎಂದರು.

ಎದೆಯ ಮೇಲೆ ಕೈ ಇಟ್ಟುಕೊಂಡಳು. ಅಗ್ನಿಪರ್ವತದಿಂದ ಸ್ವಲ್ಪ ಹೊತ್ತಾದರೂ ಬಿಡುಗಡೆ ಪಡೆದೆನೆಂದು. ಹೊರ ಬಂದು ಆಟೋ ಹತ್ತಿದ್ದು.

"ನಮಸ್ಕಾರ ಮೇಡಮ್, ಅಂದು ಸೌತ್ ಎಂಡ್ ಸರ್ಕಲ್‌ನಿಂದ ಕಾಲೇಜಿಗೆ ಕರ್ಕೊಂಡ್ಬಂದಾಗ ನೂರು ರೂಪಾಯಿ ಕೊಟ್ಟಿರಲ್ಲ" ಜ್ಞಾಪಿಸಿದ. ಅವಳ ತುಟಿಯಂಚಿನಲ್ಲಿ ನಗು ಮಿನುಗಿತು.

"ಬಹಳ ಸಂತೋಷ, ಹೇಗಿದ್ದೀಯಾ ?" ವಿಚಾರಿಸಿದಳು.

ತನ್ನ ಕಾಕಿ ಷರ್ಟು ಜೇಬಿನಲ್ಲಿದ್ದ ಚೀಟಿಯನ್ನು ಶಾರದ ಮುಂದಿಡಿದು "ಎಂ.ಎ., ಎಕ್ಸಾಮ್‌ಗೆ ಕೂತಿದ್ದೀನಿ. ಎಷ್ಟೋ ನೋಟ್ಸ್ ಓದಿದ್ರೂ ಟೆಕ್ಸ್ಟ್‌ಬುಕ್ ಓದಿದಷ್ಟಾಗೋಲ್ಲ ಅಂತಾರೆ. ಹಳೇ ಪುಸ್ತಕದ ಅಂಗಡಿಯಲ್ಲಿ ಹುಡುಕ್ತಾ ಇದ್ದೀನಿ. ದಯವಿಟ್ಟು ಯಾರ್ಹತ್ರನಾದ್ರೂ ಕೊಡ್ಸಿ ಮೇಡಮ್" ದೈನ್ಯದಿಂದ ಕೇಳಿಕೊಂಡ.

ಓದಿನ ಬಗ್ಗೆ ಅವನಿಗಿದ್ದ ಆಸಕ್ತಿ ನೋಡಿ ಅಚ್ಚರಿಗೊಂಡಳು. "ಖಂಡಿತ, ಭಾನುವಾರ ನಮ್ಮ ಮನೆಗೆ ಬಾ" ಆ ಚೀಟಿಯನ್ನು ಪಡೆದು ವಿಳಾಸದ ಕಾರ್ಡು ಕೊಟ್ಟಳು.

ಆಮೇಲೆ ಅವನು ಆಟೋ ಸ್ಟಾರ್ಟ್ ಮಾಡಿದ್ದು. ಗಾಡಿ ಓಡಿಸುತ್ತಲೇ ಹೇಳಿಕೊಂಡ ಶಾಲೆ ಬಿಟ್ಟಿದ್ದು, ಬಡತನ, ಈಗಿನ ಕಲಿಕೆಯ ಆಸೆ.

ಮನೆಯ ಮುಂದೆ ಇಳಿದವಳು ಮೀಟರ್ ನೋಡಿ ಹಣ ಕೊಟ್ಟು ಬಾಗಿಲು ತಟ್ಟಿದಳು. ಬಂದು ಬಾಗಿಲು ತೆರೆದ ತುಳಸಮ್ಮನ ಕಣ್ಣುಗಳಲ್ಲಿ ದಟ್ಟವಾದ ಸಹಾನುಭೂತಿ. ಅವಳನ್ನು ನೋಡಲು ಮೂರು ಸಲವಾದರೂ ನರ್ಸಿಂಗ್‌ಹೋಂಗೆ ಬಂದಿದ್ದರು ದಂಪತಿಗಳು, ತಾವೇ ಅವಳ ತವರಿಗೆ ವಾರಸುದಾರರು ಎನ್ನುವಂತೆ.

"ಹುಷಾರಾಗಿದ್ದೀಯಾ, ಶಾರದ ?" ಆ ಹೆಣ್ಣಿನ ಸ್ವರ ತಾಯ್ತನದ ಜೇನಿನಲ್ಲಿ ಅದ್ದಿ ತೆಗೆದಂತಿತ್ತು. "ಈಗ ಹುಷಾರೇ, ನರ್ಸಿಂಗ್‌ಹೋಂಗೆ ಸೇರಿಸೋ ಅಂಥ ಅನಾರೋಗ್ಯವೇನಾಗಿರ್ಲಿಲ್ಲ" ಎಂದಳು.

ಕರಿಬೇವಿನ ಸೊಪ್ಪು, ಕೊತ್ತಂಬರಿ, ಶುಂಠಿ ಬೆರೆಸಿದ ಮಜ್ಜಿಗೆಯನ್ನು ತಂದಿತ್ತರು. "ಕುಡ್ದು ಸುಧಾರಿಸ್ಕೋ, ಒಂದಿಷ್ಟು ಬಿಸಿ ಅನ್ನಕ್ಕೆ ಇಟ್ಟು ಬರ್ತೀನಿ" ಅಡಿಗೆ ಮನೆಗೆ ಹೋದರು.

ತುಳಸಮ್ಮನದು ತೀರಾ ಮುಪ್ಪಿನ ದೇಹ. ಆದರೂ ಆಕೆಯ ಜೀವನೋತ್ಸಾಹ ಬತ್ತಿರಲಿಲ್ಲ. ದೂರ ದೂರದಲ್ಲಿರುವ ಮಕ್ಕಳ ಬಗ್ಗೆ ಒಳ್ಳೆಯ ಮಾತುಗಳನ್ನೆ ಆಡುತ್ತಿದ್ದರು. ಹಳ್ಳಿಯನ್ನು ನೆನಸಿಕೊಳ್ಳುತ್ತಿದ್ದರು. 'ನಿಮ್ಮ ತಾತ ಬಂದ ಕೂಡಲೇ ನಾವುಗಳು ಹಳ್ಳಿಗೆ ಹೋಗ್ಬಿಡ್ತೀವಿ'

ಹೇಳುತ್ತಿದ್ದರು. ಹಿಂದಿರುಗಲಾರದ ಸ್ಥಳಕ್ಕೆ ಹೋದ ಸೇತುರಾಮ್ ಮತ್ತೆ ಬರಲು ಸಾಧ್ಯವೇ ?

ಬೇಡ ಬೇಡವೆಂದರೂ ಅನ್ನ ಕಲೆಸಿ ತಾವೇ ತುತ್ತಾಕಿದರು. ಸೇತುರಾಮ್ ತೀರಿಕೊಂಡ ವಿಷಯ ತಿಳಿದಿದ್ದರೂ ತಾವಾಗಿ ಪ್ರಸ್ತಾಪಿಸಲಿಲ್ಲ. ಸಮಸ್ತವು ಅವರೇ ಆಗಿ ಸಲಹಿದ್ದು ವಿಷಯ ಅವರಿಗೆ ತಿಳಿದದ್ದೇ.

ಯಾರಾದಾದರೂ ಸಾಂತ್ವನ ಬೇಕಿತ್ತು ಅವಳಿಗೆ. ತುಳಸಮ್ಮನನ್ನ ತಬ್ಬಿಕೊಂಡು ಅಳಲು ಷುರು ಮಾಡಿದಾಗ ಬೆನ್ನು ದಡವಿ, ಕಣ್ಣೊರೆಸಿ ಸಮಾಧಾನಿಸಿದರು.

"ಸಮಾಧಾನ ಮಾಡ್ಕೋ ! ಸಮಸ್ತವನ್ನು ಅನುಭವಿಸಿ ಪಕ್ವವಾದ ಜೀವ ಹಾಯಾಗಿ ಪರಮಾತ್ಮನಲ್ಲಿ ಸೇರಿಹೋಗಿದೆ. ರೋಗ ರುಜಿನವಿಲ್ಲ, ಕೊರಗಲಿಲ್ಲ, ಆಸ್ಪತ್ರೆ ಸೇರಲಿಲ್ಲ. ಅವರೊಬ್ಬ ಪುಣ್ಯಾತ್ಮ"

ಎಷ್ಟು ಹೇಳಿದರು ಸೇತುರಾಮ್ ಬಗ್ಗೆ, "ಮಗ ಸತ್ತಾಗ ಅವರು ಉಳ್ದುಕೊಂಡಿದ್ದು ನಿನ್ನ ಲಾಲನೆ ಪಾಲನೆಗಾಗಿ. ಇಲ್ಲದಿದ್ದರೇ ಎಂದೋ ದೇಶಾಂತರ ಹೋಗಿಬಿಡುತ್ತಿದ್ದರು. ಬಂದ ಕೆಲಸ ಮುಗೀತು ಅನ್ನೋ ಭರವಸೆ ಸಿಕ್ಕ ಮೇಲೆಯೇ ಅವರು ಹೊರಟಿದ್ದು. ಅವ್ರ ಹತ್ತಿರ ಕೊನೆಯ ಸಮಯದಲ್ಲಿ ನೀನು ಇಲ್ಲದಕ್ಕಾಗಿ ದುಃಖಿಸಬೇಕಷ್ಟೆ" ಎಂದಾಗ ಅವಳ ಕಂಬನಿ ತುಂಬಿದ ಕಣ್ಣುಗಳಲ್ಲಿ ಮೂಡಿದ್ದು ಭಯ.

"ಬೇಡ ಅಜ್ಜಿ, ನಾನು ಅದ್ನ ಮಾತ್ರ ನೋಡಕ್ಕೆ ಸಿದ್ಧವಿಲ್ಲ. ನನ್ನ ನೆನಪುಗಳಲ್ಲಿ ಅವ್ರನ್ನು ಬದ್ಕಿಸಿಕೊಂಡು ಸುಖವಾಗಿ ಇರ್ತೀನಿ" ಎಂದು ಎದೆಯ ಮೇಲೆ ಕೈಯಿಟ್ಟುಕೊಂಡಳು.

ಇಡೀ ಮನೆಯಲ್ಲೆಲ್ಲ ಓಡಾಡಿದಳು. ಒಂದು ರೀತಿಯ ನೆಮ್ಮದಿ ಬಹಳ ದಿನಗಳ ನಂತರ ಅವಳ ಮನಕ್ಕೆ ಅಲ್ಪ ಸ್ವಲ್ಪ ಶಾಂತಿ ಸಿಕ್ಕಿತ್ತು. ತಾತನ ಪ್ರತಿಯೊಂದು ವಸ್ತುವನ್ನು ಮುಟ್ಟಿ ಮುಟ್ಟಿ ನೋಡಿದಳು. ತಟ್ಟನೇ ಅವರು ಹೇಳಿದ್ದು ನೆನಪಾಯಿತು. ಅವಳು ಬರೆದದ್ದು, ಗೀಚಿದ್ದು ಎಲ್ಲವನ್ನು ಕಟ್ಟಿ ಬೀರುವಿನಲ್ಲಿ ಒಂದು ಕಡೆ ಜೋಪಾನವಾಗಿ ಇರಿಸಿದ್ದನ್ನು ಹೇಳಿದ್ದರು ಫೋನಿನಲ್ಲಿಯೇ. ಅವನ್ನೆಲ್ಲ ತೆಗೆದು ಮುಂದೆ ಹಾಕಿಕೊಂಡಳು. ವರ್ಷಗಳ ಹಿಂದೆ ಬರೆದಿದ್ದು. ಕೆಲವು ಅಪ್ರಬುದ್ಧ, ಬಾಲಿಶವೆನಿಸಿದರೂ ಇಷ್ಟಪಟ್ಟು ಓದಿದಳು.

ತಟ್ಟನೆ ಒಂದು ಕಡೆ ನಿಂತಿತು ಅವಳ ನೋಟ. ಎರಡು ಹಂಸಗಳನ್ನು ಚಿತ್ರಿಸಿ, ಪಲ್ಲಕಿ ಹೊರುವ ದೃಶ್ಯದ ಚಿತ್ರವಿತ್ತು. ಅದರ ಕೆಳಗೆ 'ಹಂಸ ಪಲ್ಲಕಿ' ಎಂದು ಬರೆದಿತ್ತು. ಅಮೂಲ್ಯವೆನ್ನುವಂತೆ ಕೈಯಲ್ಲಿಡಿದು ನೋಡಿದಳು.

ಸೇತುರಾಮ್ ಒಂದೆರಡು ಸಲ ಹೇಳಿದ್ದರು.

"ನಂಗೆ ಎಳೆಯ ಹುಡುಗನಾಗಿದ್ದಾಗ ಪೆನ್ಸಿಲ್ ಹಿಡಿದು ಚಿತ್ರ ಬರೆಯುವ ಹುಚ್ಚಿತ್ತು. ನನ್ನ ಕೈ ಅಕ್ಷರಗಳ ಬದ್ಲು ಚಿತ್ರಗಳನ್ನು ಬರೆಯುತಿತ್ತು. ಇದು ಅಜ್ಜ, ಅಜ್ಜಿಗೆ ಇಷ್ಟವಾಗಲಿಲ್ಲ. ಹರಿದು, ಹರಿದು ಎಸೆಯುತ್ತಿದ್ದರು. ಕೆಲವೊಮ್ಮೆ ಪೆಟ್ಟುಗಳನ್ನು ತಿಂದಿದ್ದುಂಟು. ರಾತ್ರಿ, ಹಗಲು ಕಣ್ಣಲ್ಲಿ ಕಣ್ಣು ಹಾಕ್ಕೊಂಡು ನನ್ನ ಇಂಜಿನಿಯರನ್ನಾಗಿ ಮಾಡಿದ್ರು. ಆಮೇಲೆ ಕೆಲಸ, ಜವಾಬ್ದಾರಿ, ಇದರ ನಡ್ವೇ ನನ್ನ ಆಸೆ ಮುಚ್ಚಿ ಹೋದರೂ, ಈಗ್ಲೂ ಕೈಗೆ ಲೇಖನಿ ಸಿಕ್ಕರೆ ಅಕ್ಷರ ಬರೆಯೋದರ ಬದಲು ಚಿತ್ರಗಳನ್ನೆ ಬರೆಯೋದು" ನಕ್ಕಿದ್ದರು. ಆ ನಗುವಿನ ಹಿಂದೆ ಅಪಾರವಾದ ವೇದನೆ ಇದೆಯೆನಿಸಿತು.

ಅವರು ಗೀಚಿದನ್ನೆಲ್ಲ ಎತ್ತಿಟ್ಟುಕೊಂಡಿದ್ದಳು. ಆದರೆ ಸುಂದರ ಶೀರ್ಷಿಕೆ ಕೊಟ್ಟ ಈ ಚಿತ್ರವನ್ನು ಮಾತ್ರ ನೋಡಿರಲಿಲ್ಲ. ಅದರ ಜೊತೆಗೆ ತನ್ನ ಕವನ, ಪದ್ಯಗಳನ್ನೆಲ್ಲ ಒಟ್ಟುಗೂಡಿಸಿಕೊಂಡಳು.

"ಏನಿದೆಲ್ಲ ?" ತುಳಸಮ್ಮ ಬಂದು ಅಲ್ಲೇ ಕೂತರು.

"ನಾನು ವರ್ಷಗಳ ಹಿಂದೆ ಬರೆದ ಪದ್ಯಗಳು, ತಾತ ಅಮೆರಿಕಾಗೆ ಹೋದ್ಮೇಲೆ ಬರವಣಿಗೆ ಬಗ್ಗೆ ಪ್ರಸ್ತಾಪಿಸಿದ್ದರು. ಅದಕ್ಕೆ ಎಲ್ಲಾ ತಗೊಂಡೆ" ಜೋಡಿಸಿ ಒಂದು ಫೈಲ್‌ಗೆ ಹಾಕಿಕೊಳ್ಳುವ ವೇಳೆಗೆ ಶ್ರೀಧರಮೂರ್ತಿಗಳು ಬಂದರು.

"ಶಾರದ ಎಂಥ ಚೆಂದವಾದ ಪದ್ಯಗಳನ್ನು ಬರೆದಿದ್ದಾಳೆ" ಹಲ್ಲಿಲ್ಲದ ಬಾಯನ್ನು ಅಗಲ ಮಾಡಿ ಹೇಳಿದರು ತುಳಸಮ್ಮ. ಅವರು ಹೇಳಿ ಕೇಳಿ ಕನ್ನಡ ಮಾಸ್ತರು. ಸಾಹಿತ್ಯವೆಂದರೆ ಪಂಚಪ್ರಾಣ. ಅವರ ಈಗ ಹೆಚ್ಚಿನ ಸಮಯ ಕಳೆಯುತ್ತಿದ್ದುದು ಪುಸ್ತಕಗಳ ಮಧ್ಯೆಯೇ.

"ಇಲ್ಲಿ ಕೊಡು, ಮರೀ ! ನಾನು ಒಮ್ಮೆ ಓದಿಬಿಡ್ತೀನಿ" ಬಹಳ ಅಕ್ಕರೆಯಿಂದ ಇಸಿಕೊಂಡರು. ಕೆಲವು ಪದ್ಯಗಳನ್ನು ತಾವೇ ಓದಿದರು, ವಿಮರ್ಶಿಸಿದರು. ವೇಳೆ ಸರಿದಿದ್ದೇ ಗೊತ್ತಾಗಲಿಲ್ಲ. ಪೂರ್ತಿ ಕತ್ತಲು ಮುಸುಕಿ ಲೈಟುಗಳು ಬೆಳಗಿದ ನಂತರವೇ ಎದ್ದಿದ್ದು ಶಾರದ.

"ಹೋಗ್ಬರ್ತೀನಿ, ತಾತ"

ಹಣೆಗೆ ಕುಂಕುಮವಿಟ್ಟು, ಮುಡಿಗೆ ಮಲ್ಲಿಗೆ ದಂಡೆ ಮುಡಿಸಿ ತಾಂಬೂಲ ಕೊಟ್ಟ ತುಳಸಮ್ಮ "ಅಳಿಯಂದಿರನ್ನು ನೋಡ್ಬೇಕೂಂತ ಅನ್ನಿಸಿದೆ, ಕರ್ಕೊಂಡ್ಬಾ, ಎರ್ಡು ಸಲ ನರ್ಸಿಂಗ್‌ಹೋಂಗೆ ಬಂದಾಗ್ಲೂ ಇದ್ದರು. ಮಾತಾಡಿಸೋಕೆ ಆಗಲಿಲ್ಲ" ತೊಡಿಕೊಂಡರು.

'ಕರ್ಕೊಂಡ್ಬರ್ತೀನಿ' ಎನ್ನುವ ಭರವಸೆ ಕೊಡಲಾರಳು. ಕೊಟ್ಟರೂ ಪೂರೈಸಬಲ್ಲೆನೆಂಬ ಆತ್ಮವಿಶ್ವಾಸ ಅವಳಿಗಿಲ್ಲ, ಬರೀ ಮುಗಳ್ನಕ್ಕಳಷ್ಟೆ. 'ವಸಂತನ್ನ ಕಳಿಸ್ತೀನಿ' ಕಾಶಿಪತಿಗಳು ಹೇಳಿದ್ದರು ಫೋನಿನಲ್ಲಿ, ಆದರೆ ಅವನು ಬರಲಾರನೆಂದು ಶಾರದಾಗೆ ಗೊತ್ತು.

ಬಾಗಿಲವರೆಗೂ ಬಂದ ತುಳಸಮ್ಮನಿಗೆ ಏನು ಅನ್ನಿಸಿತೋ "ನಾವುಗಳು ಒಂದ್ಗಳಿಗೆ ಹೋಗ್ಬರೋಣ. ಮನೆಯಲ್ಲಿದ್ದು ತಾನೇ ಮಾಡೋದೇನಿದೆ, ನಮ್ಮ ಜೀವಗಳಿಗೂ ಒಂದಿಷ್ಟು ಬದಲಾವಣೆ ಇರುತ್ತೆ" ಸೂಚಿಸಿದರು. ಶ್ರೀಧರಮೂರ್ತಿಗಳಿಗೂ ಸರಿಯೆನಿಸಿತು.

ದಂಪತಿಗಳೊಂದಿಗೆ ಆಟೋದಲ್ಲಿ ಇಳಿದಾಗ ಕೆಂಪು ಮಾರುತಿ ಕಾಂಪೌಂಡ್‌ನಲ್ಲಿಯೇ ಇತ್ತು. ವಸಂತ ಮನೆಯಲ್ಲಿದ್ದಾನೆ ಎನ್ನುವುದಕ್ಕೆ ಸೂಚನೆ.

"ಅಳಿಯಂದಿರು ಮನೆಯಲ್ಲೆ ಇದ್ದಾರೆ" ಎಂದರು ತುಳಸಮ್ಮ.

ಬರೀ ಮುಗುಳ್ನಕ್ಕಳು. ಆ ನಗೆಯಲ್ಲಿ ಜೀವಂತಿಕೆ ಇಲ್ಲವೆನಿಸಿತು. ಮೊದಲ ಸಲ ಶ್ರೀಧರಮೂರ್ತಿಗಳಿಗೆ, ಎಲ್ಲೋ ಏನೋ, ಅಪಸ್ವರವಿದೆ. ನರ್ಸಿಂಗ್ ಹೋಂಗೆ ಹೋದಾಗ ಕನಿಷ್ಟ ಮಾತಾಡಿಸುವ ಸೌಜನ್ಯ ಕೂಡ ತೋರಿರಲಿಲ್ಲ. ಅಂದು ಆಟೋ ಮುಷ್ಕರ, ಹೇಗೆಯೋ ಹೋಗಿ ತಲುಪಿದ್ದರು. ಬರುವಾಗ ಅವರು ಪಟ್ಟ ಬವಣೆಯಂತು ದೇವರಿಗೆ ಗೊತ್ತು. ಇವರುಗಳು ಹೊರ ಬಂದು ಹೊರಟಾಗ ಕಾಂಪೌಂಡ್‌ನಲ್ಲಿ ಕಾರಿನ ಬಳಿ ನಿಂತಿದ್ದ ವಸಂತ ಪರಿಚಯವಿಲ್ಲದವನಂತೆ ಮುಖ ತಿರುಗಿಸಿದೊಂದ್ದೆ ಭಾಗ್ಯ. ಅಂದೇ ಆ ಮನುಷ್ಯನ ಬಗ್ಗೆ ಒಂದು ಲೆಕ್ಕಾಚಾರಕ್ಕೆ ಬಂದಿದ್ದರು. ಆದರೂ ಅವರೇನು ಬೇಸರಪಟ್ಟಿರಲಿಲ್ಲ. 'ದಂಪತಿಗಳು ಸಂತೋಷವಾಗಿದ್ದರೇ ಸಾಕು' ಎಂದು ಹಾರೈಸಿದ್ದರು. ಈಗ ಅದು ಕೂಡ ಎಡವಟ್ಟೆನಲ್ಲಿದೆಯೆನಿಸಿತು.

ಅಷ್ಟರಲ್ಲಿ ಬಂದ ಕಾಶೀಪಥಯ್ಯ ಎಷ್ಟು ಅಪರೂಪವಾಗಿ, ಆತ್ಮೀಯವಾಗಿ ಕಂಡರೆಂದರೆ ಅವರ ಕಣ್ಣುಗಳು ತೇವವಾಯಿತು: ಸೇತುರಾಮ್,

ಆನಂದರಾವ್‌ನ ನೂರು ಸಲವಾದರೂ ನೆನಪು ಮಾಡಿಕೊಂಡರು. ಕೃತಜ್ಞತೆಯಿಂದ, ಸ್ನೇಹದಿಂದ, ಗೌರವದಿಂದ.

ಅಲ್ಲೇ ಊಟವಾಯಿತು ದಂಪತಿಗಳಿಗೆ. ಫೈಲುಗಳನ್ನು ಹರಡಿಕೊಂಡು ಕೂತಿದ್ದ ವಸಂತ 'ಈಗ ಊಟ ಬೇಡ' ಅಂದ. ಅವರುಗಳು ಹೋಗುವರೆಗೂ ಆ ಕಡೆ ತಲೆ ಹಾಕಲಿಲ್ಲ. ಕಡೆಯಲ್ಲಿ ಹೋಗುವಾಗ ಅವರೇ ಮಾತಾಡಿಸಲು ಬಂದರು.

"ಅಳಿಯಂದಿರು ತುಂಬ ಬಿಜಿ ಅಂತ ಕಾಣಿಸುತ್ತೆ. ಒಂದು ಭಾನುವಾರನಾದ್ರೂ ಇಬ್ಬರೂ ಒಂದ್ಗಂಟೆ ಮಟ್ಟಿಗಾದರೂ ಬನ್ನಿ" ಆಹ್ವಾನ ಕೊಟ್ಟರು. 'ಹ್ಞೂ' ಅಂದನಷ್ಟೆ. ಅವನೇನು ಕದಲಲಿಲ್ಲ.

"ನಾನು ನಿಮ್ಮನ್ನ ಡ್ರಾಪ್ ಮಾಡ್ತೀನಿ, ನಡೀರಿ" ಕಾಶೀಪತಯ್ಯ ಕಾರಿನಲ್ಲಿ ಕೂತುಬಿಟ್ಟರು "ಹತ್ತಿಕೊಳ್ಳಿ, ಶ್ರೀಧರಮೂರ್ತಿಗಳೆ. ಊಟವಾದ್ಮೇಲೆ ಒಂದು ಸಣ್ಣ ವಾಕ್, ಅಷ್ಟೆ".

ಕಾಂಪೌಂಡ್‌ನ ಗೇಟು ಬಳಿ ನಿಂತು ಕಾರು ಕಣ್ಮರೆಯಾಗುವರೆಗೂ ನೋಡಿದಳು. ತೀರಾ ವಯಸ್ಸಾದ ಅವರು 'ಆದಿ ದಂಪತಿ'ಗಳಂತೆ ಕಂಡಿದ್ದರು. ಇಷ್ಟು ರಾತ್ರಿಯಲ್ಲಿ ಅವರುಗಳು ಹೇಗೆ ಹೋಗಬಲ್ಲರೆಂದು ಸ್ಪಂದಿಸಲಾರದಷ್ಟು ಕಲ್ಲೇ ? ವಸಂತನ ಬಗ್ಗೆ ತೀರಾ ಬೇಸರವಾಯಿತು.

"ಅಕ್ಕ, ಅಣ್ಣಾವ್ರು ಊಟಕ್ಕೆ ಕೂತಿದ್ದಾರೆ" ಗೋಪಿ ಬಂದು ಹೇಳಿದ. ಊಟ ಮಾಡದೇ ಕಾದಿದ್ದಳು ಶ್ರೀಧರಮೂರ್ತಿ ದಂಪತಿಗಳಿಗೆ ಮತ್ತು ಕಾಶೀಪಥಯ್ಯನವರಿಗೆ ಬಡಿಸಿ ಡೈನಿಂಗ್ ಹಾಲ್‌ನೊಳಕ್ಕೆ ಬರುವ ವೇಳೆಗೆ ಊಟ ಷುರು ಮಾಡಿದ್ದ ವಸಂತ ಒಂದು ತರಹ ನೋಡಿ "ನನ್ನ ಊಟ ಆಗ್ದೇ ಇರೋದು ನಿಂಗೆ ನೆನಪಿನಲ್ಲಿ ಇರ್ಲಿಲ್ವಾ ? ಯಾರೋ ಮೂರನೆಯವರು ಬಂದ ಸಡಗರದಲ್ಲಿ, ತಾಳಿ ಕಟ್ಟಿದವನನ್ನೆ ಆರಾಮಾಗಿ ಮರ್‍ತುಬಿಡ್ತೀಯಾ? ನಿನ್ನ ಅಂದು ಪ್ರಯೋಜನವೇನು.... ನನ್ನ ದುರಾದೃಷ್ಟ ಅಷ್ಟೆ" ಎಂದವನು ಕ್ಯಾರೆಟ್ ಹಲ್ವಾ ತಿನ್ನತೊಡಗಿದ. ಇನ್ನು ಎದುರಿಗೆ ಕೂತು ಊಟ ಮಾಡುವುದು! ಮಾಡಿದ ಊಟದಿಂದ ಹೊಟ್ಟೆ ತುಂಬಬಹುದು. ಆದರೆ ಸಂತೃಪ್ತಿ ಬೇಕೆಂದರೆ ಶುದ್ಧ ವಾತಾರವಣವಿರಬೇಕು. ನೇರವಾಗಿ ಅಡಿಗೆ ಮನೆಗೆ ಬಂದಳು.

"ಗೋಪಿ, ನೀನು ಕೂತ್ಕೋ, ನಾನು ಬಡಿಸ್ತೀನಿ" ಎಂದಳು. ಆವೇಗದಿಂದ ಅವಳೆದೆ ಏರಿಳಿಯುತಿತ್ತು. "ಬೇಡಕ್ಕಾ, ನೀನು ಊಟ

ಮಾಡದಿದ್ರೆ... ನನ್ಕೈಯಲ್ಲಿ ತಿನ್ನೋಕ್ಕಾಗೋಲ್ಲ" ಎಂದ. ಅವನು ಅಳುವುದೊಂದು ಬಾಕಿ, ಕೆನ್ನೆ ತಟ್ಟಿ ಹೊರಗಿನ ಗಾಳಿಗೆ ನಿಂತಳು.

ಗಿಡ, ಮಣ್ಣು, ಆಕಾಶ-ಪ್ರತಿಯೊಂದು ಸುಂದರವೆನಿಸಿತು. ನಿತ್ಯ ನೂತನ, ಬದುಕಿಗೊಂದು ಚೇತನ, ಮನುಷ್ಯರ ಜೊತೆಗಿನ ಒಡನಾಟಕ್ಕಿಂತ ಪ್ರಕೃತಿಯು ಜೊತೆಗಿನ ಸ್ನೇಹ ಹೆಚ್ಚು ಆಶಾದಾಯಕವೆನಿಸಿತು. ಅರ್ಧಗಂಟೆಯ ಮೇಲೆ ಗಿಡಗಳ ಜೊತೆ ಸಂಭಾಷಣೆ ನಡೆಸಿದಳು.

"ಶಾರದ, ಯಾಕಮ್ಮ ಒಬ್ಬೇ ನಿಂತಿದ್ದೀಯಾ ?" ಕಾಶೀಪತಯ್ಯ ಕೇಳಿದಾಗಲೇ, ಯಾವುದೋ ಲೋಕದಲ್ಲಿ ಇದ್ದವಳು ವಾಸ್ತವ ಪ್ರಪಂಚಕ್ಕೆ ಮರಳಿದ್ದು "ತಣ್ಣಗೆ ಗಾಳಿ ಬೀಸ್ತಾ ಇತ್ತು. ಅದ್ಕೇ ಇಲ್ಲಿ ನಿಂತಿದ್ದು" ಎಂದಳು.

ಇದಿಷ್ಟೆ ಕಾರಣವಲ್ಲವೆನಿಸಿತು ಅವರಿಗೆ. ವಸಂತ ಅರ್ಥವಾಗದ ಮನಸ್ಕನಾಗಿ ಕಂಡ.

"ಅಕ್ಕ, ಊಟ ಮಾಡಿಲ್ಲ" ಕ್ರೋಟನ್ ಗಿಡದ ಪಕ್ಕ ನಿಂತಿದ್ದ ಗೋಪಿ ಹೇಳಿದ. ಕಾಶೀಪತಯ್ಯ ಹತ್ತಿರಕ್ಕೆ ಬಂದು ಅವಳ ಭುಜದ ಮೇಲೆ ಕೈಯಿಟ್ಟು "ನಡೀಯಮ್ಮ ಊಟ ಮಾಡುವಂತೆ" ಕರೆದೊಯ್ದರು.

ಇಂದಿನ ಊಟ ಎಷ್ಟು ಕಷ್ಟವಾಗಿತ್ತೆಂದರೇ, ಎರಡು ಲೋಟ ನೀರು ಕುಡಿದರೂ ತಟ್ಟೆಯಲ್ಲಿದ್ದದನ್ನ ಖಾಲಿ ಮಾಡಲಾಗಲಿಲ್ಲ. ಒಂದಿಷ್ಟು ಮನಸ್ಸು ತಿಳಿಯಾಗದ ಹೊರತು ಅವಳಿಂದ ಊಟ ಮಾಡಲಾಗುವುದಿಲ್ಲವೆಂದುಕೊಂಡ ಕಾಶೀಪತಿಗಳು ಊಟ ಮಾಡುತ್ತಿದ್ದ ಗೋಪಿಯ ಕಡೆ ಬೆಟ್ಟು ಮಾಡಿ.

"ಶಾರದ, ನಮ್ಮ ಗೋಪಿ ಚಾರ್ಲಿ ಚಾಪ್ಲಿನ್‌ನಂತೆ ಕಾಣೋಲ್ವಾ ! ನಂಗೇನೋ ಅದೇ ಉದ್ದ, ಬಾಡಿಕಟ್ಟು, ಮುಖದ ವರ್ಚಸ್ಸು ಕೂಡ ಹಾಗೇ ಇದೆಯೆನಿಸುತ್ತೆ"ಎಂದು ಕಣ್ಣುಗಳನ್ನು ಕಿರಿದುಗೊಳಿಸಿ, ಮಹಾ ಅದ್ಭುತವನ್ನು ಕಂಡು ಹಿಡಿದವರಂತೆ ಹೇಳಿದಾಗ, ಗೋಪಿ ಗಾಬರಿಯಿಂದ ತಲೆ, ಭುಜ, ಎದೆಯನ್ನು ಮುಟ್ಟಿ ನೋಡಿಕೊಂಡ.

ಶಾರದ ಜೋರಾಗಿ ನಕ್ಕುಬಿಟ್ಟಳು.

ಅವನಿಗೆ ಎಲ್ಲೋ ಹೆಸರು ಕೇಳಿದ ನೆನಪು. ಎಲ್ಲಿ ? ಅವನಪ್ಪ ಒಬ್ಬ ಕುಂಟ ಮೂಗನನ್ನು 'ಲೇ ಚಾಪ್ಲಿನ್' ಬಾರೋ ಎಂದು ಕರೆಯುತ್ತಿದ್ದುದ್ದನ್ನು ನೆನಪು ಮಾಡಿಕೊಂಡ. ಯಾಕೆ ಹಾಗೆ ಕರೆಯುತ್ತಿದ್ದ. ಮೂಕಾಭಿನಯ ಮಾಡುತ್ತಿದ್ದನೆಂಬುದು ಜ್ಞಾಪಕ. ಆಗ ಸುಮ್ಮನಿದ್ದ ಗೋಪಿ, ಶಾರದ ಕೈ

ತೊಳೆದ ಕೂಡಲೇ ಬಂದವನು ಸಂಕೋಚದಿಂದ ನಿಂತ.

"ಚಾಪ್ಲಿನ್ ಯಾರು ?" ಕೇಳಿದ.

ಶಾರದ ಮುಗುಳ್ನಕ್ಕಳು. ಜಗತ್ತಿನಲ್ಲಿ ಕುತೂಹಲ, ವಿಸ್ಮಯವಿಲ್ಲದಿದ್ದರೇ ಎಷ್ಟು ನೀರಸವಾಗಿಬಿಡುತಿತ್ತು. ಎಂದುಕೊಂಡಳು. ಪ್ರತಿಯೊಂದಕ್ಕೂ ಕುತೂಹಲವೆ ಮೂಲವೆನಿಸಿತು.

"ಅವನೊಬ್ಬ ನಟ, ನಿರ್ಮಾಪಕ, ಬರ್ನಾಡ್ ಷಾ ಅಂಥ ಮಹಾನ್ ಸಾಹಿತಿ ಕೂಡ. 'ಸಿನಿಮಾ ಲೋಕದ ಮಹಾ ಪ್ರತಿಭಾಶಾಲಿ' ಅಂದಿದ್ದಾರೆ. ಹುಟ್ಟು ಬಡತನದಲ್ಲಿ ಲಂಡನ್ ಕೊಳೆಗೇರಿಯಲ್ಲಿ ಹುಟ್ಟಿದ ಚಾರ್ಲಿ ಚಾಪ್ಲಿನ್ ತಂದೆ ಕುಡುಕ, ತಾಯಿ ನರ್ತಕಿ. ಇವ್ನಿಗೆ 14 ವರ್ಷವಾಗಿದ್ದಾಗ ಆಕೆ ಸತ್ತು ಇವನು ಅನಾಥನಾದ. ಅವ್ನು ಒಂದು ಪೆಪ್ಪರ್‌ಮೆಂಟನ್ನು ಎಂಟು ದಿನ ಚೀಪುತ್ತಿದ್ದನಂತೆ, ಮುಗಿದು ಹೋಗದಿರಲೀಂತ. ಅಂಥ ವ್ಯಕ್ತಿ ಚಿತ್ರ ಜಗತ್ತಿನ ನಂಬರ್ ಒನ್ ಆದ. ಮಿಲಿಯನಾಧಿಪತಿಯಾದ. ಅಂಥ ಲಕ್ಷಣಗಳ್ನ ಅಂಕಲ್ ನಿನ್ನಲ್ಲಿ ಕಂಡಿರಬಹುದು" ತಮಾಷೆ ಮಾಡಿದಳು.

ಬೆಡ್‌ರೂಂಗೆ ಬಂದಾಗ ವಸಂತ ಇನ್ನು ಆಡಿಟ್ ರಿಪೋರ್ಟ್ ನೋಡುತ್ತಿದ್ದ 'ಮುಗಿಯಿತಾ ?' ಎನ್ನುವಂತೆ ಇವಳತ್ತ ನೋಡಿದ, ವಾರೆಗಣ್ಣಿಂದ.

"ಇಡೀ ದಿನ ಅವ್ರ ಮನೆಯಲ್ಲಿ ಇದ್ಯಾ ?" ಕೇಳಿದ.

ಸರಿಯಾದ ಉತ್ತರಕ್ಕೆ ಮತ್ತೆ ನಾಲ್ಕು ಪ್ರಶ್ನೆಗಳು. ಆಮೇಲೆ ವಾದಕ್ಕೆ ನಿಲ್ಲುತ್ತಿದ್ದ. ಟೀಕೆ ನಂತರ ವಿರಸ-ಇದು ಯಾವುದು ಅವಳಿಗೆ ಬೇಕಿರಲಿಲ್ಲ.

"ಅಂಕಲ್‌ಗೆ ತಿಳಿಸಿದ್ದೆ" ಅಷ್ಟೇ ಹೇಳಿದ್ದು.

"ನಾನೇನು ನಿಂಗೆ ಮುಖ್ಯ ಅಂತ ಅನ್ನಿಸ್ಲಿಲ್ವಾ ?" ಬಾಣದಂತೆ ನುಗ್ಗಿತು ಮಾತು. ಅದಕ್ಕೆ ವಿವರಣೆ ಕೊಡಬೇಕು. ಹೇಗೆ ಕೊಟ್ಟರೂ ಸಮಾಧಾನ ಹೊಂದುವುದಿಲ್ಲ. ಅವನದು ನೆಗೆಟಿವ್ ಮನಸ್ಥಿತಿ. ಕಣ್ಣು ಮುಚ್ಚಿ ಮಲಗಿದಳು. ಅವನ ಟೀಕೆ, ಗೊಣಗುವಿಕೆ ಕೇಳಿಸಿದರೂ ಕಿವುಡಳಾಗಿದ್ದಳು.

"ಬೆಳಿಗ್ಗೆ ನೀನೇ ಕಾಫೀ ಕೊಡ್ಬೇಕು" ಆಜ್ಞೆ ಮಾಡಿದ.

ಅವಳು ಕಮಕ್ ಕಿಮಕ್ ಎನ್ನಲಿಲ್ಲ. ಅತ್ಯಂತ ಸುಂದರ ಮಧುರವಾಗ ಬೇಕಾಗಿದ್ದ ರಾತ್ರಿಗಳನ್ನೆಲ್ಲ ಹಾಳುಗೆಡವುತ್ತಿದ್ದ. ಸಣ್ಣ ಗೆರೆಯಂತೆ ಅವರಿಬ್ಬರ ಮಧ್ಯೆ ಮೂಡಿದ್ದ,ರೇಖೆಯನ್ನು ಸ್ವಲ್ಪ ವಸಂತ ಸಹಕರಿಸಿದ್ದರೂ ಮುಚ್ಚಿ

ಬಿಡಬಹುದಿತ್ತು. ಅದಕ್ಕೆ ಅವಕಾಶ ನೀಡಲಿಲ್ಲ. ಪ್ರಯತ್ನ ಬರೀ ಪ್ರಯತ್ನವಾಗಿಯೇ ಇತ್ತು ಶಾರದಳದು.

* * * *

ಪ್ರೊಫೆಸರ್ ರಂಗೇಗೌಡರು, ಶಾಂತನ ಹುಡುಕಿಕೊಂಡು ಅವರ ಡಿಪಾರ್ಟ್‌ಮೆಂಟ್ ರೂಮಿಗೆ ಬಂದು "ಶಾಂತ, ಆರ್ ಯು ಫ್ರಿ? ಮಧ್ಯಾಹ್ನದ ಊಟ ನಿಮ್ಜೊತೆ ಮಾಡ್ಬೇಕೂಂತ ಇದ್ದೀನಿ. ನಿಮ್ಮದೇನಾದ್ರೂ ಅಭ್ಯಂತರನಾ?" ಎಂದಿನ ಧಾಟಿಯಲ್ಲಿಯೇ ಕೇಳಿದರು. ಸಜ್ಜನಿಕೆಯ ಗಡಿ ದಾಟದ ಮಾತುಗಾರಿಕೆ.

"ಬೈ ಆಲ್ ಮೀನ್ಸ್" ಓದುತ್ತಿದ್ದ ಪುಸ್ತಕವನ್ನು ಮುಚ್ಚಿ ಎದ್ದರು.

ಇಬ್ಬರು ಕಾರಿಡಾರ್‌ನಲ್ಲಿ ನಡೆದು ಹೋಗುತ್ತಿದ್ದರೆ ನೋಡುತ್ತಿದ್ದ ವಿದ್ಯಾರ್ಥಿಗಳಿಗೆ ಆಶ್ಚರ್ಯ. ಮತ್ತೆ ಇವರಿಬ್ಬರ ನಡುವೆ ಪ್ರೇಮ ಷುರುವಾಯಿತಾ ? ಆಗ ಪುಟು ಪುಟು ಎಂದು ಓಡಾಡುತ್ತಿದ್ದ ಮಾಧವಿಯನ್ನು ನೆನಪು ಮಾಡಿಕೊಳ್ಳುತ್ತಿದ್ದರು.

ಸ್ವಾತಿ ರೆಸ್ಟೋರೆಂಟ್‌ನ ಎ.ಸಿ.ರೂಮಿನಲ್ಲಿ ಒಂದು ಟೇಬಲ್ ರಿಸರ್ವ್ ಆಗಿತ್ತು. ತಮ್ಮ ಕೈಯಲ್ಲಿದ್ದ ಪುಸ್ತಕವನ್ನು ಟೇಬಲ್ ಮೇಲಿಟ್ಟ ಗೌಡರು ಕೈ ತೊಳೆದು ಬರಲು ಹೋದರು. ಒಂದು ಪ್ಲಾನ್ ಮಾಡಿಕೊಂಡೇ ರಿಸರ್ವೇಷನ್ ಮಾಡಿಸಿದ್ದರಾ, ಅಥವಾ ಅವರ - ಮಾಧವಿಯ ನಡುವಿನ ಒಡನಾಟ ಮುರಿದುಬಿತ್ತಾ, ಅಥವಾ ಮತ್ತೊಮ್ಮೆ ತಮ್ಮ ಸ್ನೇಹ ಬಯಸಿ ಬಂದರಾ ? ಈ ಮೂರು ಪ್ರಶ್ನೆಗಳ ಉತ್ತರಕ್ಕೆ ಸ್ವಲ್ಪ ಕಾಲ ಕಾಯಬೇಕಿತ್ತು.

ಕೈ ತೊಳೆದು ಬಂದ ಪ್ರೊಫೆಸರ್ ಕನ್ನಡಕ ತೆಗೆದಿಟ್ಟು ಕರ್ಚೀಫ್‌ನಿಂದ ಮುಖವನ್ನೊರೆಸಿಕೊಂಡರು. ನಸು ಬಿಳಿ ಬೆರೆತ ಕಪ್ಪು ಬಣ್ಣದ ಮುಖ ಛಾಯೆಯಲ್ಲಿ ಎದ್ದು ಕಾಣುತ್ತಿದ್ದುದು ಬೌದ್ಧಿಕ ಪ್ರತಿಭೆ.

"ಕೈ ತೊಳ್ಕೊಂಡ್ಬಾ, ಶಾಂತ" ಸ್ನೇಹದಿಂದಲೇ ಹೇಳಿದರು.

ಸಿಂಕ್ ಬಳಿ ಬಂದ ಶಾಂತ ಕಣ್ಣಲ್ಲಿ ಕಂಬನಿ ಕಾಣಿಸಿಕೊಂಡಿತು. 'ಅವರಿಗೆ ಇಷ್ಟವಿಲ್ಲದಾಗ ಬಲವಂತವಾಗಿ ಅವರೊಂದಿಗೆ ಜೀವನ ನಡೆಸಬೇಕೆಂಬ ಛಲ ತೊಡೋದು ಎಷ್ಟಕ್ಕೂ ಸರಿಯಿಲ್ಲ. ಎಲ್ಲಾದರೂ ಸಿಕ್ಕರೆ 'ಹಲೋ' ಎಂದು ಸರಿದು ಹೋಗುವಷ್ಟಾದರೂ ಸ್ನೇಹ ಉಳಿಸಿಕೊಂಡು ಹಿಂದಕ್ಕೆ ಸರಿಯಬೇಕು' ಶಾರದ ಆಡಿದ ಮಾತುಗಳು. ಕರ್ಚೀಫ್‌ನಿಂದ ಕಣ್ಣೊತ್ತಿಕೊಂಡು ಕೈ ತೊಳೆದು ಹಿಂದಕ್ಕೆ ಬಂದರು.

"ಹೇಗಿದ್ದೀ ಶಾಂತ?" ವಿಚಾರಿಸಿದರು. ಒಬ್ಬ ಕೊಲೀಗ್ ವಿಚಾರಿಸುವ ಧಾಟಿಯೇ. "ಚೆನ್ನಾಗಿದ್ದೀನಿ, ನೀವು ಹೇಗಿದ್ದೀರಾ ?" ಕೇಳಿದರು ಸೌಜನ್ಯದಿಂದಲೇ.

"ಚೆನ್ನಾಗಿದ್ದೀನಿ, ಮಿಕ್ಕ ವಿಷ್ಯಗಳೆಲ್ಲ ನಿಂಗೆ ಗೊತ್ತೆ ಇದೆ. ಬೇರೆ ಬೇರೆ ಯೋಚನೆಗಳು ಇತ್ತು. ಈಗ ನನ್ನಜ್ಜ ಹುಟ್ಟಿ ಬೆಳೆದ ಕುಗ್ರಾಮಕ್ಕೆ ಹೋಗಿ ಇರ್ಬೇಕೂಂತ ತೀರ್ಮಾನಿಸಿದ್ದೀನಿ. ಈ ನಾಗರೀಕ ಸೌಲಭ್ಯಗಳನ್ನು ಧಿಕ್ಕರಿಸಿ ಅತ್ಯಂತ ಸರಳವಾಗಿ ಆ ವಾತಾವರಣದಲ್ಲಿ 'ಭಾರತೀಯರು ಮತ್ತು ತತ್ವ ಶಾಸ್ತ್ರ' ಪುಸ್ತಕವನ್ನು ಬರೆದು ಮುಗಿಸಬೇಕೆಂದು ತೀರ್ಮಾನಿಸಿದ್ದೀನಿ. ನಂಗೆ ಗೈಡ್‌ಗಿಂತ ಒಬ್ಬ ಅಸಿಸ್ಟೆಂಟ್‌ನ ಅಗತ್ಯವಿದೆ. ಮಾಧವಿ ಆ ಸ್ಥಾನ ತುಂಬಲು ನಿಶ್ಚಯಿಸಿದ್ದಾಳೆ. ನಾನು ಒಪ್ಪಿದ್ದೀನಿ. ಇನಫ್ಯಾಚುಯೇಷನ್ ವಯಸ್ಸಿಲ್ಲ. ಸೆಕ್ಸ್ ಸಲುವಾಗಿ ಅವ್ಳಿಗೆ ಹತ್ತಿರವಾಗಿಲ್ಲ. ನಮ್ಮಿಬ್ಬರಲ್ಲಿ ವಿಚಾರಸಾಮ್ಯವಿದೆ. ಸಾಕಷ್ಟು ಫಿಲಾಸಫಿ ಓದಿಕೊಂಡಿದ್ದಾಳೆ ಈ ವಯಸ್ಸಿಗೇನೇ" ಹೇಳುತ್ತಿದ್ದುದನ್ನು ನಿಲ್ಲಿಸಿದರು.

ಬೇರರ್ ಎರಡು ಊಟದ ತಟ್ಟೆಗಳನ್ನು ತಂದಿಟ್ಟು ಹೋದ. ಶಾಂತಾಗೆ ಎಷ್ಟೇ ಸಮಾಧಾನ ಮಾಡಿಕೊಂಡರೂ ಎದೆಯಲ್ಲಿ ಭಾರ. ತಾನು ಕಳೆದುಕೊಂಡಿದ್ದ ವ್ಯಕ್ತಿ ಎಂಥ ಪ್ರತಿಭಾವಂತನೆಂದು ಆಕೆಗೆ ಗೊತ್ತು.

"ಊಟ ಮಾಡು ಶಾಂತ" ಪ್ರೊಫೆಸರೇ ಹೇಳಿದರು. ನೇರವಾಗಿ ನೋಡಿ ಸಣ್ಣಗೆ ನಕ್ಕವರು "ಈಚೆಗೆ ಸ್ವಲ್ಪ ದಪ್ಪವಾಗಿದ್ದರೂ ಮತ್ತಷ್ಟು ಚೆಲುವಾಗಿ ಕಾಣ್ತೀಯಾ. ಒಂಟಿತನ ಕಷ್ಟವೆನಿಸಿದರೇ, ಯಾರನ್ನಾದ್ರೂ ವಿವಾಹವಾಗು. ಹೇಗಿದ್ದಾರೆ ನಿನ್ನಕ್ಕ ?" ಅವರ ಯಾವುದೇ ಮಾತುಗಳಿಗೆ ಪ್ರತಿಕ್ರಯಿಸಲಿಲ್ಲ.

ರಂಗೇಗೌಡರು ಬಹಳ ಕಡಿಮೆ ಊಟ ಮಾಡಿದ್ದನ್ನು ಶಾಂತ ಗಮನಿಸಿದರು ಮಾತಾಡಲಿಲ್ಲ.

"ನಾನು, ಮಾಧವಿ ನಾಳಿದ್ದು ವಿವಾಹವಾಗ್ತ ಇದ್ದೀನಿ. ಶುಭ ಹಾರೈಸಲು ಬರುವ ನಾಲ್ಕು ಜನರಲ್ಲಿ ನೀನೂ ಒಬ್ಬಳಾಗ್ಬೇಕೆಂದು ನನ್ನ ಬಯಕೆ. ಬರ್ತೀಯಾಂತ ನನ್ನ ನಂಬಿಕೆ ಕೂಡ. ಹೆಣ್ಣು-ಗಂಡಿನ ಸಮಾಗಮದ ಮುಖ್ಯ ಕಾರಣ ಇಲ್ಲಿ, ಒಂದು ಪುಸ್ತಕದ ಹುಟ್ಟಿಗಾಗಿ. ಯಾರ್ಗೂ ಗೊತ್ತಿಲ್ಲದ, ವಿಷ್ಯ... ನಾನು ಈಗ ಒಬ್ಬ ಹಾರ್ಟ್ ಪೇಷೆಂಟ್. ಆ ವಿಷ್ಯ ಮಾಧವಿಗೆ ಮಾತ್ರ ಗೊತ್ತು" ಎಂದು ಕೆಮ್ಮಿ ನೀರು ಕುಡಿದವರು ಸಿಂಕ್ ಬಳಿ ಹೋಗಿ

ಕೈ ತೊಳೆದರು. ನಿಂಬೆಹಣ್ಣು ಹಾಕಿದ ಬಿಸಿನೀರಿನ ವ್ಯವಸ್ಥೆ ಮೇಜಿನ ಬಳಿ ಇದ್ದರೂ ಅವರಿಗೆ ಅದು ಒಗ್ಗದು.

ಶಾಂತಗೆ ಬಿಕ್ಕಳಿಸುವಂತಾಯಿತು. ಆದರೆ ಬೇಡವೆನಿಸಿತು. ದೌರ್ಬಲ್ಯ ಹತ್ತಿಕ್ಕಬೇಕಾದ ವಯಸ್ಸೆನಿಸಿತು. ಪ್ರೊಫೆಸರ್ ರಂಗೇಗೌಡರು ಬಹಳಷ್ಟು ಮಾತಾಡಿದ್ದು ತಾನು ಬರೆಯಬೇಕಾದ, ಬರೆಯಬಹುದಾದ ಬರವಣಿಗೆಯನ್ನು ಕುರಿತು.

"ನನ್ನ ಬರವಣಿಗೆಗೆ ಪೂರ್ತಿ ಸಹಕಾರ ನೀಡುವುದರ ಜೊತೆಗೆ ತಿದ್ದುಪಡಿ, ಅಚ್ಚಿನ ಕೆಲಸ ಮಾಧವಿ ನೋಡ್ತಾಳೆ. ಸದ್ಯದಲ್ಲಿ ಮತ್ತೆ ಈ ಇಲ್ಲಿಗೆ ಬರೋ ವಿಚಾರವಿಲ್ಲ. ಬೇಕೆನಿಸಿದ ಸಾಮಾನು, ಪುಸ್ತಕಗಳ್ನ ಮಾತ್ರ ನಾನು ಪ್ಯಾಕ್ ಮಾಡ್ಕೊಂಡಿದ್ದೀನಿ. ಇನ್ನ ಉಳಿದ ಸಾಮಾನು, ಮನೆ ನಿಂಗೆ ಬಿಟ್ಟಿದ್ದು. ಹೇಗೆ ಬೇಕೋ ಹಾಗೇ ಮಾಡ್ಕೋ ಇದ್ನ ಮಾತ್ರ ಬೇಡನ್ನಬೇಡ" ಮೇಲೆದ್ದರು.

ತಲೆ ಬಗ್ಗಿಸಿ ಕೂತ ಶಾಂತಗೆ ಮೇಲೆ ಏಳಲಾಗಲಿಲ್ಲ. ಎ.ಸಿ.ರೂಮಿನಲ್ಲಿ ಮಿಕ್ಕ ಟೇಬಲ್‌ಗಳೆಲ್ಲ ಖಾಲಿ ಇದ್ದಿದ್ದು ಅನುಕೂಲವೇ ಆಯಿತು. ಪ್ರೊಫೆಸರ್ ಕೈ ಹಿಡಿದು ಅಳೋಕೆ ಷುರು ಮಾಡಿದರು.

"ಅಳೋದ್ಬೇಡ. ನೀನು ಆ ಮನೆಯಲ್ಲಿ ಇರ್ಬೇಕೂಂತ ನನ್ನ ಆಸೆ. ಒತ್ತಾಯ, ಒತ್ತಡಗಳಿಲ್ಲ. ನಿಂಗೆ ಹೇಗೆ ಬೇಕೋ ಹಾಗೇ ಮಾಡ್ಕೋ" ಕಣ್ಣೀರು ತೊಡೆದರು.

ಇಬ್ಬರು ಹೋಟಲ್‌ನಿಂದ ಹೊರ ಬಂದಗ ಮಾಧವಿ ಮಾರುತಿ ನಿಲ್ಲಿಸಿಕೊಂಡು ಕಾದಿದ್ದಳು. ಬೆಟ್ಟಿನಿಂದ ಸನ್ನೆ ಮಾಡಿ ಅವಳನ್ನು ಹತ್ತಿರಕ್ಕೆ ಕರೆದ ಪ್ರೊಫೆಸರ್ ಪರಿಚಯ ಮಾಡಿಸಿದರು. ಅಗತ್ಯವಿಲ್ಲದಿದ್ದರೂ, ಎರಡು ಕೈಗಳನ್ನು ಜೋಡಿಸಿದಳಷ್ಟೆ. ನಂತರ ಪುಟು ಪುಟು ಎಂದು ಕಾರಿನತ್ತ ನಡೆದಳು. ಹಿಂದಕ್ಕೆ ತಿರುಗಿದ ಪ್ರೊಫೆಸರ್ ಕೈಯಾಡಿಸಿದರಷ್ಟೆ.

ಶಾಂತ ನೇರವಾಗಿ ಮನೆಗೆ ಬಂದಳು. ಅವಳಮ್ಮ ಕಡೆಯ ಮಗಳನ್ನು ಕೂಡಿಸಿಕೊಂಡು ಕೂದಲು ಬಾಚುತ್ತಿದ್ದರು. ಮೊದಲ ಇಬ್ಬರಿಗಿಂತ, ಹೆಚ್ಚು ಓದದ ಅವಳೇ ಸದ್ಯಕ್ಕೆ ಆತ್ಮೀಯಳು ಅವಳಿಗೆ.

"ನಿನ್ನ ಪ್ರೊಫೆಸರ್ ಇನ್ನೊಂದು ಸಣ್ಣ ಹುಡ್ಗಿನ ವಿವಾಹವಾಗ್ತಾನಂತೆ. ವಯಸ್ಸಾದಂತೆ ಹುಡ್ಗೀರ ಚಪಲ" ಆಕೆ ಸಿಡುಕಿದರು. ಒಂದು

ಸಮಾನಾಂತರ ರೇಖೆಯ ನಡುವೆ ಮಾತ್ರ ಹೆಣ್ಣು, ಗಂಡು, ವಿವಾಹದ ಸಂಬಂಧದ ಬಗ್ಗೆ ಯೋಚಿಸಬಲ್ಲರು. ಅದನ್ನು ಬಿಟ್ಟು ಏನು ಹೇಳಿದರೂ ಅರ್ಥವಾಗದು. ಅವರ ಲಾಜಿಕ್‌ಗೆ ಸಿಗದು, ಕೆಲವು ವಿಷಯಗಳು; ಸಿಕ್ಕರೂ ಒಪ್ಪಲಾರರು.

ಶಾಂತ ಮಾತಾಡದೆ ತನ್ನ ರೂಮಿಗೆ ಹೋದಳು. ಮೊದಲ ಮಗಳಿಗೆ ವಿವಾಹದ ಮೇಲೆ ಆಸಕ್ತಿ ಇಲ್ಲವೆಂದು ನಿರಾಕರಿಸಿದಾಗ, ಅವರ ಕೇಂದ್ರ ಬಿಂದು ಶಾಂತ ಆಗಿದ್ದಳು. ಶ್ರೀಮಂತಿಕೆ, ಅಂತಸ್ತನ್ನು ಗಮನದಲ್ಲಿಟ್ಟುಕೊಂಡ ಆಕೆ ಹುಡುಕಿದ್ದು, ಅಂಥ ಸಂಬಂಧಗಳನ್ನೆ. ಪ್ರೊಫೆಸರ್ ರಂಗೇಗೌಡರ ಪರಿಚಯ ಶಾಂತಳಿಗೆ ಆಳವಾದಂತೆ ವಿವಾಹದ ಸುದ್ದಿ ಎತ್ತಿದರೇ ಸಿಡಿಮಿಡಿಗುಟ್ಟತೊಡಗಿದ ಮಗಳು ರಿಜಿಸ್ಟಾರ್ ಆಫೀಸ್‌ನಲ್ಲಿ ಮದುವೆಯಾದಾಗ ಆಕಾಶ, ಭೂಮಿ ಒಂದು ಮಾಡಿದ್ದರು. ಅದರಿಂದ ಏನು ಪ್ರಯೋಜನವಾಗಲಿಲ್ಲ. ಮಗಳು ಪೂರ್ತಿಯಾಗಿ ತವರು ಮನೆಗೆ ಬರುವುದನ್ನೆ ನಿಲ್ಲಿಸಿದ್ದಳು. ಆಮೇಲಿನ ವಿರಸ, ಡೈವೋರ್ಸ್ ಕೆಲವು ಮಟ್ಟಿಗೆ ಆಕೆಯೂ ಕಾರಣವೆ. ಅವರು ಪ್ರೊಫೆಸರ್ ರಂಗೇಗೌಡರನ್ನು ಅಳಿಯನೆಂದು ಒಪ್ಪಿಕೊಂಡೇ ಇರಲಿಲ್ಲ.

ರೂಮಿಗೆ ಹೋದ ಶಾಂತ ಸುಮ್ಮನೆ ಕೂತುಬಿಟ್ಟರು. ಮನದಲ್ಲಿ ವ್ಯಥೆ ತುಂಬಿಕೊಂಡಿದ್ದರೂ ಪ್ರೊಫೆಸರ್ ಅವರನ್ನು ನಿಂದಿಸುವ ಮಟ್ಟಕ್ಕೆ ಇಳಿಯಲಿಲ್ಲ.

ಕಾಫಿ ಲೋಟವನ್ನು ಅವಳ ಮುಂದೆ ತಂದಿಟ್ಟ ಜಲಜಮ್ಮ "ಕೇಳಿದ್ದು ನಿಜವೇನು ?" ಹಣೆಯೊತ್ತಿಕೊಂಡರು. ಈಗ ಮಾತು ಬೇಕಿರಲಿಲ್ಲ. "ಏನಮ್ಮ ಕೇಳಿದ್ದು ? ಯಾರ ಯಾರ ಸುದ್ದಿನೋ ನಮಗ್ಯಾಕೆ, ಬಿಡು" ಎಂದಳು.

"ಎಂತದ್ದೇ ಮುಚ್ಚುಮರೆ ! ಹಾದಿ ಬೀದಿಗೆ ಗೊತ್ತಿರೋ ವಿಷ್ಯ ನಿಂಗೆ ಗೊತ್ತಿಲ್ವಾ ! ಎಲ್ಲಕ್ಕೂ ಸಂಪು, ಘೋಷಣೆ ಮಾಡೋ ವಿದ್ಯಾರ್ಥಿಗಳು ಈ ವಿಚಾರಕ್ಕೆ ಯಾಕೆ ಸುಮ್ಮನಿದ್ದಾರೆ ? ಸಮನಾ, ಸಾಟಿನಾ, ಆ ಚಿಕ್ಕ ಹುಡ್ಗೀನ ಯಾಕೆ ಮದ್ವೆ ಆಗ್ತಾ ಇದ್ದಾನೆ ?" ಕೋಪದಿಂದ ಕೇಳಿದರು.

ಲೋಟದ ಕಾಫೀ ಪೂರ್ತಿ ಹೀರುವವರೆಗೂ ಮಾತಾಡದ ಅವಳು "ನಂಗೆ ತುಂಬ ತಲೆನೋವು. ಆರಾಮಾಗಿ ಬಿಟ್ಬಿಡು, ಪ್ರೊಫೆಸರ್ ವಿವಾಹದ ಸುದ್ದಿ ತೀರಾ ವೈಯಕ್ತಿಕ. ವಿದ್ಯಾರ್ಥಿಗಳು ಈ ವಿಚಾರಕ್ಕೆ ಯಾಕೆ ಸಂಪು

ಮಾಡ್ತಾರೆ ?" ತೇಲಿಸಿದಳು ಮಾತನ್ನ.

"ಯಾಕೆ ಮಾಡ್ಬಾರ್ದು ? ಆ ಹುಡ್ಗಿ, ಪ್ರೊಫೆಸರ್ ಮಧ್ಯದ ವಯಸ್ಸಿನ ಅಂತರವೇನು ? ನಾಚ್ಕೇ.... ಬೇಡ?"

"ಸುಬ್ರಮಣ್ಯ ಪೀಠದ ಸ್ವಾಮೀಜಿ ಸನ್ಯಾಸಿ ವಿದ್ಯಾಭೂಷಣ ಮತ್ತು ಅವರನ್ನು ವಿವಾಹವಾದ ಯುವತಿ ರಮಾ, ಅವರಿಬ್ಬರ ನಡುವಿನ ವಯಸ್ಸಿನ ಅಂತರವೆಷ್ಟು ? ಪ್ರೊಫೆಸರ್, ವಿವಾಹದ ಉದ್ದೇಶವೇ ಬೇರೆ. ಅವರಿಬ್ರೂ ಒಂದು ಮಗುವಿನ ತಾಯಿ-ತಂದೆ ಆಗೋ ಇಚ್ಛೆಯವರಲ್ಲ. ಅವರು ಮುಂದೆ ಹುಟ್ಟಬಹುದಾದ ಒಂದು ಮಹತ್ವದ ಪುಸ್ತಕದ ತಾಯ್ತಂದೆ. ಆ ಬಗ್ಗೆ ಹಗುರವಾಗಿ ಮಾತಾಡೋಕೆ ನಂಗಿಷ್ಟವಿಲ್ಲ" ಕಡ್ಡಿ ತುಂಡು ಮಾಡಿದಂತೆ ನುಡಿದಾಗ, ಜಲಜಮ್ಮ ಗೊಣಗುಟ್ಟುತ್ತಲೇ ಹೋದರು.

"ಮೂರು ಹೆಣ್ಣು ಮಕ್ಕಳನ್ನ ಹೆತ್ತರೂ ಒಂದಕ್ಕಾದ್ರೂ ನೆಟ್ಟಗೆ ಚಪ್ಪರ ಹಾಕ್ಸಿ, ಓಲಗ ಊದಿಸಿ, ಕನ್ಯಾದಾನ ಮಾಡೋಕಾಯ್ತ, ನಮ್ಮ ಹಣೆಬರಹ. ನಿಮ್ಮಪ್ಪ ಸಾಕಾಗಿಹೋಗಿ ಮಠ ಸೇರ್ಕೊಂಡ್ರು. ನಾನೊಬ್ಳು ಇನ್ನು ಇದ್ದೀನಿ" ಜೋರಾಗಿ ಹೇಳಿದ್ದು ಶಾಂತ ಕಿವಿಗೂ ಕೇಳಿಸಿ ಮುಗುಳ್ನಗೆ ಅರಳಿತು.

ಅವಳಿಗೆ ಚೆನ್ನಾಗಿ ನೆನಪಿತ್ತು. ಅವಳಪ್ಪನದು ಆತುರದ ಸ್ವಭಾವ. ಹಿರಿಯ ಮಗಳು ಹೈಸ್ಕೂಲ್ ಮೆಟ್ಟಲು ಹತ್ತಿದ ಕೂಡಲೇ ವರಾನ್ವೇಷಣೆ ಷುರು ಮಾಡಿದ್ದರು. ಗಂಡುಗಳನ್ನು ನೋಡಿದ್ದೇ ನೋಡಿದ್ದು, ಸದಾ ಅದೇ ಮಾತುಕತೆ ಮನೆಯಲ್ಲಿ. ಆಗಿನಿಂದಲೇ ಬೆಳ್ಳಿ, ಬಂಗಾರದ ಸಂಗ್ರಹ ಷುರುವಾಯಿತು. ಒಂದೊಂದು ಗಂಡು ಬಂದಾಗಲೂ ವಿಶಿಷ್ಟವಾದ ಅನುಭವ. ಮೊದ ಮೊದಲು ಮೂಕವಾಗಿ ಅಭಿನಯಿಸುತ್ತಿದ್ದ ಅವಳಕ್ಕ ಓದು ಮುಗಿದು ಕೆಲಸ ಸಿಕ್ಕ ಮೇಲೆ ಗುಡ್ ಬೈಹೇಳಿದ್ದಳು.

"ವಿವಾಹದ ಬಗ್ಗೆ ನಂಗೇನು ಅಂಥ ಅಪೇಕ್ಷೆ ಇಲ್ಲ. ನೀವು ಶಾಂತನಿಗೆ ಗಂಡು ನೋಡ್ಕೊಳ್ಳಿ" ತಣ್ಣಗೆ ಅವಳ ಪಾಡಿಗೆ ಅವಳು ಹೋಗಿದ್ದಳು. ಭಯಂಕರ ವಿಪ್ಲವ ತಲೆದೋರಿದಂತೆ ಅವಳಪ್ಪ, ಅವಳಮ್ಮ ಹೌಹಾರಿ-ಕಡೆಗೆ ಮನೆ ಸಮಾಧಾನ ಸ್ಥಿತಿಗೆ ಬರಲು ವರ್ಷವೇ ಬೇಕಾಯಿತು.

ಸೀರೆ ಬದಲಾಯಿಸಿ ಶಾಂತ ಮಲಗಿದಳು. ಬಹಳ ದಿನಗಳಿಂದ ಬರದ ಒಳ್ಳೆಯ ನಿದ್ದೆ ಬಂತು. ಅತ್ಯುತ್ತಮವಾದ ಹಗಲುಗನಸನ್ನು ಕಂಡಳು. ಲಕ್ಷ್ಮಿ ಬಂದು ಎಚ್ಚರಿಸಿದಾಗಲೇ ಅವಳಿಗೆ ಎಚ್ಚರ.

"ಎದ್ದು ಮುಖ ತೊಳ್ದುಕೊಳ್ಳೋಕೇ, ಅಮ್ಮ ಹೇಳಿದ್ಲು. ಕೊನೆ ಮನೆ ಆದಿಶೇಷಯ್ಯನವರ ಕೊನೆಯ ಮಗ್ಳ ಮದುವೆಯ ರಿಸೆಪ್ಷನ್. ನಾವುಗಳು ಹೋಗಿ ಬರ್ಬೇಕಂತೆ."

ಶಾಂತಗೆ ಇಷ್ಟವಿಲ್ಲದಿದ್ದರೂ ಮೇಲೆದ್ದಳು. ತಾಯಿಯ ಬಗ್ಗೆ ಸ್ವಲ್ಪ ಹೆಚ್ಚೆನಿಸುವಷ್ಟು ಗೌರವವೇ. ತಂದೆ ಆರಾಮಾಗಿ ಕಳಚಿಕೊಂಡು ಹೋಗಿ ಮಠ ಸೇರಿಕೊಂಡರೂ, ತಾಯಿ ಅವರಿಗಾಗಿ ಅವರೊಡನೆ ಇದ್ದಳು, ಆಸರೆಯಾಗಿ.

"ಹೋಗ್ಲೇ... ಬೇಕಂತ?" ಸ್ಟಿಕರ್ ತೆಗೆದು ರಟ್ಟಿನ ಅಂಚಿಗೆ ಮೆತ್ತಿ ಮೇಲೆದ್ದಳು. "ನಾವಿಬ್ಬರೇನಾ, ಅಮ್ಮನೂ ಬರ್ತಾಳಾ ?" ಲಕ್ಷ್ಮಿ ಹಲ್ಲು ಕಿರಿದಳಷ್ಟೆ. ಇವಳಿಗಾದರೂ ತಾಯಿ ಹೇಳೋ ಪ್ರಕಾರ ವಿವಾಹ ಮಾಡಬೇಕೆಂದುಕೊಂಡಳು.

"ಏನೋ, ಗೊತ್ತಿಲ್ಲ ! ನೀನಂತು ರೆಡಿಯಾಗು" ಹೇಳಿದಳು.

ಈಗ ಮದುವೆಯಾದ ಆದಿಶೇಷಯ್ಯನವರ ಮಗಳು ಅವಳ ಸ್ಟೂಡೆಂಟ್. ಪರ್ಸನಲ್ ಕಾರ್ಡು ಮಾಡಿಸಿಕೊಂಡು ಬಂದು ಕರೆದಿದ್ದಳು.

"ಖಂಡಿತ ಬರ್ಬೇಕು, ಮೇಡಮ್ ! ಮನೆಯಲ್ಲೇ ಮದ್ವೆ. ಹೆಚ್ಚು ಜನಕ್ಕೂ ಆಮಂತ್ರಣವಿಲ್ಲ. ನನ್ನ ಪರವಾಗಿ ನೀವು ಬರ್ಬೇಕು".

ಅಂದು 'ಹ್ಞೂ' ಎಂದು ಮರೆತಿದ್ದಳು, ಅವಳಮ್ಮ ಮರೆಯಲು ಬಿಟ್ಟಿರಲಿಲ್ಲ. ಆ ಕುಟುಂಬದ ಪರಿಚಯ ಈ ಮನೆಗೆ ಇಪ್ಪತ್ತು ವರ್ಷದಷ್ಟು ಹಳೆಯದು. ಬರೀ ಪರಿಚಯು ಸ್ವಲ್ಪ ಸ್ನೇಹವೆನ್ನುವಷ್ಟರ ಮಟ್ಟಿಗೆ. ಅದಿಶೇಷಯ್ಯನವರ ಶ್ರೀಮತಿ ಆಗಾಗ ಬರುವುದು, ಹೋಗುವುದು ಇತ್ತು.

ಮುಖ ತೊಳೆದು ಬಂದು ಸಾಧಾರಣ ರೇಶಿಮೆ ಸೀರೆಯುಟ್ಟು ಹೊರಟಾಗ, ಅವಳಮ್ಮ ಗೊಣಗುತ್ತಲೇ ಬಂದು ಇತ್ತೀಚೆಗೆ ಗುಂಡು, ಹವಳ ಕೂಡಿಸಿ ಮಾಡಿಸಿದ ಎರಡೆಳೆಯ ಸರ ತಂದು ಶಾಂತ ಕುತ್ತಿಗೆಗೆ ಹಾಕಿದಾಗ ನಗುವಂತಾಯಿತು.

"ಏನಮ್ಮ ಇದು ? ಈಗ ವಿವಾಹವಾಗಿರೋ ಹೆಣ್ಣು ನನ್ನ ಸ್ಟೂಡೆಂಟ್. ಇಂಥ ಅಲಂಕಾರಗಳೆಲ್ಲ..... ಯಾಕೆ ?" ಅಂದು ತುಟಿ ಕಚ್ಚಿಕೊಂಡಳು. ಆಕೆಯ ಕಣ್ಣಲ್ಲಿ ನೀರಾಡುವುದು ಮಗಳಿಗೆ ಬೇಕಿರಲಿಲ್ಲ. "ಹೋಗ್ಲಿ ಬಿಡು, ಎಲ್ಲಾ ಹೆಚ್ಚೆಚ್ಚು ಓದ್ಬಿಟ್ರೆ, ನಿಮ್ಮ ಆಲೋಚನೆಗಳೇ ಬೇರೆ ಆಯ್ತು. ಮೂರು ಹೆತ್ತರೂ ಒಂದರ ತಲೆಯ ಮೇಲಾದ್ರೂ ಅಕ್ಷತೆ ಹಾಕಿ ಹರಸೋ ಪುಣ್ಯ

ವಷ್ಟ್ಗೆ ಇಲ್ದೇ ಹೋಯ್ತು" ಅದೇ ದಾಟಿಯ ಮಾತುಗಳೇ. ಸಹಿಸಿಕೊಳ್ಳುತ್ತಿದ್ದರು ಶಾಂತ. ಪ್ರೊಫೆಸರ್‌ನಿಂದ ವಿಚ್ಛೇದನ ಪಡೆದು ಬಂದಾಗ ಈ ತಾಯಿ ಮಡಿಲೇ ಒಂದಿಷ್ಟು ಸಾಂತ್ವನ ನೀಡಿದ್ದು.

"ಲಕ್ಷ್ಮಿ ವಿವಾಹ ಮಾತ್ರ ನಿನ್ನ ಪ್ರಕಾರ ನಡೆಯುತ್ತೆ. ಒಳ್ಳೆ ಗಂಡು ಹುಡ್ಕಿ ಝುಮ್ ಝುಮ್ ಅಂತ ಓಲಗ ಊದಿಸೋಣ" ಎಂದು ತಂಗಿಯ ಕೆನ್ನೆ ಸವರಿದಳು ಉಲ್ಲಾಸದಿಂದ.

ಅಲ್ಲಿ ಜಮಾಯಿಸಿದ್ದು ಬರೀ ವಿದ್ಯಾರ್ಥಿಗಳ ದಂಡೇ. ಆಕಸ್ಮಿಕವಾಗಿ ನೋಡಿದ್ದು ಶಾರದ ದಂಪತಿಗಳನ್ನ. ತೀರಾ ಸರಳವಾಗಿರುತ್ತಿದ್ದ ಅವಳನ್ನು ಅಷ್ಟು ಗ್ರಾಂಡಾಗಿ ನೋಡಿದಾಗ ಆಶ್ಚರ್ಯವೆನಿಸಿತು. ಸಭೆ, ಸಮಾರಂಭ, ವಿವಾಹಗಳಿಗೆ ಬಂದರೂ ಅವಳು ಸಿಂಪಲ್ಲಾಗಿಯೇ ಇರುತ್ತಿದ್ದಳು. ಆದರ ಬೌದ್ಧಿಕ ಪ್ರತಿಭೆಯಿಂದ ಮುಕ್ಕಳಿಸುವ ಅವಳ ಮುಖ ನೂರು ಜನರಲ್ಲು ಎದ್ದು ಕಾಣುತಿತ್ತು.

"ಹಲೋ.... ಶಾರದ" ಇವರೇ ಹತ್ತಿರಕ್ಕೇ ಹೋಗಿ ಮಾತಾಡಿಸಿದಾಗ ಕೂತಿದ್ದವಳು ಎದ್ದು ನಿಂತಳು. ಸ್ವಲ್ಪ ಮುಜುಗರದಿಂದಲೇ "ಹಲೋ, ಮೇಡಮ್...." ಎಂದಳು, ಮೃದುವಾಗಿ. ಈಗಾಗಲೇ ಪರಿಚಯವಿದ್ದ ವಸಂತನನ್ನು ಮತ್ತೆ ಪರಿಚಯಿಸಬೇಕಾದ ಅಗತ್ಯವಿರಲಿಲ್ಲ. ಮಾತಾಡಿಸಿದರು ಮುಖ ಬಿಗಿದೇ ನಸು ನಗು ಬೀರಿದ.

ವಿದ್ಯಾರ್ಥಿಗಳು ಬಂದು ಅವಸರಿಸಿದಾಗ ವಸಂತನಿಂದ ಅವಳು ದೂರ ಹೋಗಲೇಬೇಕಿತ್ತು. ಜುಮಕಿ, ಕೆನ್ನೆ ಸರಪಣಿ, ದೊಡ್ಡ ಸೈಜಿನ ಮುತ್ತಿನೋಲೆ, ಬೈತಲೆಯ ಬೊಟ್ಟು, ಕತ್ತಿನಲ್ಲಿ ನಾಲ್ಕು ಎಳೆಯ ಗಂಡ ಭೇರುಂಡ ಪದಕವಿದ್ದ ಚೈನ್. ಕತ್ತನ್ನು ಬಿಗಿಯಾಗಿ ಆವರಿಸಿದ್ದ ಬರೀ ಚಿನ್ನದಿಂದ ಮಾಡಿದ ಕಮಲಗಳ ನೆಕ್ಲೆಸ್, ಅದನ್ನು ಆವರಿಸಿದಂತೆ ಮಾವಿನ ಕಾಯಿಯ ಮಾಲೆ, ತಾಳಿ ಸರ ಇದಿಷ್ಟು ಕಡಿಮೆಯೆನ್ನುವಂತೆ ಕೆಂಪು, ಹವಳ, ಮುತ್ತಿನ ಬಳೆಗಳು ಕೈಗಳಿಗೆ. ಎರಡು ಕೈ ಬೆರಳುಗಳಲ್ಲಿ ಎಣಿಸಿದರೇ ಆರು ಉಂಗುರ. ಹತ್ತು ಇಂಚು ದೊಡ್ಡ ಬಾರ್ಡರಿನ ಕಂಚಿ ರೇಶಿಮೆ ಸೀರೆ ಉಟ್ಟಿದ್ದು-ನಿಮಿಷಕ್ಕೊಮ್ಮೆ ಬೆವರುತ್ತಿದ್ದಳು.

"ಸೂಪರ್ಬ್... ವಂಡರ್‌ಫುಲ್... ಮರ್ವಲೇಸ್... ನಿಮ್ಜೊತೆ ಒಂದೇ ಒಂದು ಫೋಟೋ" ವಿದ್ಯಾರ್ಥಿಗಳು ಅವಳನ್ನು ಕಾಡಿಬಿಟ್ಟರು. ಅವರಿಂದ ಬಿಡಿಸಿಕೊಂಡರೇ ಸಾಕಿತು.

"ಕರೀತಾರೆ...." ಓಡಾಡುತ್ತಿದ್ದ ಆದಿಶೇಷಯ್ಯನ ಭಾವಮೈದಾ ಬಂದು ಹೇಳಿ ಅವಳಿಗೆ ವಿಮುಕ್ತಿ ಕರುಣಿಸಿದ "ಥ್ಯಾಂಕ್ಯೂ ವೆರಿಮಚ್... ಸೂಪರ್ಬ್.. ಈ ಡ್ರೆಸ್‌ನಲ್ಲಿ ವಿಶ್ವಸುದರಿ ಸ್ಪರ್ಧೆಗೆ ಕಳಿಸಿಬಿಟ್ಟರೇ..." ಅವಳ ಕೆನ್ನೆಗೆ ಚುಂಬಿಸಿಯೆ ಬಿಟ್ಟಳು ತುಂಟತನಕ್ಕೆ ಹೆಸರಾದ ರೋಜಿ.

ಕೂತಿದ್ದ ವಸಂತನ ಕಣ್ಣುಗಳು ಕೆಂಡದಂತೆ ಉರಿಯುತಿತ್ತು. ಮುಖ ನೋಡಲೇ ಭಯವೆನಿಸಿತು. ಸ್ವತಃ ಆದಿಶೇಷಯ್ಯ ಬಂದು ಬಫೆ ತಗೊಂಡು ಹೋಗಬೇಕೆಂದು ಬಲವಂತ ಮಾಡಿದರೂ ನಿರಾಕರಿಸಿ ಹೋಗಿ ಕಾರು ಹತ್ತಿದಾಗ, ಹಿಂಬಾಲಿಸುವುದು ಅವಳಿಗೆ ಅನಿವಾರ್ಯವಾಗಿತ್ತು.

ದೂರದಲ್ಲಿ ನಿಂತ ಪ್ರೊಫೆಸರ್ ಶಾಂತ ಇದನ್ನು ಗಮನಿಸಿದರು ಅತ್ಯಂತ ಸೂಕ್ಷ್ಮವಾಗಿ. ಕೊಲೆ ಎಲ್ಲಕ್ಕಿಂತ ದೊಡ್ಡ ಅಪರಾಧ ಆ ಅಪರಾಧಕ್ಕೆ ಮರಣದಂಡನೆ. ಅದಕ್ಕೆ ಕಾನೂನಿನಲ್ಲಿ ಸೆಕ್ಷನ್‌ಗಳಿವೆ. ಇದು ಅದಕ್ಕಿಂತ ಭಯಂಕರವೆನಿಸಿತು. ಇದಕ್ಕೆ ಶಿಕ್ಷೆ ? ಆಕೆಯ ಮನ ತೇವಗೊಂಡಿತು.

ಕಾರನ್ನು ಎಷ್ಟು ವೇಗವಾಗಿ ಓಡಿಸಿದನೆಂದರೆ, ಎಲ್ಲಾದರೂ ಆಕ್ಸಿಡೆಂಟ್ ಆಗಿಬಿಡಬಹುದೆಂದು ಹೆದರಿಸಿದಳು ಮಾತ್ರವಲ್ಲ, ಯಾರಾದರೂ ನಿರಪರಾಧಿಗಳು ಬಲಿಯಾಗಿ ಬಿಡಬಹುದೆಂದು. ತಕ್ಷಣ ಒಂದು ನಿರ್ಧಾರಕ್ಕೆ ಬಂದಳು ಇಬ್ಬರ ಕ್ಷೇಮವನ್ನು ಗಮನದಲ್ಲಿ ಇಟ್ಟುಕೊಂಡು.

"ಕಾರು.... ನಿಲ್ಸಿ" ದೃಢವಾಗಿ ಹೇಳಿದಳು.

ಒಂದು ಕಡೆ ಬ್ರೇಕ್ ಬಿತ್ತು. ಡೋರ್ ತೆರೆದುಕೊಂಡು ಕೆಳಗಿಳಿದು "ಈಗ ನೀವು ಡ್ರೈವಿಂಗ್ ಮಾಡೋ ಮನಸ್ಥಿತಿಯಲ್ಲಿಲ್ಲ. ಒಂದಿಷ್ಟು ಆವೇಗ ತಗ್ಗಿದ ಮೇಲೆ ಮನೆಗೆ ಹೋಗೋಣ. ಅಕಸ್ಮಾತ್ ಇಷ್ಟಪಡದಿದ್ರೆ... ನಾನು ಟ್ಯಾಕ್ಸಿಯಲ್ಲಿ ಹೋಗ್ತೀನಿ. ಆಗ ಕಾರಿನಲ್ಲಿ ನೀವು ಒಂಟಿಯಾಗುವುದರಿಂದ ಎಚ್ಚರದಿಂದ ನಡಿಸ್ತೀರಿ" ಹೇಳಿದಳು. ಅವನು ಒಪ್ಪನೆಂದು ಅವಳಿಗೆ ಗೊತ್ತು.

ಹೋಗುತ್ತಿದ್ದ ಟಾಕ್ಸಿಯುನ್ನು ಇಷ್ಟು ಹೊತ್ತಿನಲ್ಲಿ ನಿಲ್ಲಿಸುವುದು ಅಪಾಯವೆಂದು ಅವಳಿಗೆ ಗೊತ್ತು. ಕಾರಿನ ಡೋರನ್ನ ಶಬ್ದ ಬರುವಂತೆ ಹಾಕಿಕೊಂಡ ವಸಂತ ತನ್ನ ಪಾಡಿಗೆ ತಾನು ಹೋಗಿಬಿಟ್ಟ. ಶಾರದಳ ಸೊಕ್ಕನ್ನು ಇಳಿಸಬೇಕೆಂಬ ತೀರ್ಮಾನಕ್ಕೆ ಬಂದ.

ಮೈ ತುಂಬ ಚಿನ್ನ-ಕ್ಷಣ ಅವಳನ್ನು ಭಯಕಾಡಿತು. ಹಿಂದಿನಿಂದ ಬಂದ ಫಿಯೆಟ್ ನಿಂತಿತು. ಪ್ರೊಫೆಸರ್ ಶಾಂತ ತಲೆ ಹೊರಗೆ ಹಾಕಿ "ಬಾ ಶಾರದ, ಇವ್ರನ್ನು ಒಂದಿಷ್ಟು ಡ್ರಾಪ್ ಮಾಡೋದಿದೆ. ಹಾಗೇ ನಿನ್ನನ್ನು

ಮನೆಗೆ ಬಿಟ್ಬರ್ತೀನಿ" ಆಹ್ವಾನಿಸಿದರು. ಅದು ಅವಳಿಗೆ ಸೂಕ್ತವಾಗಿ ಕಂಡಿತು. ಹತ್ತಿ ಕೂತ ನಂತರವೂ ಪ್ರಶ್ನಿಸಲಿಲ್ಲ. ಆದಿಶೇಷಯ್ಯನವರ ಮಗಳು, ನಡೆದ ವಿವಾಹದ ಬಗ್ಗೆ ಮಾತ್ರ ಪ್ರಸ್ತಾಪಿಸಿದರಷ್ಟೆ. ಕೂತಿದ್ದ ತಮ್ಮ ತಾಯಿಯ ಗೆಳತಿಯನ್ನು ಪರಿಚಯಿಸಲು ಹೋಗದಿದ್ದರೂ ಆಕೆ ಮಾತಾಡಿಸಿದರು.

"ಇಷ್ಟೊಂದು ಚಿನ್ನ ಹಾಕ್ಕೊಂಡ್ ಯಾರಾದ್ರೂ ಒಂಟಿಯಾಗಿ ಬರ್ತಾರ!" ಆಕೆ ಭಯ ವ್ಯಕ್ತಪಡಿಸಿದರು. ರಿಸೆಪ್ಷನ್ ಹಾಲ್‌ನಲ್ಲಿ ವಸಂತನನನ್ನು ಗಮನಿಸಿರಲಿಲ್ಲ. ಮಾತಾಡಲಿಲ್ಲ ಶಾರದ.

ಶಾಂತ ಮೌನವಾದರು. ಪ್ರೊಫೆಸರ್ ರಂಗೇಗೌಡರು ಅವರ ಮಧ್ಯೆ ವಿಚಾರ. ಸೌಮ್ಯವಿಲ್ಲದೇ, ಅವರಿಬ್ಬರ ಮಧ್ಯೆ ಘರ್ಷಣೆ ಷುರುವಾಗಿ ವಿವಾಹ ವಿಚ್ಛೇದನ ಪಡೆದು ದೂರವಾಗಿದ್ದುಂಟು. ಆದರೆ ಎಂದೂ ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ನೀಡಿರಲಿಲ್ಲ. ಇಷ್ಟು ಕೆಟ್ಟದಾಗಿ ನಡೆಸಿಕೊಂಡಿರಲಿಲ್ಲ.

ಅವರನ್ನು ಅವರ ಮನೆಯ ಬಳಿ ಇಳಿಸಿದ ನಂತರ ಶಾಂತ, ಶಾರದ ಕಡೆ ತಿರುಗಿದರು, ಏನು ಕೇಳಲಿಲ್ಲ. ಅವಳು ಕೂಡ ಮಾತಾಡುವ ಸ್ಥಿತಿಯಲ್ಲಿರಲಿಲ್ಲ.

ಕಾರು ನಿಂತಾಗ ಗಾಬರಿಯಿಂದ ಬಂದ ಕಾಶೀಪತಿಗಳು ಸೊಸೆಯನ್ನು ನೋಡಿ ನಿರಾಂತಕದ ನಿಟ್ಟುಸಿರು ದಬ್ಬಿದರು. ಅವಳ ಇಚ್ಛೆಗೆ ವಿರುದ್ಧವಾಗಿ ವಸಂತ ಒತ್ತಾಯದಿಂದ ಅಲಂಕರಿಸಿ ಕರೆದೊಯ್ದಿದ್ದು ಸರಿಯೆನಿಸಲಿಲ್ಲ.

ಇಳಿದ ಶಾರದ ಅವರೊಂದಿಗೆ ಕೂಡ ಮಾತಾಡದೇ ಒಳಗೆ ಹೋದವಳು ಒಡವೆಗಳನ್ನೆಲ್ಲ ಬಿಚ್ಚಿಟ್ಟು, ದೊಡ್ಡ ಬಾರ್ಡರಿನ ಸೀರೆ ಬಿಚ್ಚಿ ಹತ್ತಿಯ ಸೀರೆಯುಟ್ಟು ಹೊರಗೆ ಬಂದಾಗ ಕಾಶೀಪತಿಗಳು ಹಾಲ್‌ನಲ್ಲಿ ಕೂತಿದ್ದರು ಒಂಟಿಯಾಗಿ.

"ಅಂಕಲ್, ನಿಮ್ದು ಊಟ ಆಯ್ತ?" ಕೇಳಿದಳು.

"ಯಾಕೋ ಬೇಡ ಅನ್ನಿಸ್ತು ! ನೀವಿಬ್ರೂ ಬಫೆ ತಗೊಂಡ್ ಬಂದೀರಿ ತಾನೇ ?" ಎನ್ನುವ ವೇಳೆಗೆ ವಸಂತ "ಗೋಪಿ..." ಎಂದು ಕೂಗಿಕೊಂಡ. ಸ್ವರ ಬಂದಿದ್ದು ಡೈನಿಂಗ್ ಹಾಲ್‌ನಿಂದಲೆ. ಅವರ ಕಣ್ಣುಗಳು ಮತ್ತಷ್ಟು ಮಂಕಾದವು.

"ಈಗ ಹಸಿವು... ಕಾಣಿಸ್ತು ! ನಡೀ ಊಟ ಮಾಡೋಣ" ಎಂದು ಅವಳನ್ನು ಡೈನಿಂಗ್ ಹಾಲ್‌ಗೆ ಕರೆತಂದರು. ಊಟ ಮಾಡುತ್ತಿದ್ದ ವಸಂತನ

ಮುಖ ಗಡಿಗೆ ಗಾತ್ರ ಇತ್ತು. ಸಂತೃಪ್ತಿಯಿಂದ ಊಟ ಮಾಡುವುದು ಕಷ್ಟವೆನಿಸಿತು, ಆದರೆ ವಿಧಿ ಇಲ್ಲ. ಶಾರದ ಅನ್ನಕ್ಕೆ ಮೊಸರು ಹಾಕಿಸಿಕೊಂಡರೇ, ಅವರು ಅನ್ನಕ್ಕೆ ರಸ ಸುರಿದುಕೊಂಡರು. ಒಂದೇ ಒಂದು ಮಾತಿಲ್ಲ. ಮಗನ ಮದುವೆಯ ನಂತರದ ದಿನಗಳ ಬಗ್ಗೆ ನೂರು ಕನಸ್ಸನ್ನು ಕಂಡವರು. ಅದನ್ನು ನುಚ್ಚುನೂರು ಮಾಡುತ್ತಿರುವುದು ಮಗನೇ.

ವಸಂತ ಮಾತ್ರ ಹೊಟ್ಟೆ ತುಂಬ ಊಟ ಮಾಡಿಯೇ ಎದ್ದಿದ್ದು. ತುಂಬ ನೊಂದಿತ್ತು ಶಾರದ ಮನ. ಅವಳ ಇಡೀ ವ್ಯಕ್ತಿತ್ವದ ಮೇಲೆ ಕಾಲಿಟ್ಟು ಅದುಮಿದ್ದ. ಇದು ನಿರಂತರವಾಗಿ ಸಾಗುತಿತ್ತು. ಕೊನೆಗೆ ಎಲ್ಲಿಗೆ ಮುಟ್ಟಬಹುದು ?

ಮುಂದಿನ ವರಾಂಡ ಲೈಟು ಆರಿಸಿ ಕತ್ತಲೆಯಲ್ಲಿ ಕೂತಳು. ಕತ್ತಲು, ನಿಶಬ್ದ ಎಲ್ಲಾ ಇಷ್ಟವೆನಿಸಿತು. ಈಗ ಬೆಡ್ ರೂಮಿಗೆ ಹೋದರೆ ಬೆಂಕಿಯ ಕೆಂಡಗಳೇ ಮಾತುಗಳ ರೂಪದಲ್ಲಿ ಉರುಳಾಡುತ್ತದೆಯೆಂದು ಅವಳಿಗೆ ಗೊತ್ತು.

"ಅಕ್ಕ, ಲೈಟು... ಹಾಕ್ಲಾ ?" ಗೋಪಿಯ ದನಿ.

"ಯಾಕೆ ಮಲಗಲಿಲ್ವಾ ? ಮೊನ್ನೆ ಹೇಳ್ಕೊಟ್ಟ ಪಾಠವೆಲ್ಲ ಕಲೀತ್ಯಾ?" ಕೇಳಿದಳು.

"ಲೈಟು ಹಾಕೋದು ಬೇಡ್ವಾ, ?" ಮತ್ತದೇ ಪ್ರಶ್ನೆ.

"ಬೇಡ ಕತ್ತಲೇ ಚೆನ್ನಾಗಿದೆ".

"ಇನ್ಮೇಲೆ ಪಾಠ ಕಲಿಯೋದು ಬೇಡಾಂದ್ರು, ಯಜಮಾನ್ರು. ಅವ್ರಿಗೆ ಅದೆಲ್ಲ ಇಷ್ಟವಾಗೋಲ್ವಂತೆ, ಸುಮ್ನೇ ಕೆಲ್ಸ ಮಾಡ್ಕೊಂಡಿರು, ಇನ್ನು ಐವತ್ತು ರೂಪಾಯಿ ಬ್ಯಾಂಕ್‌ನಲ್ಲಿ ಖಾತೆ ತೆಗ್ದು ನಿನ್ನ ಅಕೌಂಟ್‌ಗೆ ಹಾಕ್ತೀನೀಂದ್ರು" ಎದೆಯ ಮೇಲೆ ಕೈ ಕಟ್ಟಿ ಉಸುರಿದ.

ಕತ್ತಲೆಯಲ್ಲಿಯೇ ಅವನ ಮುಖದ ಭಾವನೆಗಳನ್ನ ಹುಡುಕುವ ಪ್ರಯತ್ನ ಮಾಡಿದಳು. ಚೋಟಿ ಹುಡುಗ ತರಕಾರಿ, ಸಾಮಾನು ತರೋದರ ಜೊತೆಗೆ ಅಡಿಗೆ ಮನೆಯ ಪೂರ್ತಿ ಜವಾಬ್ದಾರಿ ಅವನದೇ. ಇಷ್ಟೆಲ್ಲ ಮುಗಿಸಿದರೂ ಅವನಿಗೆ ಓದಲು ಸಮಯವಿತ್ತು. ಆ ಸಮಯವನ್ನು ಅವನ ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ವಸಂತನ ವಿರೋಧ. ಯಾಕೆ ? ಸ್ವಾರ್ಥಿ ಮಾತ್ರವಲ್ಲ, ತೀರಾ ಸಂಕುಚಿತ ಮನೋಭಾವದ ವ್ಯಕ್ತಿಯೆಂದುಕೊಂಡಳು.

"ನಾನು ಅವ್ರ ಹತ್ರ ಮಾತಾಡ್ತೀನಿ, ನೀನು ಓದಬಹ್ದು. ಈಗ ಹೋಗಿ ಮಲಕ್ಕೋ" ಅವನನ್ನು ಕಳಿಸಿದರೂ ಅಲ್ಲಿಂದ ಅಲ್ಲಾಡಬೇಕೆನಿಸಲಿಲ್ಲ.

ನಾಳೆ ದಿನ ಕಾಲೇಜಿಗೆ ರಜೆ ಹಾಕಿ ಮನೆಗೆ ಹೋಗಿ ಬರಬೇಕೆನಿಸಿತು. ಶ್ರೀಧರಮೂರ್ತಿಗಳು ಅವಳ ಕವನಗಳ ಬಗ್ಗೆ ದೀರ್ಘ ವಿಮರ್ಶೆಯನ್ನು ಬರೆದು ಕಳುಹಿಸುವುದರ ಜೊತೆಗೆ ಅಚ್ಚು ಹಾಕಿಸುವ ಕೆಲಸ ತಾನು ನೋಡುತ್ತೇನೆಂದಿದ್ದರು. ಮನದ ನೆಮ್ಮದಿಗಾಗಿಯಾದರೂ ಅವರನ್ನು ಒಮ್ಮೆ ನೋಡಿ ಬರಬೇಕೆನಿಸಿತು.

ಅರ್ಧ ರಾತ್ರಿಯನ್ನು ಕೂತೇ ಕಳೆದಳು. ರೂಮಿನಲ್ಲಿನ ಬಿಸಿಗಿಂತ ಈ ಕತ್ತಲು, ಒಂಟಿತನವೆ ಪ್ರಿಯವೆನಿಸಿತು.

"ಏನಾಗಿದೆ, ನಿಂಗೆ ?" ವಸಂತನ ಕಟು ಸ್ವರ.

ಲೈಟು ಹತ್ತಿಕೊಂಡಿತು. ರಾತ್ರಿಯ ಡ್ರೆಸ್‌ನಲ್ಲಿದ್ದ ಅವನ ಕಣ್ಣುಗಳು ಉರಿಯುತ್ತಿತ್ತು, ಹೆದರಿಸುತ್ತಿತ್ತು.

"ಆರಾಮಾಗಿ ಕೂತ್ಕೋಬೇಕೂಂತ ಅನ್ನಿಸಿದೆ" ಅಷ್ಟೇ ನುಡಿದಿದ್ದು.

"ನನ್ನ ರಾತ್ರಿಗಳ್ನ ಹಾಳು ಮಾಡಿಕೊಳ್ಳೋಕೆ.... ನಿನ್ನ ವಿವಾಹವಾಗಿದ್ದು" ಕಾಲು ಅಪ್ಪಳಿಸಿ ಲೈಟು ಆರಿಸಿ ಹಿಂದಕ್ಕೆ ಹೋಗುವ ಮುನ್ನ "ನನ್ನ ಅವಮಾನ ಮಾಡೋಷ್ಟು ದುರಂಹಕಾರ, ನಾನು ಸುಧಾರಿಸಿದಷ್ಟು.... ನಾನು ನಿನ್ನ ಪಾಲಿಗೆ ಕಸವಾದೆ. ಇದ್ನ ನಾನು ಸಹಿಸೋಲ್ಲ".

ಎಚ್ಚರವಾಗಿದ್ದ ಕಾಶೀಪತಿಗಳು ಅನಾಹುತವಾಗುವ ಮುನ್ನ ಪ್ರತ್ಯಕ್ಷರಾದರು. "ಏನೋ, ಇದು ! ಕೂಗಾಡೋಷ್ಟು ಬೆಳೆದುಬಿಟ್ಟೆ. ಇದು ಏನೇನು... ಚೆನ್ನಾಗಿಲ್ಲ" ಮಗನನ್ನು ತರಾಟೆಗೆ ತಗೊಂಡರು.

ಮೊದಲ ಸಲ ಎನ್ನುವಂತೆ ಅವಳ ಮೇಲಿನ ಆಪಾದನೆಗಳ ಪಟ್ಟಿಯನ್ನು ಸಲ್ಲಿಸಿದ. ಇಂದಿನದು ಗುರುತರ ಆಪಾದನೆಗಳು. ಒಡವೆಗಳ ನಿರಾಕರಣೆ ಮೊದಲನೆಯದಾದರೇ, ಅವನನ್ನು ಬಿಟ್ಟು ಪ್ರೊಫೆಸರ್ ಶಾಂತ ಮತ್ತು ವಿದ್ಯಾರ್ಥಿಗಳೊಂದಿಗೆ ಬೆರೆತದ್ದು ದೊಡ್ಡ ತಪ್ಪು. ಮೂರನೆಯದು ಮಧ್ಯ ದಾರಿಯಲ್ಲಿ ಶಾರದ ಇಳಿದಿದ್ದು.

"ನನ್ನ ಮಟ್ಟಿಗೆ ಮೊದಲಿನದೆರಡು ತಪ್ಪೇ ಅಲ್ಲ, ಸಿಂಪ್ಲಿಸಿಟಿ ಇಷ್ಟಪಡೋಳು. ಅವ್ಳು ಬರೀ ಗೃಹಿಣಿ ಅಲ್ಲ ; ಸಮಾಜದಲ್ಲಿ ಅವಳದೇ ಆದ ಸೋಷಿಯಲ್ ಸ್ಟೇಟಸ್ ಇದೆ. ನಿನ್ನ ಇಷ್ಟಗಳ್ನ ಅವ್ಳ ಮೇಲೆ

ಹೇರೋದು ದೊಡ್ಡ ತಪ್ಪು. ಮೊದ್ಲು ಅವ್ರ ಭಾವನೆಗಳ್ನ ಅರ್ಥ ಮಾಡ್ಕೊಂಡ್ ಗೌರವಿಸೋದು ಕಲೀ. ಇನ್ನು ಮೂರನೆಯದು...." ಸೊಸೆಯ ಕಡೆ ತಿರುಗಿದರು.

"ಬಹುಶಃ ನಾನು ಆ ನಿರ್ಧಾರ ತಗೊಳ್ಳದಿದ್ದರೇ ಇಬ್ಬರು ಮನೆಗೆ ಹಿಂದಿರುಗುತ್ತಿರಲಿಲ್ಲ, ಇಲ್ಲ ಮೂರನೆ ವ್ಯಕ್ತಿಯನ್ನು ಆಹುತಿ ಕೊಟ್ಟು ಪೊಲೀಸ್ ಸ್ಟೇಷನ್‌ನಲ್ಲಿ ಇರ್ತಾ ಇದ್ವಿ. ಅವೆರಡಕ್ಕಿಂತ ಇದೇ ವಾಸೀಂತ ನಿಮ್ಗೇ ಅನ್ನಿಸ್ಬಹುದ್ದು" ಎಂದಳು ಕಂಪಿಸುವ ಕಂಠದಲ್ಲಿ-ತಕ್ಷಣ ಎದ್ದು ಹೋದಳು.

ಮಗನತ್ತ ನೋಡುವುದಕ್ಕೆ ಮುನ್ನ ವಸಂತ ಜಾಗ ಖಾಲಿ ಮಾಡಿದ್ದ. ಬರೀ ಕೋಪವಿತ್ತೇ ವಿನಃ ಪಶ್ಚಾತ್ತಾಪದ ಗುಣ ಅವನದಲ್ಲ. ಇದು ಎಲ್ಲಿಗೆ ಹೋಯಿತೂಂದರೇ ಶಾರದ ಮಾತಾಡಿಸುವುದನ್ನೆ ನಿಲ್ಲಿಸಿದಳು. ಅದಕ್ಕೆ ವಿರುದ್ಧದ ಸ್ವಭಾವ ಅವನದು. ಕಾಫಿಯಿಂದ ಹಿಡಿದು ಪ್ರತಿಯೊಂದನ್ನು ಅವಳಿಗೆ ಹೇಳುತ್ತಿದ್ದ. 'ನನ್ನ ಕರ್ಚೀಫ್ ಎಲ್ಲಿ ? ಫೈಲ್ ಎಲ್ಲಿ ?' ಇಂಥ ಪ್ರಶ್ನೆಗಳು ಇರುತ್ತಿದ್ದವು.

ಅಂದು ಅವಳು ಕಾಲೇಜಿಗೆ ಹೊರಟಾಗ ತಾನು ರೆಡಿಯಾಗಿ ಕಾರಿನಲ್ಲಿ ಕೂತ. "ನಿನ್ನ ಡ್ರಾಪ್ ಮಾಡ್ಬರ್ತೀನಿ" ಮುಗುಳ್ನಕ್ಕ. ಶೀತಲ ಸಮರ ಅವಳಿಗೂ ಬೇಡವಾಗಿತ್ತು. ಕಾರು ಹತ್ತಿದಳು, ಬದುಕಿನಲ್ಲಿ ಸಾಮರಸ್ಯ ಸಾಧಿಸಬೇಕಿತ್ತು ! ಎಲ್ಲಿನವರೆಗೂ ? ಹೇಗೆ ? ಹೇಳುವವರು ಕೂಡ ಇದಕ್ಕೆ ಉತ್ತರ ಹೇಳಲಾರರು.

ಕಾಲೇಜಿನ ಬಳಿ ಕಾರು ನಿಂತಾಗ ಅವಳ ಕೈ ಮೇಲೆ ಕೈಯೂರಿ ಅದುಮಿದ. "ಸ್ವಲ್ಪ ಬೇಗ್ಬಾ, ಎಲ್ಲಾದ್ರೂ ಹೋಗ್ಬರೋಣ" ಎಂದ. ವಸಂತನ ಸ್ಪರ್ಶದಿಂದ ಅವಳ ಮೈಯಲ್ಲಿ ಮಧುರ ಕಂಪನವಾಗಲಿಲ್ಲ, ಅಷ್ಟು ಜಡ್ಡು ಮಾಡಿದ್ದ.

"ಮೂರಕ್ಕೆ ಮನೆಯಲ್ಲೇ ಇರ್ತೀನಿ" ಎಂದಳು.

ಕಾಲೇಜಿನ ವಾತಾವರಣದಲ್ಲಿ ಎಲ್ಲಾ ಮರೆತಳು. ಇಷ್ಟಪಟ್ಟು ಪಡೆದುಕೊಂಡ ಉದ್ಯೋಗ. ಅಧ್ಯಾಪಕ ವೃತ್ತಿ ಬಿಟ್ಟು ಬೇರೆ ಯಾವುದೇ ಉನ್ನತ ಮಟ್ಟದ ಉದ್ಯೋಗವನ್ನು ಇಷ್ಟಪಡಳು.

ಎರಡರ ಸುಮಾರಿಗೆ ಒಂದು ಸಲ ಕಾಶೀಪತಿಗಳಿಂದ ಅವಳಿಗೆ ಫೋನ್ ಬಂತು. "ನೀನು ಮೂರರ ವೇಳೆಗೆ ಮನೆಯಲಿ ಇರ್ತೀಯಾಂತ ವಸಂತ

ಫೋನ್ ಮಾಡಿದ್ದ. ನಾನು ಕೂಡ ಊಟ ಮಾಡದೇ ಕಾಯ್ತೀನಿ" ನೆನಪಿಸುವುದು, ಎಚ್ಚರಿಸುವುದು ಎರಡನ್ನು ಸಮರ್ಪಕವಾಗಿ ಮಾಡಿದ್ದರು.

"ನೀವು ಯಾಕೆ ಊಟ ಮಾಡ್ದೇ ಕಾಯ್ತೀರಿ, ಅಂಕಲ್ ? ನಾನು ಒಂದರ್ಧಗಂಟೆ ಬಿಟ್ಟು ಹೊರಡ್ತೀನಿ" ಕೈಯಲ್ಲಿದ್ದ ವಾಚ್ ಕಡೆ ನೋಡಿದಳು. ಎರಡು ಗಂಟೆ ಹತ್ತು ನಿಮಿಷಗಳನ್ನು ತೋರಿಸುತಿತ್ತು. ಆಟೋಮ್ಯಾಟಿಕ್ ಗಡಿಯಾರ. ಅವಳ ಚಿಕ್ಕಪ್ಪನ ಉಡುಗೊರೆ ಅದು.

ಎರಡೂಮುಕ್ಕಾಲಿಗೆಲ್ಲ ಶಾರದ ಮನೆಯಲ್ಲಿ ಇದ್ದಳು. ಕಾಶೀಪತಿಗಳ ಮಾತಿನಂತೆ ಒಂದಿಷ್ಟು ಸೌತೇಕಾಯಿ ಕೋಸಂಬರಿ, ಗಸಗಸೆ ಪಾಯಸ ಮಾಡಿಟ್ಟಳು. ಆದರೆ ಅವಳ ಮನವೇನು ಸಂಭ್ರಮಪಡಲಿಲ್ಲ.

ಬಹಳ ಉತ್ಸಾಹದಿಂದ ಬಂದ ವಸಂತ ರೂಮಿನೊಳಕ್ಕೆ ಬಂದ ಕೂಡಲೇ ಅವಳನ್ನು ತೋಳುಗಳಲ್ಲಿ ತಗೊಂಡು ಬಾಯಾರಿದವನಂತೆ ಅವಳ ತುಟಿಯ ಜೇನಿಗೆ ತುಟಿ ಹಚ್ಚಿದ. ಹತ್ತು, ಹದಿನೈದು ನಿಮಿಷಗಳು ಶೃಂಗಾರ ಚೇಷ್ಟೆಯಲ್ಲಿ ಕಳೆದ. ಎಲ್ಲಾ ಹಿತವೆ. ಊಟದ ಮಧ್ಯೆ ತಂದೆಯೊಡನೆ ಬಿಜಿನೆಸ್‌ನ ಎಷ್ಟೋ ವಿಷಯಗಳನ್ನು ಹೇಳಿದ. ಅಂತೂ ಕೆಲವು ದಿನಗಳ ನಂತರ ಇಡೀ ಮನೆಯೆ ನಗುತ್ತಿದೆಯೆನಿಸಿತು.

ಅರ್ಜೆಂಟ್ ಫೋನ್ ಬಂದು ಅವನು ಹೊರಗೆ ಹೋದವನು ಏಳರ ನಂತರವೇ ಹಿಂದಿರುಗಿದ್ದು. ಶ್ರೀಧರಮೂರ್ತಿಗಳು, ತುಳಸಮ್ಮ ಬಂದು ಮಾತಿಗೆ ಕೂತಿದ್ದರು. ಅವರದು ಹಳ್ಳಿಗೆ ಹಿಂದಿರುಗುವ ನಿರ್ಧಾರ. ಅದಕ್ಕೆ ಮುನ್ನ ಒಂದು ವಾರವಾದರೂ ಶಾರದನ ತಮ್ಮ ಬಳಿ ಇರಿಸಿಕೊಳ್ಳುವ ಆಸೆ.

ಎದ್ದ ತುಳಸಮ್ಮ ರೂಮಿನವರೆಗೂ ಬಂದು "ವಸಂತ, ಶಾರದನ ನಾಲ್ಕು ದಿನ ಮನೆಗೆ ಕರ್ಕೊಂಡ್ಹೋಗ್ತೀವಿ. ಹೆಣ್ಣಿಗೆ ಬೆಳೆದ ಮನೆಯ ಗೀಳು ಇದ್ದೇ ಇರುತ್ತೆ. ನಮ್ಜೊತೆ ಇರ್ಲಿ. ಎಷ್ಟೊಂದು ಒಳ್ಳೊಳ್ಳೆ ಕವನಗಳ್ನ ಬರ್ದು ಇಟ್ಟಿದ್ದಾಳೆ. ಅವನ್ನೆಲ್ಲ ಪುಸ್ತಕ ಮಾಡ್ಸಬೇಕು. ನೀನು ಒಂದೆರಡು ಗಂಟೆ ಬಂದರೇ ಅವು ಓದಿ ಹೇಳ್ತಾರೆ" ಪ್ರೀತಿಯಿಂದ ಹೇಳಿದ ಮಾತುಗಳು ಅವನ ಪಾಲಿಗೆ ಮುಳ್ಳುಗಳು ಹಲ್ಲುಗಳನ್ನು ಕಚ್ಚಿಡಿದ.

"ನೋಡೋಣ....." ಅಷ್ಟೇ ಅಂದಿದ್ದು.

ಒಂದು ತಂಬಿಗೆ ನೀರು ಆಕೆಯ ಉತ್ಸಾಹದ ಮುಖಕ್ಕೆ

ಎರಚಿದಂತಾಯಿತು. ಹಿರಿಯ ಜೀವ ನೊಂದಿತು. ಶ್ರೀಧರಮೂರ್ತಿಗಳಿಗೆ ಕಸಿವಿಸಿ.

"ಕೆಲ್ಸ ಜಾಸ್ತಿ, ಅಳಿಯಂದಿರಿಗೆ, ಪ್ರತಿ ಇಲ್ಲಿಗ್ಬಂದರೇ ಪುರಸತ್ತು ಇದ್ದಾಗ ಓದಿಕೊಂಡು ಏಕಾಂತದಲ್ಲಿ ತಮ್ಮ ಅಭಿಪ್ರಾಯ ತಿಳಿಸ್ತಾರೆ" ನಗುವಿನಲ್ಲಿ ತೇಲಿಸಿದರು ಸಂದರ್ಭವನ್ನು.

ತುಳಸಮ್ಮ ತಮ್ಮ ಜಾಗದಲ್ಲಿ ಆಸೀನರಾಗಿ, ಗಂಡನತ್ತ ನೋಡಿದರು. "ಒಂದೇ ಊರು ಅಲ್ವಾ, ಪುರಸತ್ತಾದಾಗ ಅವರು ಬರ್ಲ್ಲಿ, ನಾವು ಶಾರದನ ಕರ್ಕೊಂಡ್ ಹೋಗೋಣ ಸಲಹೆ ಇದ್ದಕ್ಕೆ ಈಗಾಗಲೇ ಒಪ್ಪಿಗೆ ನೀಡಿದ್ದರು ಕಾಶೀಪತಿಗಳು."

ರೂಮಿನೊಳಕ್ಕೆ ಬಂದ ಶಾರದ ಅವನಿಗೆ ವಿವರಿಸಿದಳು. "ಅವರು ಹಳ್ಳಿಗೆ ಹಿಂದಿರುಗುತ್ತಾರಂತೆ" ಷುರು ಮಾಡಿದ ಕೂಡಲೇ ತಟ್ಟನೆ ಅಂದ "ಅದ್ಕೆ ನನ್ನ ಪರ್ಮಿಷನ್ ಏನು ಬೇಕಿಲ್ಲ."

ಶಾರದ ಅವನ ಆತುರ, ಅವಿವೇಕ, ಆವೇಗಕ್ಕೆ ನಿಟ್ಟುಸಿರು ಚೆಲ್ಲಿ. "ಅವ್ರಿಗೆ ನಮ್ಮಗಳ ಪರ್ಮಿಷನ್ ಬೇಕಿಲ್ಲ. ನನ್ನ ತಾತನ ಕಡೆಯ ಸಂಬಂಧಿಕರು ನಾಲ್ಕು ದಿನ ನನ್ನ ಇರ್ಸಿಕೊಂಡು ಉಪಚರಿಸೋ ಆಸೆ ಅವರದಷ್ಟೆ" ಒತ್ತಿ ಹೇಳಿದಳು.

"ಅವರುಗಳು ಯಾರಾದರಾಗ್ಲೀ, ನಂಗೆ ಇಂಥದ್ದು ಇಷ್ಟವಾಗೋಲ್ಲ. ವಿವಾಹವಾಗಿ ಎಂಟು ತಿಂಗಳಾಯ್ತು, ನನ್ನ ಮನಸ್ಸನ್ನು ನೀನು ಅರ್ಥ ಮಾಡಿಕೊಂಡಿಲ್ಲ. ಅದಕ್ಕೆ ನಿಂಗೆ ಪುರಸತ್ತು ಕೂಡ ಇಲ್ಲ" ಮಾತನ್ನು ಎಲ್ಲಿಂದ ಎಲ್ಲಿಗೋ ಒಯ್ದ. ವಿಷಯ ಪೂರ್ತಿ ಗೋಜಲು ಗೋಜಲಾಯಿತು.

ಪೂರ್ತಿ ವಿಷಮಿಸುವುದು ಬೇಡವಾಗಿ ಶಾರದ ಹೊರಗೆ ಬಂದಳು ತುಟಿ ಕಚ್ಚಿ. ಶ್ರೀಧರಮೂರ್ತಿಗಳು, ತುಳಸಮ್ಮ ಆಸೆಯ ಕಣ್ಣುಗಳಿಂದ ರೂಮಿನತ್ತಲೇ ನೋಡುತ್ತಿದ್ದರು.

"ಬೆಳಿಗ್ಗೆ, ಅವ್ರೇ ಕರ್ಕಂಡ್ ಬಂದು ಬಿಡ್ತಾರಂತೆ." ಸುಳ್ಳು ಹೇಳಿದಳು. ತಾಳಿ ಕಟ್ಟಿಸಿಕೊಂಡ ಕ್ಷಣದಿಂದಲೇ ಹೆಣ್ಣು ತನ್ನ ಗಂಡನ ಮರ್ಯಾದೆ ಕಾಯಲು ಒಂದಲ್ಲ ಒಂದು ಸುಳ್ಳು ಹೇಳುತ್ತಿರುತ್ತಾಳೆ. ಗಂಡನ ಮೇಲಿನ ಪ್ರೀತಿಯಿಂದಲೋ, ಸಮಾಜ ತಮ್ಮಗೆ ಅತಿಯಾದ ಮರ್ಯಾದೆ ಕೊಡಲಿಯೆಂತಲೋ, ಬೇರೆ ಯಾವುದೋ ಒಂದು ಕಾರಣಕ್ಕೆ ಸುಳ್ಳು ಹೇಳಬಹುದು.

ಕಾಶೀಪತಿಗಳು ತುಟಿ ಕಚ್ಚಿ ಟ್ಯಾಕ್ಸಿ ಸ್ಟಾಂಡ್‌ಗೆ ಫೋನ್ ಮಾಡಿ ಟ್ಯಾಕ್ಸಿ ತರಿಸಿಕೊಂಡು ಬಿಳ್ಕೊಟ್ಟರು. ಅವರ ಕಣ್ಣುಗಳು ಹನಿಗೂಡಿದವು. ಆನಂದ ಬದುಕಿದ್ದರೇ ಇದನ್ನೆಲ್ಲ ಒಂದು ಕ್ಷಣ ಕೂಡ ಸಹಿಸುತ್ತಿರಲಿಲ್ಲ.

"ಶಾರದ, ನಂಗೆ ಆನಂದನನ್ನು ಹೋಗಿ ಸೇರ್‌ಕೋಬೇಕನ್ನೋ ಆತುರ ಇತ್ತು. ಈಗ ಖಂಡಿತ ಅಂಥ ಆತುರ ಇಲ್ಲ, ಬರೀ ಭಯ ಅಷ್ಟೆ" ನಕ್ಕರು. ಆ ನಗುವಿನಲ್ಲಿ ಇದ್ದಿದ್ದು ಬರೀ ವೇದನೆಯಷ್ಟೆ.

ಒಂದು ಮಧುರವಾಗಬಹುದಾದ ರಾತ್ರಿಯನ್ನು ಹಾಳುಗೆಡವಿದ ವಸಂತ. ಒಂದೇ ಮಂಚದಲ್ಲಿ ಮಲಗಿ ಭಿನ್ನವಾಗಿ ಆಲೋಚಿಸಿದರು.

ಮಾರನೆಯ ದಿನ ಬೆಳಿಗ್ಗೆ ಬೆಳಿಗ್ಗೆಯೇ ಕಾಶೀಪತಿಗಳು, "ಆಗಾಗ ಬರ್ತಾನೆ ವಸಂತ. ನೀನು ಬೇಗ ರೆಡಿಯಾಗು, ಕರೆದೊಯ್ದು ಬಿಟ್ಬರ್ತೀನಿ" ಅವಸರಿಸಿದರು. ಶ್ರೀಧರಮೂರ್ತಿಗಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಿತ್ತು.

ಶಾರದಳ ಮುಖದಲ್ಲಿ ಅನುಮಾನದ ನೆರಳಾಡಿತು.

"ನಾಲ್ಕು ದಿನ ನೀನು ಬೇರೆ ಕಡೆ ಇದ್ದಾಗ್ಲೇ, ನಿನ್ನ ಬೆಲೆ ಅವ್ನಿಗೆ ತಿಳಿಯೋದು. ನೀನೇನು ತಲೆ ಕೆಡಿಸ್ಕೋಬೇಡ. ಒಬ್ಬರ ಬಗ್ಗೆ ಮತ್ತೊಬ್ಬರು ಯೋಚಿಸಲು ಈ ನಾಲ್ಕು ದಿನ ಅನ್ಕೂಲವಾಗ್ಬಹ್ದು" ಚಿಂತಿಸಿ ಹೇಳಿದರು. ಇದು ಅವರ ಅನುಭವ ಆಡಿಸಿದ ಮಾತು, ಕೈಗೊಂಡ ನಿರ್ಧಾರ.

ಉಪಹಾರದ ಸಮಯದಲ್ಲಿ "ನಾಲ್ಕು ದಿನ ಅಂದರೇ ಭಾನುವಾರದವರೆಗೂ ಶಾರದ ಅವ್ರ ಮನೆಯಲ್ಲಿ ಇರ್ತಾಳೆ. ಆಗಾಗ ಬೇಕಾದ್ರೆ... ಹೋಗ್ಬಾ. ಇಲ್ಲಿ ನಾಲ್ಕು ದಿನ ನೀನು ಅಲ್ಲೇ ಇರು, ಅತ್ತೆಯ ಮನೆಯ ಉಪಚಾರ ಅನುಭವಿಸುತ್ತ" ಹಾಸ್ಯ ಬೆರೆಸಿ ಹೇಳಿದ್ದಕ್ಕೆ ವಸಂತ ಬದಲು ಹೇಳಲಿಲ್ಲ. ಇದು ಅವನಿಗೆ ಇಷ್ಟವಿಲ್ಲವೆಂದು ಮುಖವೇ ಸಾರಿ ಹೇಳುತಿತ್ತು.

ಇಬ್ಬರ ತಿಂಡಿಯಾದ ನಂತರವೇ ಅವರು ಕೈ ತೊಳೆಯಲು ಹೇಳುತ್ತಿದ್ದುದ್ದು. ಆದರೆ ಇಂದು ಬೇಗ ಎದ್ದರು. ವಸಂತ ತನ್ನ ಅಭಿಪ್ರಾಯ, ಸಿಡುಕು ತೋರಿಸುವ ಮುನ್ನವೇ ಹೊರಟುಬಿಡಬೇಕೆನ್ನುವುದು ಅವರ ನಿರ್ಧಾರ. ಶಾರದ ಒಂಟಿಯಾಗಿ ಅವನಿಗೆ ಸಿಗುವ ಮುನ್ನವೆ ಹೊರಡಿಸಿಕೊಂಡು ಹೊರಟುಬಿಟ್ಟರು. ಈ ನಾಲ್ಕು ದಿನದ ವಿರಹ ಅವರನ್ನು

ಗಟ್ಟಿಯಾಗಿ ಬೆಸೆಯಲೀ ಎನ್ನುವ ಆಸೆ.

ನಾಲ್ಕು ದಿನಕ್ಕೆ ಆಗುವಷ್ಟು ಬಟ್ಟೆ ಬರೆ ತುಂಬಿಕೊಂಡ ಸೂಟುಕೇಸ್ ಇಲ್ಲಿಂದ ಮೊದಲ ಸಲ ಹೊರ ಬಂತು. ಇಲ್ಲಿ ದುಗುಡಕ್ಕಿಂತ ಅವಳ ಆನಂದವೆ ಹೆಚ್ಚು.

* * * *

ಶ್ರೀಧರಮೂರ್ತಿಗಳು ಗಣೇಶನ ದೇವಸ್ಥಾನದಲ್ಲಿ ಅಭಿಷೇಕಕ್ಕೆ ಕೊಟ್ಟಿದ್ದೀವಿ ಎಂದು ಹಿಂದಿನ ದಿನವೇ ಫೋನ್‌ನಲ್ಲಿ ತಿಳಿಸಿದ್ದರು ಕಾಶಿಪತಿಗಳಿಗೆ ಮತ್ತು ವಸಂತನಿಗೆ. ಅಪ್ಪ 'ಆಗಲೀ, ಖಂಡಿತ ಬರ್ತೀವಿ' ಎಂದರೆ ಮಗ 'ನೋಡೋಣ' ಎಂದ. ಶಾರದಳ ಆಹ್ವಾನಕ್ಕೆ ಉತ್ತರವೆ ಇಲ್ಲ. ಆದರೆ ಇಬ್ಬರು ಬರಲಿಲ್ಲ. ಕಾಶೀಪತಿಗಳು ಫೋನ್ ಮಾಡಿ "ಏನೂ ತಿಳ್ಕೊಬೇಡಿ. ನನ್ನ ಅಪರೂಪದ ಗೆಳೆಯನನ್ನು ನೋಡೋದಿದೆ" ಎಂದರು. ಆ ವಸಂತ ಮೌನವಹಿಸಿದ ದಂಪತಿಗಳು ಗಾಬರಿಯಾದರು. ತಿಳಿವಳಿಕೆಯುಳ್ಳ ಒಳ್ಳೆಯ ಮನಸ್ಸಿನ ಹುಡುಗಿ ತಪ್ಪು ಮಾಡಲಾರಳೆಂದು ಅವರ ಅಭಿಪ್ರಾಯ ಆದ್ದರಿಂದಲೇ ಕೇಳಲು, ಹೇಳಲು ಹೋಗಲಿಲ್ಲ.

ಪೂಜೆ ಮುಗಿಸಿಕೊಂಡು ಬಂದ ನಂತರ ಅಚ್ಚುಕಟ್ಟಾಗಿ ಜೋಡಿಸಿಟ್ಟ ಅವಳ ಕವನಗಳನ್ನು ಶಾರದಳ ಮುಂದಿಟ್ಟರು. "ಅಚ್ಚಿಗೆ ಹೋಗೋ ಮುನ್ನ ಯಾವ್ದೇ ವಿಘ್ನಗಳು ಬರದೇ ಇರಲೀಂತ ಗಣೇಶನಿಗೆ ಅಭಿಷೇಕ ಮಾಡಿಸ್ದೇ. ಇದ್ನ ಸಂಪ್ರದಾಯ ಅನ್ನೊ, ನಂಬಿಕೆ ಅನ್ನು-ನಂಗೆ ಎರಡೂ ಸಮ್ಮತವೇ. ಇದೊಂದು ಕಾರ್ಯ ಮುಗಿಸಿಯೇ ಹಳ್ಳಿಗೆ ಹೋಗೋದು" ದೃಢವಾದ ನುಡಿಗಳು ಅವರದು. ಇಷ್ಟು ಒತ್ತಾಸೆ, ಭರವಸೆ ಬೇಡ. ಇದರಲ್ಲಿ ಹತ್ತು ಪಾಲಿನಷ್ಟಾದರೂ ಭರವಸೆ, ಉತ್ಸಾಹ ತನ್ನ ಬಗ್ಗೆ ವಸಂತ ತೋರಿಸಿದ್ದರೇ ಚೆನ್ನಿತ್ತು ಅಂದುಕೊಂಡಳು.

"ನಂಗೆ ಧೈರ್ಯವಾಗ್ತ ಇಲ್ಲ. ನಾನು ಬರ್ಯೋವಾಗ ಪ್ರಕಟವಾಗ್ಲೀ ಅನ್ನೋ ಉದ್ದೇಶವೇ ಇರ್‍ಲಿಲ್ಲ. ಅದು ವರ್ಷಗಳ ಹಿಂದೆ ಬರೆದಿದ್ದು. ಅನುಭವ ಸಾಲ್ದು. ಭಾಷಾ ಜ್ಞಾನವು ಕೂಡ ಕಡ್ಮೆ. ಈಗ ತಿದ್ದಿದರೇ ಕವನಗಳ ಮೂಲ ಉದ್ದೇಶ ಎಲ್ಲಿ ಕೆಡುತ್ತದೆಯೋ ಎನ್ನುವ ಭಯ" ಅಂತರಂಗಿಕ ವಿಷಯವನ್ನು ಹೇಳಿದಳು ಶಾರದ.

ಸ್ಫೂರ್ತಿಗೊಂಡಂತೆ ಶ್ರೀಧರಮೂರ್ತಿಗಳು ಕನ್ನಡದಲ್ಲಿ ತಮಗೆ ಮೆಚ್ಚಿಗೆಯಾದ ಸಾಹಿತ್ಯ ಕೃತಿಗಳ ಬಗ್ಗೆ ಬಹಳ ನಿರರ್ಗಳವಾಗಿ

ಮಾತಾಡಿದರು. ಆಸ್ಥೆಯಿಂದ ಕೇಳಿದಳು, ಮಧ್ಯೆ ಮಧ್ಯೆ ಒಂದೊಂದು ಪ್ರಶ್ನೆ ಹಾಕಿ ವಿಷಯವನ್ನು ತಿಳಿಯುತ್ತಿದ್ದಳು. ಹೆಚ್ಚು ಮಾತಾಡಿದ್ದು ಅವರೇ. ಸಾಹಿತ್ಯದ ಬಗ್ಗೆ ಅವರಿಗೆ ಇಷ್ಟರ ಮಟ್ಟಿನ ಅಭಿರುಚಿ, ಶ್ರದ್ಧೆ, ತಿಳಿವಳಿಕೆ ಇದೆಯೆನ್ನುವುದು ಅವಳಿಗೆ ಇಂದೇ ಗೊತ್ತಾಗಿದ್ದು.

ಅವಳಿಗೆ ಇಂಗ್ಲೀಷ್ ಭಾಷೆ ತೊಡಕಾಗಿರಲಿಲ್ಲ. ಹೆಚ್ಚು ಹೆಚ್ಚು ಓದಿಕೊಳ್ಳಲು ಅವಳ ತಂದೆ ಸಂಗ್ರಹಿಸಿದ್ದ ಐರೋಪ್ಯ ಸಾಹಿತಿಗಳ ಕೃತಿಗಳೇ ಮುಖ್ಯ ಕಾರಣ. ಸಾಕಷ್ಟು ಹೊತ್ತು ಶ್ರೀಧರಮೂರ್ತಿಗಳೊಂದಿಗೆ ಸಾಹಿತ್ಯದ ಬಗ್ಗೆ ಚರ್ಚಿಸಿದಳು. ತನ್ನ ಭಾವನೆ, ಅನಿಸಿಕೆಗಳನ್ನು ತೊಡಿಕೊಂಡಳು ವಿಶಾದವಾಗಿ. ಅದು ಅಮೂಲ್ಯ ವೇಳೆಯೆನಿಸಿತು. ಮನದ ಮಂಕು ಕಳೆದುಕೊಂಡು ಹರ್ಷಿತಳಾದಳು.

ಮನೆಗೆ ಫೋನ್ ಹಚ್ಚಿದಳು. ಲೈನ್‌ಗೆ ಬಂದಿದ್ದು ಗೋಪಿ "ಹಲೋ, ಅಕ್ಕಾ ಹೇಗಿದ್ದೀರಿ ? ಬೇಜಾರಾಗ್ಬಿಟ್ಟಿದೆ. ಯಾವಾಗ ಬರ್ತೀರಾ ? ಮನೆ ವಿಳಾಸ ಸರ‍್ಯಾಗಿ ಹೇಳಿದ್ರೆ... ನಾನು ಸಂಜೆ ಅಲ್ಲಿಗೆ ಬರ್ತೀನಿ" ತೊಡಿಕೊಂಡ ಪಿಸುದನಿಯಲ್ಲಿ.

"ಆಯ್ತು, ಅಂಕಲ್ ಬಂದರೇ ಜೊತೆಯಲ್ಲಿ ಬಾ. ಅಣ್ಣಾವ್ರು ಇದ್ದಾರ?" ಕೇಳಿದಳು. ರೂಮಿನಲ್ಲಿದ್ದ ಫೋನ್‌ನಲ್ಲಿ ಕೇಳುತ್ತಿದ್ದ ವಸಂತ "ಬಾತ್‌ರೂಮಿನಲ್ಲಿದ್ದಾರೆ, ಕೂಗಿದ್ರೆ... ಬೈಯ್ತಾರೆ. ಹೊರ್ಗಡೆ ಬಂದ್ಮೇಲೆ ಹೇಳ್ತೀನಿ. ಯಜಮಾನ್ರು ಎಲ್ಲೋ ಹೋಗಿದ್ದಾರೆ.".

"ಆಯ್ತು, ಪೋನಿಡು" ಅಂದಳು.

ಮತ್ತೆ ಬಂದು ಅವರೊಂದಿಗೆ ಮಾತಿಗೆ ಕೂತಳು.

"ನಾಲ್ಕು ದಿನ ಇಬ್ರೂ ಒಟ್ಟಿಗೆ ಯಾವುದಾದ್ರೂ ಪ್ರಕೃತಿ ರಮಣೀಯ ಸ್ಥಳಕ್ಕೆ ಹೋಗ್ಬನ್ನಿ. ಮನಸ್ಸುಗಳು ಪ್ರಶಾಂತವಾಗುತ್ತೆ. ಕನ್‌ಸ್ಟ್ರಕ್ಷನ್ ಕಂಪೆನಿಯ ವ್ಯವಹಾರದಲ್ಲಿ ಸದಾ ಮುಳುಗಿರೋ ಅಳಿಯಂದಿರಿಗೆ ರೆಸ್ಟ್ ಅಗತ್ಯವಿದೆ". ಒಂದು ಸಲಹೆ ಕೊಟ್ಟರು. ಅದು ಅವಳಿಗೆ ಸಮ್ಮತವೇ. ಆದರೆ ವಸಂತ ಒಪ್ಪುವ ಬಗ್ಗೆ ಅನುಮಾನ.

"ಆಯ್ತು ಹೇಳ್ತೀನಿ" ಎಂದಳು.

"ಅರ್ಧ ಗಂಟೆಯಾಯಿತು. ಆಮೇಲೆ ಸೆಕೆಂಡ್‌ಗಳನ್ನು ಲೆಕ್ಕ ಹಾಕಿದಷ್ಟೆ ಪ್ರಯೋಜನ-ಫೋನ್ ರಿಂಗಾಗಲಿಲ್ಲ. ತಾನೇ ಫೋನ್ ಹಚ್ಚಿದಳು. ಬರೀ ಎಂಗೇಜ್ ಸದ್ದು. ಎರಡು ಲೈನ್‌ಗಳಲ್ಲೂ ಅರ್ಧ ಗಂಟೆಯ ನಂತರ

ಸಂಪರ್ಕ ಸಿಕ್ಕಿತು."

"ಹಲೋ..." ದನಿಯನ್ನು ಅನುಸರಿಸಿಯೇ ಅವನ ಸಿಡುಕು ಮುಖವನ್ನು ಕಲ್ಪಿಸಿಕೊಂಡಳು. "ನ್ಾನು ಶಾರದ ಮಾತಾಡ್ತ ಇರೋದು".

"ಏನು ?" ಎಂದು ಕೇಳಿದ.

ಅವಳ ಉತ್ಸಾಹ ಉಡುಗಿತು. ಸ್ವರ ಸ್ತಬ್ಧವಾಯಿತು. ಮಾತು ಹೊರಡಲು ಕಷ್ಟವೆನಿಸಿತು. ಬಲವಂತವಾಗಿ ಉಸಿರೆಳೆದುಕೊಂಡು ಸಿಡಿದಾಗಿ ದಬ್ಬಿದಳು.

"ನಿಂಗೆ ಮಾತಾಡೋಕೆ, ಇಷ್ಟವಿಲ್ಲವೆಂದುಕೊಂಡರೇ ಯಾಕೆ, ಫೋನ್ ಮಾಡಿ ನನ್ನ ಟೈಮ್‌ನ ವೇಸ್ಟ್ ಮಾಡ್ತೀಯಾ ! ನಿಂಗೆ ಸ್ವಲ್ಪ ಕೂಡ ಕಾಮನ್‌ಸೆನ್ಸ್ ಇಲ್ಲ. ನಿನ್ನ ಜೊತೆಯ ಮುಂದಿನ ಜೀವನವನ್ನು ಕಲ್ಪಿಸಿಕೊಂಡರೆ... ಭಯವಾಗುತ್ತೆ" ಫೋನ್ ಕುಕ್ಕಿದ ಸದ್ದು.

ನಿಧಾನವಾಗಿ ಫೋನ್‌ನ ಹುಕ್ ಮೇಲಿರಿಸಿದ್ದನ್ನು ಶ್ರೀಧರಮೂರ್ತಿಗಳು, ತುಳಸಮ್ಮ ಗಮನಿಸಿ ಮುಖ ಮುಖ ನೋಡಿಕೊಂಡರು. ಶಾರದಳಂಥ ಸೌಮ್ಯ ಸ್ವಭಾವ ಹೆಣ್ಣಿನೊಂದಿಗೆ ಕಾವ್ಯಮಯವಾಗಿ ಮಾಡಿಕೊಳ್ಳಬಹುದಾದ ಜೀವನವನ್ನು ಹೇಗೆ, ಈ ರೀತಿಯಾಗಿ ಹಾಳು ಮಾಡಿಕೊಳ್ಳುತ್ತಿದ್ದಾನೆ ?

ಸಂಜೆ ಬಂದ ಕಾಶೀಪತಿಗಳು ಸ್ವಲ್ಪ ಸಂತೋಷವಾಗಿಯೇ ಇದ್ದರು. ಮಗ ಮಧ್ಯಾಹ್ನ ಊಟದ ಸಮಯದಲ್ಲಿ ಒಂದಿಷ್ಟು ಮಾತಾಡುವುದರ ಜೊತೆ ತಾನು ಹೊಸದಾಗಿ ಮಾಡಿಸಿದ್ದ ಕೆಂಪಿನ ಬಳೆಗಳನ್ನು ಅವರಿಗೆ ತೋರಿಸಿದ್ದ.

"ಶಾರದಾಗೆ ಮಾಡಿಸ್ದೇ"

ಮಡದಿಯ ಬಗ್ಗೆ ಇಷ್ಟೊಂದು ಇಂಟರೆಸ್ಟ್ ತೋರಿಸುವ ಮಗನ ಬಗ್ಗೆ ಅಭಿಮಾನ ಮೂಡಿತು. ನಾಲ್ಕು ಮಾತು ಹೆಚ್ಚಿಗೆ ಆಡುವುದರ ಜೊತೆಗೆ ಒಂದಿಷ್ಟು ಬುದ್ಧಿ ಹೇಳಿದರು.

"ತಾತನ ಕೈಯಲ್ಲಿ ಮುದ್ದಾಗಿ ಬೆಳ್ದ ಹುಡ್ಗಿ, ತುಂಬ ಬುದ್ಧಿವಂತೆ. ಅವ್ಳು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಮಾಸ್ಟರ್‌ಗಳಿಗೆ ಯೋಚ್ನೇ ಆಗ್ತಾ ಇತ್ತಂತೆ, ಹೇಗೆ ಇವ್ಳಿಗೆ ಮಾರ್ಕ್ಸ್ ಕಡಿಮೆ ಮಾಡೋದೂಂಥ. ಈಗ ಸೇತುರಾಮ್ ಸಾವು ಅವ್ಳ ಪಾಲಿಗೆ ಆಘಾತ. ನೀನು ಬಹಳ ಪ್ರೀತಿಯಿಂದ ನೋಡ್ಕೋಬೇಕು. ಸಮಸ್ಯೆಗಳ್ನ ಹುಟ್ಟಿ ಹಾಕೋದ್ಬೇಡ".

ತಲೆ ಬಗ್ಗಿಸಿ ತಂದೆ ಹೇಳಿದ್ದನ್ನು ಕೇಳಿದ್ದನೇ ವಿನಃ ಒಂದೇ ಒಂದು ಮಾತು ಆಡಿರಲಿಲ್ಲ. ಅಂಥದ್ದರಲ್ಲಿ ಭರವಸೆ ಕೊಡುವುದೆಲ್ಲಿ ? ಅದು ಕಾಶೀಪತಿಗಳ ಗಮನಕ್ಕೆ ಬರಲಿಲ್ಲ. ಆ ಕ್ಷಣ 'ಮಗ ಅಷ್ಟು ಕೇಳಿದ್ದೇ ಹೆಚ್ಚೆನಿಸಿತ್ತು. ಗಂಡ, ಹೆಂಡತಿಯರ ಮಧ್ಯೆ ಹಿತವಾದ ವಾತಾವರಣ ನಿರ್ಮಾಣವಾಗಲಿಯೆಂಬುದು ಅವರ ಅಭಿಲಾಷೆ.

"ಏನು ಶ್ರೀಧರಮೂರ್ತಿಗಳೇ, ನಮ್ಮ ಮನೆ ಪೂರ್ತಿ ಕತ್ತಲಾಗ್ಬಿಟ್ಟಿದೆ. ನಮ್ಮ ಹುಡ್ಗಿ ಬರ್ದ ಕವನಗಳು ಎಲ್ಲಿ ?" ಬಂದವರೇ ಅಕ್ಕರೆಯಿಂದ ಅವರ ಮುಂದೆ ಕೂತರು.

ಅಚ್ಚುಕಟ್ಟಾಗಿ ಜೋಡಿಸಿಟ್ಟ ಕವನಗಳ ಫೈಲನ್ನು ಅವರ ಮುಂದಿಟ್ಟರು. "ಈ ಕವನಗಳ ಜೊತೆ ಸೇತುರಾಮ್ ಬರೆದ ಚಿತ್ರ ಕೂಡ ಮುಖ ಚಿತ್ರವನ್ನು ಅಲಂಕರಿಸುತ್ತೆ. ಅವರದೇ ನಾಮಕರಣ 'ಹಂಸ ಪಲ್ಲಕಿ', ಹೇಗಿದೆ ಶೀರ್ಷಿಕೆ? ಕವನಗಳಷ್ಟೆ ಸುಂದರವಾದ ಹೆಸರು" ಎಂದವರೇ ಎದ್ದು ಹೋಗಿ ಸೇತುರಾಮ್ ಎಂದೋ ಬರೆದಿಟ್ಟಿದ್ದ ಮುಖಚಿತ್ರವನ್ನು ಹಿಡಿದು ಬಂದರು.

ಕೈಯಲ್ಲಿಡಿದು ಅಚ್ಚರಿಯಿಂದ ದಿಟ್ಟಿಸಿದ ಕಾಶೀಪತಿಗಳು ಉದ್ಗರಿಸಿದರು. "ಎಷ್ಟೋ ಸಲ ಹೇಳಿ ನೊಂದ್ಕೊಂಡಿದ್ರು. ಒಬ್ಬ ಚಿತ್ರಕಾರನಾಗುವುದು ಅವರ ಜೀವನದ ಮಹತ್ವಾಕಾಂಕ್ಷೆಯಾಗಿತ್ತು. ಈಡೇರಲಿಲ್ಲ. ಅದಕ್ಕೇ ಮಗನಿಗೆ ಪೂರ್ಣ ಸ್ವತಂತ್ರ ಕೊಟ್ಟಿದ್ದು, ಮೊಮ್ಮಗಳನ್ನು ಹಾಗೇ ಬೆಳೆಸಿದ್ದು.

ಶ್ರೀಧರಮೂರ್ತಿಗಳು ಕವನಗಳಿಗೆ ಒಂದು ಪ್ರತ್ಯೇಕ ಧಾಟಿ ಕೊಟ್ಟು ಓದತೊಡಗಿದರು. ಮೊದಲಿನಿಂದ ಕವನಗಳನ್ನು ಜೋರಾಗಿ ಓದುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಜೈಮಿನಿ ಭಾರತದ ಎಲ್ಲಾ ಪದ್ಯಗಳನ್ನು ಅವರ ತಾಯಿ ಅವರಿಗೆ ಚಿಕ್ಕಂದಿನಲ್ಲಿಯೇ ಬಾಯಿ ಪಾಠ ಮಾಡಿಸಿದ್ದರಂತೆ."

ಬಹಳ ಹೊತ್ತು ಕೂತು ಕವನಗಳ ಬಗ್ಗೆಯೇ ಮಾತಾಡಿದರು. ಅದು ಅಚ್ಚಾಗುವುದು ಕಾಶೀಪತಿಗಳಿಗೂ ತೀರಾ ಸಂತೋಷದ ವಿಷಯವೇ. ಅದನ್ನು ಬಾಯಿ ಬಿಟ್ಟು ಒಂದಲ್ಲ ಹತ್ತು ಸಲ ಹೇಳಿದರು.

ಅವರುಗಳು ಹೊರಟಾಗ ತುಳಸಮ್ಮ "ಅಳಿಯಂದಿರನ್ನು ಭಾನುವಾರ ಒಪ್ಪೊತ್ತಾದರೂ ನಮ್ಮ ಮನೆಗೆ ಊಟಕ್ಕೆ ಕಳ್ಸೀ. ಇಬ್ರಿಗೂ ಒಟ್ಟಿಗೆ ಕೊಡ್ಸಿ ಬಡಸ್ತೀನಿ. ಆಮೇಲೆ ಶಾರದನ ಕರ್ಕಂಡ್ ಹೋಗ್ಬಹುದ್ದು" ತಮ್ಮ ಆಸೆ ವ್ಯಕ್ತಪಡಿಸಿದರು.

"ಖಂಡಿತ... ಖಂಡಿತ..." ಕಾಶೀಪತಿಗಳು ಭರವಸೆ ಕೊಟ್ಟರು.

ಅದು ಸಾಧ್ಯವಿಲ್ಲವೆಂದು ಆ ಕ್ಷಣ ಅನ್ನಿಸಿದರೇ ಚೆನ್ನಾಗಿತ್ತು. ಭಾನುವಾರ ಅವರ ಹೇಳಿಕೆಯನ್ನು ನಿರ್ದಾಕ್ಷಿಣ್ಯವಾಗಿ ತಳ್ಳಿ ಹಾಕಿದ "ನಂಗೆ ಅದ್ಕೆಲ್ಲ ಪುರಸತ್ತಿಲ್ಲ, ಅಪ್ಪ ಇವತ್ತು ಷಾ ಶಾಪಿಂಗ್ ಕಾಂಪ್ಲೆಕ್ಸ್ ನೋಡ್ಕೋಕೆ ಬರ್‍ತಾ ಇದ್ದಾರೆ. ಅವ್ರು ನಮ್ಗೆ ಪೂರ್ತಿ ಕನ್‌ಸ್ಟ್ರಕ್ಷನ್ ಜವಾಬ್ದಾರಿ ವಹಿಸಿ ಕೊಟ್ಮೇಲೆ ಬರ್‍ತಾ ಇರೋದು ಎರಡನೆ ಸಲ. ನಾನು ಇರಬೇಕಾದ್ದು ಅನಿವಾರ್ಯ" ಹೊರಟೇಬಿಟ್ಟ.

ಕಾಶೀಪತಿಗಳು ಸುಮ್ಮನೆ ಕೂತರು. ತಾನೇನಾದರೂ ಶಾರದಾನಾ ಮದುವೆಯಾಗಲು ಬಲವಂತಪಡಿಸಿದನೇ ? ಎಷ್ಟೇ ಆಲೋಚಿಸಿದರೂ ಇಲ್ಲವೆನಿಸಿತು. ಪರೋಕ್ಷವಾಗಿ ಅವಳ ಕೋರ್ಸು ಇವನೇ ಒತ್ತಾಯಿಸಿದ್ದ. ಒಮ್ಮೆ ಒಂದು ಸಲಹೆಯನ್ನು ಮುಂದಿಟ್ಟಿದ್ದ ಕೂಡ. "ವಿವಾಹವಾದ್ಮೇಲು ಶಾರದ ಓದ್ಬಹುದ್ದು" ಅದನ್ನು ಕಾಶೀಪತಿಗಳು ಮಾತ್ರವಲ್ಲ ಶಾರದ ಕೂಡ ಒಪ್ಪಿರಲಿಲ್ಲ.

"ಓದಿನ ಮಧ್ಯೆ ವಿವಾಹಕ್ಕೇನು, ಅರ್ಜೆಂಟ್ ಅಂಕಲ್ !" ಅಂದಿದ್ದಳು ಸರಳವಾಗಿ. ಜೊತೆಗೆ ವಸಂತನನ್ನು ಮದುವೆಯಾಗಲು ಅವಳು ಕೂಡ ನಿರಾಕರಿಸಿರಲಿಲ್ಲ. ಅಂಥದ್ದರಲ್ಲಿ ಇದೇನಾಯಿತು ? ಆರಾಮಾಗಿ ತಲೆ ತಪ್ಪಿಸಿಕೊಂಡು ಗೆಳೆಯರ ಮನೆಯಲ್ಲಿ ಕೂತವರು ರಾತ್ರಿಯೇ ಬಂದಿದ್ದು. ಆ ವೇಳೆಗೆ ಶಾರದ ಬಂದು ಆಗಿತ್ತು. ಅವಳ ನೋಟಕ್ಕೆ ಹಿಂಜರಿದರು.

"ಬನ್ನಿ ಅಂಕಲ್, ಊಟ ಮಾಡೋಣ" ಹೇಳಿದಳು.

ಡೈನಿಂಗ್‌ಹಾಲ್‌ಗೆ ಹೋದ ನಂತರವೇ ವಸಂತನ ಊಟ ಮುಗಿದಿದೆಯೆಂದು ತಿಳಿದಿದ್ದು. ಶಾರದ ಬಂದಾಗ ಅವನು ಮನೆಯಲ್ಲಿಯೇ ಇದ್ದ. ಇವಳನ್ನು ಮುಟ್ಟಿಸಿದ ಶ್ರೀಧರಮೂರ್ತಿ ದಂಪತಿಗಳು ತಕ್ಷಣ ಹೊರಟುಬಿಟ್ಟರು.

"ಅವ್ರು ಇವತ್ತು ಬೇಗ ಊಟ ಮಾಡಿದ್ದಾರೆ. ನಾನು ನಿಮಗೋಸ್ಕರ ಕಾಯ್ತ ಇದ್ದೆ" ಎಂದು ತಾನೇ ಬಡಿಸಿದಳು. ಅವರ ಸಂಕೋಚವನ್ನು ಶಾರದ ಕಡಿಮೆ ಮಾಡಬೇಕಿತ್ತು, ಅನಿವಾರ್ಯ ಕೂಡ.

ಕಾಶೀಪತಿಗಳು ತುಟಿ ಬಿಚ್ಚಲಿಲ್ಲ.

ಬೆಡ್‌ರೂಮಿಗೆ ಬಂದ ಕೂಡಲೇ ವಸಂತನ ಮೊದಲ ಪ್ರಶ್ನೆ "ಅಲ್ಲಿ ನಾಲ್ಕು ದಿನ ಇದ್ದು ಏನಾಬ್ದ್ದೇ ? ಇಲ್ಲಿಗಿಂತ ಹೆಚ್ಚಿನ ಅನ್ಕೂಲವಿತ್ತಾ?" ಮೊದಲ ಪ್ರಶ್ನೆಗಿಂತ, ಎರಡನೆ ಪ್ರಶ್ನೆ ಮನಸ್ಸಿಗೆ ದೊಡ್ಡ ಪೆಟ್ಟು ಕೊಟ್ಟಿತು.

"ಅನುಕೂಲಗಳು ಯಾವಾಗ್ಲೂ ವ್ಯಕ್ತಿಗಳ ಸ್ವಭಾವಗಳನ್ನು ಅನುಸರಿಸಿರುತ್ತೆ. ಅದು ಹೃದಯವಿದ್ದ ಜನಕ್ಕೆ ಮಾತ್ರ ಅರ್ಥವಾದೀತು" ಎಂದು ನುಡಿದವಳು ಮಲಗಿಬಿಟ್ಟಳು.

"ನಿನ್ನ ಪ್ರಕಾರ ನನಗೆ ಹೃದಯವಿಲ್ಲ !"

ಅವಳೇನು ಮಾತಾಡಲಿಲ್ಲ. ರೇಗಾಡಿದ. ಗೊಣಗುಟ್ಟಿದ ನಂತರ ಮಲಗಿದ. ಇಡೀ ರಾತ್ರಿ ನಿದ್ರಿಸುವುದಾಗಲಿಲ್ಲ ಅವಳಿಗೆ. ಈ ರಾತ್ರಿ ಮತ್ತಷ್ಟು ಭಯಂಕರವೆನಿಸಿತು. ಮದುವೆಗೆ ಮುನ್ನ ಕಣ್ಣಲ್ಲಿ ಕಣ್ಣಿಟ್ಟು ಪ್ರೀತಿಯ ಬಗ್ಗೆ ಉಸುರುತ್ತಿದ್ದ ವ್ಯಕ್ತಿ ಇವನೇನಾ, ಎಂದು ಯೋಚಿಸಿದಳು. ಏನೇನು ಅರ್ಥವಾಗಲಿಲ್ಲ. ವಿವಾಹಕ್ಕೆ ಮುನ್ನ ಮತ್ತು ನಂತರದ ಸಂಬಂಧಗಳ ಬಗ್ಗೆ ತರ್ಕಿಸಲಾರದೆ ಹೋದಳು.

* * * *

ಮಾಧವಿ ಕಾಲೇಜಿನಲ್ಲೆಲ್ಲ ಶಾರದಳಿಗಾಗಿ ಹುಡುಕಾಡಿ ಅವಳ ಮನೆಗೆ ಅರಸಿಕೊಂಡು ಬಂದಾಗ, ಆಗ ತಾನೇ ಕಾರಿನಿಂದ ಇಳಿದ ವಸಂತ ನಸು ನಗೆ ಬೀರಿದ.

"ಮತ್ತೇನು ಪರಿಚಯ ಬೇಕಿಲ್ವಲ್ಲ ! ನಾನು ಶಾರದ ಮೇಡಮ್‌ನ ಕಾಲೇಜಿನಲ್ಲೆಲ್ಲ ಹುಡುಕಾಡಿ ಬಂದೆ." ಅದೇ ಅವಸರದ ದನಿಯಲ್ಲಿ ನುಡಿದವಳು "ಅವ್ರಿಗೆ ಒಂದು ಮುಖ್ಯವಾದ ಇನ್‌ಫಾರ್ಮೇಷನ್ ಮುಟ್ಟಿಸ್ಬೇಕಿತ್ತು" ಅವನಿಗೆ ಮೊದಲು ಮನೆಯೊಳಕ್ಕೆ ಓಡಿದವಳು, ಇಡೀ ಮನೆಯನ್ನ ಹುಡುಕಾಡಿಬಿಟ್ಟು ತಣ್ಣಗೆ ಮಂಕಾಗಿ ಸೋಫಾ ಮೇಲೆ ಕೂತು ಹಣೆಯೊತ್ತಿಕೊಂಡಳು. 'ನೇರವಾಗಿ ಯೋಚಿಸುವ ಒಳ್ಳೆಯ ಮನಸ್ಸಿನ ಹುಡ್ಗಿ ಶಾರದ ತುಂಬ ಮುಖ್ಯ, ಮಿಸ್ ಆಗ಼್ಾರ್ದು' ಎಚ್ಚರಿಸಿದ್ದರು ಪ್ರೊಫೆಸರ್ ರಂಗೇಗೌಡರು.

"ಅವ್ರು, ಇನ್ನ ಬಂದೇ ಇಲ್ವಲ್ಲ ! ವಿದ್ಯಾರ್ಥಿಗಳಿಗೆ ಅವರೂಂದ್ರೆ ಫೇವರಿಟ್ ! ಎಲ್ಲಿ ಹಿಡ್ದು ಇಟ್ಕೊಂಡ್ರೋ !" ಹೆಗಲಿಗೆ ತೂಗು ಹಾಕಿಕೊಂಡಿದ್ದ. ಬ್ಯಾಗಿನಿಂದ ಒಂದು ಕವರ್ ತೆಗೆದು ವಸಂತ್‌ಗೆ ಕೊಟ್ಟು "ಇದು ತುಂಬ.... ತುಂಬ ಮುಖ್ಯವಾದುದ್ದು. ನೀವು, ಶಾರದ ಮೇಡಮ್ ಖಂಡಿತ ಬರಲೇ ಬೇಕು. ಬೇರೆ ಕಾರಣ ಕೊಡೋಕೆ ಸಾಧ್ಯನೇ ಇಲ್ಲ. ಈ ಲೆಟರ್‌ನ ಪ್ರೊಫೆಸರ್ ಕೊಟ್ಟಿದ್ದಾರೆ, ದಯವಿಟ್ಟು ತಲುಪಿಸಿಬಿಡಿ" ಹೊರಟೇಬಿಟ್ಟಳು.

ತುಂಬುಗೂದಲಿನ ಆ ಹುಡುಗಿ ಸೀರೆಯನ್ನು ಕೂಡ ಓರಣವಾಗಿ ಉಟ್ಟಿರಲಿಲ್ಲ. ಮಾಧವಿಯನ್ನು ನೋಡಿದ ಯಾರೇ ಆಗಲಿ, ಪ್ರೊಫೆಸರ್ ರಂಗೇಗೌಡರ ಬಗ್ಗೆ ಅಸೂಯೆಪಡಬೇಕಿತ್ತು.

ಹತ್ತು ನಿಮಿಷದಲ್ಲಿ ಶಾರದಳಿಂದ ಫೋನ್ ಬಂತು. "ಪ್ರೊಫೆಸರ್ ಶಾಂತ ಅವ್ರ ತಂಗಿ ನಿದ್ದೆ ಮಾತ್ರೆ ನುಂಗಿದ್ದಾಳೆ. ಲೀನಾ ನರ್ಸಿಂಗ್ ಹೋಂನಲ್ಲಿ ಆಕೆಯ ಜೊತೆ ಇದ್ದೀನಿ. ಸಂಜೆ ಸ್ವಲ್ಪ ಲೇಟಾಗ್ಬಹುದ್ದು" ಹೇಳಿದ ಕೂಡಲೇ ವಸಂತ ಫೋನಿಟ್ಟ.

ರೂಮಿಗೆ ಬಂದ ವಸಂತ ಅವಳ ಹೆಸರಿಗೆ ಬಂದ ಪರ್ಸನಲ್ ಲೆಟರ್ ಎಂದು ಕೂಡ ಸಂಕೋಚಿಸದೇ ಕವರ್ ಹರಿದು ಲೆಟರ್ ತೆಗೆದ 'ಡಿಯರ್ ಶಾರದ....' ಎಂದು ಷುರು ಮಾಡಿದ. ಪ್ರೊಫೆಸರ್ ಎರಡು ಸಲ ತಮ್ಮ ವಿವಾಹ ಮುಂದೂಡಿದಕ್ಕೆ ಕಾರಣ ಕೊಟ್ಟು, 'ನೀನು ವಸಂತ್ ಖಂಡಿತ ಬರಬೇಕು, ಶಾಂತ ಕೂಡ ಬರ್ತಾಳೆ' ಎಂದು ಪತ್ರ ಮುಗಿಸಿದ್ದರು. ಅದು ಬಿಟ್ಟು ಅಂಥ ಮುಖ್ಯವಾದ ವಿಷಯವೇನು ಇರಲಿಲ್ಲ. ಅವನಲ್ಲಿನ 'ಅಹಂ' 'ಸ್ಯಾಡಿಸಂ' ವಿಜೃಂಭಿಸಿ ಅದನ್ನು ಹರಿದು ಕಿಟಕಿಯಿಂದ ಆಚೆ ಎಸೆದ. 'ಈಡಿಯಟ್ಸ್...' ಬೈಯ್ದ. ಈ ಬೈಗಳು ಯಾರಿಗೆಂದು ಗಾಳಿ ಮಾತ್ರ ಪ್ರಶ್ನಿಸಬೇಕಿತ್ತು.

ಶಾರದ ಮಾತ್ರವಲ್ಲ ಇನ್ನು ನಾಲ್ಕು ಜನ ಕೊಲೀಗ್ಸ್ ಕೂಡ ನರ್ಸಿಂಗ್ ಹೋಂನಲ್ಲಿದ್ದರು ಶಾಂತ ಜೊತೆಯಲ್ಲಿ. ನಿದ್ದೆಯ ಮಾತ್ರೆಗಳನ್ನು ನುಂಗಿದ್ದ ಲಕ್ಷ್ಮಿ ಸಾವು, ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದಳು. ವಿಷಯ ಮುಟ್ಟಿ ಬಂದ ಪಾರ್ವತಿ ಒಂದು ಕಡೆ ಕೂತುಬಿಟ್ಟಳು ವಿಗ್ರಹದಂತೆ. ಅವಳಮ್ಮನದು ಒಂದೇ ಅಳು.

"ಸಮಾಧಾನ ಮಾಡ್ಕೊಳ್ಳಿ" ಶಾರದ ಹೋಗಿ ಅವರ ಪಕ್ಕ ಕೂತಳು. "ಹೇಗೆ, ಸಮಾಧಾನ ಮಾಡ್ಕೊಳ್ಳಿ, ಆ ಮನುಷ್ಯ ತಲೆ ತಪ್ಪಿಸಿಕೊಂಡ್ ಹೋಗ್ಬಿಟ್ಟ. ಪಾರ್ವತಿ ಒಂಟಿತನ ಆರ್ಸಿಕೊಂಡ್ಲು, ನಮ್ಗೆ ಇಷ್ಟವಿಲ್ಲದಿದ್ರೂ.. ರಂಗೇಗೌಡರನ್ನು ವಿವಾಹವಾದ್ರೂ ಅವ್ಳಿಗೆ ವೈವಾಹಿಕ ಜೀವನ ಸಿಕ್ತಾ ? ಇವ್ಳಿಗೆ ಗಂಡಿನ ಅನ್ವೇಷಣೆಯಲ್ಲಿದ್ದೆ. ಇವ್ಳು ನಿದ್ದೆ ಮಾತ್ರೆಗಳ್ನ ನುಂಗಿಕೊಂಡಿದ್ದಾಳೆ" ಈ ಘಟನೆಯ ಹಿಂದು, ಮುಂದಿನ ವಿಚಾರವನ್ನೆಲ್ಲ ಒದರಿ ಸಂಕಟ ತೋಡಿಕೊಂಡರು.

ಹತ್ತಿರಕ್ಕೆ ಬಂದ ಶಾಂತ "ನಾವಿಬ್ರೂ ನಮ್ಮಮ್ಮನ ದೃಷ್ಟಿಯಲ್ಲಿ

ಅಪ್ರಯೋಜಕರು. ನಾವು ಒಂದೊಂದು ಮೂರು ನಾಲ್ಕು ಹೆತ್ತು ಭಾರತದ ಜನಕೋಟಿಗೆ ಕೊಡುಗೆಯಾಗಿ ನೀಡಬೇಕಿತ್ತು" ಸಿಡುಕಿದಳು. ಜಲಜಮ್ಮ ಕಣ್ಣು, ಮೂಗೊರೆಸಿಕೊಳ್ಳುತ್ತ ಕಾರಿಡಾರ್‌ನ ಉದ್ದಕ್ಕೂ ನಡೆದುಕೊಂಡು ಹೋದರು.

"ಮಾತು ಕಟುವಾಯಿತೇನೋ !" ಎಂದಳು ಶಾರದ.

"ಸಾಕಾಗಿದೆ ಶಾರದ ! ಮೂರ್ಹೊತ್ತು ಇದೇ ಮಾತುಗಳು ಮನೆಯಲ್ಲಿ. ಅವ್ವೇನೋ ಒಂಟಿಯಾಗಿದ್ದಾಳೆ ಮೈಸೂರಿನಲ್ಲಿ. ಇಲ್ಲಿ ನನ್ನ ಪ್ರಾಣ ತೆಗೀತಾರೆ. ನಾನು ಮನೆ ಬಿಟ್ಟು ಹೋಗೋಳೇ" ಯಾವುದೋ ಒಂದು ಉದ್ದೇಶವಿಟ್ಟುಕೊಂಡೇ ಈ ತೀರ್ಮಾನಕ್ಕೆ ಬಂದಂತೆ ನುಡಿದರು.

ನಿಮಿಷ ನಿಮಿಷಕ್ಕೂ ವಿಷಮಿಸುತ್ತಿದ್ದ ಲಕ್ಷ್ಮೀ ಆರೋಗ್ಯ ಸ್ವಲ್ಪ ಸುಧಾರಿಸಿದ್ದು ರಾತ್ರಿಯು ಎಂಟರ ನಂತರವೇ. ತಿಳಿದ ಎಷ್ಟೋ ವಿದ್ಯಾರ್ಥಿಗಳು ಗುಂಪು ಕೂಡಿಕೊಂಡು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದರು.

"ಇನೇನು ಪರ್ವಾಗಿಲ್ಲ ! ಒಂದೆರಡು ದಿನದಲ್ಲಿ ಚೇತರಿಸ್ಕೋತಾರೆ" ಎಂದು ಡಾಕ್ಟರ್ ಭರವಸೆ ಕೊಟ್ಟ ಮೇಲೆ ಒಬ್ಬೊಬ್ಬರಾಗಿ ಖಾಲಿಯಾದರು. "ಶಾರದ, ನಂಗೊಂದು ಹೆಲ್ಪ್ ಮಾಡು. ಅಮ್ಮನ್ನ, ಅಕ್ಕನ್ನ ಮನೆಗೆ ಕರ್ಕೊಂಡ್ಹೋಗಿ ಬಿಟ್ಟು ನೀನು ಮನೆಗೆ ಹೋಗು. ಇಲ್ಲಿ ಲಕ್ಷ್ಮಿ ಹತ್ರ ನಾನೊಬ್ಳು ಇರ್ತೀನಿ" ಎಂದಳು.

ಬಹಳ ಬಲವಂತದಿಂದಲೇ ಕೊಲೀಗ್ ಶಾರದಪ್ರಸಾದರ ಫಿಯೆಟ್ ಕಾರು ಹತ್ತಿಸಿದ್ದು ಮೂವರನ್ನು. ಅಮ್ಮ ಮಗಳನ್ನು ಮನೆಯಲ್ಲಿ ಬಿಟ್ಟು ಧೈರ್ಯಹೇಳಿ ಶಾರದ ಪ್ರಸಾದರ ಕಾರಿನಿಂದ ಇಳಿದಾಗ ಮನೆಯ ಮುಂದೆ, ರಾತ್ರಿ ಹೊತ್ತು ಕಾಶೀಪತಿಗಳು ತಮ್ಮ ಗೆಳೆಯನ ಮಗಳ ಮದುವೆಗಾಗಿ ಮೈಸೂರಿಗೆ ಹೋಗಿದ್ದರು. ಮನೆಯಲ್ಲಿ ಇವರಿಬ್ಬರ ಜೊತೆ ಇದ್ದಿದ್ದು ಗೋಪಿ ಮಾತ್ರ.

ಮನೆಯಲ್ಲಿ ಎಲ್ಲಾ ದೀಪಗಳು ಆರಿದ್ದವು.

ಕಾಲಿಂಗ್ ಬೆಲ್ ಒತ್ತಿದಾಗ ಎಚ್ಚರವಾಗಿಯೇ ಇದ್ದ ಗೋಪಿ ಬಂದು ಬಾಗಿಲು ತೆರೆದವನ ಮುಖದಲ್ಲಿ ಧಾವಂತ. ರೂಮಿಗೆ ಬಂದಾಗ ಮಂಕಾದ ಕಿತ್ತಲೆ ಮಂದ ಬೆಳಕು ಪ್ರಸರಿಸಿತ್ತು. ವಸಂತ ನಿದ್ದೆ ಮಾಡದಿದ್ದರೂ ನಟಿಸಿದ. ಒಂದೇ ಒಂದು ಮಾತಿನಲ್ಲಾದರೂ ಲಕ್ಷ್ಮಿಯು ಬಗ್ಗೆ

ವಿಚಾರಿಸುತ್ತಾನೆಂದುಕೊಂಡಳು. ಅದು ಸಹಜ, ಸ್ವಾಭಾವಿಕ. ಅದು ಕೂಡ ವಸಂತನಲ್ಲಿ ನಾಶವಾದ ಹಾಗೇ ಕಂಡಿತು.

ಬಾತ್‌ರೂಮಿಗೆ ಹೋಗಿ ಬಂದು ಬಟ್ಟೆ ಬದಲಾಯಿಸಿ ಹೊರಗೆ ಬಂದಾಗ ಗೋಪಿ ನಿಂತಿದ್ದ "ಅಕ್ಕ, ಅಣ್ಣಾವರದು ಊಟ ಆಯ್ತು. ನಿಮ್ಗೆ ತಟ್ಟೆ ಹಾಕಿದ್ದೀನಿ, ಬನ್ನಿ" ಹೇಳಿದ. ಆ ಸಮಯದಲ್ಲಿ ಅದು ಹಿತವೆನಿಸಿತು.

ಬೆಳಿಗ್ಗೆ ಮನೆ ಬಿಟ್ಟಾಗ ಒಂಬತ್ತರ ಸಮಯದಲ್ಲಿ ಇಡ್ಲಿ, ವಡೆ ತಿಂದಿದ್ದಷ್ಟೆ, ನಂತರ ಇದರವರೆಗೂ ನೀರು ಕೂಡ ಕುಡಿಯುದಿದ್ದರಿಂದ ಹೊಟ್ಟೆ ಹಸಿಯುತಿತ್ತು. ಸದ್ದಿಲ್ಲದೆ ಎದ್ದು ಡೈನಿಂಗ್ ಹಾಲ್‌ಗೆ ಹೋದಳು.

ಬಿಸಿ ಹುರುಳಿಕಾಯಿ ಪಲ್ಯ ಬಿಡಿಸಿ, ಅನ್ನ ಹಾಕಿದ ಗೋಪಿಯ ಮುಖ ನೋಡಿದಳು. ಕೆಲಸದ ಹುಡುಗ, ಇವನು ಮಾಡಿದ ಕೆಲಸಕ್ಕೆ ಅವನಪ್ಪ ಸಂಬಳ ತೆಗೆದು ಕೊಳ್ಳುತ್ತಿದ್ದ, ಅಷ್ಟೆ ಅವನ ಈ ಮನೆಯ ಸಂಬಂಧ, ಆದರೆ ಎಂಥ ಅಂತಃಕರಣ.

ಅನ್ನದ ಮೇಲೆ ಬೆರಳಾಡಿಸುತ್ತಿದ್ದಾಗ ಸಂಕಟದಿಂದ ಒದ್ದಾಡುತ್ತಿದ್ದ ಲಕ್ಷ್ಮಿಯ ಮುಖವೆ ನೆನಪಿಗೆ ಬಂತು. ಅವಳಿಗೆ ಆತ್ಮಹತ್ಯೆ ಮಾಡಿಕೊಳ್ಳುವಂತ ಸಮಸ್ಯೆ ಏನಿತ್ತು? ಆರ್ಥಿಕವಾಗಿ ಚೆನ್ನಾಗಿದ್ದರು. ಓದಿಲ್ಲದಿದ್ದರೇನು, ಸುಂದರವಾದ ರೂಪವಿತ್ತು. ಒಂದು ಐದು ಲಕ್ಷ ಕೊಟ್ಟಾದರೂ ಒಬ್ಬ ಡಾಕ್ಟರನ್ನೋ, ಇಂಜಿನಿಯರನ್ನೋ ಖರೀದಿಸುವ ಬಗ್ಗೆ ಅವಳಮ್ಮ ಮಾತಾಡಿದ್ದರು. ಮತ್ತೆ 'ಲವ್ ಅಫೇರ್ಸ್' ಏನಾದರೂನಾ? ಅದು ಕೂಡ ಅವಳ ಮಿದುಳಿನಲ್ಲಿ ಹಾದು ಹೋಯಿತು.

"ಅಕ್ಕ, ಹುಳಿ ಬಡಿಸಲಾ ? ಸಾರು ಬಡಿಸಲಾ ?" ಎಂದಾಗ ಅವಳು ಅಲ್ಲಿಂದ ಇಲ್ಲಿಗೆ ಮರಳಿದ್ದು. "ಸಾರು ಸಾಕು" ಅಂದಳು. ಒಂದು ತುತ್ತು ಬಾಯಿಗಿಟ್ಟ ನಂತರವೇ ಗೋಪಿಯತ್ತ ನೋಟ ಹರಿಸಿದ್ದು "ನಿಂದು ಊಟ ಆಯ್ತಾ ?"

ಇಲ್ಲವೆಂದು ತಲೆಯಾಡಿಸಿದ.

"ನಿಮಗೋಸ್ಕರ ಕಾಯ್ತ ಇದ್ದೆ. ಇವತ್ತು ತುಂಬ ಲೇಟಾಗಿ ಬಂದ್ರಿ". ಅವನ ಮಾತಿಗೆ ಪ್ರತಿಕ್ರಯಿಸದೇ "ಯಾಕೆ ಕಾಯ್ತೀಯಾ ? ನಂಗೆ ಏನಾದ್ರೂ ಬೇಕಾದಾಗ ಬಡಿಸ್ಕೋತೀನಿ ನೀನು ತಟ್ಟೆ ಹಾಕ್ಕೋ" ಹೇಳಿದಳು. ಅವಳಿಗೆ ಅಷ್ಟು ಅನ್ನ ಸಾಕಾಯಿತು, ಗೋಪಿಗೆ ತಾನೇ ಬಡಿಸಿದಳು.

ಎರಡು ಸಲ ರೂಮಿಗೆ ಬಂದಳು. ಮೈ ಹಂಚಿಕೊಳ್ಳಲು ಬಯಸುವ ಸಂಗಾತಿ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳಲಾರ. ಅವನೊಂದಿಗೆ ಕೆಲವು ಮಾತು, ವಿಷಯಗಳನ್ನು ಕೂಡ ಹಂಚಿಕೊಳ್ಳಲಾರದ ಸ್ಥಿತಿಗೆ ತಂದಿದ್ದ ಯಾಕೆ ?

ಬಂದು ಮಂಚದ ಅಂಚಿಗೆ ಉರುಳಿಕೊಂಡಾಗ ಎದ್ದು ಕೂತವನು ವಾಚ್‌ನಲ್ಲಿ ಟೈಮ್ ನೋಡಿ "ಇದು ಮನೆಗೆ ಬರುವ ಸಮಯವಾ ? ನಾನೇನು ನೈಟ್ ಡ್ಯೂಟಿ ಮಾಡಿ ಬರೋಕೆ ಡಾಕ್ಟರಲ್ಲ, ಜುಜುಬಿ ನೀನು ಪಾಠ ಹೇಳೋ ಕೆಲ್ಸ ಮಾಡ್ತಾ ಇರೋದು. ನಿನ್ನ ನೀನು ಏನೂಂತ ತಿಳ್ಕೊಂಡೇ" ತೋಳೇರಿಸಿ ಜಗಳಕ್ಕೆ ಸಿದ್ಧವಾದ ಮೂಡ್‌ನಲ್ಲಿ ಮಾತಾಡಿದ.

"ನಾನು ಲೇಟಾಗಿ ಬಂದಿರೋಕೆ ಕಾರಣ ತಿಳಿದಿದೆ. ನಾನು ತುಂಬ... ತುಂಬ ಇಷ್ಟಪಟ್ಟು ಆರಿಸಿಕೊಂಡಿರೋ ಪಾಠ ಹೇಳೋ ಕೆಲ್ಸದ ಬಗ್ಗೆ ನಂಗೆ ಅತ್ಯಂತ ಗೌರವ, ಅಭಿಮಾನ. ಆ ಬಗ್ಗೆ ಇನ್ನೊಂದ್ಮಾತು ಬೇಡ" ದಿಂಬಿಡಿದು ಪಕ್ಕದ ರೂಮಿನಲ್ಲಿ ಹೋಗಿ ಮಲಗಿಬಿಟ್ಟಳು.

ಬಿಕ್ಕಿ ಬಿಕ್ಕಿ ಅತ್ತಳು. ಎಲ್ಲಿಂದ... ಎಲ್ಲಿಗೆ ? ತಾನು ತತ್ವ ಶಾಸ್ತ್ರ ಪ್ರೊಫೆಸರ್ ಆದ ಆನಂದರಾವ್ ಮಗ್ಳು, ಇಷ್ಟಪಟ್ಟು ಆಯ್ಕೆ ಮಾಡಿಕೊಂಡ ವಿಷಯ, ವೃತ್ತಿ, ಸೇತುರಾಮ್ ಎಷ್ಟು ಪ್ರೋತ್ಸಾಹಿಸುತ್ತಿದ್ದರು. ಆದರೆ ಈ ಮನುಷ್ಯ...... ಅವಳ ಅವುಡುಗಳು ಬಿಗಿದುಕೊಂಡವು. ಅವಮಾನ ತಾಳಲಾರದೆ ಚಡಪಡಿಸಿದಳು. ಸೌಮ್ಯತೆ ಬೆಳೆದ ವಾತವರಣ ಅವಳನ್ನು ತಾಳ್ಮೆ ತಪ್ಪದಂತೆ ಕಾಪಾಡಿತು.

ಬೆಳಿಗ್ಗೆ ಕಾಫಿ ಒಯ್ದು ಇಟ್ಟವಳು ರೂಮಿನತ್ತ ತಲೆ ಹಾಕಲಿಲ್ಲ. ವಸಂತ ಡೈನಿಂಗ್ ಹಾಲ್‌ಗೆ ಬಂದ. ಇಡ್ಲಿ, ವಡೆಯನ್ನು ಬಡಿಸಿ, ಇನ್ನೊಂದು ತಟ್ಟೆಗೆ ಹಾಕಿಕೊಂಡಳು. ಫೋನ್ ಸದ್ದು ಮಾಡಿತು. ಟೇಬಲ್ ಮೇಲಿದ್ದ ಕಾರ್ಡ್‌ಲೆಸ್ ಫೋನನ್ನು ಕಿವಿಯ ಬಳಿಗೆ ಒಯ್ದವನು ಅವಳತ್ತ ತಳ್ಳಿದ.

"ಹಲೋ ಶಾರದ, ಐಯಾಮ್ ಎವರ್ ಗ್ರೇಟ್‌ಫುಲ್ ಟು ಯು. ಈಗ ಒಂದತ್ತು ಪರ್ಸೆಂಟ್ ಅಷ್ಟು ಚೇತರ್ಸಿಕೊಂಡಿದ್ದಾಳೆ ಲಕ್ಷ್ಮೀ...." ಒಂದೇ ಸಮನೆ ಮೂರು ನಿಮಿಷಗಳ ಮಾತಾಡಿದ ನಂತರವೇ ಫೋನ್ ಇಟ್ಟಿದ್ದು. ಅಷ್ಟು ಮಾತುಗಳ ನಡುವೆ 'ಹಾ' 'ಹ್ಞೂ' ಎಂದಿದ್ದಳಷ್ಟೆ. ಇದನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸಿದ್ದನೆಂದರೆ ಅವಳ ಮುಖಭಾವದಿಂದಲೇ ಹೇಳಿದ್ದನ್ನು ಮನದಲ್ಲಿ ಲೆಕ್ಕ ಹಾಕಿದ್ದ.

ಬಿಕ್ಕುತ್ತಿದ್ದ, ಹೊರಳಾಡುತ್ತಿದ್ದ ಲಕ್ಷ್ಮಿಯ ನೆನಪಿನಿಂದ ಅವಳಿಗೆ ಏನು ತಿನ್ನಬೇಕೆನಿಸಲಿಲ್ಲ. ಇಡ್ಲಿಗಳನ್ನು ತೆಗೆದು ಹಾಟ್ ಬಾಕ್ಸ್‌ಗೆ ಹಾಕಿದಾಗ, ಅವನಿಗೆ ರೇಗಿತು.

"ಯಾಕೆ, ತಿಂಡಿ ಬೇಡ್ವಾ ?" ಕೇಳಿದ.

"ತಿನ್ನಬೇಕೂಂತ ಅನ್ನಿಸ್ತಾ, ಇಲ್ಲ" ನಿಟ್ಟುಸಿರು ಚೆಲ್ಲಿದಳು.

ಕಾಫಿಯನ್ನು ಬೆರೆಸಿಕೊಂಡಾಗ "ಯಾರ್‍ದು.... ಫೋನ್ ?" ಅವನಿಗೆ ಗೊತ್ತಿದ್ದರೂ ಸುಮ್ಮನಿರುವ ಮನಸ್ಸತ್ವ ವಸಂತನದಲ್ಲ.

"ಪ್ರೊಫೆಸರ್ ಶಾಂತದು" ಅಷ್ಟೆ ಅಂದಿದ್ದು.

"ಶಾಂತ ಅಂದರೇ ಪ್ರೋಫೆಸರ್ ರಂಗೇಗೌಡರ ಮೊದಲ ಪತ್ನಿ. ಈಗ ಮಾಜೀ, ಏನು ವಿಷ್ಯ ?" ಪ್ರಶ್ನಿಸಿದ.

ತಾಳ್ಮೆ ಕಳೆದುಕೊಳ್ಳದೇ ಎರಡೇ ವಾಕ್ಯದಲ್ಲಿ ಇಡೀ ಪ್ರಕರಣವನ್ನು ಹೇಳಿ ಮುಗಿಸಿದಾಗ ಅವನಿಗೆ ತೃಪ್ತಿಯಾಗಲಿಲ್ಲ.

"ಎರಡು ನಿಮಿಷ ಎಪ್ಪತ್ತು ಸೆಕೆಂಡ್ ಮಾತಾಡಿದ್ರಲ್ಲ" ಬರೆ ಎಳೆದಂತೆ ಹೇಳಿದ "ಆ ಹುಡ್ಗಿ ದೇಹಸ್ಥಿತಿಯ ಬಗ್ಗೆ ಹೇಳಿದ್ದರಷ್ಟೆ" ಕಾಫಿ ಕಪ್ ಎತ್ತಿಕೊಂಡು ಮೇಲೆದ್ದಳು.

"ನಿಂಗೆ ತಿಂಡಿ ಬೇಡದೇ ಇರ್ಬಹ್ದು. ನಂಗೆ ಮನೆ ತಿಂಡಿಯೇ ಇಷ್ಟ. ಕಟ್ಟಿಕೊಂಡವನು ತಿನ್ನೋವರೆಗಾದರೂ ಕೂತ್ಕೋಬಹುದಲ್ಲ. ಇದು ನಮ್ಮ ದೇಶದ ಕಲ್ಚರ್" ಎಂದ.

ಬೆರಗುಗಣ್ಣಿಂದ ಅವನತ್ತ ನೋಡಿದಳು. ಈ ಮನುಷ್ಯನಿಗೆ ಕಲ್ಚರ್ ವಿಷಯ ತಿಳಿದಿದೆಯೆ ಎನಿಸಿತು. ಮೌನವಾಗಿ ಕೂತಳು. ತುಟಿಯ ಬಳಿಗೆ ಒಯ್ದು ಕಾಫೀ ಕಹಿಯೋ... ಕಹಿ. ಇನ್ನೆರಡು ಸ್ಪೂನ್ ಸಕ್ಕರೆ ಹಾಕಿ ತಿರುವಿದಳು. ಬಾಯೆಲ್ಲ ಸಕ್ಕರೆಮಯವಾಯಿತೇ ವಿನಃ ರುಚಿಯೆನಿಸಲಿಲ್ಲ.

"ಎಲ್ಲಿದೆ, ನಿನ್ನ ಜ್ಞಾನ ? ಎರ್‍ಡು ವಡೆ ಹಾಕು. ನಿನ್ನಂಥವರಿಗೆ ವಿವಾಹದ ಅಗತ್ಯ ಇರ್‍ಲಿಲ್ಲ" ಎಂದ ಚಾಟಿಯೇಟಿನಂತಿತ್ತು ಅವನ ಮಾತು.

ಶಾರದಳ ಕಣ್ಣಲ್ಲಿ ನೀರಾಡಿತು. ಕನಿಷ್ಟ 'ಯಾಕೆ ಹೀಗಿದ್ದೀಯಾ ?' ಎಂದು ಪ್ರಶ್ನಿಸದ ಅವಳ ಮನದ ನೋವು, ನಲಿವಿಗೆ ಸ್ಪಂದಿಸದ ವೈವಾಹಿಕ ಜೀವನ ತೀರಾ ಹಾಸ್ಯಾಸ್ಪದವಾಗ ಕಂಡಿತು. ಇಲ್ಲಿ ತನ್ನದೇನಾದರೂ ತಪ್ಪಿದೆಯಾ, ಎಂದು ಯೋಚಿಸಿದಳು.

ಕಾಫಿಯನ್ನು ಒಯ್ದು ಸಿಂಕ್‌ನಲ್ಲಿ ಸುರಿದು ಬಂದು "ನಂಗೆ ಕಾಲೇಜಿಗೆ ಹೊತ್ತಾಯ್ತು. ನೀವು ನಿಧಾನವಾಗಿ ತಿಂಡಿ ಮುಗ್ಸಿ, ವಿವಾಹವಾದ್ಮೇಲೆ ಕೆಲ್ಸಕ್ಕೆ ಜಾಯಿನ್ ಆಗಿಲ್ಲ. ಇದು ನಿಮ್ಮ ತಲೆಯಲ್ಲಿ ಇರ್ಲಿ" ಎಂದು ದನಿಯೇರಿಸದೆ ಹೇಳಿದವಳು ನಿಧಾನವಾಗಿ ಸರಿದು ಹೋದಳು.

ಆಟೋದಲ್ಲಿ ನರ್ಸಿಂಗ್ ಹೋಂಗೆ ಹೋದಾಗ ಶಾಂತ ಅಲ್ಲಿಯೇ ಇದ್ದರು. ಹಗಲು, ಒಂದು ರಾತ್ರಿ ಆಕೆಯ ಆಯಸ್ಸಿನಲ್ಲಿ ಹತ್ತು ವರ್ಷವನ್ನು ಕಬಳಿಸಿದಂತಿತ್ತು.

"ಲಕ್ಷ್ಮೀ ಪ್ರಾಣಕ್ಕೆ ಭಯವಿಲ್ಲವೆಂದ್ರು. ಆದ್ರೂ ಅವ್ಳು ಚೇತರಿಸಿಕೊಳ್ಳಲು ತಿಂಗಳಾದ್ರೂ ಬೇಕೂಂತ ಅನ್ನಿಸುತ್ತೆ. ಚಿಕ್ಕವಳೂಂತ ಎಲ್ಲಾ ಚೆನ್ನಾಗಿಯೇ ನೋಡ್ಕೋತಾ ಇದ್ವಿ. ಅಮ್ಮನ ಗೊಣಗಾಟ ಮಾಮೂಲೆ. ಅವ್ಳ ಸಮಸ್ಯೆ ಏನೂಂತ ನಮ್ಮಲ್ಲಿಯಾದ್ರೂ.... ಹೇಳ್ಬೇಕಿತ್ತು" ಕಣ್ಣಂಚಿಗೆ ಬಂದ ಕಂಬನಿಯನ್ನು ತೊಡೆದುಕೊಂಡರು.

ಅಲ್ಲಿಂದ ಹಾಗೆಯೇ ಕಾಲೇಜಿಗೆ ಹೋಗಿದ್ದು. ಎರಡು ಪಿರಿಯಡ್ ಮುಗಿಸುವ ವೇಳೆಗೆ ಹೊಟ್ಟೆಯಲ್ಲಿ ಸಂಕಟ, ಒಂದು ರೀತಿಯ ಡಿಪ್ರೆಷನ್. ಜವಾನನ ಕೈಯಲ್ಲಿ ಕಾಫೀ ತರಿಸಿ ಕುಡಿದ ನಂತರ ಸ್ವಲ್ಪ ಆರಾಮೆನಿಸಿದರೂ, ಮನೆಗೆ ಹೋಗಿಬಿಡುವುದು ಸೂಕ್ತವೆನಿಸಿತು. ಇದ್ದ ಇನ್ನೊಂದು ಪಿರಿಯಡ್ ಮುಗಿಸಿಕೊಂಡು ಮನೆಗೆ ಬರುವಾಗ ಸದ್ಯ ವಸಂತ ಮನೆಯಲ್ಲಿ ಇಲ್ಲದಿದ್ದರೇ ಸಾಕೆನಿಸಿತು. ನೆನಪುಗಳು ಮನ ಅರಳಿಸಬೇಕಿತ್ತು. ಅವನ ದನಿಗಾಗಿ ಹಂಬಲಿಸಬೇಕಿತ್ತು. ತೋಳುಗಳಲ್ಲಿ ಹುದುಗಬೇಕೆಂಬ ಹಾತೊರಿಕೆ ಬೇಕಿತ್ತು-ಅಂಥ ಯಾವ ಭಾವನೆಗಳು ಅವಳಲ್ಲಿ ಮೂಡಲಿಲ್ಲ.

ಹಾಲ್‌ನಲ್ಲಿದ್ದ ಸೋಫಾ ಮೇಲೆ ಸುಸ್ತಾದಂತೆ ಒರಗಿದಳು.

"ಅಕ್ಕ, ಯಾಕೆ ಸುಸ್ತಾಗಿದ್ದೀರಾ ? ಹುಷಾರಾಗಿದ್ದೀರಾ ತಾನೇ ? ಜೂಸ್..... ತರ್ತೀನಿ" ಇವಳು ಏನಾದರೂ ಹೇಳುವ ಮುನ್ನ ಗೋಪಿ ಓಡಿದ. ಮತ್ತೆ ಕಣ್ಣು ಮುಚ್ಚಿಕೊಂಡಳು.

"ಶಾರದ....." ಕಾಶೀಪತಿಗಳ ದನಿ.

ಕಣ್ಣು ತೆರೆದು ಎದ್ದು ನಿಂತಾಗ ಆತಂಕದಿಂದ ನೋಡಿದಳು. "ಯಾವಾಗ್ಬಂದ್ರಿ ?" ಎಂದವಳು. ನೂರು ಪ್ರಶ್ನೆ ಮಾಡುವ ಮುನ್ನ ಹಿಂದಿನ ದಿನದ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸಿದಾಗ, ಅವರ ಮನದ ಆತಂಕ ಸ್ವಲ್ಪ ಮಟ್ಟಿಗಾದರೂ ಕಮ್ಮಿ ಆಯಿತು.

"ಈಗ ಹೇಗಿದ್ದಾಳೆ ? ಎಷ್ಟೊಂದು ದುಡುಕಿನ ಹುಡ್ಗಿ" ಸಂತಾಪ ವ್ಯಕ್ತಪಡಿಸಿದರು. "ಇಂಥ ಸಮಯದಲ್ಲಿ ಸಾಂತ್ವನ, ಧೈರ್ಯ ನೀಡುವಂಥ ಜನ ಹತ್ತಿರ ಇರಬೇಕಾಗುತ್ತೆ. ನಾನು, ನೀನು ಒಮ್ಮೆ ಹೋಗ್ಬರೋಣ. ಬೆಳಿಗ್ಗೆ ತಿಂಡಿ ಕೂಡ ತಿಂದು ಹೋಗ್ಲಿಲ್ಲಾಂತ ಗೋಪಿ ಹೇಳ್ದ. ಮೊದ್ಲು ಊಟ.... ಆಮೇಲೆ ಮಿಕ್ಕದ್ದು" ಎಬ್ಬಿಸಿಕೊಂಡು ಹೋದವರು ಅಲ್ಲಿಗೆ ಈ ವಿಷಯ ಬಿಟ್ಟರು.

ಮದುವೆಯ ಮನೆಯಲ್ಲಿನ ಗೊಂದಲಗಳನ್ನು ತಮಾಷೆ ರೂಪದಲ್ಲಿ ಹೇಳಿ ಅವಳನ್ನು ನಗಿಸಿದಳು. ಒಂದಿಷ್ಟು ಮೋಡಗಳು ಚದುರಿದಂತಾಯಿತು. ಸಂಜೆ ಅಥವಾ ರಾತ್ರಿ ಇವರಿಬ್ಬರು ನರ್ಸಿಂಗ್ ಹೋಂಗೆ ಹೋಗುವ ನಿರ್ಧಾರವಾಯಿತು.

ಸಂಜೆ ಐದಕ್ಕೆ ಬಂದ ವಸಂತ ಸ್ವಲ್ಪ ಖುಷಿಯಾಗಿದ್ದ. ಮುಖದ ಗಂಟು ಒಂದಿಷ್ಟು ಸಡಿಲವಾಗಿತ್ತು. ತಂದೆಯೊಂದಿಗೆ ಒಂದಿಷ್ಟು ಮಾತಾಡಿದ. ಆಗಾಗ ಕೃಪಾ ಭಿಕ್ಷೆಯೆನ್ನುವಂತೆ ಮಡದಿಯತ್ತ ನೋಟ ಹರಿಸಲು ಷುರುವಾದಾಗ ತಣ್ಣನೆ ಎದ್ದು ಹೋದಳು.

ಹಿಂದೆಯೇ ರೂಮಿಗೆ ಬಂದ.

"ನನ್ನ ಮಾತೂಂದರೇ ನಿನಗೆ ಕಹಿನಾ ? ಎಷ್ಟೊಂದು ಕೆಲ್ಸ ಇತ್ತು, ಆದ್ರೂ ನಿಂಗೋಸ್ಕರ ಮನೆಗೆ ಬಂದೆ. ಕೈ ಹಿಡಿದವರ್ನ ಹೇಗೆ ನಡ್ಸಿಕೋತಿದ್ದಾರೆ, ಗೊತ್ತಾ ಗಂಡಸರು ? ಎರಡೆರಡು ಸಂಸಾರಗಳ ಜೊತೆ ಕುಡಿತ, ಬಾರ್, ಕೆಟ್ಟ ಸ್ನೇಹಿತರು ಅಂಥ ಒಂದು ಅಭ್ಯಾಸವೂ ನಂಗಿಲ್ಲ. ನೀನು ಅದೃಷ್ಟ ಮಾಡಿದ್ದೆ. ಆ ಪ್ರಜ್ಞೆ ನಿಂಗೆ ಇರಬೇಕಿತ್ತು" ಆರ್ಭಟಿಸಿದ.

ಅವಳಿಗೆ ಚಪ್ಪಾಳೆ ಹೊಡೆಯಬೇಕೆನಿಸಿತು. ಅದು ಅವಳ ಸ್ವಭಾವವಲ್ಲ. ತಾನೊಬ್ಬ ಆದರ್ಶ ಪುರುಷನೆಂದು ಒತ್ತಿ ಹೇಳುತ್ತಿದ್ದ ಅವನನ್ನು ನೋಡಿ ಕನಿಕರಿಸಿತು. ಅವನದು ಬರೀ ಬಾಹ್ಯ ಪ್ರಪಂಚ. ಆಂತರಂಗಿಕವಾಗಿ ಯೋಚಿಸಲಿಲ್ಲ. ಕ್ರಿಯೆ, ಕಾರ್ಯ ಮುಖ್ಯವೇ ವಿನಃ ಉದ್ದೇಶದ ಕಡೆ ಅವನ ಗಮನವಿಲ್ಲ.

ಶಾರದ ಮೌನವಹಿಸಿದಳು. ತನ್ನ ಮಾತುಗಳು ವಸಂತನಿಗೆ ಅರ್ಥವಾಗದು; ಅಂಥ ಪ್ರಯತ್ನ ಕೂಡ ಮೂಡದು.

"ಈಗ ಷಾಪಿಂಗ್‌ಗೆ ಹೋಗ್ತಾ ಇದ್ದೀವಿ" ಅಧಿಕಾರದಿಂದ ಹೇಳಿದ. ಅವಳಿಗೆ ಈಗಾಗಲೇ ಷಾಪಿಂಗ್‌ನ ಅನುಭವವಾಗಿತು. ಅವಳಿಗೆ

ಇಷ್ಟವಾಗದನ್ನೆ ಖರೀದಿಸುವುದು ಅವನ ಹಾಬಿ. 'ಆಯ್ಕೆ ನಿನ್ನದೇ' ಎಂದು ಅವಳಿಗೆ ಮಾತಿನಲ್ಲಿ ಹೇಳಿ ಬಲವಂತ ಮಾಡುತ್ತಿದ್ದ. ಅಕಸ್ಮಾತ್ ಯಾವುದಾದರೂ ಆಯ್ಕೆ ಮಾಡಿದಾಗ ಟೀಕಿಸುತ್ತಿದ್ದ, ಅವಳ ಬುದ್ಧಿವಂತಿಕೆಯನ್ನು ಅವಹೇಳನ ಮಾಡುತ್ತಿದ್ದ.

"ನಾನು ಹೇಳಿದ್ದು.... ಕೇಳಿಸ್ತಾ ?" ಕೇಳಿದ ಮತ್ತೆ.

ಆ ಪ್ರಶ್ನೆಗೆ ಉತ್ತರಿಸಲಿಲ್ಲ "ನಾನು, ಅಂಕಲ್ ನರ್ಸಿಂಗ್ ಹೋಂಗೆ ಹೋಗ್ತಾ ಇದ್ದೀವಿ, ಪ್ರೊಫೆಸರ್ ಶಾಂತ ಅವ್ರ ಸಿಸ್ಟರ್‌ನ ನೋಡೋ ಸಲುವಾಗಿ" ಶಾಂತವಾಗಿ ಹೇಳಿದಳು.

"ನಾನು ಸಂಜೆ ಪ್ರೋಗ್ರಾಂ ಫಿಕ್ಸ್ ಮಾಡಿದ್ದೀನಿ" ಅವನ ಸ್ವರದಲ್ಲಿ ಹಟವಿತ್ತು. ಪದೇ ಪದೇ ಮಾತಿನ ಘರ್ಷಣೆ ಅವನಿಗೆ ಇಷ್ಟವಿರಬಹುದು, ಆದರೆ ಅವಳಿಗಿಷ್ಟವಿಲ್ಲ.

"ಷಾಪಿಂಗ್‌ಗೆ ಯಾವಾಗ ಬೇಕಾದ್ರೂ ಹೋಗ್ಬಹುದು. ಎಲ್ಲರೂ ಕೂಡಿಯೇ ನರ್ಸಿಂಗ್ ಹೋಂಗೆ ಹೋಗೋಣ."

ಮಡದಿಯ ಮಾತಿಗೆ ಒಡಂಬಡುವುದು ಅವನ ಜಾಯಮಾನವಲ್ಲ. "ನಂಗಿಷ್ಟವಿಲ್ಲ, ನೀವುಗಳು ಬೇಕಾದ್ರೆ.... ಹೋಗಿ" ರೇಗಿದ. ಎದ್ದು ಹೊರ ಬಂದಳು.

ಮಾತು, ಸಾಂಗತ್ಯವೇನು, ಒಂದೇ ರೂಮಿನಲ್ಲಿ ವಸಂತನ ಜೊತೆ ಉಸಿರಾಡುವುದು ಕೂಡ ಶಾರದಾಗೆ ಕಷ್ಟವೆನಿಸಿತು.

ಕಾಶೀಪತಿಗಳು ರೆಡಿಯಾಗಿ ಹೊರಗೆ ಬಂದಾಗ ಹಾಲ್‌ನ ಸೋಫಾ ಮೇಲೆ ಕೂತಿದ್ದ ಶಾರದ ಮೇಲೆದ್ದಳು.

"ಹೋಗೋಣ್ವಾ ?" ಎಂದಾಗ ರೂಮಿನತ್ತ ನೋಟ ಹರಿಸಿ "ವಸಂತ.... ಬಂದಿಲ್ವಾ ?" ಕೇಳಿದರು.

"ಬಂದಿದ್ದಾರೆ, ರೆಸ್ಟ್ ತಗೋತಾ ಇದ್ದಾರೆ."

"ಅದೆಂಥ ರೆಸ್ಟ್ ! ಅವ್ನು ಬರಲೀ, ಒಟ್ಟಿಗೆ ಹೋಗ್ಬರೋಣ. ಸ್ವಲ್ಪ ಛೇಂಜ್ ಇರಲೀ. ಸದಾ ಕನ್‌ಸ್ಟ್ರಕ್ಷನ್‌ಗೆ ಸಂಬಂಧಪಟ್ಟ ವಿಷ್ಯಗಳೇ, ಜನಗಳೇ - ಭೋರೆದ್ದು ಹೋಗುತ್ತೆ" ಕಾಶೀಪತಿಗಳು ಸೂಚಿಸಿದರು.

ಅವರ ಸೂಚನೆಗೆ ಅನುಮೋದನೆ ಸಿಗುತ್ತದೆಯೆನ್ನುವ ನಂಬಿಕೆ ಶಾರದಾಳಿಗೆ ಇರಲಿಲ್ಲ. ಆದ್ದರಿಂದ ಅವಳ ಕಾಲುಗಳು ಮುಷ್ಕರ

ಹೂಡಿದವು. ಅರ್ಥವಾಯಿತು. ಕಾಶೀಪತಿಗಳಿಗೆ.

"ವಸಂತ... ವಸಂತ...." ಕೂಗಿದರು.

ಅವನು ಹೊರಬರಲು ಕನಿಷ್ಟವೆಂದರೆ ನಾಲ್ಕು ನಿಮಿಷಗಳಾದರೂ ಬೇಕಾಯಿತು. "ತಲೆ ನೋವು, ಮಲಗಿದ್ದೆ." ಅವನು ಕೊಟ್ಟ ಕಾರಣವಿಷ್ಟೆ. "ಆಯ್ತು ಮಲಗಿರು. ನಾನು ಶಾರದ ನರ್ಸಿಂಗ್ ಹೋಂಗೆ ಹೋಗ್ತಿರ್ತೀವಿ" ಹೇಳಿದರು ಕಾಶೀಪತಿಗಳು.

ಇವರುಗಳು ನರ್ಸಿಂಗ್ ಹೋಂಗೆ ಹೋದಾಗ ಶಾಂತ ಬದಲು ಅವರ ತಾಯಿ ಇದ್ದರು. ಲಕ್ಷ್ಮಿ ಇನ್ನು ಮಂಪರಿನಲ್ಲಿಯೇ ಇದ್ದಳು.

"ಇನೇನು ಪರ್ವಾಗಿಲ್ಲ, ಎಂದಿದ್ದಾರೆ" ಅಷ್ಟು ಹೇಳಿದರು.

'ನೀವೇನು ಬೇಡ, ನಾವು ನೋಡ್ಕೋತೀವಿ' ಎಂದು ಡಾಕ್ಟರ್ ಹೇಳಿದ್ದರಿಂದ ಆಕೆ ಬಲವಂತವಾಗಿ ಅವರನ್ನು ತಮ್ಮ ಮನೆಗೆ ಕರೆದೊಯ್ದರು. ವರಾಂಡದಲ್ಲಿದ್ದ ವಿರಾಮಾಸನದಲ್ಲಿ ಕೂತಿದ್ದ ಪಾರ್ವತಿನ ಶಾರದನೇ ಪರಿಚಯಿಸಿದಳು.

"ಮೈಸೂರು ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ವರ್ಕ್ ಮಾಡ್ತಾ ಇದ್ದಾರೆ" ಕೈ ಜೋಡಿಸಿದರು ಪಾರ್ವತಿ.

ಕಾಶೀಪತಿಗಳು ಎಲ್ಲೆಡೆ ನೋಟ ಹರಿಸಿದರು. ಸಂಪ್ರದಾಯತೆಯ ಜೊತೆಗೆ ಪ್ರಾಚೀನತೆ ಕೂಡ ಎದ್ದು ಕಾಣುತಿತ್ತು ಮನೆಯಲ್ಲಿ. ಕಪ್ಪು, ಬಿಳುಪಿನಲ್ಲಿ ತೆಗೆದ ಫೋಟೋಗಳು ಗೋಡೆಯ ಮೇಲೆಲ್ಲ. ನೆಲಕ್ಕೆ ಫಳಫಳ ಹೊಳೆಯುವ ಕೆಂಪನೆಯ ರೆಡ್ ಆಕ್ಸೈಡ್ ಅಂಚಿನಲ್ಲಿ ರಂಗೋಲಿಯ ಚಿತ್ತಾರ. ಪ್ರತಿಯೊಂದು ಹೊಸಲು, ಅದರ ಮುಂಭಾಗದಲ್ಲಿ ರಂಗೋಲಿ ಹಾಕಿದ್ದರು. ದೇವರ ಮನೆಯ ಮುಂದೆ ದೊಡ್ಡ ಹಸೆ. ಮನೆಯ ಮಧ್ಯದಲ್ಲೊಂದು ಉಯ್ಯಾಲೆ. ಅದಕ್ಕೆ ಹಾಕಿದ್ದ ಸರಪಣಿಗಳು ಎಷ್ಟು ಗಟ್ಟಿ ಮುಟ್ಟಾಗಿದ್ದವೆಂದರೆ ಇನ್ನೊಂದು ಶತಮಾನ ತೂಗಿದರೂ ಸವೆಯಲಾರದಂಥವು. ಇನ್ನೊಂದು ಕಡೆಯ ಗೋಡೆಯನ್ನು ಅಲಂಕರಿಸಿದ್ದ ರವಿವರ್ಮನ ದೇವ ದೇವತೆಗಳ ಚಿತ್ರಗಳು-ಅವೆಲ್ಲ ಒಂದು ಮುವತ್ತು ವರ್ಷವಾದರೂ ಹಿಂದಕ್ಕೆ ಕರೆದೊಯ್ದಿತು.

"ಕೂತ್ಕೊಳ್ಳಿ....." ದೊಡ್ಡ ಮರದ ವಿರಾಮಾಸನದ ಮೇಲಿದ್ದ ಟವಲನ್ನು ತೆಗೆದು ಹೇಳಿದರು. "ಮೊದಲಿಬ್ಬರಿಗೆ ಗಂಡ, ಸಂಸಾರಾಂತ ಆಗಿಲ್ಲ. ಅವ್ರುಗಳಿಗೆ ಹೊತ್ತಿಗೆ ಒಂದಿಷ್ಟು ಊಟ, ತಿಂಡಿ ಕೈಯಲ್ಲೊಂದು ಪುಸ್ತಕವಿದ್ರೆ...

ಆಗಿಹೋಯ್ತು" ತಮ್ಮ ಸಂಕಟ ತೋಡಿಕೊಂಡರು.

ಒದ್ದೆಯ ಕೂದಲನ್ನು ಕೊಡುವುತ್ತ ಬಂದ ಶಾಂತ "ಅವ್ರಿಗೆ ಅ ಯಿಂದ ಹಿಡಿದು ಅಂ, ಅಃ" ವರ್ಗ್ಗೂ ಹೇಳಿದ್ದೀನಿ. ಮತ್ತೆ ಮತ್ತೆ ಹೇಳೋದ್ಬೇಡ "ತಾಯಿಗೆ ತಾಕೀತು ಮಾಡಿ ಕಾಶೀಪತಿಗಳತ್ತ ಗಮನ ಹರಿಸಿದಳು."

ಒಳಗೆ ಹೋದ ಜಲಜಮ್ಮ ಒಂದು ತಟ್ಟೆಯ ತುಂಬ ಸಜ್ಜಪ್ಪ, ಇನ್ನೆರಡು ಹೆಸರು ತಿಳಿಯದ ತಿಂಡಿಗಳನ್ನು ತಂದಿಟ್ಟು ದೊಡ್ಡ ಸೈಜಿನ ಬೆಳ್ಳಿಯ ಲೋಟಗಳಲ್ಲಿ ನೀರು ತಂದಿಟ್ಟರು.

"ನೀವು ಬಂದಿದ್ದು ತುಂಬ.. ತುಂಬ.... ಸಂತೋಷ. ನಿಮ್ಮ ಮಗನ ವಿಷ್ಯವನ್ನು ನಮ್ಮ ಶಾಂತಳ ಬಾಯಿಂದ ಕೇಳಿದ್ದೆ. ತಂದೆಗೆ ತಕ್ಕ ಮಗಳು. ಸಾಕ್ಷಾತ್ ಶಾರದೆಯನ್ನು ನೋಡಿದಂತಾಗುತ್ತೆ" ಮೆಚ್ಚಿಗೆಯ ಮಾತಾಡಿದರು ಆಕೆ.

ತೀರಾ ಸಂಕೋಚವೆನಿಸಿತು ಶಾರದಾಗೆ. ತಂದೆ ಆನಂದರಾವ್ ಬಗ್ಗೆ ಮಾತಾಡಿದರೇ, ಹೆಮ್ಮೆಯೆನಿಸಿದಷ್ಟೆ ಅವಳ ಬಗ್ಗೆ ಹೊಗಳಿಕೆಯಾಡಿದಾಗ ಕುಗ್ಗುತ್ತಿದ್ಳು. ಅಧ್ಯಯನಕ್ಕಾಗಿಯೇ ಓದಿದವರು ಆನಂದರಾವ್. ಎಂಥ ವಾಗ್ಮಿ. ಶಿಕ್ಷಣ ಪದ್ಧತಿ, ಆರ್ಥಿಕ ನೀತಿ, ರಾಜ ನೀತಿ, ಸಮಾಜ ರಚನೆ, ಸಾಹಿತ್ಯರಚನೆ, ಕಲಾ ವಿಮರ್ಶೆ ಇಷ್ಟೆಲ್ಲ ವಿಷಯಗಳನ್ನು ಗಟ್ಟಿಯಾಗಿ ಮಾತನಾಡಬಲ್ಲ ಇನ್ನೊಬ್ಬ ವ್ಯಕ್ತಿಯನ್ನು ತಾನು ನೋಡಲೇ ಇಲ್ಲವೆಂದು ಕಾಶೀಪತಿಗಳು ಮಾತ್ರವಲ್ಲ, ಹಲವಾರು ಜನ ಹೇಳಿದ್ದನ್ನು ಕೇಳಿದ್ದಳು. ಅಷ್ಟು ಎತ್ತರಕ್ಕೆ ತಾನು ಕೂಡ ಏರಬೇಕೆಂಬ ಹುಮ್ಮಸ್ಸು ಅವಳಲ್ಲಿತ್ತು.

"ದಯವಿಟ್ಟು ಒಂದ್ಮಾತು, ಸೇತುಮಾಧವ್ ಈಚೆಗೆ ನ್ಯೂಯಾರ್ಕ್‌ನಲ್ಲಿ ತೀರಿಕೊಂಡ್ರು. ನಾನು ಆನಂದರಾವ್ ಸ್ನೇಹಿತ ಮತ್ತು ಶಾರದ ಮಾವ ಅಂದರೆ ಅವ್ಳ ಗಂಡನ ತಂದೆ" ಎಂದರು ಕಾಶೀಪತಿಗಳು ತುಂಬ ಮೃದುವಾಗಿ.

ಜಲಜಮ್ಮ ಹಣೆಗೆ ಕೈಯೊತ್ತಿ ಕೂತುಬಿಟ್ಟರು.

"ದಯವಿಟ್ಟು ಕ್ಷಮ್ಸಬೇಕು. ಮೂರು ಹೆಣ್ಣುಗಳ ಚಿಂತೆಯಲ್ಲಿ ತಲೆಯಲ್ಲಿ ವಿಪರೀತ ಗೊಂದಲ. ತಗೊಳ್ಳಿ... ಬರ್ತೀನಿ" ಒಳಗೆ ಹೋದರು.

ಕೂದಲಿಗೆ ಒಂದು ಕ್ಲಿಪ್ ಸಿಕ್ಕಿಸಿ ಶಾಂತ ಬಂದು ಕೂತರು. ಅವರ ಬಳಿಯಲ್ಲಿ "ನೀವು ಬಂದಿದ್ದು ತುಂಬ ಸಂತೋಷ. ನಮ್ತಂದೆ ಮನೆಯಲ್ಲಿದ್ದು ಒಂದಿಷ್ಟು ಜವಾಬ್ದಾರಿ ಹೊತ್ಕೊಂಡಿದ್ರೆ... ನಮ್ಮಮ್ಮ ನಿರಾತಂಕವಾಗಿ ಇರ್‍ತಾ

ಇದ್ರು. ಕೆಲವು ಸಮಸ್ಯೆಗಳು ಸಮಸ್ಯೆಗಳಲ್ಲ ಅನ್ನಿಸುತಿತ್ತು. ಅವರಿಗೆ ಬರೀ ಸ್ವಪ್ರತಿಷ್ಠೆ. ಕಡೆಗೆ ಮಕ್ಕಳ ಮನಸ್ಸಿನಲ್ಲಿ ಏನಿದೆಯೆಂದು ತಿಳ್ಕೊಳ್ಳಲಾರದಷ್ಟು ಮೂರ್ಖತನ. ಒಂದು ರೀತಿಯಲ್ಲಿ ಪಲಾಯನವಾದಿ. ಮಠದಲ್ಲಿ ಪುಣ್ಯವನ್ನು ಬೊಗಸೆ ಬೊಗಸೆಯಲ್ಲಿ ಬಾಚಿಕೊಳ್ಳುತ್ತಿದ್ದಾರೆ" ತಂದೆಯ ಬಗ್ಗೆ ಕಹಿಯಾಡಿದರು.

ಆ ಬಗ್ಗೆ ಕಾಶೀಪತಿಗಳು, ಶಾರದ ಏನು ಮಾತಾಡಲಿಲ್ಲ.

"ತಗೊಳ್ಳಿ, ಎಲ್ಲಾ ಅಮ್ಮ ಮಾಡಿದ್ದೆ. ಆಕೆಯದು ಹೊಸ ಹೊಸ ಅನ್ವೇಷಣೆ. ಅದೊಂದು ಆಸಕ್ತಿ ಇರುವುದರಿಂದ ನಾವು ಬಚಾವ್" ಎಂದು ನಗೆ ಬೀರಿದರು ಶಾಂತ.

ಕಾಶೀಪತಿಗಳು ಕೈ ಮುಗಿದುಬಿಟ್ಟರು. "ನಂಗೆ, ಇದೆಲ್ಲ ತಿನ್ನೋಷ್ಟು ಶಕ್ತಿ ಇಲ್ಲ. ಕುಡಿಯೋಕೆ ಏನಾದ್ರೂ ಕೊಟ್ಟರೇ ಸಾಕು."

ಅರ್ಧ ಲೀಟರ್‌ನಷ್ಟು ಕಾಫಿ ಹಳೆಯ ಬೆಳ್ಳಿ ಲೋಟದಲ್ಲಿ ಬಂದಾಗ, ಈಗಲೂ ಇಂಥ ವಾಡಿಕೆ ಇದೆಯೆಲ್ಲ ಅಂತ ಅಚ್ಚರಿಗೊಂಡರು. ವನ್ ಬೈ ಟೂ, ಟೂ ಬೈ ಫೋರ್, ಫೋರ್ ಬೈ ಎಯಿಟ್ ಎಂದು ಹೋಟಲಿನ ಒಂದೂವರೆ ಔನ್ಸ್ ಕಪ್‌ನಲ್ಲಿ ಎರಡು, ಮೂರು, ನಾಲ್ಕು ಮಾಡಿಸಿ ಕುಡಿಯುವ ಕಾಲದಲ್ಲಿ, ಇಂಥ ದೊಡ್ಡ ಲೋಟದಲ್ಲಿ ಕಾಫಿ ಕೊಟ್ಟು ನಿಭಾಯಿಸುವ ಸಾಮರ್ಥ್ಯವಿದೆಯಲ್ಲ ಎಂದುಕೊಂಡರು.

"ತಾಯಿ, ದಿನ ಒಂದ್ಸಲ ನಿಮ್ಮನೆಗೆ ... ಅದು ಬೆಳಗಿನ ವಾಕ್ ಮುಗಿಸಿಕೊಂಡು ಬರ್ತೀನಿ. ಇಂಥ ಒಂದು ಲೋಟ ಕಾಫೀ ಕೊಟ್ಟುಬಿಡಿ. ಇಡೀ ದಿನ ಏನು ಬೇಕಾಗೋಲ್ಲ" ನಗುತ್ತಾ ಹೇಳಿದರು ಕಾಶೀಪತಿ.

ಜಲಜಮ್ಮನಕ್ಕರಷ್ಟೆ. ಆಕೆ ಸೊಸೆಯಾಗಿ ಈ ಮನೆಗೆ ಬಂದಾಗ ಇದ್ದ ಎಷ್ಟೋ ಪದ್ಧತಿಗಳನ್ನು ಇಂದಿಗೂ ಉಳಿಸಿಕೊಂಡು ಬಂದದ್ದಕ್ಕೆ ಹೆಮ್ಮೆ ಇತ್ತು. ಈ ಮನೆಯ ಹೊಸಲು ದಾಟಿ ಒಳಗೆ ಬಂದಾಗ ತೀರಾ ಹದಿನೈದು ವರ್ಷದ ಕಿಶೋರಿಯಷ್ಟೆ.

ಇನ್ನೆರಡು ಲೋಟಗಳನ್ನು ತರಿಸಿಕೊಂಡು ಎರಡು ಲೋಟದಷ್ಟು ನಾಲ್ಕು ಲೋಟಕ್ಕೆ ಬಗ್ಗಿಸಿ ಶಾಂತ ಅವರ ಮುಂದಿಟ್ಟರು.

"ಅಮ್ಮನಿಗೆ ಪಿಂಗಾಣಿ ಕಪ್, ಸಾಸರ್ ಬಳಸೋದು ಇಷ್ಟವಿಲ್ಲ. ಅಪ್ಪನದು ಅದೇ ಜಾಯಮಾನ. ನಾನು ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ಬಹುಮಾನ ರೂಪದಲಿ ಕಪ್ ಅಂಡ್ ಸಾಸರ್ ಸೆಟ್ಟು ಬಂತು. ಅಮ್ಮ

ಅದು ಮನೆಯಲ್ಲಿದ್ದರೇ ಎಂದಾದ್ರೂ ಬಳಕೆಯಾಗಬಹುದೆಂದು ಪಕ್ಕದ ಮನೆಯವರಿಗೆ ಕೊಟ್ಟರು. ತನಗೇ ಬಹುಮಾನವಾಗಿ ಬಂದಿದ್ದನ್ನು ಬೇರೆಯವ್ರಿಗೆ ಕೊಟ್ಟರಲ್ಲ, ಅನ್ನೋ ಕೋಪ ಇಂದಿಗೂ ಹೋಗಿಲ್ಲ. ಅಂಥ.... ಅಮ್ಮ... ಇವರು" ತಾಯಿಯತ್ತ ನೋಡಿದಳು ಮೆಚ್ಚಿಗೆ, ಮುನಿಸು ಮಿಶ್ರಿತವಾಗಿ.

"ಏನೋ ಕಪ್ ಅಂಡ್ ಸಾಸರ್ ಕೈಗೆ ಸಿಕ್ತು, ಇವ್ರು ಪ್ರೊಫೆಸರ್ ರಂಗೇಗೌಡರನ್ನು ರಿಜಿಸ್ಟಾರ್ ಆಫೀಸ್‌ನಲ್ಲಿ ವಿವಾಹವಾಗಿ ಬಂದಾಗ ತಡೆಯೋಕೆ ಆಯ್ತು? ಹೆತ್ತವರ ಮಾತಿನಲ್ಲಿ ಈಗಿನವ್ರಿಗೆ ಗೌರವ ಕಮ್ಮಿ. ನಮ್ಮ ಪಾರ್ವತಿಗೆ ನೋಡಿದ ಗಂಡುಗಳಿಗೆ ಲೆಕ್ಕವೇ ಇಲ್ಲ. ಆ ಕಾರಣಕ್ಕೆ ಮನೆ ಬಿಟ್ಹೋಗಿ.... ಅವ್ರು ಮಠ ಸೇರ್ಕೊಂಡ್ರು" ಎಂದರು. ಗಂಡನ ವಿಷಯದಲ್ಲಿ ಒಂದಿಷ್ಟು ಸಂತಾಪ ವ್ಯಕ್ತವಾದಾಗ ಶಾಂತ ಸಿಡಿದುಬಿದ್ದಳು.

"ಅದ್ಕೆ ಕಾರಣ ಏನೂಂತ ಯೋಚ್ನೆ ಮಾಡಿದ್ದಾರ ? ಗಂಡನ ಪರ ವಹಿಸ್ಕೊಂಡ್ ಮಾತಾಡ್ತಾರೆ. ಪಾರ್ವತಕ್ಕ ಪ್ರೌಢಶಾಲೆಯಲ್ಲಿ ಓದ್ತಾ ಇದ್ದಾಗ, ವರನ ಮುಂದೆ ಕೂಡಿಸಿದ್ರು. ಇದ್ನ ಮುಂದುವರಿಸ್ಕೊಂಡ್ಹೋದ್ರೆ ವಿನಃ ಅವ್ಳ ನಿರಾಕರಣೆಗೆ ಕಾರಣ ಹುಡ್ಕಲಿಲ್ಲ. ಮನೆಯಲ್ಲಿ ವಿವಾಹ ವಿಷ್ಯ ಬಿಟ್ಟು ಇನ್ನೊಂದು ಮಾತಿರಲಿಲ್ಲ. ರ್‍ಯಾಂಕ್‌ಗಳಲ್ಲಿ ತೇರ್ಗಡೆಯೊಂದುತ್ತಿದ್ದ ಮಗಳ ಬಗ್ಗೆ ಒಂದು ಮೆಚ್ಚಿಗೆಯ ಮಾತಿಲ್ಲ. ಗಂಡು ಸ್ವಾರ್ಥಿ; ಹೆಣ್ಣಾಗಿ ಈಕೆ ಯಾಕೆ ಯೋಚ್ಸಬಾರ್ದಿತ್ತು. ಹೆಣ್ಣೂಂದ್ರೆ ಮದುವೆ, ಮಕ್ಳು ಇಷ್ಟೇ ಅವಳ ಹಣೆ ಬರಹ, ಇವ್ರ ದೃಷ್ಟಿಯಲ್ಲಿ" ತಾಯಿಯನ್ನು ಕಟುವಾಗಿ ಟೀಕಿಸಿದಳು. ಎಂದಿನಿಂದ ಇದ್ದ ರೋಷವೋ ಇಂದು ಚೆಲ್ಲಾಡಿತು. "ಇಂದು ಲಕ್ಷ್ಮಿ ನಿದ್ದೆ ಮಾತ್ರೆ ನುಂಗಿದ್ದಕ್ಕೂ ನೀನೇ ಕಾರಣ"

ಜಲಜಾಕ್ಷಮ್ಮ ಎದ್ದು ಹೋಗಿಬಿಟ್ಟರು.

"ಅಷ್ಟು ನೇರವಾಗಿ ಹೇಳ್ಬಾರ್ದಿತ್ತು ! ತಾಯಿ ಹೃದಯ ಮಕ್ಕಳಿಗಾಗಿ ಉತ್ತಮ ಭವಿಷ್ಯದ ಕನಸ್ಸು ಕಾಣೋದು ತಪ್ಪಲ್ಲ. ಆಕೆ ತುಂಬ ನೊಂದುಕೊಂಡ್ರು" ಎಂದು ಹೇಳಿದರು ಕಾಶೀಪತಿಗಳು.

"ಹೇಗೆ ಹೇಳ್ದೇ ಇರಲೀ ಹೇಳಿ ? ಎಷ್ಟೇ ವಿರಸವಿದ್ರೂ ನಾನು ಬಡ ಪೆಟ್ಟಿಗೆ ಪ್ರೊಫೆಸರ್ ಜೊತೆ ಡೈವೋರ್ಸ್‌ ಒಪ್ತಾ ಇರ್ಲಿಲ್ಲ. ಅದ್ಕೇ ಬಹು ಮಟ್ಟಿಗೆ ಅಮ್ಮನೇ ಕಾರಣ. ಅವ್ರ ಬಗ್ಗೆ ನನ್ನ ಮನಸ್ಸು ಪೂರ್ತಿಯಾಗಿ ಕೆಡೋ ಹಂಗೆ ಮಾಡ್ಬಿಟ್ರು. ಇದ್ರಿಂದ ಅವ್ರಿಗೆ ಉಪಕಾರನೇ ಆಯ್ತು.

ಅವ್ರ ವಿದ್ವತ್ತಿನ ಮಟ್ಟಕ್ಕೆ ನನ್ನ ವಿಚಾರಗಳು ನಿಲ್ಲವು. ಅದು ಬಿಡಿ, ಈ ಚಿಕ್ಕಪುಟ್ಟ ವಯಸ್ಸಿನ ಲಕ್ಷ್ಮೀ ಮುಂದು ನಿನ್ನ ಇಬ್ರೂ ಅಕ್ಕಂದಿರನ್ನು ನೋಡಿದ್ಮೇಲೆ.... ನಿನ್ನ ಬಗ್ಗೆ ವರನ ಕಡೆಯೋರು ಯೋಚಿಸ್ತಾರೆ. ಇಂಥ ಮಾತುಗಳ್ನ ಆಡಿ ಆಡಿ ಧೃತಿ ಕೆಡೋಂಗೆ ಮಾಡ್ಬಿಟ್ರು" ನೇರವಾಗಿ ಶಾಂತ ತಾಯಿಯ ಕಡೆ ಬೆಟ್ಟು ಮಾಡಿಬಿಟ್ಟರು.

ತಾಮು ಬಂದ ಸಮಯ. ಸರಿ ಇಲ್ಲವೇನೋ ಎಂದು ಅಲೋಚಿಸುವಂತಾಯಿತು ಕಾಶೀಪತಿಗಳಿಗೆ. ಶಾರದ ಗೊಂಬೆಯಂತೆ ಕೂತಿದ್ದಳು. ಪ್ರತಿ ಮನೆಯಲ್ಲಿ ತಾನಾಗಿ ಬರುವ ಸಮಸ್ಯೆಗಳು ಕೆಲವಾದರೇ, ಅವರಾಗಿ ತಂದು ಹಾಕಿಕೊಳ್ಳುವುದು ಹಲವನ್ನು.

ಸುಮ್ಮನೆ ಕೂತಿದ್ದ ಪಾರ್ವತಿ ಎದ್ದು ಹೋಗಿ ಅಮ್ಮನನ್ನ ಸಮಾಧಾನ ಮಾಡಿ ಹೊರಗೆ ಕರೆತಂದರು. ಆಕೆ ಸದಾ ಕನ್ನಡಕ ಧರಿಸಿಯೇ ಇರುತ್ತಿದ್ದರು. ಚಿಕ್ಕಂದಿನಿಂದಲೂ ಬಹಳ ಓದುತ್ತಿದ್ದ ಪಾರ್ವತಿ ಈಗ ಕನ್ನಡಕವಿಲ್ಲದೆ ಓದಲಾರರು. ಸದಾ ಒಂದಲ್ಲ ಒಂದು ಓದುತ್ತಿದ್ದರಿಂದ, ಸ್ನಾನ, ನಿದ್ದೆ ಎರಡರ ಸಮಯ ಬಿಟ್ಟು ಎಲ್ಲಾ ಸಮಯದಲ್ಲೂ ಕನ್ನಡಕ ಧರಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದರಿಂದ, ಅದು ದೇಹದ ಒಂದು ಭಾಗವೆ ಆಗಿ ಹೋಗಿತ್ತು.

"ಅಮ್ಮ ಒಳ್ಳೆಯೋರೆ ! ಅಪ್ಪನ ಸ್ವಭಾವಕ್ಕೆ ಹೊಂದಿಕೊಂಡಿದ್ದರಿಂದ, ಸ್ವಂತ ಮಕ್ಕಳಾದರೂ ಅವ್ರಿಗೂ ಮನಸ್ಸು, ವ್ಯಕ್ತಿತ್ವ, ಆಸೆ ಆಕಾಂಕ್ಷೆಗಳು ಇರುತ್ತೆ ಅನ್ನೋದು ಮಾತ್ರ ಗೊತ್ತಿಲ್ಲ. ನಮ್ಮಗಳ ಪತನಕ್ಕೆ ಇಷ್ಟು ಸಾಕಾಯ್ತು" ಪಾರ್ವತಿ ತನ್ನದೇ ಆದ ಭಾಷೆಯಲ್ಲಿ ಅರ್ಥಪೂರ್ಣವಾಗಿ ಬಿಡಿಸಿಟ್ಟರು. ಅದು ಜಲಜಮ್ಮನಿಗೆ ಅರ್ಥವಾಯಿತೋ ಇಲ್ಲವೋ. ನರ್ಸಿಂಗ್ ಹೋಂನಲ್ಲಿ ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದ ಮಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು.

ಮತ್ತೊಮ್ಮೆ ಕಿತ್ತಲೆ ಹಣ್ಣಿನ ರಸ ಕುಡಿದು ಎದ್ದು ಹೊರ ಬಂದರು. ಆಟೋ ಸ್ಟ್ಯಾಂಡ್‌ನವರೆಗೂ ಅವರನ್ನು ಹಿಂಬಾಲಿಸಿ ಹೊರಟಿದ್ದ ಶಾಂತನ ಕಾಶೀಪತಿಗಳೇ ತಡೆದರು.

"ನಿಮ್ಮಮ್ಮ ಸ್ವಲ್ಪ ನೊಂದುಕೊಂಡಿದ್ದಾರೆ. ಒಂದ್ನಾಲ್ಕು ಸಮಾಧಾನದ ಮಾತುಗಳ್ನ ನೀನಾಡಿದರೇ, ಎಷ್ಟೋ ಅವ್ರ ಮನಸ್ಸಿನ ನೋವು ಕಮ್ಮಿ ಆಗುತ್ತೆ" ಹಿಂದಕ್ಕೆ ಕಳಿಸಿದರು.

ಆಟೋ ಸ್ಟ್ಯಾಂಡ್‌ನಲ್ಲಿ ಬಂದರೆ ಆಟೋ ಇಲ್ಲ. ಆಕಾಶದಲ್ಲಿ ಮೋಡಗಳು ಗುಂಪು ಕೂಡಿತ್ತು. ಆಗಾಗ ಮಿಂಚು ಕಾಣಿಸುತಿತ್ತು.

"ಕಾರು ತಗೊಂಡು ಬರಬಹುದಿತ್ತು !" ಎಂದರು ಕಾಶೀಪತಿಗಳು. ಒಂದು ಸಲ ಕಾರಿನ ವಿಷಯವಾಗಿ ಆದ ರಾದ್ಧಾಂತ ನೆನಪಿಸಿಕೊಂಡಳು. ಇವಳನ್ನು ಕಾಲೇಜಿಗೆ ಡ್ರಾಪ್ ಮಾಡಲು ಕಾಶೀಪತಿಗಳು ಕಾರು ತಗೊಂಡರು. ಆಗ ಸುಮ್ಮನಿದ್ದ ವಸಂತ ರಾತ್ರಿ "ಸ್ವಲ್ಪ ಡ್ರಾಪ್ ಮಾಡೀಂತ ನನ್ನೆ ಕೇಳಬಹುದಿತ್ತು. ನೀನು ಅರ್ಧ ಗಂಟೆ ತಡವಾಗಿ ಹೋದ್ರೂ ... ಏನು ಪ್ರಮಾದವಾಗೋಲ್ಲ. ನನ್ನ ವಿಷ್ಯ ಹಾಗಲ್ಲ" ಗುರುಗುಟ್ಟಿದ. ಅಂದಿನಿಂದ ಅಪರೂಪಕ್ಕೆ ಕಾಶೀಪತಿಗಳು ಬಲವಂತ ಮಾಡಿದರೂ ಕಾರು ಹತ್ತಳು.

"ಆಟೋ ಸದಾ ಬಿಜಿ ಇರುತ್ತೆ. ಟ್ಯಾಕ್ಸಿ ಹತ್ತೋದು, ಹೊರ್‍ಗಿನ ಪ್ರಯಾಣಿಕರೇ ! ಟ್ಯಾಕ್ಸಿ ಸುಲಭವಾಗಿ ಸಿಗುತ್ತೆ. ಮಳೆ ಬರೋ ಸೂಚನೆ ಇರೋದ್ರಿಂದ ... ಬೇಗ ಹೋಗ್ಬಿಡೋಣ" ಎನ್ನುವ ವೇಳೆಗೆ ಫಟ್ಟನೆ ಒಂದು ಮಳೆ ಹನಿ ಅವಳ ರೆಟ್ಟೆಯ ಮೇಲೆ ಬಿತ್ತು. ಒಂದರ ಹಿಂದೆ ಒಂದು ಎನ್ನುವಂತೆ ಒಂದು ಹತ್ತು ಮಳೆ ಹನಿಗಳು ಬೀಳತೊಡಗಿದಾಗ ಅವಳು, ಕಾಶೀಪತಿಗಳು ಟ್ಯಾಕ್ಸಿ ಸ್ಟ್ಯಾಂಡ್‌ನತ್ತ ಹೆಜ್ಜೆ ಹಾಕಿದರು.

ಪುಟ್ಟ ಶಾರದ ತಂದೆ ಮತ್ತು ಕಾಶೀಪತಿಗಳ ನಡುವೆ ನಡೆಯುತ್ತಿದ್ದುದು ಒಂದು ಸುಂದರ ನೆನಪು. ಆ ಕೆಲವು ನೆನಪುಗಳೇ ವ್ಯಕ್ತಿಯಲ್ಲಿನ ಜೀವಂತಿಕೆ ಕುಗ್ಗದಂತೆ ನಿರಂತರ ಗೋಡೆಯಾಗಿರುವುದು.

* * * *

ಹಸ್ತಪ್ರತಿಯ ಫೈಲನ್ನು ಹಿಡಿದು ಹೊರಟ ಶ್ರೀಧರಮೂರ್ತಿಗಳು "ಒಂದ್ಸಲ ವಸಂತ ಕೂಡ ನೋಡಿರ್ಲಿ. ಇದೇ ಒಂದು ವಿಷ್ಯಕ್ಕಾಗಿ ಗಂಡ-ಹೆಂಡತಿಯರ ಮದ್ಯೆ ವೈಮನಸ್ಸು ಉಂಟಾಗ್ಬಾರ್ದಲ್ಲ. ಹೇಗೂ ಆ ಮನುಷ್ಯನು ಮನೆಯಲ್ಲೇ ಇರ್ತಾನೆ, ಹೋಗ್ಬರೋಣ. ನೀನು ಬಂದ್ಬಿಡು, ಹಳ್ಳಿಗೆ ಹೊರಟ್ಮೇಲೆ ಇಂಥ ಓಡಾಟವೇನು ಇರೋಲ್ಲ" ಹೇಳಿದರು.

ಆಕೆಗೂ ಶಾರದಳನ್ನು ನೋಡುವುದಕ್ಕೆ ಹೋಗುವುದೆಂದರೆ ಆಸೆಯೆ. ದಿನಕ್ಕೊಮ್ಮೆಯಾದರೂ ಫೋನ್ ಮಾಡಿ ವಿಚಾರಿಸುವ ಅವಳು, ಮನೆಯಿಂದ ಹೊರಗಿದ್ದ ಸಮಯದಲ್ಲಿಯೇ ಫೋನ್ ಮಾಡುವುದು ಮಾತ್ರ ಆಕೆಗೆ ಪ್ರಶ್ನೆ ಆಗಿತ್ತು.

"ಹೋಗೋಣ, ಒಂದಿಷ್ಟು ಹೂ, ಹಣ್ಣು ಹಿಡ್ದು ಬನ್ನಿ. ಇಲ್ಲಿಂದ್ಲೇ ಆಟೋ ಹತ್ತಬಹುದ್ದು. ಆ ವೇಳೆಗೆ ಇರೋ ಒಂದಿಷ್ಟು ಕೆಲ್ಸ ಮುಗ್ಸಿ ಕೊಳ್ತೀನಿ" ಎಂದು ಹೇಳಿದರು.

ಅವರು ಹೊರಗೆ ಹೋದ ಹತ್ತು ನಿಮಿಷಕ್ಕೆ ಶಾರದ ಬಂದಳು. ದಿಢೀರೆಂದು ಹೊರಟು ಬಂದಿದ್ದಳು. ಇಡೀ ದಿನ ಮನೆಯಲ್ಲೇ ಇರುವ ವಸಂತ ಮಾತುಗಳಿಂದಲೇ ಚುಚ್ಚಿ ಚುಚ್ಚಿ ಹಿಂಸಿಸಿ ಬಿಡುತ್ತಿದ್ದ. ಈಚೆಗಂತು ಅವನ ಮಾತಿನ ಪ್ರಹಾರ ಅವಳ ಮೃದು ಸ್ವಭಾವ ತಾಳಲಾರದೆ ಹೋಗಿತ್ತು.

ನೆಲವನ್ನೊರೆಸುತ್ತಿದ್ದ ತುಳಸಮ್ಮ "ಅಲ್ಲಾ ಕಣೇ.... ನೀನು ಬಂದೇ ಬಿಟ್ಟೆ. ನಾವುಗಳೇ ಬರೋರು ಇದ್ವಿ, ಅಳಿಯಂದಿರು... ಎಲಿ?" ಬಾಗಿಲತ್ತ ದೃಷ್ಟಿ ಹಾಯಿಸಿದರು.

"ಅವ್ರು.. ಬರ್ಲಿಲ್ಲ ! ನಾನು ಇದ್ನೆಲ್ಲ ಒರೆಸಿಕೊಡ್ತೀನಿ ಬಿಡಿ. ತಾತನ ಜೊತೆ ಜಗಳ ಆಡಿ ನೆಲ ಒರೆಸ್ತಾ ಇದ್ದೆ" ಸೊಂಟಕ್ಕೆ ಸೆರಗನ್ನು ಸಿಕ್ಕಿಸಿ, ಅವರ ಕೈಯಿಂದ ಬಟ್ಟೆ ಕಿತ್ತುಕೊಂಡು "ನಂಗೆ, ಬಿಸಿ ಬಿಸಿ ಕಾಫಿ ತಂದ್ಬಿಡಿ" ಅವರನ್ನು ಒಳಗೆ ಕಳಿಸಿದಳು. ಒಂದಿಷ್ಟು ಸುಧಾರಿಸಿಕೊಳ್ಳುವ ಅನಿವಾರ್ಯತೆ ಇತ್ತು.

ಇಂದು ಬೆಳಿಗ್ಗೆ ಎದ್ದ ಕೂಡಲೇ ಒಂದು ಸುಗಂಧಿತ ಎಣ್ಣೆಯ ಬಾಟಲು ಹಿಡಿದು ಬಂದ "ಒಂದಿಷ್ಟು ತಲೆ, ಮೈಗೆ ಎಣ್ಣೆ ತಿಕ್ಕು" ಸಂಬಂಧಗಳು ಹಿತವಾಗಿದ್ದರೇ ಮೈ ಕಚಗುಳಿ ಇಡುವಂಥ ಸನ್ನಿವೇಶಗಳೆ. ಈಗಾಗಲೇ ಇಂಥ ಸಂದರ್ಭಗಳು ಸೃಷ್ಟಿಯಾಗಿ ವಸಂತನ ಟೀಕೆ, ಛೀಮಾರಿಯೊಂದಿಗೆ ಮುಗಿದಿತ್ತು.

"ನಂಗೆ ಅಭ್ಯಾಸವಿಲ್ಲ ! ಸುಮ್ನೆ ನಿಮ್ಗೂ ಹಿಂಸೆ" ಅಷ್ಟು ಹೇಳಿದ್ದು ಸಾಕಾಗಿತ್ತು. ನೇರವಾಗಿಯೇ ಬೈಗಳು ಷುರು ಮಾಡಿದ್ದ "ನಂಗೆ ನಮ್ಮ ಮನೆಗೆ ಹೋಗೋದಿದೆ" ಕಾಶೀಪತಿಗಳಿಗೆ ತಿಳಿಸಿ ಬಂದಿದ್ದಳು.

ಕಾಫಿ ಹಿಡಿದು ಬರುವ ವೇಳೆಗೆ ಒರೆಸಿ ಮುಗಿಸಿ ಕೈ ತೊಳೆದು ಬಂದು ಸೊಂಟಕ್ಕೆ ಸಿಕ್ಕಿಸಿದ್ದ ಸೆರಗನ್ನು ಬಿಚ್ಚಿ ಕೊಡರಿ ಕೂತಳು.

"ನಮ್ಮ ತಾತ ಮಾಡಿದ್ದಷ್ಟೇ ರುಚಿಯಾಗಿ ಕಾಫಿ ಮಾಡ್ತೀರಾ" ಅವರನ್ನು ಹೊಗಳಿ ಲೋಟ ತಗೊಂಡಳು. "ಇನ್‌ಸ್ಟಂಟ್ ಕಾಫೀ, ಫಿಲ್ಟರ್ ಕಾಫೀ ಗೊತ್ತೇ ಇಲ್ಲ. ಈಗ್ಲೂ ನಾನು ಕಾಫಿ ಬೀಜ ಹುರೀಬೇಕು. ಅವ್ರು ಕುಟ್ಟಬೇಕು. ಡಿಕಾಕ್ಷನ್‌ನ ಬಟ್ಟೆ ಹಾಕಿ ಶೋಧಿಸ್ಬೇಕು. ಹಳ್ಳಿ ಹಾಲಂಗೇ

ಇರೋಲ್ಲ ಡೈರಿ ಹಾಲು. ಒಂದಿಷ್ಟು ಕಾಫಿ ಹದ ತಪ್ಪಿದೇ ಅಂತಾರೆ, ನಿನ್ನ ತಾತ" ಎಂದರು.

ಶ್ರೀಧರಮೂರ್ತಿಗಳು ಸೇತುರಾಮ್‌ಗಿಂತ ಎರಡು ವರ್ಷ ದೊಡ್ಡವರು. ಆದರೂ ಗಟ್ಟಿಮುಟ್ಟಾದ ಜೀವ. ಊಟ, ತಿಂಡಿಯಲ್ಲಿ ಶಿಸ್ತು. ಡಯಾಬಿಟಿಸ್, ಬಿ.ಪಿ.-ಅಂಥ ಕಾಯಿಲೆಗಳೇನು ಇರಲಿಲ್ಲ.

ತುಳಸಮ್ಮ ನೆಲದ ಮೇಲೆನೇ ಕೂತರು. ಅವಳು ಕೂಡ ಕೆಳಗಡೆಯೆ ಕೂತು ಸುತ್ತಲೂ ದಿಟ್ಟಿಸಿದಳು. ಎಂದೂ ಈ ಮನೆಯ ತುಂಬ ಜನರಿಂದ ನೆನಪು ಇರಲಿಲ್ಲ. ಮುಂದು ಕೂಡ ಅಷ್ಟೆ ಅನಿಸಿತು.

"ಬೇರೆ ಏನೇನೋ, ಕೇಳೋಲ್ಲ! ಕೇಳೋದು ಒಂದೇ ಪ್ರಶ್ನೆ. ಉತ್ತರ ಸುಳ್ಳಾಗಿರ್ಬಾರ್ದು. ನೀನು ಸುಳ್ಳು ಹೇಳೋಲ್ಲಾಂತ ಗೊತ್ತು. ನೀನು ಯಾವಾಗ್ಲೂ ಬೇರೆ ಕಡೆಯಿಂದ ಫೋನ್ ಮಾಡ್ತೀಯಾ ಯಾಕೆ?"

ಸುಳ್ಳು ಹೇಳಬಾರದೆಂದು ತಾಕೀತಿನ ಜೊತೆ ತಾನು ಸುಳ್ಳು ಹೇಳಲಾರೆನೆಂಬ ಭರವಸೆ ಕೂಡ ಕೊಟ್ಟಿದ್ದರಿಂದ, ಅವಳು ಸುಳ್ಳು ಹೇಳುವಂತಿರಲಿಲ್ಲ.

"ಬಹುಶಃ ನಾನು ಯಾರೊಂದಿಗೂ ಫೋನ್‌ನಲ್ಲಿ ಮಾತಾಡೋದು ಅವ್ರಿಗೆ ಇಷ್ಟವಿರಲಿಕ್ಕಿಲ್ಲ. ನನಗೆ ಫೋನ್ ಬಂದಾಗ, ನಾನು ಯಾರಿಗಾದರೂ ಫೋನ್ ಮಾಡಿದಾಗ ಅವ್ರಿಗೆ ಪೂರ್ತಿ ಡೀಟೈಲ್ಸ್ ಕೊಡಬೇಕು. ನಿಮಿಷ, ಸೆಕೆಂಡ್‌ಗಳ್ನ ಲೆಕ್ಕ ಹಾಕಿ ಆ ಸಮಯದಲ್ಲಿ ಎಷ್ಟು ಮಾತಾಡಿರಬಹುದೆಂದು ಅಂದಾಜು ಮಾಡ್ತಾರೆ, ಅಥ್ವಾ ಇನ್ನೊಂದು ಫೋನ್‌ನಲ್ಲಿ ಕೇಳಿಸಿಕೊಂಡರು. ಪೂರ್ತಿ ನನ್ನಿಂದಲೇ ಕೇಳುವ ಇಚ್ಛೆ. ಪ್ರತಿ ಸಲವು ಕಹಿಯೆ. ಅದಕ್ಕೆ ನಾನು ಮನೆಯಿಂದ ಯಾರ್‍ಗೂ ಫೋನ್ ಮಾಡೋಲ್ಲ" ಪೂರ್ತಿ ವಿವರಣೆಯನ್ನೆ ನೀಡಿದಳು.

ಆಕೆ ಕೂತಲ್ಲಿಯೇ ಗೊಂಬೆಯಾದರು. ಇದೆಂಥ ಸ್ವಭಾವ. ಬೇರೆ ಗಂಡಸರೊಂದಿಗೆ ಮಾತಾಡಿದಾಗ ಕೆಲವು ಜಾತಿಯ ಗಂಡಸರು ಅನುಮಾನ ಪಡುತ್ತಾರೆ. ಇವನದು ಯಾವ ರೀತಿ?

"ನೀನು ಸುಖವಾಗಿಲ್ಲ" ಬಾಯಿ ಬಿಟ್ಟು ಹೇಳೇಬಿಟ್ಟರು. "ಸಣ್ಣ ಸೂಜಿ ತಗೊಂಡು ಚುಚ್ಚುವ ಜಾಯಮಾನವನ್ನು. ಹೆಂಡತಿ ಸುಖ ಅವ್ನ ಹಣೆಯಲ್ಲಿ ಬರ್ದಿಲ್ಲ, ಬಿಡು" ಸ್ವಲ್ಪ ತಾಳ್ಮೆಗೆಟ್ಟೇ ನುಡಿದರು. ಗಂಡಸಿನ ವ್ಯಕ್ತಿತ್ವಕ್ಕೆ ಎಷ್ಟು ಬೆಲೆಯೋ, ಹೆಣ್ಣಿನ ವ್ಯಕ್ತಿತ್ವಕ್ಕೆ ಅಷ್ಟೇ ಬೆಲೆ ಇರಬೇಕೆಂದು

ಈ ಹಳೆಯ ಕಾಲದ ಹೆಣ್ಣಿನ ಸಿದ್ಧಾಂತ.

ಮತ್ತೇನು ಮಾತಾಡುತ್ತಿದ್ದರೋ, ಶ್ರೀಧರಮೂರ್ತಿಗಳು ಹಣ್ಣು, ಹೂನೊಂದಿಗೆ ಬಂದವರು ಮುಖದ ತುಂಬ ನಗು ತುಂಬಿಕೊಂಡು ಕಣ್ಣರಳಿಸಿದರು.

"ಹೋಗ್ಲಿ, ನೀನ್ಬಂದಿದ್ದು ಒಳ್ಳೆದಾಯ್ತು ! ಸುಮ್ಸುಮ್ನೇ ಬರೋಕ್ಕಿಂತ, ನಿನ್ನ ಬಿಡೋ ನೆವದಲ್ಲಿ ಬರೋದು ಸೂಕ್ತ" ಹಣ್ಣು, ಹೂವನ್ನು ಹೆಂಡತಿಯ ವಶಕ್ಕೆ ಒಪ್ಪಿಸಿ ಕೂತರು.

ಹಸ್ತ ಪ್ರತಿ ಫೈಲನ್ನು ತಂದಿಟ್ಟುಕೊಂಡು, ತಮ್ಮ ತಿದ್ದುಪಡಿಗಳನ್ನು ಅವಳಿಗೆ ವಿವರಿಸಿದರು. ಸೂಕ್ತವೆನಿಸಿದ ಸಲಹೆ ಕೊಟ್ಟರು. ಹೊಸ ಹೊಸ ವಿಷಯಗಳು, ಬದಲಾವಣೆಗಳನ್ನು ಅವಳ ಮುಂದಿಟ್ಟರು. ವೇಳೆ ಸರಿದಿದ್ದೇ ಗೊತ್ತಾಗಲಿಲ್ಲ. ಊಟ ಅಲ್ಲಿಯೇ ಆಯಿತು.

ಮೂವರು ಕೂಡಿಯೇ ಆ ಮನೆಗೆ ಹೋಗಿದ್ದು. ಕಾಶೀಪತಿಗಳ ಮಧ್ಯಾಹ್ನದ ವಿರಾಮ ಮುಗಿದಿತ್ತು. ಆದರೆ ವಸಂತ ನಿದ್ದೆಯ ಜೊಂಪಿನಲ್ಲಿದ್ದ. ಮಲಗಿದರೆ ಅವನು ಕುಂಭಕರ್ಣನೆ. ಅಷ್ಟೊಂದು ನಿದ್ದೆ ಅವನದು. ಇಂದು ಅವಳ ಮೇಲಿನ ಕೋಪಕ್ಕೆ ಒಂದು ಗಂಟೆಗೂ ಮಿಕ್ಕಿ ಸ್ನಾನದ ತೊಟ್ಟಿಯಲ್ಲಿ ಮಲಗಿದ್ದ. ಆ ಆಯಾಸ ಎಷ್ಟು ಹೆಚ್ಚಾಗಿತ್ತೆಂದರೆ ಶ್ರೀಧರಮೂರ್ತಿ ದಂಪತಿಗಳು ಬಂದು ಒಂದು ಗಂಟೆ ಇದ್ದು ಹೋಗಿದ್ದು ಕೂಡ ಅವನ ಅರಿವಿಗೆ ಬರಲಿಲ್ಲ.

ಶಾರದ, ಕಾಶೀಪತಿಗಳು ಕಾಂಪೌಂಡ್‌ನಲ್ಲಿ ಕೂತು ಮತಾಡುತ್ತಿದ್ದಾಗ ಹೊರಗೆ ಬಂದು ಖಾಲಿ ಇದ್ದ ಇನ್ನೊಂದು ಛೇರ್‌ನಲ್ಲಿ ಕೂತ.

"ತಿಂಡಿ.. ತರ್ಲಾ ?" ಕೇಳಿದಳು.

ಒಂದು ಸಲ ಅವಳತ್ತ ಚೂಪಾಗಿ ನೋಡಿದ. ಆ ನೋಟ ಅವಳಿಗೆ ಹಿಡಿಸಲಿಲ್ಲ. 'ಮೋಹಕ ನೋಟ, ಪ್ರೇಮದ ನೋಟ, ಪ್ರೀತಿಯ ಕೋಲ್ಮಿಂಚಿನ ನೋಟ' ಇವೆಲ್ಲ ಸಾಹಿತ್ಯದ ಕೃತಿಗಳಲ್ಲಿ ಓದಬೇಕಿತ್ತು, ಸ್ವತಃ ಅನುಭವಿಸಿದ್ದಲ್ಲ.

"ಈಗ ಎದ್ದಂಗಿದೆ ಭೂಪತಿ, ಗೋಪಿ ಕೈಯಲ್ಲಿ ತರಿಸ್ತೀನಿ, ನೀನು ಯಾಕೆ ಹೋಗ್ತೀಯಾ" ಎಂದ ಕಾಶೀಪತಿಗಳು ಗೋಪಿಯನ್ನು ಕರೆದು ತಿಂಡಿಗೆ ಹೇಳಿದರು. "ಎಲ್ಲಾ ಬಿಸಿನೇ ಇರುತ್ತೆ. ಮತ್ತೆ ಬಿಸಿ ಮಾಡೋ ತಂಟೆಗೆ ಹೋಗ್ಬೇಡ" ಎಚ್ಚರಿಸಿ ಕಳಿಸಿದರು. ಅವನು ತರುವುದು

ತಡವಾಯಿತೆಂದು ರೇಗುವುದು ಬೇಡವಾಗಿತ್ತು.

ಜಾಮೂನ್ ಜೊತೆಯಲ್ಲಿ ಸ್ವಲ್ಪ ಹೊತ್ತಿಗೆ ಮುಂಚೆ ಶಾರದ ಮಾಡಿದ ಹೀರೇಕಾಯಿ ಬಜ್ಜಿ, ಚಟ್ನಿ ತಂದಿಟ್ಟ.

"ಬಜ್ಜಿ ಸ್ವಲ್ಪ ಆರಿಹೋಗಿದೆ" ವಿನಯದಿಂದ ಉಸುರಿದ. ಭಯವಿತ್ತು ಮುಖದಲ್ಲಿ. ಎರಡು ಸಲ ಮುಟ್ಟಿ ನೋಡಿದವನು "ಬೇಡ ತೆಗೀ, ಆರಿದ್ದು ಯಾರು ತಿನ್ನೋಕಾಗುತ್ತೆ" ಎಂದ ಕಟುವಾಗಿ.

"ಈಗ್ಮಾಡಿ...... ತರ್ತೀನಿ" ಎದ್ದು ಹೋದಳು.

ಸ್ವಲ್ಪ ಅನುಸರಿಸಿಕೊಂಡು "ಕೊಡು...." ಎಂದು ಹೇಳಿಯಾನೆಂದುಕೊಂಡರು. ಇನ್ನಷ್ಟು ಆರಾಮಾಗಿ ಒರಗಿ ಕೂತ.

"ಇದೆಲ್ಲ, ನಿಂಗೆ ತಪ್ಪು ಅನ್ನಿಸೋಲ್ವಾ ? ಸ್ವಲ್ಪ ಅನುಸರಿಸ್ಕೊಂಡು ಹೋಗ್ಬಹುದಿತ್ತು. ಶಾರದನ ಎದುರಿಗೆ ಕೂಡಿಸಿಕೊಂಡು ಆರಿದ ಬಜ್ಜಿಗಳನ್ನು ತಿನ್ನುತ್ತ ಸಂತೋಷ ಅನುಭವಿಸ್ಬೇಕಿತ್ತು. ವೈವಾಹಿಕ ಜೀವನದ ಪ್ರಥಮ ಪಾಠದ ಅನುಭವವೇ ನಿಂಗೆ ಇದ್ದಹಂಗಿಲ್ಲ. ಮನಸ್ಸುಗಳು ಒಡೆಯೋಕ್ಮೊಂಚೆ ಎಚ್ಚೆತ್ತುಕೋ" ಬುದ್ಧಿ ಹೇಳಿದರು.

"ನಿಮ್ಮ ಸ್ನೇಹಿತನ ಮಗಳು ಎನ್ನುವ ಅತಿಯಾದ ಮಮಕಾರ ನಿಮ್ಗೆ ಬಿಸಿಯಾಗಿ ಮಾಡಿಕೊಡ್ಬೇಕೆಂಬ ಮನಸ್ಸು ಅವ್ಳಿಗೆ ಇರ್ಬೇಕಿತ್ತು. ನಿಮ್ದು ಫುಲ್ ಸಪೋರ್ಟ್ ಅವ್ಳಿಗೆ ಇನ್ನ್ಯಾಕೆ. ತಗ್ಗಿ, ಬಗ್ಗಿ ನಡೀತಾಳೆ" ನೇರವಾಗಿಯೇ ಅಸಹನೆ ವ್ಯಕ್ತಪಡಿಸಿದ.

ಮಗನನ್ನು ಸೂಕ್ಷ್ಮವಾಗಿ ನೋಡಿದರು. ಏನೇನೂ ಅರ್ಥವಾಗಲಿಲ್ಲ. ಸಮಾಜದಲ್ಲಿ ಅತ್ಯಂತ ಉತ್ತಮ ವ್ಯಕ್ತಿಯೇ, ಒಳ್ಳೆಯ ಹೆಸರು ಸಂಪಾದಿಸಿದ್ದ. ಕಂಪನಿ ವ್ಯವಹಾರದಲ್ಲಿ ಬುದ್ಧಿವಂತ, ಇಂಜನಿಯರಿಂಗ್ ಕೋರ್ಸು ಪೂರ್ತಿ ಮಾಡಲಿಲ್ಲವೆನ್ನುವುದನ್ನು ಬಿಟ್ಟರೇ, ಒಬ್ಬ ಅತ್ಯುತ್ತಮ ಮಗನೇ. ಆದರೆ ವೈವಾಹಿಕ ಬದುಕಿನಲ್ಲಿ ಯಾಕೆ ಎಡವಟ್ಟು ಮಾಡಿಕೋತಿದ್ದಾನೆ. ಪ್ರಶ್ನಿಸಿದರೇ ಅಸಹನೆಯ ಕಿಡಿಗಳೇ ಬೇಡವೆನಿಸಿ, ಟೀಪಾಯಿ ಮೇಲಿದ್ದ ಪತ್ರಿಕೆಯನ್ನು ಮುಖದ ಮುಂದೆ ಹಿಡಿದರು. ಸಂಜೆಯ ಮಬ್ಬು ಬೆಳಕಿನಲ್ಲಿ ಓದಲು ಕಷ್ಟವೇ. ಆದರೂ ಪೇಪರನ್ನು ತೆಗೆಯಲಿಲ್ಲ.

ಹತ್ತು ನಿಮಿಷಕ್ಕೆ ಮುನ್ನವೇ ಗೋಪಿ ಬಿಸಿಬಿಸಿ ಬಜ್ಜಿಗಳ ಜೊತೆ ವಗ್ಗರಿಸಿದ ಕಾಯಿ ಚಟ್ನಿ ತಂದಿಟ್ಟ, ಎರಡು ಪ್ಲೇಟು.

"ತಗೋ.... ತಗೋ.... ನಂಗೂ ಒಂದು ಪ್ಲೇಟು ಕಳ್ಸಿಬಿಟ್ಟಿದ್ದಾಳೆ. ರಾತ್ರಿ ಊಟ ಕಟ್ ಮಾಡಿದ್ರಾಯ್ತು" ಕಾಶೀಪತಿಗಳು ಪೇಪರ್ ಮಡಚಿಟ್ಟು ತಾವೇ ಮೊದಲು ಒಂದು ಬಿಸಿ ಬಜ್ಜಿಯನ್ನೆತ್ತಿಕೊಂಡು ಕಾಯಿ ಚಟ್ನಿ ಜೊತೆ ತಿಂದರು.

'ಬ್ರಹ್ಮಾಂಡವಾಗಿದೆ' ಎಂದು ಹೇಳುವ ಮುನ್ನ ಬಾಯಲ್ಲಿಟ್ಟುಕೊಂಡ ಅವನು ಎದ್ದು ಹೋಗಿ ಉಗಿದು ಬಂದ "ಒಂದೇ ಖಾರ, ಮನಸ್ಸಿಟ್ಟು ಕೆಲ್ಸ ಮಾಡೋಲ್ಲ, ಬೇಕಾ....ಬಿಟ್ಟಿ ಮಾಡಿದ್ರೆ ಅಧ್ವಾನವಾಗಿ ಹೋಗುತ್ತೆ. ಆರಾಮಾಗಿ ಇದನ್ನು ಕೂಡ ತಿಂದುಕೊಳ್ಳಿ" ಸಿಡಿಗುಟ್ಟುತ್ತ ಎದ್ದು ಹೋದ.

ಅವನ ಪ್ಲೇಟಿನದೊಂದು ತೆಗೆದು ತಿಂದರು. ಚಟ್ನಿ ಜೊತೆಗೆ ಇದ್ದುದ್ದರಿಂದ ಬಜ್ಜಿಗೆ ಉಪಯೋಗಿಸಿದ ಕಡಲೆ ಹಿಟ್ಟಿಗೆ ಖಾರದ ಪುಡಿ ಬೆರಸಿರಲಿಲ್ಲ. ಮತ್ತೆಲ್ಲಿ ಖಾರ? ಚಟ್ನಿಗೂ ಅಂಥ ಖಾರವೇನು ಇರಲಿಲ್ಲ. ಇವೆಲ್ಲ ಶಾರದಳನ್ನು ಮೂದಲಿಸಲು ತಂತ್ರವೆಂದುಕೊಂಡರು.

ಎರಡು ಪ್ಲೇಟುಗಳಲ್ಲಿದ್ದುದನ್ನು ತಿಂದು ಮುಗಿಸಿದರು ಕಾಶೀಪತಿಗಳು. ಹಣವೊಂದಿದ್ದರೇ ಎಲ್ಲಾ ಸಾಧಿಸಬಹುದೆಂಬ ಭ್ರಮೆ ಕಳಚಿ ಬಿತ್ತು. ಅವರಲ್ಲಿ ಹಣವಿತ್ತು. ವಸಂತನ ಮೊಂಡುತನ, ಮೂರ್ಖತನಕ್ಕೇನು ಮಾಡುವುದು?

ರಾತ್ರಿ ಹಸ್ತಪ್ರತಿಯ ಫೈಲನ್ನು ವಸಂತನ ಮುಂದಿಟ್ಟಳು. "ಇವೆಲ್ಲ, ನಾನು ಡಿಗ್ರಿಯಲ್ಲಿ, ಪಿ.ಯು.ಸಿ.ಯಲ್ಲಿ ಇದ್ದಾಗ ಬರ್ದ ಕವನಗಳು. ಎಂದೂ ಅದ್ನ ಪ್ರಕಟಿಸಬೇಕೆಂಬ ಅನಿಸಿಕೆಯೇ ಇರಲಿಲ್ಲ. ತಾತ ಸಾಯೋಕೆ ಸ್ವಲ್ಪ ಮುಂಚೆ ಫೋನ್‌ನಲ್ಲಿ ಆ ಬಗ್ಗೆ ನನ್ನಲ್ಲಿ ಮಾತಾಡಿದರು. ಅದ್ಕೇ ಒಂದು ರೂಪ ಕೊಟ್ಟು, ನಂಗೆ ಉತ್ಸಾಹ ತುಂಬಿದ್ದು ಶ್ರೀಧರಮೂರ್ತಿ ತಾತ. ಅಚ್ಚಿಗೆ ಹೋಗೋಗ್ಮುಂಚೆ ನೀವೊಮ್ಮೆ ನೋಡಿ."

ತಲೆಯೆತ್ತಿ ಅವಳತ್ತ ನೋಡಿದವನು "ಅಂತು ದೊಡ್ಡ ಕವಿಯಿತ್ರಿ ಆಗೋ ಸನ್ನಾಹ. ಈಗ್ಲೇ ನಿಂಗೆ ಗಂಡ, ಮನೆಯ ಬಗ್ಗೆ ಆಸಕ್ತಿ ಇಲ್ಲ. ಆಮೇಲೆ ಪೂರ್ತಿ ಮುಗ್ದು ಹೋಯ್ತು" ವಕ್ರಗೆರೆಗಳನ್ನು ಎಳೆದಂತೆ ಮಾತಾಡಿದ.

ಶಾರದ ಸುಮ್ಮನೆ ಮಲಗಿದಳು. ಪುಟಗಳು ಮೊಗಚುತ್ತಿದ್ದ ಸದ್ದು ಕೇಳಿಸಿತು. ಓದುತ್ತಿರಬಹುದೆಂದುಕೊಂಡಳು. ಆದರೆ ಬೆಳಿಗ್ಗೆ ಒಂದು ದೊಡ್ಡ ಅನಾಹುತವಾಗುತ್ತದೆಯೆಂದು ಕೊಳ್ಳಲಿಲ್ಲ.

ಬೆಳಿಗ್ಗೆ ಜಾಗಿಂಗ್ ಮುಗಿಸಿ ಬಂದವನು ಮಡದಿ ಕೊಟ್ಟ ಕಾಫಿ ಕುಡಿದ ನಂತರ, ಅವಳು ಸ್ನಾನಕ್ಕೆ ಹೊರಟಾಗ "ನನ್ನ ಫ್ರೆಂಡ್ ಬರೋರು ಇದ್ದಾರೆ. ಎರ್ಡು ಕಪ್ ಕಾಫಿ ಜೊತೆ ನೀರನ್ನು ಕೂಡ ಕಳ್ಸು" ಎಂದು ಪೇಪರ್

ಹಿಡಿದು ಡ್ರಾಯಿಂಗ್ ರೂಮಿಗೆ ಹೋದ.

ಇವಳು ಸ್ನಾನ ಮುಗಿಸಿ ಬಂದಾಗ, ಡ್ರಾಯಿಂಗ್ ರೂಮಿನ ಟೀಪಾಯಿ ಮೇಲೆ ಹರಡಿಕೊಂಡ ಇವಳ ಹಸ್ತಪ್ರತಿಯ ಪುಟಗಳು ಕಾಫೀ, ನೀರಿನಿಂದ ಪೂರ್ತಿ ತೊಯ್ದುಹೋಗಿ ಅನಾಥವಾಗಿ ಬಿದ್ದಿದ್ದವು. ಹಾಲ್‌ನ ಮೂಲೆಯಲ್ಲಿ ಗೋಪಿ ಅಳುತ್ತ ನಿಂತಿದ್ದ.

ಇವಳ ರೆಟ್ಟೆ ಹಿಡಿದು ಎಳೆದೊಯ್ದು ಡ್ರಾಯಿಂಗ್ ರೂಮಿಗೆ ಬಂದ ವಸಂತ "ಬಂದು ಸ್ವಲ್ಪ ನೋಡು, ಅವ್ನ ಮುಂದೆ ಕೂಡ್ಸಿಕೊಂಡು ಪಾಠ ಹೇಳಿ ಕೊಡ್ತೀಯಾ ! ಅವ್ನು ದೊಡ್ಡ ಆಫೀಸರ್ ಆಗೋ ಕನಸ್ನಲ್ಲಿ ಎಷ್ಟೊಂದು ಎಡವಟ್ಟು ಮಾಡ್ತಾನೇಂತ" ಕೂಗಾಡಿದ.

ಪಿಂಗಾಣಿಯ ಕಪ್‌ಗಳು ಚೂರು ಚೂರಾಗಿ ನೆಲದ ಮೇಲೆ ಬಿದ್ದಿದ್ದರೇ, ಕವನದ ಹಸ್ತಪ್ರತಿಗಳು ಸ್ನಾನ ಮಾಡಿದಂತೆ ತೊಯ್ದು ಹೋಗಿದ್ದವು. ಅದನ್ನು ಎತ್ತುವ, ಪಕ್ಕಕ್ಕೆ ತೆಗೆದಿಡುವ ಕಷ್ಟವನ್ನು ವಸಂತ ತೆಗೆದುಕೊಂಡಿರಲಿಲ್ಲ.

ನಿಂತ ನೆಲ ಸೀಳು ಬಿಟ್ಟಂತಾಯಿತು ಶಾರದಾಗೆ. ಹೃದಯ ಕಿತ್ತು ಬಾಯಿಗೆ ಬಂದಂತಾಯಿತು. ಬಿಕ್ಕಿ ಬಿಕ್ಕಿ ಅಳಬೇಕೆನಿಸಿತು. ಅತ್ತರೇ ಸಾಂತ್ವನ ನೀಡುವವರು ಯಾರಿಲ್ಲ. ಕಂಬನಿ ಸುರಿಸುವಾಗ ತೊಡೆಯುವ ಕೈ ಇಲ್ಲ.

ಪುಟಗಳನ್ನು ಸರಿಸಿದಳು. ತೊಯ್ದು ತೊಪ್ಪೆಯಾದ ಅವುಗಳ ಮೇಲೆ ದಟ್ಟವಾದ ಕಾಫಿಯ ಕರೆಗಳು. ಹತ್ತು ನಿಮಿಷಕ್ಕೂ ಮೇಲೆ ನೆಂದಿದ್ದರಿಂದ ಒಂದಕ್ಕೊಂದು ಪುಟಗಳು ಅಂಟಿ ಬಿಡಿಸಲೇ ಕಷ್ಟವಾಯಿತು. ಅದನ್ನೊಯ್ದು ನಲ್ಲಿಯ ಕೆಳಗೆ ಹಿಡಿದಾಗ ತೀರಾ ಒದ್ದೆಯಾದ ಪೇಪರ್ ಅಲ್ಲ ಲ್ಲಿ ಕರಗಿ ಹರಿಯುವ ನೀರಿನಲ್ಲಿ ಅವಶೇಷಗಳಂತೆ ಬೆರೆತಾಗ, ಅವಳ ಕಂಬನಿ ಅದರೊಂದಿಗೆ ಬೆರೆಯಿತು.

ಉಳಿದ ಅಷ್ಟೋ ಇಷ್ಟೋ ಪೇಪರುಗಳನ್ನು ತಂದು ಕಾಂಪೌಂಡ್‌ನ ಬಿಸಿಲಿಗೆ ಹಿಡಿದಾಗ, ಅಲ್ಪ ಸ್ವಲ್ಪ ಒಣಗಿದ್ದ ಚೂರುಗಳು, ಕಳೆಗೆಟ್ಟು, ಆಕಾರ ಕಳೆದುಕೊಂಡು ಅಲ್ಲಲ್ಲಿ ಹಾರಿ ಹೋಗಿ ಗಿಡಗಳ ಬುಡಗಳನ್ನು ಸೇರಿದಾಗ ನಿಸ್ಸಹಾಯಕಳಂತೆ ನಿಂತಿದ್ದಳು. 'ಎಷ್ಟು ಅನಾಗರೀಕವಾದ ವರ್ತನೆ' ಮನ ಖಂಡಿಸಿತು. ಬಾಯಿ ತೆರೆದು ಪ್ರತಿಭಟಿಸಲಾರದ ಸ್ಥಿತಿ-ಯಾಕೆ? ಇಷ್ಟು ತಾಳ್ಮೆಗಳಿಗೆ ಕಾರಣ ಹುಡುಕಿದರೇ, ಇದು ಅವಳೊಬ್ಬಳ ಕತೆಯಲ್ಲವೆನಿಸಿತು. ಭಾರತೀಯ ಹೆಣ್ಣು ಮಾತ್ರವೇನು ವಿಶ್ವದ ಎಲ್ಲಾ ಹೆಣ್ಣು ಅವರದ್ದೇ ರೀತಿಯಲ್ಲಿ ಯೋಚಿಸುತ್ತಾರೆ. ಇಲ್ಲದಿದ್ದರೇ ವ್ಯವಸ್ಥೆಯೇ

ಉಳಿಯುತ್ತಿರಲಿಲ್ಲವೆನಿಸಿತು.

ವಾಕ್ ಮುಗಿಸಿ ಬಂದ ಕಾಶೀಪತಿಗಳು ನಿಂತರು. ಅವರೆದೆ ಢವಗುಟ್ಟಿತು. ಇಂಥ ದೃಢವಾದ ನಿರ್ಧಾರ ಸೊಸೆಯ ಮುಖದಲ್ಲಿ ಎಂದೂ ಕಂಡಿರಲಿಲ್ಲ.

"ಶಾರದ, ಯಾಕೆ ಒಂದು ತರಹ ಇದ್ದೀಯಾ ?" ಕೇಳಿದರು.

"ಏನಿಲ್ಲ, ಹೊರ್‍ಗಿನ ಗಾಳಿ ತಂಪಾಗಿತ್ತು" ಒಳಗೆ ಹೋದಳು.

ಅಡಿಗೆ ಮನೆಗೆ ಶಾರದ ಬಂದಾಗ ಗೋಪಿ ಇನ್ನು ಅಳುತ್ತಲೇ ಇದ್ದ. "ಬೇಗ ಮುಖ ತೊಳ್ಕೊಂಡ್ಬಂದು ... ಅಂಕಲ್‌ಗೆ ಕಾಫಿ ಕೊಡ್ಹೋಗು" ಕೆನ್ನೆ ತಟ್ಟಿದಳು. ಅನುಮಾನಿಸುತಿತ್ತು ಅವನ ಮನ. ಹಸ್ತಪ್ರತಿಯ ಪ್ರತಿಯೊಂದು ಹಾಳೆಗೂ ಕಾಫೀಯ ಅಭಿಷೇಕವಾಗಿತ್ತು. ಬರೀ ಎರಡು ಕಪ್ ಅವನ್ನೆಲ್ಲ ತೋಯಿಸಿದ್ಹೇಗೆ ? ಈ ಪ್ರಶ್ನೆಯನ್ನು ಮರುಕ್ಷಣ ಅವಳ ಮನ ತಳ್ಳಿ ಹಾಕುತಿತ್ತು. ಅಂತು ಶಾರದ ಮನಸ್ಸು ಪ್ರಕ್ಷುಬ್ಧವಾಗಿತ್ತು.

ಅಳು ಕಣ್ಣಿನಲ್ಲಿಯೇ ಕಾಫಿಯನ್ನು ತಗೊಂಡು ಹೋದ ಅವನನ್ನು ಗದರಿಸುತ್ತಿದ್ದಾಗ, ವಸಂತ ಮಧ್ಯೆ ಪ್ರವೇಶಿಸದಿದ್ದರೇ ಸತ್ಯ ಸಮಾಧಿಯಾಗಿ ಬಿಡುತಿತ್ತೇನೋ.

"ಎಷ್ಟೊಂದು ಕೊಬ್ಬಿಬಿಟ್ಟಿದ್ದಾನೆ, ಶಾರದ ಬಂದ್ಮೇಲೆ ಪೂರ್ತಿ ಬದಲಾಗಿ ಹೋಗಿದ್ದಾನೆ" ಎಂದವನು ಪೂರ್ತಿ ಚಿತ್ರವನ್ನು ವಿವರಿಸಿದ. ಕಾಶೀಪತಿಗಳು ಸ್ತಬ್ಧರಾದರು. ಅದರ ಭೀಕರತೆಯನ್ನು ಉಳಿಸಿಕೊಳ್ಳದೇ ಅಲ್ಪಸ್ವಲ್ಪ ಚೇತರಿಸಿಕೊಂಡರು.

"ಅಷ್ಟೊಂದು ಮೈ ಮೇಲೆ ಪ್ರಜ್ಞೆ ಇಲ್ಲದಿದ್ದರೇ ಹೇಗೆ ? ಹೋಗಿ.... ಕೆಲ್ಸ ನೋಡ್ಹೋಗು" ಗದರಿಸಿ ಕಳಿಸಿದರಷ್ಟೆ.

"ಎಲ್ಲೋ ಎಡವಿಬಿದ್ದಿದ್ದಾನೆ. ಮೊದ್ಲಿಗಿಂತ ಈಗ ಎಷ್ಟೋ ಹುಷಾರ್...! ತರೋ ಸಾಮಾನಿನ ಲಿಸ್ಟ್ ಮಾಡ್ಕೊಂಡ್ ಹೋಗಿ ಸಾಮಾನು ತಂದ್ಕೋತಾನೆ. ಲೆಕ್ಕದಲ್ಲು ಸುಧಾರಿಸಿದ್ದಾನೆ" ಹೊಗಳಿದರಷ್ಟೆ.

ವಸಂತ ಮುಖ ದಪ್ಪಗೆ ಮಾಡಿಕೊಂಡು ಹೋದ.

ಆಫೀಸ್‌ನ ಇಂಜಿನಿಯರ್ ಬಂದಿದ್ದರಿಂದ ಬೇಗನೆ ಮನೆ ಬಿಟ್ಟ. ಗೋಪಿ ಅಡಿಗೆ ಮನೆಯಲ್ಲಿಯೇ ಉಳಿದಿದ್ದರಿಂದ ಶಾರದಾನೇ ಕಾಫಿ ಒಯ್ದು ಕೊಟ್ಟಳು. ಅಷ್ಟು ಸರಳವಾಗಿದ್ದ ಶಾರದ ತುಂಬ... ತುಂಬ ಚೆಲುವಾಗಿ ಕಂಡಳು. ತನ ಬಾಹುಗಳಲಿ ಎಳೆದುಕೊಂಡು ಕೆಲುವು ನಿಮಿಷಗಳಾದರೂ

ಸುಖ ಅನುಭವಿಸಬೇಕಿತ್ತು. ಹಾಗೇ ಆಗಲು ಅವನ ಮೂರ್ಖತ್ವ ಅವಕಾಶ ಕೊಡಲಿಲ್ಲ. ಅವಳಾಗಿ ಬಂದು ತನ್ನ ಬಾಹುಗಳಿಗೆ ಒರಗಬೇಕು, ಹಂಬಲಿಸಬೇಕು. ಇದು ಅವನ ಶಾಸನ. ಇವನು ಸದಾ ಕಹಿ ಕಕ್ಕದಿದ್ದರೇ ಅದೂ ಕೂಡ ಸಾಧ್ಯವಾಗಬಹುದಿತ್ತೇನೋ !

"ಗೋಪಿಗೆ ಹೆಚ್ಚು ಸಲಿಗೆ ಕೊಡ್ಬೇಡ. ಹಸ್ತಪ್ರತಿ ಹಳಾಗಿದ್ದಕ್ಕೆ ನಂಗೂ ಬೇಸರವಿದೆ" ಒಂದು ಮಾತು ಹೇಳಿದ. ಅಪರಾಧ ಭಾವ ಅದನ್ನು ನುಡಿಸಿದಂತಿತ್ತು.

ಶಾರದ ಮಾತಾಡಲಿಲ್ಲ. ಮೌನ ಕೆಲವು ಕಹಿ ಮಾತು, ಪ್ರಸಂಗಗಳನ್ನು ದೂರವಿರಿಸುತ್ತದೆಯೆಂದು ಸೇತುರಾಮ್‌ನಿಂದ ಕಲಿತಿದ್ದಳು. ಸ್ವತಃ ಎಷ್ಟೇ ಓದಿಕೊಂಡರೂ ಅವರ ಅನುಭವ ವಿವೇಕಯುತ ಮಾತುಗಲು ಸದಾ ಅವಳ ಬೆಂಗಾವಲಿಗೆ ಇರುತಿತ್ತು.

ಸ್ನಾನ ಮುಗಿಸಿಕೊಂಡು ಡೈನಿಂಗ್ ಹಾಲ್‌ಗೆ ಬಂದ ಕಾಶೀಪತಿಗಳು "ಶಾರದ, ಆ ಹಸ್ತಪ್ರತಿ ತಗೊಂಡ್ಬಾ. ಕಾಫೀ ಕರೆಗಳಿಂದ ಹೇಗೆ ಮುಕ್ತಿಗೊಳಿಸಬೇಕೋ, ನೋಡೋಣ" ಎಂದರು.

"ನೀವು ತಿಂಡಿ ಮುಗ್ಸಿ, ಅಂಕಲ್" ತಟ್ಟೆ ಹಾಕಿ ಉಪ್ಪಿಟ್ಟು ಬಡಿಸಿದಾಗ, ಇನ್ನೊಂದು ತಟ್ಟೆ ಹಾಕಿ "ನೀನು ಕೂತ್ಕೊಂಡ್‌ಬಿಡು. ದಢ ದಢ ತಿಂದು ಹೋಗ್ತಿ" ಮಮತೆಯಿಂದ ಹೇಳಿದರು.

ಅವರ ಮಾತಿಗೆ ಕೂತಳು. ಎಂದೂ ಕಾಣದ ವ್ಯಾಕುಲತೆ ಶಾರದಳ ಮುಖದಲ್ಲಿ ದಟ್ಟೈಯಿಸಿತ್ತು. ಬೆಳದಿಂಗಳಿನಂತಿದ್ದ ಅವಳ ಮುಖದಲ್ಲಿ ದಟ್ಟವಾದ ಕಾರ್ಮೋಡಗಳು ಮಳೆ ಬಂದ ಹೊರತು ಆಕಾಶ ಶುಭ್ರವಾಗದು. ಅದು ಸುರಿಯಬಾರದೆಂಬ ವಿಷ್ಣು ಸುದರ್ಶನ ಚಕ್ರ ಅಡ್ಡವಿಟ್ಟಂತೆ ಕಂಡಿತು.

"ಶಾರದ, ನಿನ್ನ ಮನಸ್ಸಿಗೆ ತುಂಬ ನೋವಾಗಿದೆ."

ಅವರ ಮಾತಿಗೆ ಪ್ರತಿಕ್ರಯಿಸಲಿಲ್ಲ. ಅವರ ಪ್ರಕಾರ ವಿಷ್ಣು ಚಕ್ರ ಒಂದಿಷ್ಟು ಚಲಿಸಿದರೂ ಮೋಡಗಳು ಭಯಂಕರವಾಗಿ ಮಳೆ ಸುರಿಸಬಹುದು. ಅವಳ ಮನಸ್ಸಿನ ದೃಢತೆ ವರ್ಷಕ್ಕೆ ಅಡ್ಡಕಟ್ಟೆ ಹಾಕುವಷ್ಟು ಸಮರ್ಥವಾಗಿತ್ತು.

ಕಾಶೀಪತಿಗಳು ಒಂದಿಷ್ಟು ಗೋಪಿಗೆ ಬಯ್ದರು. ಕಾಫಿ ಕುಡಿದ ನಂತರ ಮತ್ತೆ ಹಸ್ತಪ್ರತಿಯ ಬಗ್ಗೆ ವಿಚಾರಿಸಿದರು.

"ಶ್ರೀಧರಮೂರ್ತಿಗಳು ಒಂದಲ್ಲ, ಎರಡು ಸಲ ಕವನಗಳನ್ನು ಓದಿ ಅವುಗಳ ಸೊಗಸು, ಭಾಷೆಯ ಚೆಲುವನ್ನು ಪರಿಚಯಿಸಿದ್ದಾರೆ. ನಾನೊಮ್ಮೆ... ಓದ್ತೀನಿ".

ಅವರಿಗೆ ಏನೆಂದು ತಿಳಿಸಿಯಾಳು? ಕಾಲೇಜಿಗೆ ಹೋಗುವಾಗ ಕಾಂಪೌಂಡ್‌ನ ಗಿಡಗಳ ಬುಡದಲ್ಲಿ ಬಿದ್ದಿದ್ದ ಅವಶೇಷಗಳೇ ಹಸ್ತಪ್ರತಿಯ ಪಳೆಯುಳಿಕೆಗಳೆಂದು ತಿಳಿಸಿದಳು.

"ಬರ್ತೀನಿ ....ಅಂಕಲ್" ಆರಾಮಾಗಿ ಹಾದು ಹೋದಳು.

ಅವರ ಊಹೆ ಬೇರೆ ಇತ್ತು. ಪುಟಗಳ ಮೇಲೆ ಅಲ್ಲಲ್ಲಿ ಕಾಫಿಯ ಸಿಂಪರಣೆಯಾಗಿರಬೇಕೆಂದು ಮಾತ್ರ ಅಂದುಕೊಂಡಿದ್ದರು. ಆದರೆ ಇಂಥ ದುಸ್ಥಿತಿಯನ್ನು ನೋಡಿ ಕೆಂಡ ಮಂಡಲವಾದರು.

ಅಡಿಗೆ ಮನೆಯನ್ನೊರೆಸುತ್ತಿದ್ದ ಗೋಪಿಯನ್ನು ಕಿವಿಹಿಡಿದು ಹೊರಗೆ ಎಳೆದೊಯ್ದು ತೋರಿಸಿದರು.

"ಇದೆಲ್ಲ ಏನು ! ಪೇಪರ್‌ಗಳು ಈ ಸ್ಥಿತಿಗೆ ಬರೋಕೆ ಎಷ್ಟು ಕಾಫಿ ಒಯ್ದೇ. ಇನ್ನೊಂದು ಕ್ಷಣ ಮನೆಯಲ್ಲಿ ಇರಕೂಡ್ದು" ಜೋರು ಮಾಡಿದರು.

ಅವನು ಕಾಲಿಡಿದು ಇಡೀ ಚಿತ್ರವನ್ನೇ ಬಿಡಿಸಿಟ್ಟ ಅವರ ಮುಂದೆ. ಎರಡು ಕಪ್ ಕಾಫಿ ಒಯ್ದು ಇಟ್ಟಾಗ ನೀರು ತರಲು ಹೇಳಿದ್ದ ವಸಂತ. ಆಗ ಇರದಿದ್ದ ನೀರು ಇನ್ನೊಮ್ಮೆ ಹೋದಾಗ ಡ್ರಾಯಿಂಗ್ ರೂಮಿನ ನೆಲದಲ್ಲಿ ನೀರು ಇದ್ದು ಜಾರಿದ್ದು ನಿಜ. ನೀರಿನ ಗ್ಲಾಸ್‌ಗಳು ನೆಲಕ್ಕೆ ಬಿದ್ದು ಒಡೆದಿತ್ತು. ಆದರೆ ಕಾಫಿ ಕಪ್‌ಗಳು ಒಡೆದಿದ್ದು ಅವನಿಗೆ ಗೊತ್ತಿಲ್ಲ.

"ನಿಜ ಯಜಮಾನ್ರೆ" ಭೋರೆಂದು ಅಳಲು ಷುರು. ಇವರು ಎಷ್ಟೇ ಬೆದರಿಸಿದರೂ ಅವನ ಮಾತು ಇಷ್ಟೆ.

ಕಾಶೀಪತಿಗಳು ಸುಮ್ಮನೆ ಕೂತುಬಿಟ್ಟರು. ಎರಡು ಕಪ್ ಕಾಫಿಯನ್ನು ತಾನೇ ಸುರಿದು ಕಪ್‌ಗಳನ್ನು ನೆಲಕ್ಕೆ ಎಸೆದು ಒಡೆಯುವುದರ ಜೊತೆಗೆ, ಪುಟಗಳನ್ನು ಹರಡಿ ಸುಡುಸುಡು ಮತ್ತಷ್ಟು ಕಾಫಿಯನ್ನು ತಂದು ಒಯ್ದಿದ್ದ. ಪೂರ್ತಿ ನಾಶ ಮಾಡುವುದು ಅವನ ಪಣವಾಗಿತ್ತು. ಅದರಲ್ಲಿ ಸಫಲವಾದ ಕೂಡ.

ಈ ತಪ್ಪಿಗೆ ಅವರು ಮಗನನ್ನು ಕ್ಷಮಿಸಲಾರರು.

* * * *

ಶಾರದ ಪಿಡಿಯಡ್ ಮುಗಿಸಿಕೊಂಡು ಅಧ್ಯಾಪಕರ ಕೋಣೆಗೆ ಬಂದಾಗ ಅವಳಿಗೊಂದು ಫೋನ್ ಇತ್ತು. ಆ ಕಡೆಯಿಂದ ಶಾಂತ ತಾಯಿ ಅವಳನ್ನು ರಿಕ್ವೆಸ್ಟ್ ಮಾಡಿಕೊಂಡರು.

"ಶಾರದ, ಒಂದಿಷ್ಟು ಮಾತಾಡೋದಿದೆ. ... ಬಾಮ್ಮ ಬರ್ತೀಯಾ... ತಾನೇ?"

ಇಲ್ಲವೆನ್ನಲಾಗಲಿಲ್ಲ. ಹಿಂದಿನ ದಿನದ ಘಟನೆಯಿಂದ ತುಂಬ ನೊಂದಿದ್ದರಿಂದ, ಮನಸ್ಸು ಮನೆಯನ್ನು ಅಸಹ್ಯಿಸಿಕೊಳ್ಳುತಿತ್ತು. ಈಗಲೂ ಅವಳ ಕಣ್ಮುಂದೆ ಅದೇ ದೃಶ್ಯವೇ. ಬೆಳಿಗ್ಗೆ ಕೆಲಸದವಳು ಗಿಡ್ಡದ ಬುಡದಲ್ಲಿ ಬಿದ್ದಿದ್ದ ಪೇಪರ್‌ನ ಕಳೆಗೆಟ್ಟ ಅವಶೇಷಗಳನ್ನು ಗುಡಿಸಿ ಹೊರಗಿನ ಮುನಿಸಿಪಾಲಿಟಿ ತೊಟ್ಟಿಗೆ ಚೆಲ್ಲಿದಾಗ, ಸೇತುರಾಮ್ ಕಣ್ಮುಂದೆ ತೇಲಿದರು.

"ತಾತ, ನೀನು ಬರ್ದ ಚಿತ್ರವನ್ನೇ ನನ್ನ ಕವನ ಸಂಕಲನಕ್ಕೆ ಮುಖ ಪುಟವಾಗುತ್ತೆ, ಅದೇ ಹೆಸರು... ಹಂಸ ಪಲ್ಲಕಿ." ಅವರ ಫೋಟೋ ಮುಂದೆ ನಿಂತು ಸಂತೋಷದಿಂದ ಆ ದಿನ ಹೇಳಿಕೊಂಡಿದ್ದಳು. "ನೀವೂ ಚಿತ್ರ ಕಲಾವಿದ ಆದ್ರಿ, ಬದುಕಿದ್ದಾಗ ನೀವು ಸಾಧಿಸಿದ್ದಿದ್ದನ್ನು, ಈಗ ಸಾಧಿಸಿದ್ದೀರಿ, ನಿಮ್ಮ ಮೊಮ್ಮಗಳ ಮುಖಾಂತರ."

ಆದರೆ ಈಗ ಅವಳಿಗೆ ಅವರ ಫೋಟೋ ಕೂಡ ನೋಡುವ ಧೈರ್ಯವಿಲ್ಲ.

ಇವಳು ಪ್ರೊಫಸರ್ ಶಾಂತ ಮನೆ ತಲುಪಿದಾಗ ಜಲಜಮ್ಮ ಮಾತ್ರ ಇದ್ದರು. ತೀರಾ ಸಂದಿಗ್ಧದಲ್ಲಿದ್ದಂತೆ ಕಂಡರು. ಲಕ್ಷ್ಮಿ ಮತ್ತೆ ಏನಾದರೂ ಆತ್ಮಹತ್ಯೆಗೆ ಪ್ರಯತ್ನಿಸಿದಳಾ, ಎನ್ನುವ ಅನುಮಾನ.

"ಹೇಗಿದ್ದೀರಿ ? ಲಕ್ಷ್ಮೀ ... ಹೇಗಿದ್ದಾಳೆ ?" ಕೇಳಿದಳು.

"ಬಾಮ್ಮ... ಬಾ.... ಅವ್ಳು ಚೇತರಿಸ್ಕೋತಾ ಇದ್ದಾಳೆ. ನಿನ್ನ ಸಹಾಯ ಸ್ವಲ್ಪ ಬೇಕಾಗಿತ್ತು". ತುಂಬು ವಿಶ್ವಾಸದಿಂದ ಕೈ ಹಿಡಿದು ಕರೆದೊಯ್ದರು ಒಳಕ್ಕೆ. "ಈ ಸಂದರ್ಭದಲ್ಲಿ ನಂಗೆ ನೀನೇ ನೆನಪಿಗೆ ಬಂದಿದ್ದು. ಲಕ್ಷ್ಮೀನ ನೋಡೋಕೆ ಕೊನೆ ಮನೆ ಅಯ್ಯಂಗಾರರ ಮಗ ಪಾರ್ಥ ಬಂದಿದ್ದ. ಅವ್ಳು, ಅವ್ನು ಪ್ರೀತಿಸಿಕೊಂಡಿದ್ದರಂತೆ. ಅದು ಆತ್ಮಹತ್ಯೆವರ್ಗ್ಗೂ ಹೋಗಿದೆ. ಈಗೇನ್ಮಾಡೋದು, ಒಂದೂ ತೋಚ್ತಾ ಇಲ್ಲ" ಹೇಳಿಕೊಂಡರು.

ಕಾಲೇಜಿನಲ್ಲಿ ಓದಿರುವ, ಈಗ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಅವಳಿಗೆ ಯುವಕ, ಯುವತಿಯರ ಪ್ರೇಮ, ಪ್ರೀತಿ ಹೊಸದಲ್ಲ.

ಅಪರೂಪಕ್ಕೆ ಆತ್ಮಹತ್ಯೆ ಪ್ರಕರಣಗಳಾದರೂ ಮದುವೆಯುವರೆಗೂ ಹೋಗುತ್ತಿದ್ದ ಜೋಡಿಗಳು ಕಡಿಮೆ.

"ಈಗ ಲಕ್ಷ್ಮಿ ವಯಸ್ಸು ಎಷ್ಟು ?" ಕೇಳಿದಳು.

"ಒಂದೇ ......" ಎಂದು ಆಕೆ ಒಳಗೆ ಹೋಗಿ ಮಾಮೂಲಿ ಲೋಟದಲ್ಲಿ ಕಾಫಿ ಹಿಡಿದು ಬಂದು "ಮೊದ್ಲು ಕುಡೀ, ನಂಗೆ ದಿಕ್ಕು ತೋಚದಂತಾಗಿದೆ" ನೆಲದಲ್ಲಿಯೇ ಕೂತರು.

ಶಾರದ ಪರ್ಸ್ ಟೀಪಾಯಿ ಮೇಲಿಟ್ಟು ತಾನು ನೆಲದಲ್ಲಿ ಅವರ ಪಕ್ಕದಲ್ಲಿಯೇ ಕೂತಳು. ಅಷ್ಟು ದೊಡ್ಡ ಲೋಟದ ಕಾಫೀ ಖಾಲಿ ಮಾಡಲು ಮೂರು, ನಾಲ್ಕು ನಿಮಿಷಗಳೇನು, ಐದು ನಿಮಿಷಗಳು ಬೇಕಿತ್ತು. ಕುಡಿಯದಿದ್ದರೆ ಆಕೆಯ ಮನಸ್ಸಿಗೆ ನೋವು.

"ಲಕ್ಷ್ಮಿ ವಯಸ್ಸು ಎಷ್ಟು ?" ಮತ್ತೆ ಪ್ರಶ್ನಿಸಿದಳು.

"ಹದಿನಾರು ತುಂಬಿ ಹದಿನೇಳಕ್ಕೆ ಬಿತ್ತು. ನಮ್ಮ ಪಾರ್ವತಿ ಶಾಂತ ಮನೆಯಲ್ಲಿ ಸದಾ ಪುಸ್ತಕದ ಮುಂದೆ ಕೂತು ಕೂತು ಸವೆದುಹೋದರೇ, ಲಕ್ಷ್ಮಿಯೊಬ್ಬಳೇ ಚೆನ್ನಾಗಿ ತಿಂದು ಮೈ ಕೈ ತುಂಬಿಕೊಂಡು ಇಪ್ಪತ್ತರ ವಯಸ್ಸಿನ ಹುಡ್ಗಿಯಂತೆ ಕಾಣ್ತಾಳಷ್ಟೆ."

ಸಮಸ್ಯೆ ಈಗ ಎಲ್ಲಿದೆಯೆಂದು ಅರ್ಥವಾಯಿತು ಅವಳಿಗೆ. ಕಾನೂನು ಪ್ರಕಾರವಾಗಿಯೂ ಅವಳದು ಮದುವೆಯ ವಯಸ್ಸಲ್ಲ. ಸಿನಿಮಾಗಳಲ್ಲಿನ 'ಟಿನೇಜ್ ಲವ್' ಅವಳಿಗೆ ನಗು ಬಂತು.

"ಲಕ್ಷ್ಮೀ ಏನು ಹೇಳ್ತಾಳೆ ?"

"ಅವ್ಳು ಬರೀ ಕಣ್ಣೀರು ಸುರಿಸ್ತಾಳೆ. ಮತ್ತೆ ಎಲ್ಲಿ ಆತ್ಮಹತ್ಯೆಯ ಪ್ರಯತ್ನಕ್ಕೆ ಕೈ ಹಾಕ್ತಾಳೋ, ಅನ್ನೋ ಭಯ. ನಮ್ಗೆ ಯಾರ್ಗೂ ಸುಳಿವು ಕೂಡ ಹತ್ತಲಿಲ್ಲ. ಈಗೇನ್ಮಾಡೋದೂಂತ ದಿಕ್ಕು ತೋಚದಂತಾಗಿದೆ" ಅತ್ತುಕೊಂಡರು ಆಕೆ.

"ಪಾರ್ಥ.. ಹೇಗೆ ?" ವಿಚಾರಿಸಿದಳು. ಇವಳಿಗೆ ಹದಿನೇಳಾದರೇ, ಅವನದು ಕೂಡ ಮುಗ್ಧ ಪ್ರೇಮವೆನಿಸಿತ್ತು. ಆಕೆ ಎರಡು ನಿಮಿಷ ಮೌನವಹಿಸಿ ನಂತರ "ಅಷ್ಟೇ ಇರಬಹುದೇನೋ, ಪಿ.ಯು.ಸಿ.ಗೆ ಸೇರ್ಕೊಂಡಿದ್ದಾನೆ. ಚೆನ್ನಾಗಿ ಬೆಳೆದಿದ್ದರಿಂದ ಇಪ್ಪತ್ತರ ಯುವಕನಂತೆ ಕಾಣ್ತಾನೆ" ಎಂದು ಉಸುರಿದರು.

ಮುಗ ಪ್ರೇಮದ ಯುವ ಪ್ರಣಯಿಗಳು ಈ ವಯಸ್ಸಿನಲಿ ಹಿಂದು,

ಮುಂದು ಯೋಚನೆ ಇಲ್ಲ, ಬರೀ ಪ್ರೇಮ ಮುಖ್ಯವಾಗುತ್ತೆ. ಜಗತ್ತಿನಲ್ಲಿ ಎಲ್ಲಾ ಇಲ್ಲವಾಗಿ ಪ್ರೇಮಿಗಳು ತಮ್ಮ ಪ್ರೇಮ ಮಾತ್ರ ಶಾಶ್ವತ, ಅಮರ ಎನ್ನುವ ಭ್ರಮೆಯಲ್ಲಿ ಬೀಳುತ್ತಾರೆ. ಏನು ಕಾಣದ ವಯಸ್ಸು.

"ಅವ್ರ ಮನೆಯವ್ರಿಗೆ ಈ ವಿಷ್ಯ ಗೊತ್ತಾ ?"

ಆಕೆ ಹಣೆಗೆ ಕೈಯೊತ್ತಿದರು. ಅವನಿಗೆ ಇನ್ನೂ ಇಬ್ಬರು ಮದುವೆಯಾಗದ ಅಣ್ಣಂದಿರ ಜೊತೆ, ಒಬ್ಬ ಅಕ್ಕ ಕೂಡ ಇದ್ದಳು. ತುಂಬು ವಿದ್ಯಾವಂತ ಸಂಸಾರ. ತಾನೇ ಶ್ರೇಷ್ಠ ಎನ್ನುವ ಹೆಮ್ಮೆ. ತೀರಾ ಸಂಕುಚಿತ ಮನೋಭಾವದವರು ಕೂಡ. ಯಾರೊಂದಿಗೂ ಬೇರೆಯರು. ಇಂದಿನವರೆಗೂ ಯಾರನ್ನಾದರೂ ಅರಿಶಿನ - ಕುಂಕುಮಕ್ಕೆ, ಊಟಕ್ಕೆ ಕರೆದಿದ್ದಿಲ್ಲ. ತಾವಾಯಿತು ತಮ್ಮ ಸಂಸಾರವಾಯಿತು. ರ್‍ಯಾಂಕ್ ಪಡೆದು ತೇರ್ಗಡೆಯಾಗುವ ಮಕ್ಕಳು ಆ ಸಂಸಾರಕ್ಕೆ ಮುಕುಟಪ್ರಾಯರು. ಹಿರಿಯ ಮಗ ಹೆಸರಾಂತ ವಿಜ್ಞಾನಿ. ಅವನಿಗೆ ಮುವತ್ತೈದು ದಾಟಿದ್ದರೂ ಇನ್ನು ವಿವಾಹವಾಗಿಲ್ಲ. ಅಂಥದ್ದರಲ್ಲಿ ಇವನ ವಿವಾಹದ ಬಗ್ಗೆ ಯೋಚಿಸಿಯಾರೇ? - ತೀರಾ ತೊಡಕಾಗಿ ಕಂಡಿತು.

ಎಲ್ಲಾ ಹೇಳಿ ಮನದ ಭಾರ ಒಂದಿಷ್ಟು ಕಡಿಮೆ ಮಾಡಿಕೊಂಡರು. ತಮ್ಮ ಇಬ್ಬರು ಮಕ್ಕಳಿಗೆ ತಿಳಿಸಲು ಹೆದರಿಕೆ. ಅವರಿಬ್ಬರು ಖಂಡಿತ ತಂಗಿಯ ಪರ ವಕಾಲತ್ತು ವಹಿಸಲಾರರು.

"ಈಗೇನು ಮಾಡೋದು ಶಾರದ ?" ಕಣ್ಣೀರು ಹಾಕಿದರು.

"ಈ ವಿವಾಹ ಸಾಧ್ಯವಿಲ್ಲಾಂತ ಅನ್ನಿಸುತ್ತೆ. ಪಾರ್ಥನ ಮನೆಯವ್ರ ಒಪ್ಗೇ ಸಿಗೋಲ್ಲ. ವಿವಾಹವಾಗುವ ವಯಸ್ಸು ಅಲ್ಲ ಅವನದು. ಸ್ವಂತ ಸಂಪಾದನೆ ಕೂಡ ಇಲ್ಲ. ಮುಂದೆ ಹೇಗೆ ಬದುಕಬಲ್ರು. ಜೀವನಕ್ಕೆ ಭದ್ರತೆಯೇ ಇಲ್ಲ. ನೀವು ಲಕ್ಷ್ಮಿಗೆ ಬುದ್ಧಿ ಹೇಳ್ಬೇಕು. ಪ್ರೀತಿ ಆಳವಾಗಿದ್ರೆ.... ಅವ್ನು ವಿದ್ಯಾಭ್ಯಾಸ ಮುಗ್ಸಿ ಸ್ವಂತ ಸಂಪಾದ್ನೆ ಷುರು ಮಾಡಿದ್ಮೇಲೆ..... ದಂಪತಿಗಳು ಆಗ್ಲಿ."

ಶಾರದಳ ಮಾತುಗಳು ಸೂಕ್ತವೆನಿಸಿದರೂ, ಕಷ್ಟವೆನಿಸಿತು. ಪಾರ್ಥ ಹಿಂದಿನ ದಿನ ನೇರವಾಗಿ ಮನೆಗೆ ಬಂದು ಅಳುತ್ತಾ "ಆಂಟೀ, ನಮ್ಮಿಬ್ಬರಿಗೆ ಮದ್ವೆ ಮಾಡ್ಬಿಡಿ. ಇಲ್ಲದಿದ್ರೆ ನಾವಿಬ್ರೂ ದೂರ ಓಡಿ ಹೋಗ್ತೀವಿ. ಅಲ್ಲಿ ನಮ್ಮದೊಂದು ಮನೆ ಕಟ್ಟಿಕೊಂಡು ಗಿಡ, ಮರ, ಪಕ್ಷಿಗಳ ಮಧ್ಯೆ ಜೀವಿಸ್ತೀವಿ" ಉಸುರಿದ್ದನ್ನು ತಿಳಿಸಿದರು.

ಅದೆಲ್ಲ ಅಷ್ಟು ಸುಲಭವಲ್ಲವೆಂದು ಅವರಿಗೂ ಗೊತ್ತು. ಆದರೂ ಮದುವೆ ಮಾಡಿಬಿಡಲಾ, ಎನ್ನುವ ಕೋರಿಕೆಯೊಂದು. ಅದಕ್ಕೆ ಹೆಣ್ಣು ಮಕ್ಕಳ ಸಹಕಾರ ಸಿಗದು.

"ಶಾಂತ ಮೇಡಮ್‌ಗೆ ತಿಳಿಸ್ಬೇಕಿತ್ತು. ಇಲ್ಲಿ ಅವ್ರ ಸಲಹೆ, ನಿರ್ಣಯ ಹೆಚ್ಚು ಪ್ರಯೋಜನ. ಸದ್ಯಕ್ಕೆ ಮನೆಯೊಳಗೆ ಮತ್ತು ಹೊರ್ಗಿನ ವಿಷ್ಯಗಳ್ನ ಗಮನಿಸ್ತಾ ಇರೋರು, ಅವ್ರೆ ಅಲ್ವಾ !"

ಶಾರದ ಸಲಹೆ ಸೂಕ್ತವೇ. ಇದಕ್ಕೆ ಮಾತ್ರ ಒಪ್ಪರು.

"ಅವ್ನು ಒಪ್ಪೋಲ್ಲ, ಈಗ್ಲೇ ಇವ್ಳು ಓದಲ್ಲಿಲ್ಲಾಂತ ಅವ್ನಿಗೆ ಕೋಪ. ಸಾಯೋ... ಹಾಗಿದ್ರೆ... ಸಾಯ್ಲಿ.... ಅಂದುಬಿಡ್ತಾಳೆ. ಈಗೇನ್ಮಾಡ್ಲೀ" ಆಕೆ ಮತ್ತಷ್ಟು ಅತ್ತರು.

ಲಕ್ಷ್ಮಿಯ ರೂಮಿಗೆ ಹೋದ ಜಲಜಮ್ಮ ಪ್ರೇಮ ಪತ್ರಗಳ ಕಟ್ಟನ್ನು ತಂದು ಅವಳ ಮುಂದಿಟ್ಟಿದ್ದರ ಜೊತೆಗೆ ಎರಡು ಫೋಟೋಗಳನ್ನು ಮುಂದೆ ಹಾಕಿದರು.

"ಇವ್ನೇ.... ಪಾರ್ಥ"

ಫೋಟೋನ ಕೈಯಲ್ಲಿಡಿದು ನೋಡಿದಳು. ಬಿಳುಪು, ಕೆಂಪು ಬೆರೆತ ಮುಖ ಟೊಮಾಟೋನಂತಿದ್ದು, ಬಾಯಿ, ಮೂಗಿನ ಮಧ್ಯೆ ಚಿಗುರು ಮೀಸೆ ಕೂಡ ಇರಲಿಲ್ಲ. ಅಂತು ತುಂಬ ಮುದ್ದಾದ ಹುಡುಗ, ಹಣೆಯಲ್ಲಿ ಕೆಂಪು ನಾಮ ಇತ್ತು. ಇದು ಬರೀ 'ಇನ್‌ಫ್ಯಾಚುಯೇಷನ್.' ವಿವಾಹದವರೆಗೂ ಕೊಂಡೊಯ್ಯುವಂಥದಲ್ಲವೆನಿಸಿತು. ಅವನ ಕಣ್ಣುಗಳಲ್ಲಿ ಮುಗ್ಧತೆ, ಚಂಚಲತೆ ಇತ್ತೇ ವಿನಃ ಧೈರ್ಯ ಇರಲಿಲ್ಲ.

"ಅವರಿಬ್ರು ಎಲ್ಲೂ ಓಡಿ ಹೋಗೋಲ್ಲ. ಈ ವಿಷ್ಯನ ಹೇಗಾದ್ರೂ ಅವ್ರ ಮನೆಯವರ ಕಿವಿಗೆ ಗುಟ್ಟಾಗಿ ಬೀಳುವಂತೆ ಏರ್ಪಾಟು ಮಾಡಿ. ಅವರೇ ಮಗನನ್ನು ಹದ್ದುಬಸ್ತಿನಲ್ಲಿ ಇಟ್ಕೋತಾರೆ. ಲಕ್ಷ್ಮಿ ಕ್ರಮೇಣ ಸರಿ ಹೋಗ್ತಾಳೆ. ಓದು ಇಷ್ಟವಾಗದಿದ್ರೆ ಸಂಗೀತ, ಚಿತ್ರಕಲೆ ಅಥವಾ ಬೇರೆ ಯಾವುದಾದ್ರೂ ಕೋರ್ಸಿಗೆ ಸೇರಿಕೊಳ್ಳೋಂಗೆ ಮಾಡಿ. ಸದ್ಯಕ್ಕೆ ಅದೊಂದೇ ದಾರಿ ಇರೋದು" ಎಂದು ಹೇಳಿದಳು.

ಸ್ವಲ್ಪ ಮಂಕಾದರೂ, ಆಕೆಗೂ ಅದೇ ಸರಿಯೆನಿಸಿತು.

"ಯಾರ್ಗೂ ಹೇಳ್ಬೇಡ, ಈ ವಿಷ್ಯನಾ ! ಶಾಂತ ಕಿವಿಗಂತೂ ಬೀಳಲೇ ಕೂಡದು" ಎಂದು ಆಶ್ವಾಸನೆ ಪಡೆದ ನಂತರವೇ ಬೀಳ್ಕೊಟ್ಟಿದ್ದು.

ಆಟೋ ಹಿಡಿದು ನೇರವಾಗಿ ಮನೆಗೆ ಬಂದಳು. ಇನ್ನು ಅವಳ ಮನಸ್ಸು ಸರಿಹೋಗಿರಲಿಲ್ಲ. ಶ್ರೀಧರಮೂರ್ತಿಗಳು ಬಂದು ಕೇಳಿದರೇ ಏನು ಹೇಳುವುದು ? 'ಹಂಸ ಪಲ್ಲಕಿ' ಕವನ ಸಂಕಲನ ಅಚ್ಚಾಕಿಸುವ ಸಂಪೂರ್ಣ ಜವಾಬ್ದಾರಿ ಹೊತ್ತ ಅವರು ಎಷ್ಟು ಉತ್ಸಾಹದಿಂದ ಇದ್ದರೆಂದರೆ ಲಿಪಿ ಜೋಡಣೆ, ಮುದ್ರಣದ ಬಗ್ಗೆಯು ಹೋಗಿ ವಿಚಾರಿಸಿಕೊಂಡು ಬಂದಿದ್ದರು.

ಮನೆಯಲ್ಲಿಯೇ ಇದ್ದ ಕಾಶೀಪತಿಗಳು ಬಂದು ಅವಳ ಎದುರು ಕೂತರು.

"ಆ ಸ್ಥಿತಿಯಲ್ಲಿ ಹಸ್ತಪ್ರತಿ ನಾಶವಾಯ್ತೂಂತ ಕಲ್ಪನೆ ಮಾಡಿಕೊಳ್ಳೋಕೆ ಕೂಡ ಸಾಧ್ಯವಿಲ್ಲ. ಈಗ ಬರೀ, ನಾನು ಅಚ್ಚಾಕಿಸ್ತೀನಿ" ಉತ್ಸಾಹದ ಮಾತಾಡಿದರು.

"ಸದ್ಯಕ್ಕೆ ನಂಗೆ ಅಂಥ ಆಸಕ್ತಿ ಇಲ್ಲ" ನೇರವಾಗಿಯೇ ಹೇಳಿದಳು. ಈಗ ಅವರೊಂದಿಗೆ ಕೂಡ ಅವಳಿಗೆ ಮಾತುಗಳು ಬೇಕಿರಲಿಲ್ಲ.

ವಸಂತ ವಿವಾಹವಾದಂದಿನಿಂದ ಒಂದಲ್ಲ ಒಂದು ರೀತಿಯಲ್ಲಿ ಕಾಡುತ್ತಿದ್ದ. ನಿರಂತರ ಮಾನಸಿಕ ಕ್ಷೋಭೆ. ಅದು ಯಾವ ಹಂತ ಮುಟ್ಟಿತೆಂದರೆ, ಅವನ ಮಾತಿನಿಂದ ಅರ್ಧ ಕಿಲೋಮೀಟರ್ ಆಚೆ ಉಳಿಯಬೇಕೆನಿಸುತಿತ್ತು.

"ವಸಂತ ಒಳ್ಳೆಯುವನೇ ! ನೀನೇ ಸ್ವಲ್ಪ ಅವನನ್ನು ಅರ್ಥ ಮಾಡಿಕೊಳ್ಳೋ ಪ್ರಯತ್ನ ಮಾಡು. ಅವ್ನಿಗೆ ಹೇಗೆ ಬೇಕೋ, ಹಾಗೇ ನಡ್ಕೋ ಸ್ವಲ್ಪ ದಿನ. ಆಮೇಲೆ ಸರ್ಯೋಗ್ತಾನೆ" ಎಂದರು. ಮಗನನ್ನು ಬಿಟ್ಟು ಕೊಡಲಾರದ ಒದ್ದಾಟ.

ಅವರತ್ತ ನೋಡಿ ನಸುನಗೆ ಬೀರಿದಳು, ಮಾತಾಡಲಿಲ್ಲ. ಕಾಶೀಪತಿಗಳ ತಲೆ ತಗ್ಗಿತು. ತಮ್ಮನ್ನು ತಾವೇ ಅಪರಾಧಿಯು ಕಟಕಟಯಲ್ಲಿ ನಿಲ್ಲಿಸಿಕೊಂಡರು. ಒಂದು ರೀತಿಯ ಚಿತ್ರವಧೆ. ಶಾರದ ಮುಂದೆ ಕೂಡುವುದು ಪ್ರಯಾಸವೆನಿಸಿದಾಗ ಎದ್ದು ಹೋದರು ಹೊರಗೆ.

ಗೋಪಿಯನ್ನು ತಾಕೀತು ಮಾಡಿದ್ದರು. ವಸಂತ ತಾನೇ ಹಸ್ತಪ್ರತಿಯ ಮೇಲೆ ಕಾಫೀ ಒಯ್ದಿದ್ದನ್ನು ತಿಳಿಸಬಾರದೆಂದು ಹೇಗೆ ಇವರಿಬ್ಬರ ಮಧ್ಯೆ ಸಾಮರಸ್ಯವನ್ನು ಉಂಟು ಮಾಡುವುದೆಂಬ ಚಿಂತೆಯುಂಟಾಯಿತು.

ಸಂಜೆಯ ವೇಳೆಗೆ ನಾಲ್ಕು ಸಲವಾದರೂ ಶಾರದಾಗೆ ಫೋನ್ ಬಂತು. "ವಸಂತ ಓದಿದ್ದು, ಮುಗೀತಾ ? ಅವ್ನ ಅಭಿಪ್ರಾಯ ತಿಳ್ದುಕೊಂಡ್ಯಾ ?" ಪ್ರತಿಸಲವು 'ಅವರು ಇನ್ನೂ ಮನೆಗೆ ಬಂದಿಲ್ಲ, ಬಂದ್ಮೇಲೆ ವಿಚಾರಿಸ್ತೀನಿ.

ಹೇಗೂ ನಾಳೆಯಿಂದ ಕಾಲೇಜಿಗೆ ಹೋಗಿ ಬರೋದಷ್ಟೆ ಕೆಲಸ. ಪಾಠಗಳು ಮುಗಿದಿದೆ. ವಿದ್ಯಾರ್ಥಿಗಳು ಪರೀಕ್ಷೆಯ ಸಿದ್ದತೆಯಲ್ಲಿರೋದ್ರಿಂದ ಯಾರೂ ಕಾಲೇಜಿಗೆ ಬರೋಲ್ಲ' ಎಂದು ಕಡೆಯ ಸಲ ಫೋನ್ ಮಾಡಿದಾಗ ತಿಳಿಸಿದಳು.

ಅವರಿಗೆ ಏನೆಂದು ಹೇಳುವುದು ? ಅವರು ಕೇಳಬಹುದಾದ ಹತ್ತು ಪ್ರಶ್ನೆಗಳಲ್ಲೆ , ಕನಿಷ್ಟ ಒಂದಕ್ಕಾದರೂ ತನ್ನಲ್ಲಿ ಉತ್ತರ ಇದ್ಯಾ ?

ಅಂದು ಲೈಬ್ರರಿಯಿಂದ ಹಿಡಿದು ಬಂದ ಶ್ರೀ ರಾಮಕೃಷ್ಣ ಪರಮಹಂಸರ ಕೃತಿಯನ್ನು ತೆರೆದಳು. ಯಾಕೋ ಹತ್ತು ಪುಟಗಳು ಸಹ ಅವಳಿಂದ ಓದಲಾಗಲಿಲ್ಲ. ತಾನು ಮಾನಸಿಕವಾಗಿ ಒಂದಿಷ್ಟು ಸಿದ್ಧತೆಯನ್ನು ನಡೆಸಬೇಕೆಂದುಕೊಂಡಳು.

ಕಾಶೀಪತಿಗಳು ಮಗನ ಪರ್ಸನಲ್ ನಂಬರ್‌ಗೆ ಫೋನ್ ಮಾಡಿ "ಶಾರದ ತುಂಬ ತಲೆ ಕೆಡಿಸ್ಕೊಂಡ್ ಕೂತಿದ್ದಾಳೆ. ಒಂದಿಷ್ಟು ಬಂದು ಸಮಾಧಾನ ಮಾಡು, ಎಲ್ಲಾದ್ರೂ ಕರ್ಕಂಡ್ ಹೋಗು" ಹೇಳಿದರು.

"ಅದ್ನ ನಿಮ್ಮ ಮುಖಾಂತರ ಹೇಳಿಸಿದ್ಲಾ, ಅವ್ಳೇ ಫೋನ್ ಮಾಡ್ಬಹುದಿತ್ತು" ಎಂದ ಅವನದೇ ಧಾಟಿಯಲ್ಲಿ.

ಕೋಪದಿಂದ ಕಾಶೀಪತಿಗಳ ಮೂಗಿನ ಹೊಳ್ಳೆಗಳು ಅರಳಿದವು. ಒಂದು ಹಂಟರ್ ತಗೊಂಡು ಹಿಗ್ಗಾ ಮುಗ್ಗಾ ಬಾರಿಸಿ ಬಿಡಬೇಕೆನಿಸಿತು. ಹುಡುಗನಾಗಿದ್ದಾಗ ಕೈಯೆತ್ತಲು ಅವಕಾಶ ಕೊಟ್ಟಿರಲಿಲ್ಲ ಅಥವಾ ಕೊಟ್ಟಿದ್ದರೂ ಮಮತೆಯ ಸರೋವರದಲ್ಲಿ ಮೀಯಿಸುತ್ತಿದ್ದ ಅವರು ಹೊಡೆಯಲು ಸಾಧ್ಯವಿತ್ತಾ ?

"ನಾನು ಮಾಡಿದ್ದು ನಿಂಗೆ ತಪ್ಪೂಂತ ಅನ್ನಿಸ್ತಾ, ಈಗ ನಾನು ಹೇಳ್ದಂಗೆ ಮನೆಗ್ಬಾ" ಸ್ವಲ್ಪ ದನಿಯೇರಿಸಿದರು.

"ಹೇಗೆ, ಸಾಧ್ಯ ? ಅರುಣ ನರ್ಸಿಂಗ್ ಹೋಂ ಪ್ಲಾನ್ ಸ್ಟಡಿ ಮಾಡೋಕೆ, ನಾನು ಇಂಜನಿಯರ್ ಶಾರದ ಪ್ರಸಾದ್ ಹೋಗ್ತಾ ಇದ್ದೀವಿ. ಅದು ತುಂಬ ಇಂಪಾರ್ಟೆಂಟ್, ಈಗ್ಮೇನಾಡ್ಲಿ ?" ಕೇಳಿದ. ಇಲ್ಲಿ ಅವನ ಬುದ್ಧಿವಂತಿಕೆ ವ್ಯಕ್ತವಾಯಿತು.

"ಏನು ಮಾಡ್ಬೇಡ, ಫೋನಿಡು. ಪರ್ಸನಲ್ ಲೈಫ್‌ನ ಅಷ್ಟೊಂದು ನೆಗ್ಲೆಕ್ಟ್ ಮಾಡ್ಬೇಡ" ಅವರೇ ಫೋನಿಟ್ಟರು.

ತೀರಾ ಜಿಗುಪ್ಸೆಯಿಂದ ಅವರೇ ಗೆಳೆಯನ ಮನೆಗೆ ಹೋಗಿ ಕಾರ್ಡ್ಸ್

ಆಡಲು ಕೂತರು.

ಕೂತು ಕೂತು ಹಿಂಸೆಯೆನಿಸಿದಾಗ, ಅಡಿಗೆ ಮನೆಯತ್ತ ನಡೆದಳು. ಗೋಪಿ ಗೋಡೆಗೊರಗಿ ಮಂಕಾಗಿ ಕೂತಿದ್ದ.

"ಮಧ್ಯಾಹ್ನ ಊಟ ಮಾಡಿದ್ಯಾ ?"

ಕೂತಿದ್ದವನು ಎದ್ದು ನಿಂತ. ಕಣ್ಣಿಂದ ಬಳ ಬಳ ನೀರು ಸುರಿಯಿತು. ತಪ್ಪು ತನ್ನದಲ್ಲವೆಂಬಂತೆ ಹೇಳಲಾರದಂತೆ ಬಾಯಿಗೆ ಪ್ಲಾಸ್ಟರ್ ಹಾಕಿದ್ದರು.

"ಹೋಗಿ ಮುಖ ತೊಳ್ಕೊಂಡ್ ಬಾ. ಅಳೋ ಹುಡುಗರ್ನ ಕಂಡರಾಗೋಲ್ಲ ನಂಗೆ" ಕಾಫಿ ಬಿಸಿ ಮಾಡಲು ಹೋದಳು. ಆ ಮಂಕುತನದಲ್ಲಿ ಎಷ್ಟೊತ್ತು ಇರಲು ಸಾಧ್ಯ? ಅದರಿಂದ ಬಿಡುಗಡೆ ಹೊಂದಬೇಕಿತ್ತು

ಗಂಟೆ, ಎರಡು ಗಂಟೆಯಷ್ಟು ಕಾಲ ಅಡಿಗೆ ಮನೆಯಲ್ಲಿ ಕಳೆದಳು. ಉಪ್ಪಿನಕಾಯಿ ಒಗ್ಗರಣೆಯಿಂದ ಹಿಡಿದು ಚಟ್ನಿಪುಡಿ ಕೂಡ ಮಾಡಿಟ್ಟಳು. ರಾತ್ರಿಗೆ ಬಿಸಿ ಬಿಸಿಯಾಗಿ ಅಡಿಗೆ ಮಾಡಿದ್ದಳು.

ಆರಾಮಾಗಿ ಮುಖ ತೊಳೆದು ವಸಂತ ತೀರಾ ಮೆಚ್ಚಿ ಕೊಡಿಸಿದ ಕಿತ್ತಲೆ ಬಣ್ಣದ ಜರಿಯ ಸಣ್ಣ ಬಾರ್ಡರಿನ ಪತ್ತಲ ಉಟ್ಟು ಮಲ್ಲಿಗೆಯ ದಂಡೆ ಮುಡಿದು ಗೋಪಿಗೆ ಪಾಠ ಹೇಳುತ್ತ ಒಂದೆರಡು ಗಂಟೆಗಳನ್ನು ಕಳೆದಳು. ಮೊದಲು ಬಂದಿದ್ದು ಕಾಶೀಪತಿಗಳು. ಅವರ ಕಣ್ಣುಗಳಲ್ಲಿ ಮೆಚ್ಚಿಗೆ ಮೂಡಿತ್ತು.

"ಇವತ್ತು ನಮ್ಮ ವಸಂತ ಮೊದಲ್ನೇ ಬಾಲ್‌ಗೆ ಬೋಲ್ಡ್ ಆಗಿಬಿಡ್ತಾನೆ" ಹಾಸ್ಯ ಮಾಡಿದರು.

ಆದರೆ ವಸಂತ ಬಂದಿದ್ದು, ಒಂಬತ್ತರ ಸುಮಾರಿಗೆ. ಕನಿಷ್ಟ ಒಂದು ಆಯಾಸದ ನಗೆಯನ್ನಾದರೂ ಚಿಮ್ಮಿಸಬಹುದಿತ್ತು.

"ಎಲ್ಲಿಗೆ..... ಹೋಗಿದ್ದೆ ?" ಷರಟಿನ ಗುಂಡಿ ಬಿಚ್ಚುತ್ತ ಅವನು ಕೇಳಿದ ಮೊದಲ ಪ್ರಶ್ನೆ. "ಎಲ್ಲೂ.... ಇಲ್ಲ" ಎಂದಳು ಸರಳವಾಗಿ.

"ಇಷ್ಟೊಂದು ಡ್ರೆಸ್ ಮಾಡಿಕೊಂಡಿದ್ದೀಯಾ ಅಂದ್ರೆ ಎಲ್ಲೋ ಹೋಗಿರ್ತೀಯಾ ಅಂತ್ಲೇ ಅರ್ಥ. ಸದಾ ಗಂಡನಿಗಾಗಿಯೇ ಕಾಯೋ ಹೌಸ್ ವೈಫ್ ಏನು ಅಲ್ಲವಲ್ಲ. ನಿನ್ನದೇ ಆದ ಪ್ರೊಫೆಷನ್ ಇದೆ, ಸಮಾಜದಲ್ಲಿ ಸ್ಥಾನಮಾನಗಳಿವೆ. ನನ್ನ ಹೆಸರಿನಿಂದ್ಲೇ ನಿನ್ನ ಗುರುತಿಸ್ಬೇಕಿಲ್ಲ" ಖಾರವಾದ

ನುಡಿಗಳು ಅವಳಿಗೆ ಬಂದು ಅಪ್ಪಳಿಸಿದವು.

ಅವನ ಅಸಹನೆಗೆ ಕಾರಣ ಸ್ಪಷ್ಟವಾಯಿತು. 'ತನ್ನ ಪ್ರೊಫೆಷನ್‌ನ ಅವನು ದ್ವೇಷಿಸ್ತಾನೆ.' ಅದೇ ಎಲ್ಲಕ್ಕೂ ಕಾರಣವಲ್ಲವೆನಿಸಿತು.

ಷರಟನ್ನು ಅವಳ ಕೈಗೆ ಕೊಟ್ಟು "ಏನಾದ್ರೂ ಕಾಮೆಂಟ್ಸ್ ಮಾಡು. ವಿದ್ಯಾರ್ಥಿಗಳಿಗೆ ಪಾಠ ಹೇಳೋ ಉಪನ್ಯಾಸಕಿಯಲ್ವಾ, ನಂಗಿಂತ ಚೆನ್ನಾಗಿ ಮಾತಾಡಬಲ್ಲೆ" ಎಂದ. ಅದು ಅಭಿಮಾನದ ಮಾತುಗಳಲ್ಲ, ಚುಚ್ಚು ನುಡಿಗಳು.

ಷರಟನ್ನು ಹ್ಯಾಂಗರ್‌ಗೆ ಹಾಕಿ ಹೊರಗೆ ಬಂದಳು. ಒಂದು ಕೈಯಿಂದ ಚಪ್ಪಾಳೆ ಸಾದ್ಯವಿಲ್ಲವೆನಿಸಿತು. ವಸಂತ ಒಂದು ಹೆಜ್ಜೆ ಕೂಡ ಇತ್ತ ಇಡಲಾರೆ.

ಮುಂದಿನ ಡ್ರಾಯಿಂಗ್ ರೂಂಗೆ ಹೋಗಿ ಒಂಟಿಯಾಗಿ ಕೂತಳು. ಓದುವ ಅಭ್ಯಾಸವೇ ಅವಳನ್ನು ಈ ಸಮಯದಲ್ಲಿ ಕಾಪಾಡುತ್ತಿದ್ದುದ್ದು. ಈತ್ತೀಚೆಗೆ ಪ್ರಕಟಗೊಂಡ ಕೆಲವು ಆತ್ಮಚರಿತ್ರೆಗಳನ್ನು ತಂದಿದ್ದಳು. ಇಂಗ್ಲೀಷ್ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದರು, ಅವಳಿಗೆ ಕನ್ನಡ ಸಾಹಿತ್ಯ ಇಷ್ಟ. ಹೆಚ್ಚು ಓದುತ್ತಿದ್ದ ಪುಸ್ತಕಗಳೆಲ್ಲ ಕನ್ನಡದ್ದೇ.

ಬಹುಶಃ ಬಹಳ ಹೊತ್ತು ಓದಿರಬೇಕು. ಕಣ್ಣುಗಳಲ್ಲಿ ಆಯಾಸ ಕಾಣಿಸಿಕೊಂಡಿತು. ಹೆಚ್ಚು ಸಮಯ ಓದಿದಾಗಲೆಲ್ಲ ತಲೆನೋವು ಷುರುವಾಗುತಿತ್ತು, ಕಣ್ಣುಗಳಲ್ಲಿ ಆಯಾಸ ಕೂಡ, ಯಾರೊಂದಿಗೆ ಹೇಳಿಕೊಳ್ಳುವುದು ? ನಾಳೆ ಕಣ್ಣಿನ ತಜ್ಞರಿಗೆ ಒಮ್ಮೆ ಕಣ್ಣುಗಳನ್ನು ತೋರಿಸಿಕೊಂಡು ಬರಬೇಕೆನಿಸಿತು.

"ಅಕ್ಕ, ಊಟಕ್ಕೆ ಬನ್ನಿ" ಗೋಪಿ ಡ್ರಾಯಿಂಗ್ ರೂಂನೊಳಕ್ಕೆ ಬಂದ. "ಅಂಕಲ್, ಏನ್ಮಾಡ್ತಾ ಇದ್ದಾರೆ" ಎನ್ನುತ್ತಲೇ ಎದ್ದಳು. ಗೋಪಿ ತೆಪ್ಪಗಿದ್ದ. 'ಹೆಚ್ಚು ಮಾತು ಬೇಡ' ಎಚ್ಚರಿಸಿದ್ದರು ಕಾಶೀಪತಿಗಳು.

ಡೈನಿಂಗ್ ಹಾಲ್‌ಗೆ ಬಂದಾಗ ಅಪ್ಪ, ಮಗ ಎದುರು ಬದಿರು ಕೂತಿದ್ದರು ಊಟಕ್ಕೆ. ತಾನೇ ಬಡಿಸತೊಡಗಿದಳು.

"ನೀನು ಕೂತ್ಕೋ, ನಾವು ನಾವೇ ಬಡ್ಸಿಕೊಳ್ಳೋಣ" ಎಂದರು ಕಾಶೀಪತಿಗಳು. ಅವಳು ಕೂತಳು. ಆದರೆ ವಸಂತನ ಮುಖ ನೋಡುವ ಕಷ್ಟ ತೆಗೆದುಕೊಳ್ಳಲಿಲ್ಲ ಶಾರದ.

"ಹುಳಿಯಂತು ಬೊಂಬಾಟ್ ಆಗಿದೆ. ಇದು ನಿನ್ನ ಕೈನ ರುಚಿಯೇ.

ಆ ಗುಣ, ಅನುಭವ ಇವ್ನಿಗೆಲ್ಲಿದೆ" ಮೊಸರು ಹಿಡಿದು ಬಂದ ಗೋಪಿಯತ್ತ ನೋಡಿ ನುಡಿದರು ಕಾಶೀಪತಿಗಳು.

ಅವನು ಪೆಚ್ಚು ಮುಖ ಹಾಕಿದ. ಅಡಿಗೆ ಕಲಿತಿದ್ದೆ ಕಾಶೀಪತಿಗಳಿಂದ ಗೋಪಿಯ ನಳಪಾಕಕ್ಕೆ ಅವರೇ ಗುರುಗಳು.

ತಲೆತಗ್ಗಿಸಿಕೊಂಡು ಊಟ ಮಾಡುತ್ತಿದ್ದ ಶಾರದಳನೇ ನೋಡಿದ. ಹತ್ತು ಜನರಲ್ಲಿ ಎದ್ದು ಕಾಣುವಂಥ ಚೆಲುವೆಯೇ. ಅವಳು ಎದುರಿಗೆ ಇಲ್ಲದಿದ್ದಾಗ ಮೃದುವಾಗುತ್ತಿದ್ದ ಅವನ ಮನ ಕಂಡ ಕೂಡಲೇ ಕಟುವಾಗುತ್ತಿದ್ದ. ಬಹುಶಃ ಅವಳಲ್ಲಿನ ಶಾಂತತೆ, ಒಳ್ಳೆಯತನ, ಪ್ರತಿಭೆಯನ್ನು ದ್ವೇಷಿಸುತ್ತಿದ್ದ.

"ಸ್ವಲ್ಪ ಉಪ್ಪು ಹೆಚ್ಚಾಗಿದೆ, ಕೋಸಂಬರಿಗೆ" ಎಂದವನು ನೀರು ಕುಡಿದು ಕೋಸಂಬರಿಯನ್ನು ಪಕ್ಕಕ್ಕೆ ತಳ್ಳಿದ. ಕಾಶೀಪತಿಗಳಿಗೆ ವಾದ ಬೇಡವೆನಿಸಿತು. ಇನ್ನಷ್ಟು ಕೋಸಂಬರಿ ಹಾಕಿಕೊಂಡು ತಿಂದರಷ್ಟೆ.

ಸ್ವಲ್ಪ ಬೇಗ ಊಟ ಮುಗಿಸಿ ಮೇಲೆ ಎದ್ದಿದ್ದು ಶಾರದ. ಇಂದಾದರೂ ಅವಳಿಗೆ ಕಣ್ಣು ತುಂಬ ನಿದ್ದೆ ಮಾಡಬೇಕೆನಿಸಿತ್ತು. ಎರಡು ದಿನದಿಂದ ಕಣ್ಣು ಮುಚ್ಚದೇ ಭಯಂಕರ ಹಿಂಸೆ ಅನುಭವಿಸಿದ್ದಳು.

ಅಡಿಗೆ ಮನೆಯಲ್ಲಿ ಕೂಡಿಸಿ ಗೋಪಿಗೆ ಬಡಿಸಿದವಳು ಹಾಲಿನ ಲೋಟವನ್ನು ತಂದು ಕಾಶೀಪತಿಗಳ ಮುಂದಿಟ್ಟು, ಇನ್ನೊಂದು ಲೋಟವನ್ನು ಟೀವಿ ನೋಡುತ್ತಿದ್ದ ವಸಂತನ ಮುಂದಿಟ್ಟಳು.

"ಅಂಕಲ್, ನಂಗೆ ತಲೆ ನೋವು. ಸ್ವಲ್ಪ ಬೇಗ ಮಲಗ್ತೀನಿ" ಗುಡ್ ನೈಟ್ ಎಂದು ಬೆಡ್‌ರೂಮಿಗೆ ಹೋಗಿಯೇ ಬಿಟ್ಟಳು. ಮಗನ ಮುಖ ನೋಡಿದರು. ಇದು ಯಾವುದೂ ತನಗೇ ಸಂಬಂಧಪಟ್ಟಿದಲ್ಲವೆನ್ನುವಂತೆ ಕೂತಿದ್ದ.

ನೊವಾಲ್ಜಿನ್ ಮಾತ್ರೆಯನ್ನು ನುಂಗಿ ದಿಂಬಿನ ಮೇಲೆ ತಲೆ ಇಟ್ಟಳು. ತಲೆ ಸಿಡಿಯುತಿತ್ತು ಒಂದೇ ಸಮ. ಕೈಯಿಂದ ಭದ್ರವಾಗಿ ಒತ್ತಿಕೊಂಡಳು. ಅಮೃತಾಂಜನ ತಿಕ್ಕಿಕೊಂಡಳು. ನೋವೇನು ಕಮ್ಮಿಯೆನಿಸಲಿಲ. ಹೊರಳಾಡಿ ಹೋಗಿ ಕಿಟಕಿಯ ಪರದೆ ಸರಿಸಿ ತಣ್ಣನೆಯ ಗಾಳಿಗೆ ಮುಖವನ್ನೊಡ್ಡಿದ್ದು ಸ್ವಲ್ಪ ಹಿತವೆನಿಸಿತು.

ವಸಂತ ಬಂದ ಸದ್ದು ಕೇಳಿಸಿತು. ಯಾವ ರಾಗಗಳು ಚಿಮ್ಮದಷ್ಟು ಕಲ್ಲು ಮಾಡಿದ್ದ ಅವಳ ಭಾವನೆಗಳನ್ನು.

"ಮಧ್ಯಾಹ್ನ ನೀನು ಕಾಲೇಜಿನಲ್ಲಿ ಇರ್ಲಿಲ್ಲ." ಎಂದ

ಮೌನವಹಿಸಿದಳು ಶಾರದ. ತನ್ನ ಹಿಂದೆ ಸಿ.ಐ.ಡಿಯನ್ನೇನಾದರೂ ಇಟ್ಟಿದ್ದಾರ? ಅವಳ ಮೈನ ರಕ್ತವೆಲ್ಲ ಮುಖಕ್ಕೆ ನುಗ್ಗಿತು.

"ನಾನು ಸ್ಟಾಫ್ ರೂಂಗೆ ಫೋನ್ ಮಾಡಿದೆ. ನಿನ್ನ ಕೊಲೀಗ್ ಚಿತ್ರ ಸುಮನ್, ನೀನು ಹೊರಗಡೆ ಎಲ್ಲೋ ಹೋಗಿದ್ದೀಯಾಂತ ತಿಳ್ಸಿದ್ರು" ತನಗೇ ಹೇಗೆ ವಿಷಯ ತಿಳಿಯಿತೂಂತ ವಿವರಿಸಿದ.

"ಹೌದು, ಪ್ರೊಫೆಸರ್ ಶಾಂತ ತಾಯಿ ಫೋನ್ ಮಾಡಿ ಕರೆಸಿಕೊಂಡಿದ್ರು" ಹೇಳಿ ಅವಳು ಹಾಸಿಗೆಯ ಮೇಲೆ ಹೋಗಿ ಉರುಳಿಕೊಂಡಳು ಉಸಿರನ್ನು ಬಿಗಿ ಹಿಡಿದು ಸಧ್ಯ ಮತ್ತೆ ಆ ವಿಷಯ ಪ್ರಸ್ತಾಪಿಸದಿದ್ದರೇ ಸಾಕಿತ್ತು.

"ನಿನ್ಮೇಲೆ ಅವ್ರ ತಾಯಿಗೆ ಅಷ್ಟೊಂದು ಆತ್ಮೀಯತೆ ಗುಡ್, ಏನು ವಿಷ್ಯ?" ಹಾಸಿಗೆಯ ಮೇಲೆ ಕೂತು ಕೇಳಿದ.

ಎದ್ದು ಕೂತ ಶಾರದ "ನಂಗೆ ತುಂಬ ತಲೆನೋವು ಅನಗತ್ಯವಾಗಿ ಯಾರ ಯಾರ ವಿಷ್ಯವೋ ಪ್ರಸ್ತಾಪವಾಗೋದ್ಬೇಡ, ಅರ್ಥವಿಲ್ದ ಕುತೂಹಲ ನಿಮ್ದು, ಇದ್ರಿಂದ ಮನಸ್ಸುಗಳು ಹಾಳಾಗುತ್ತೆ" ಎಂದಳು.

ಮತ್ತೆ ಅವಳು ಮಲಗಿದ್ದು ಅರ್ಧರಾತ್ರಿಯ ನಂತರವೆ. ಹೋಗಿ ಮೌನವಾಗಿ ಕಿಟಕಿಯ ಬಳಿ ನಿಂತು ಗಾಳಿಗೆ ಮುಖವನ್ನೊಡ್ಡಿದಳು. ನಿಜವಾಗಲೂ ಅವಳ ಜೀವನದಲ್ಲಿ ಮದುವೆಯೆನ್ನುವ ಪದ ಅರ್ಥ ಕಳೆದುಕೊಂಡಿತ್ತು. ಅರ್ಧ ಗಂಟೆಯಾದರೂ ಅವಳ ಸ್ವಭಾವವನ್ನು ಅಹಂಕಾರವೆಂದು ಟೀಕಿಸಿದ್ದ, ಛೀಮಾರಿ ಹಾಕಿದ್ದ. 'ನಿನ್ನ ಜೀವನದಲ್ಲಿ ನಾನು ಇಲ್ಲದಿದ್ದರೇ ಬರೀ ಶೂನ್ಯ' ಎಂದ. ಅಂತು ಅಸಹನೆಯಿಂದ ಕೆರಳಿ ಹೋಗಿದ್ದ. ಬಹುಶಃ ಅವನು ಮಡದಿಯನ್ನು ಕಲ್ಪಿಸಿಕೊಂಡಿದ್ದೇ ಬೇರೆ. ಮನಸ್ಸು, ಹೃದಯ, ಮಿದುಳು ಇಲ್ಲದ ಅವಳು ಮರದ ಕೊರಡಾಗಿರಬೇಕು, ಕಲ್ಲಾಗಿರಬೇಕು-ಇಂಥ ಹೆಣ್ಣು ವಸಂತನ ಜೀವನಕ್ಕೆ ಬೇಕು.

ಬೆಳಿಗ್ಗೆ ಸ್ವಲ್ಪ ಬೇಗ ಎದ್ದು ಕಾಲೇಜಿಗೆ ಹೋಗಿ ಬರುವ ಯೋಚನೆ ಮಾಡಿದಳು. ತಾನೇ ಬೆಳಗಿನ ಉಪಹಾರ ರೆಡಿ ಮಾಡಿಟ್ಟವಳು, ರೂಮಿಗೆ ಕಾಫಿ ಕೂಡ ಒಯ್ದು ಕೊಡಲಿಲ್ಲ ವಸಂತನಿಗೆ.

ಮುಂದಿನ ವರಾಂಡದಲ್ಲಿ ಕೂತು ಪೇಪರ್ ನೋಡುತ್ತಿದ್ದಾಗ ವಾಕ್‌ನಿಂದ ಹಿಂದಿರುಗಿದ ಕಾಶೀಪತಿಗಳು ಅಲ್ಲಿಯೇ ಕೂತರು. "ನೀನು ರಾತ್ರಿ ಪೂರಾ

ನಿದ್ದೆ ಮಾಡಿದಂಗಿಲ್ಲ. ನೀನು ಹೆಚ್ಚು ಓದಿಕೊಂಡಿದ್ದೀಯಾ, ಸಂಸಾರದ ಪ್ರತಿಯೊಂದು ವ್ಯಕ್ತಿ, ಸಮಸ್ಯೆಯನ್ನು ಬುದ್ಧಿಯ ತರ್ಕದಿಂದ ನೋಡದೇ ಹೃದಯದ ಮೂಲಕ ತರ್ಕಿಸಬೇಕು. ವಸಂತನ ಮೊಂಡುತನ ನಂಗೆ ಅರ್ಥವಾಗಿದೆ. ಅವನ ಸಿಡುಕು, ಹಟಮಾರಿತನ ನೋಡಿದರೇ, ತನಗೇ ಬೇಕಾದ್ದು ಸಿಗದಾಗ ಸಣ್ಣ ಮಗು ಮಾಡುವ ದಾಂಧಲೆಯಂತೆ ಕಾಣುತ್ತೆ" ಎಂದರು.

ಬಹಳ ಶ್ರದ್ಧೆಯಿಂದ ಅವಳ ಮಾತುಗಳನ್ನು ಕೇಳಿಸಿಕೊಂಡಳು ಶಾರದ. 'ಸಣ್ಣ ಹುಡುಗನ ರಂಪಾಟವೇ' ಅಪ್ರಬುದ್ಧವಾದ ಮಗುವಿನ ಬಗ್ಗೆ ಸಹಾನುಭೂತಿ ಇರುತ್ತೆ, ಹೆತ್ತವರಿಗೆ, ಸುತ್ತಮುತ್ತಲಿನವರಿಗೆ.

"ನಿಮ್ಮ ಮಾತು ಸರಿ ಅಂಕಲ್. ನಮ್ಮ ದಾಂಪತ್ಯ ಅರ್ಥ ಕಳೆದುಕೊಂಡಿದೆ. ನಾಲ್ಕು ಗೋಡೆಗಳ ಮಧ್ಯೆ ನಾವು ಸಮಾಜಕ್ಕೆ ಮತ್ತು ನಮಗೇ ನಾವು ಮೋಸ ಮಾಡಿಕೊಳ್ಳುತ್ತ ದಂಪತಿಗಳಂತೆ ಜೀವನ ಸಾಗಿಸುವುದು ತುಂಬ ಕಷ್ಟ. ಅದ್ಕೆ, ನಾನು ನಮ್ಮ ಮನೆಗೆ ಹೋಗ್ಬಿಡ್ಬೇಕೂಂತ ತೀರ್ಮಾನ ಮಾಡಿದ್ದೀನಿ" ತನ್ನ ನಿರ್ಧಾರವನ್ನು ಯಾವ ಆವೇಗಕ್ಕೂ ಒಳಗಾಗದೆ ಅಚ್ಚುಕಟ್ಟಾಗಿ ತಿಳಿಸಿದಳು.

ಕಾಶೀಪತಿಗಳಿಗೆ ಷಾಕಾಯಿತು. ಭೂಮಿ ಇಬ್ಭಾಗವಾಗಿ ತಾವು ಅದರಲ್ಲಿ ಸೇರಿ ಹೋದ ಅನುಭವವಾಯಿತು. ಸುತ್ತಲೂ ಇಟ್ಟಿಗೆ, ಸಿಮೆಂಟು, ಮಣ್ಣು.

"ನೀನೇನು ಹೇಳ್ತಾ ಇದ್ದೀಯಾ, ಶಾರದ" ಅವರ ದನಿ ಕಂಪಿಸಿತು. ತುಟಿ ಕಚ್ಚಿಡಿದು ಒಮ್ಮೆ ಛಾವಣಿಯತ್ತ ನೋಟ ಹಾಯಿಸಿ ಕೆಳಕ್ಕೆ ಇಳಿಸಿ "ನಾನು ತುಂಬ ಯೋಚ್ಸಿಯೇ ಈ ನಿರ್ಧಾರಕ್ಕೆ ಬಂದಿರೋದು. ನಾನು, ವಸಂತ ಒಟ್ಟಿಗೆ ಇರೋಕೆ ಸಾಧ್ಯವೇ ಇಲ್ಲ. ಅನಗತ್ಯವಾದ ಕಿರಿಕಿರಿಯನ್ನು ನೀವು ಅನುಭವಿಸ್ಬೇಕಾಗುತ್ತೆ. ಅದಕ್ಕೆ ಅವಕಾಶ ಬೇಡ. ನಾಳೆ ಹಳ್ಳಿಗೆ ಷಿಫ್ಟ್ ಆಗಿಬಿಡೋಣಾಂತ. ಅಜ್ಜಿ, ತಾತನು ಹಳ್ಳಿಗೆ ಹೋಗ್ಬಿಟ್ರೆ.. ಮನೆ ಹಾಳಾಗುತ್ತೆ. ಅಪ್ಪನ ಪುಸ್ತಕಗಳು ಧೂಳಿಡಿದು ಹೋಗುತ್ತೆ" ಎಂದಳು ನಿಧಾನವಾಗಿ.

ಕೆಲವು ಕ್ಷಣ ಅವರ ಮಿದುಳು ನಿಷ್ಕ್ರೀಯವಾಯಿತು. ದಿಕ್ಕು ತೋಚದ ಸ್ಥಿತಿ. ಈ ಮಟ್ಟಕ್ಕೆ ಹೋಗಬಹುದೆಂಬ ದಿಗಿಲು, ಆಗಾಗ ಉಂಟಾಗುತ್ತಿದ್ದರೂ ಶಾರದ ಅಂಥ ನಿರ್ಧಾರಕ್ಕೆ ಬರಲಾರಳೆಂಬ ಮೊಂಡು ಧೈರ್ಯ-ಅದು ಮರಳಿನ ಗೋಡೆಯಾಗಿ ಕುಸಿಯುವ ಹಂತ ತಲುಪಿತು.

"ಹೇಗೆ, ಸಾಧ್ಯ ? ವಿವಾಹವಾದ ನಂತರ ಇಲ್ಲಿ ಇರಬೇಕಾದವ್ಳು. ಆ ಮನೆಯ ಬಗ್ಗೆ ನಿಂಗೆ ಮಾತ್ರವಲ್ಲ, ನಂಗೂ ಪ್ರೀತಿ ಇದೆ. ಅದ್ಕೆ ಬೇರೆ ವ್ಯವಸ್ಥೆ ಮಾಡ್ತೀನಿ. ಆಗಾಗ ಹೋಗ್ಬರೋಣ" ತಡವರಿಸುತ್ತ ಹೇಳಿದರು ಕಾಶೀಪತಿಗಳು.

"ಮುಖ್ಯವಾದ ವಿಷ್ಯನೇ ಬಿಟ್ರೆ, ಅಂಕಲ್ ವಿವಾಹದ ನಿಜ್ವಾದ ಅರ್ಥವೇನು ? ನಂಗೆ ವಸಂತ್ ಜೊತೆ ಜೀವನ ನಡ್ಸೋಕೆ ಆಗ್ತಾ ಇಲ್ಲ. ನನ್ನೊಬ್ಬಳಿಂದ ಸಾಮರಸ್ಯ ಸಾಧಿಸೋಕೆ ಸಾಧ್ಯವಿಲ್ಲ. ನನ್ನ ಜೊತೆಯ ಬದ್ಕು ಅವ್ರಿಗೂ ಕಷ್ಟ, ನಂಗೂ ಕಷ್ಟ. ಅವ್ರಿಗೆ ಬೇಕಾದ್ದು ನನ್ನಿಂದ ಅವ್ರಿಗೆ ಸಿಗದೇ, ನಂಗೆ ಬೇಕಾದ್ದು ಅವ್ರಿಂದ ಸಿಗ್ದೇ ನರ್ಕ ಅನುಭವಿಸೋಕ್ಕಿಂತ ದೂರ ಇರೋದು ಒಳ್ಳೇದು".

ಅವಳ ದನಿಯಲ್ಲಿನ ದೃಢತೆಗೆ ಬೆಚ್ಚಿದರು.

ಶಾರದ ಸುಮ್ಮನೆ ಮುಂದಿನ ಡ್ರಾಯಿಂಗ್ ರೂಮಿಗೆ ಹೋಗಿ ಪುಸ್ತಕಗಳನ್ನೆಲ್ಲ ಒಂದು ಸೂಟ್‌ಕೇಸ್‌ಗೆ ಜೋಡಿಸಿದಳು. ಪ್ರೀತಿಯಿಂದ ಆ ಶೆಲ್ಫ್‌ಗಳ ಮೇಲೆಲ್ಲ ಕೈಯಾಡಿಸಿದಾಗ ಕಣ್ತುಂಬಿತು. ಕಾಲಿಟ್ಟ ದಿನ ಡ್ರಾಯಿಂಗ್ ರೂಂನ ಉತ್ತಮ ಲೈಬ್ರರಿಯನ್ನಾಗಿ ಮಾಡಬೇಕೆಂದುಕೊಂಡಿದ್ದ ಕನಸ್ಸನ್ನು ಇಂಚು ಇಂಚಾಗಿ ತುಂಡರಿಸಿ ಚೆಲ್ಲಿದ್ದ ಈ ಮನೆಯಲ್ಲಿ ಅವಳು ಬೆಳೆಯುಬಾರದೆಂಬ ನಿರ್ಧಾರ ತೊಟ್ಟವನಂತೆ ಶಾರದ ಉತ್ಸಾಹ, ಕ್ರಿಯಾಶೀಲತೆಯನ್ನು ತುಂಡರಿಸಿ ಚೆಲ್ಲಾಡಿದ್ದ ನಿರಂತರವಾಗಿ.

ಬಹಳ ಹೊತ್ತಿನ ಮೇಲೆ ಹೊರಗೆ ಬಂದಳು. ಕಾಶೀಪತಿಗಳು ಕಾಂಪೌಂಡ್‌ನಲ್ಲಿ ಯಾರೊಂದಿಗೋ ಸಂಭಾಷಿಸುತ್ತಿರುವುದು ಕೇಳಿಸಿದರೂ, ತಲೆ ತಿರುಗಿಸಿ ನೋಡದೇ ಅಡಿಗೆ ಮನೆಗೆ ಹೋದಳು.

ತಿಂಡಿಯ ಪಾತ್ರೆಗಳನ್ನು ಡೈನಿಂಗ್ ಟೇಬಲ್ ಮೇಲೆ ಜೋಡಿಸುತ್ತಿದ್ದ ಗೋಪಿ "ಅಕ್ಕ, ಅಣ್ಣಾವ್ರು ಕೇಳಿದರು, ನಿಮ್ಮನ್ನು" ಅನ್ನುತ್ತಿದ್ದಂಗೆ ಬಂದ ಕಾಶೀಪತಿಗಳು ಕೈ ಹಿಡಿದು ತಮ್ಮ ರೂಮಿಗೆ ಕರೆದೊಯ್ದರು. ಪ್ಲೀಸ್ ಇಂಥ ನಿರ್ಧಾರಕ್ಕೆ ಬರ್ಬೇಡ ಶಾರದ. ದಂಪತಿಗಳ ಮಧ್ಯೆ ಒಲವೇ ಪ್ರಧಾನ ಪಾತ್ರವಹಿಸ್ಬೇಕು. ಅವನದು ಮೊಂಡುತನ. ಸ್ವಲ್ಪ ದುಡುಕಿದರೂ ಇಡೀ ಮನೆ ಕತ್ತಲೆಯಲ್ಲಿ ಮುಳುಗಿಹೋಗುತ್ತೆ. ಸದ್ಯಕ್ಕೆ ಅವ್ನ ಬಳಿ ಈ ಪ್ರಸ್ತಾಪ ಬೇಡ. ನಾನು ವಸಂತನಿಗೆ ಬುದ್ಧಿ ಹೇಳ್ತೀನಿ ತಡೆದರು.

ಶಾರದ ಸುಮ್ಮನಾದಳು. ವಸಂತ ಬದಲಾಗಲು ಸಾಧ್ಯವೇ ? ಖಂಡಿತ ಇಲ್ಲವೆನಿಸಿತು. ಕೈಹಿಡಿದವಳ ಬಗ್ಗೆ ಅವನಲ್ಲಿ ವ್ಯಕ್ತಿಗತವಾದ ಕಲ್ಪನೆ ಇತ್ತು. ಅದನ್ನೆ ನಿರೀಕ್ಷಿಸುತ್ತಿದ್ದ ಅದನ್ನು ಬೇರೆಯವರು 'ಸ್ಯಾಡಿಸಂ' ಎನ್ನಬಹುದು.

"ಒಂದು ವಾರ ಅವಕಾಶ ಕೊಡು" ಕೇಳಿದರು ಕಾಶೀಪತಿಗಳು.

"ಆಯ್ತು....." ಎಂದಳಷ್ಟೆ.

ಸೂಟುಕೇಸ್ ಸೇರಿದ ಪುಸ್ತಕಗಳೇನು ಜೋಡಣೆಯಾಗಲಿಲ್ಲ. ಅದರಲ್ಲೇ ಉಳಿಯಿತು. ಮತ್ತೆ ಅವಳು, ಕಾಶೀಪತಿಗಳು ಡೈನಿಂಗ್ ಹಾಲ್‌ಗೆ ಬರುವ ವೇಳೆಗೆ ವಸಂತ ಬಂದು ಕೂತಿದ್ದ.

ಶಾವಿಗೆ ಉಪ್ಪಿಟ್ಟನ್ನು ಬಡಿಸಿದಾಗ, ಅವನ ಮುಖ ಸಿಂಡರಿಸಿತು. "ನನಗೆ ಈ ತಿಂಡಿ ಇಷ್ಟವಾಗೋಲ್ಲಂತ ಗೊತ್ತಿಲ್ವಾ ? ಬರೀ ಕಾಟಾಚಾರಕ್ಕೆ ತಿನ್ನಬಾರ್ದು ಅನ್ನೋ ಉದ್ದೇಶವಿಟ್ಕೊಂಡೇ ಮಾಡೋದು. ಪಾಠ ಹೇಳೋದರಲ್ಲಿ ಬದ್ಧಿವಂತಳಾದ್ರೆ.... ಸಾಲ್ದು. ಗೃಹಿಣಿಯಾಗಿ ಕೂಡ ಶಭಾಷ್‌ಗಿರಿ ಪಡೆಯಬೇಕು" ಅವನ ತಂದೆಯ ಎದುರಿನಲ್ಲಿಯೆ ಟೀಕಿಸಿದ.

"ಎಷ್ಟೋ ಸಲ ನಂಗೆ ಶಾವಿಗೆ ಉಪ್ಪಿಟ್ಟು ಇಷ್ಟ ಎಂದಿದ್ದೀಯಾ, ಈಗ ರಾಜಕೀಯದವರು ಬಣ್ಣ ಬದಲಿಸಿದಂಗೆ ಬದಲಾಯಿಸ್ತೀಯಾ" ಬೇಸರ ವ್ಯಕ್ತಪಡಿಸಿದರು ಕಾಶೀಪತಿಗಳು.

ಅವನ ಮುಂದಿದ್ದ ತಿಂಡಿ ತಟ್ಟೆಯನ್ನು ಪಕ್ಕಕ್ಕೆ ಸರಿಸಿದ ಶಾರದ ಹಾಟ್ ಬಾಕ್ಸ್‌ನಲ್ಲಿದ್ದ ಚಪಾತಿ ಹಾಕಿ ಪಲ್ಯ ಬಡಿಸಿದಳು, ಬೇಕಾಬಿಟ್ಟಿ ತಿಂದ.

ಇಂದು ಮಗನ ಜೊತೆಗೆ ಅವರು ಆಫೀಸಿಗೆ ಹೋದವರು ಒಳಗಿನ ಪರ್ಸನಲ್ ರೂಮಿಗೆ ಕರೆದೊಯ್ದು.

"ಸ್ವಲ್ಪ ಕೂತ್ಕೋ, ಮಾತಾಡೋದಿದೆ" ಎಂದರು.

ನಂಗೆ, ಬೇರೆ ಕೆಲ್ಸ ಇದೆ. ಮನೆಯಲ್ಲಿಯೇ ಮಾತಾಡಬಹುದಿತ್ತು. ನನ್ನ ಮೂಡ್ ಔಟ್ ಆಗ್ಬಿಡುತ್ತೆ" ನಿರಾಕರಣೆ ಸೂಚಿಸಿದ. ಕಾಶೀಪತಿಗಳಿಗೆ ರೇಗಿತು "ಕೂತ್‌ಕೋ ಸಾಕು, ಪ್ರಪಂಚದಲ್ಲಿ ಇವನೊಬ್ನೆ ಬಿಜಿ ಇಷ್ಟೆ ಅಲ್ಲ. ಜೀವನ ! ಎಂದಾದ್ರೂ ಕೈ ಹಿಡಿದವಳ ಬಗ್ಗೆ ಚಿಂತಿಸಿದ್ದೀಯಾ ! ಸುಮ್ನೇ ವೈಯಕ್ತಿಕ ಬದ್ಕನ್ನು ಹಾಳು ಮಾಡ್ಕೋಬೇಡ. ಶಾರದ ನಿನ್ನ ಬಿಟ್ಟು ಹೋಗೋಕೆ ರೆಡಿಯಾಗಿದ್ದಾಳೆ."

"ಹೋಗ್ಲಿ .... ಬಿಡಿ ! ಎಲ್ಲಿಗೆ ಹೋಗ್ತಾಳೆ. ನಾಲ್ಕು ದಿನ ಒಂಟಿತನದಿಂದ

ಪೊಗರು ಅಡಗಿದ್ರೆ.... ತೆಪ್ಪಗೆ ಬಂದು ಕಾಲು ಹಿಡೀತಾಳೆ. ಅವ್ಳಿಗೆ ಆಗ ಬುದ್ಧಿ ಬರುತ್ತೆ" ಅಹಂಕಾರದ ಮಾತುಗಳನ್ನು ಉದುರಿಸಿದ. ವಿವೇಚನೆ ಪೂರ್ತಿಯಾಗಿ ಕಳೆದುಕೊಂಡು ಮೂರ್ಖನಾಗಿದ್ದ.

ಬರೀ ಮೂರ್ಖತನವಲ್ಲ, ಮಗ ಶತಮೂರ್ಖನಾಗಿ ಕಂಡ. ತನ್ನ ಅವಿವೇಕದಿಂದ ಸುಖ ಶಾಂತಿ, ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ.

ಕೈ ಹಿಡಿದು ಕೂಡಿಸಿದ ಕಾಶೀಪತಿಗಳು "ಶಾರದ ತುಂಬ ಒಳ್ಳೆ ಹುಡುಗಿ. ಮನಸ್ಸು, ಹೃದಯ, ಮಿದುಳು ಇರೋ ಹೆಣ್ಣು ಸಿಗೋದು ಕಷ್ಟ. ಅವೆಲ್ಲ ಇರೋ ಶಾರದ ನಿಂಗೆ ಸಿಕ್ಕಿದ್ದಾಳೆ. ನಿನ್ನ ಮಾತುಗಳಿಂದ್ಲೇ ಹಂತ ಹಂತವಾಗಿ ಅವಳ್ನ ಮುಗ್ಸೋ ಪ್ರಯತ್ನ ಮಾಡ್ತಾ ಇದ್ದೀಯಾ ಇದು ನಿಜ್ವಾಗಿ ಒಳ್ಳೇದಲ್ಲ. ಈಗಾಗ್ಲೇ ಅವ್ಳ ಮನಸ್ಸು ಕೆಟ್ಟಿದೆ. ಒಮ್ಮೆ 'ಹೃದಯ ನಿನ್ನ ವಿಷ್ಯದಲ್ಲಿ ಒಡೆದು ಹೋದ್ರೆ... ಅಲ್ಲಿ ಪ್ರತಿಬಿಂಬ ಮೂಡೋಲ್ಲ. ಬರೀ ವಿರಸ ದಾಂಪತ್ಯ. ಒಂದೇ ಮನೆಯಲ್ಲಿ ಮುಖ ತಿರುಗಿಸ್ಕೊಂಡು..... ಎಷ್ಟು ದಿನ ಇರ್ತೀರಾ! ಈಗಿನ ಪರಿಸ್ಥಿತಿಗೆ ಅದು ಸಾಧ್ಯವಾಗೋಲ್ಲ. ಒಮ್ಮೆ ಸಿಡಿದು ಹೋದ್ರೆ.... ಮತ್ತೆ ಅವ್ಳು ನಿನ್ನ ಕೈಗೆ ಸಿಗೋಲ್ಲ. ನಾನು ಹೇಳ್ದೆ ಅವ್ಳಿಗೆ ಮಿದುಳು ಕೂಡ ಇದೇಂತ. ಅದು ಅವಳ ರಕ್ಷಣೆಗೆ ನಿಲ್ಲುತ್ತೆ. ಈ ವ್ಯವಹಾರಗಳ್ನ ಕೆಲವುದಿನ ನಾನು ನೋಡ್ಕೋತೀನಿ. ಇಬ್ರೂ ಹೊರ್ಗಡೆ ಹೋಗಿ ಓಡಾಡಿ ಬನ್ನಿ. ಕೂತು ಮಾತಾಡಿ ಒಬ್ಬರನ್ನೊಬ್ರು ಅರ್ಥ ಮಾಡ್ಕೊಳ್ಳಿ. ಗಂಡು ಅನ್ನೋ ಅಹಂಕಾರ ಬೇಡ. ಅವ್ಳು ನಿನಗಾಗಿ ಅಂದುಕೊಳ್ಳೋ ಸ್ವಾರ್ಥದ ಜೊತೆ ನಾನು ಅವಳಿಗಾಗಿ ಅನ್ನೋ ತ್ಯಾಗ ಕೂಡ ಮೂಡಬೇಕು. ನಿಮ್ಮ ನಡುವೆ ಸಮಸ್ಯೆಗಳೇ ಇಲ್ಲ. ಅದು ತಾನಾಗಿ ಹುಟ್ಟಿ ಹಾಕಿಕೋತಾ ಇದ್ದೀಯಾ" ಅವನನ್ನು ಆರೋಪಿಯ ಸ್ಥಾನದಲ್ಲಿ ನಿಲ್ಲಿಸಿದರು.

"ಎಲ್ಲಾ ತಪ್ಪು ನಂದೇ ಅನ್ನೋ ತರಹ ಮಾತಾಡ್ತಾ ಇದ್ದೀರಾ ! ಇದ್ವರ್ಗೂ ಅವ್ಳಿಗೆ ಕೊಡ್ಸಿದ ಒಡವೆ, ಸೀರೆಗಳ ದೊಡ್ಡ ಲೆಕ್ಕವೇ ಇದೆ. ಅವ್ಳಿಗೆ ಏನು ಕಮ್ಮಿಯಾಗಿದೆ ?" ತನ್ನದೇ ರೀತಿಯಲ್ಲಿ ವಾದ ಮಂಡಿಸಿದ.

ಕಾಶೀಪತಿಗಳ ತಲೆ ಸಿಡಿಯತೊಡಗಿತು. ಅವನ ಮೊಂಡುವಾದ ಅಸಹನೀಯವೇ, ಸ್ವಲ್ಪ ಎಚ್ಚರ ತಪ್ಪಿದರೇ ಮನೆ ಕುಸಿಯುತ್ತೆ. ಸಧ್ಯಕ್ಕೆ ಅದನ್ನು ಅವರು ತಡೆಯಬೇಕಿತ್ತು.

"ತಪ್ಪು ಒಪ್ಪುಗಳ ಕೆದಕಾಟ ಬೇಡ. ಪ್ರೀತಿ ಎಲ್ಲಾವನ್ನು ಮರೆಸುತ್ತೆ.

ನಿನ್ನ ಕೋಪ, ಅಸಹನೆ, ಸಿಡುಕು ಮಾತುಗಳ್ನ ಸ್ವಲ್ಪ ಕಮ್ಮಿ ಮಾಡ್ಕೋ. ನೀವಿಬ್ರೂ ನಗು ನಗ್ತಾ ಇರೋದು ನಂಗೆ ಬೇಕು" ಮಗನನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿದರು. ಅವನ ಮೌನ ನೋಡಿ ಸಫಲರಾದಂತೆ ಸಂತೋಷಿಸಿದರು.

ಇವರು ಗೆಳೆಯರ ಜೊತೆ ಸುತ್ತಾಟ ಮುಗಿಸಿಕೊಂಡು ಮನೆ ತಲುಪೋ ವೇಳೆಗೆ ಕಾಶೀಪತಿಗಳು ಆಟೋದಿಂದ ಇಳಿಯುತ್ತಿದ್ದರು.

"ಎಲ್ಲಿಗೋ ಸವಾರಿ ಹೊರಟು ಬಂದಂಗಿದೆ" ಶ್ರೀಧರಮೂರ್ತಿಗಳು ಹಾಸ್ಯ ಮಾಡುತ್ತಲೇ ಆಟೋದವನಿಗೆ ಚಿಲ್ಲರೆ ಕೊಟ್ಟರು. "ಈಗ ಟೈಮ್ ಕಳೆಯಲು ಹಳೇ ಸ್ನೇಹಿತರನ್ನು ಹುಡುಕಿಕೊಂಡು ಸುತ್ತಾಡೋದೇ, ಒಂದು ಮುಖ್ಯವಾದ ಕೆಲ್ಸವಾಗಿದೆ. ವಿಶ್ರಾಂತಿ ಜೀವ್ನ ನೆಮ್ದಿಯಾಗಿರಬೇಕೂಂದರೇ .... ಮನೆಯಲ್ಲಿ ಮಕ್ಳ ಅಳುವಿನ ಶಬ್ಧ ಇರ್ಬೇಕು" ತಮ್ಮ ಮಗನ ಆಸೆ ವ್ಯಕ್ತಪಡಿಸಿದರು.

"ಅದು... ಆಗುತ್ತೆ, ಬಿಡಿ, ನಂಗೆ ಆರು ಜನ ಮೊಮ್ಮಕ್ಳು, ಒಬ್ರೂ ಹತ್ತಿರವಿಲ್ಲ. ಆದರೆ ಹಳ್ಳಿಯಲ್ಲಿನ ಹತ್ತಾರು ಮಕ್ಳು ಹುಡ್ಗಿಕೊಂಡು ಬರ್ತಾರೆ. ನನ್ನದ್ದು ತನ್ನದು ಅನ್ನೋದ್ಬಿಟ್ಟು ಮನಸ್ಸನ್ನ ವಿಶಾಲವಾಗಿ ಮಾಡ್ಕೊಂಡ್ ಬಿಟ್ಟಿದ್ದೀನಿ" ಶ್ರೀಧರಮೂರ್ತಿಗಳು ಪ್ರತಿಕ್ರಯಿಸಿದರು.

ಇಬ್ಬರೂ ಕೂಡಿಯೇ ಒಳಗೆ ಹೋದಾಗ, ಹಾಲ್‌ನಲ್ಲಿನ ಸೋಫಾ ಮೇಲೆ ಕೂತಿದ್ದ ಶಾರದ ಎದ್ದು ನಸುನಗೆಯೊಂದಿಗೆ ಸ್ವಾಗತಿಸಿದಳು.

"ಇಂದು ಬರೋ ಯೋಚ್ನೇ ... ನಂಗೂ ಇತ್ತಷ್ಟೆ" ಎಂದು ಹೇಳಿದಾಗ ಶ್ರೀಧರಮೂರ್ತಿಗಳು ಪ್ರೀತಿಯಿಂದ ತಲೆಯ ಮೇಲೊಂದು ಮೊಟಕಿ "ಬರೀ ಯೋಚನೆ ಇತ್ತಷ್ಟೆ, ಆದರೆ... ಬರ್ಲಿಲ್ಲ. ಈ ಮುದ್ಕನೇ ಹುಡ್ಕಿಕೊಂಡು ಬರಬೇಕಾಯ್ತು" ಎಲ್ಲಿ... ಅಳಿಯಂದಿರು ? ಈ ಪಾಟಿ ಬಿಜಿ ಮನುಷ್ಯನ್ನ ನಾನೆಲ್ಲೂ.... ನೋಡ್ಲಿಲ್ಲ. ಸಂಪಾದ್ನೆ ಹಣಾನ ಗೋಣಿಚೀಲದಲ್ಲಿ ತುಂಬಿಡ್ತಾರಾ, ಹೇಗೆ ? ಇಷ್ಟೊಂದು ವ್ಯವಹಾರದಲ್ಲಿ ಇನ್‌ವಾಲ್ವ್ ಆಗಿಬಿಟ್ಟರೇ... ಹೇಗೆ ! ಅಭಿಮಾನದ ಮಾತುಗಳನ್ನಾಡಿದರು.

ಒಂದಿಷ್ಟು ಲಘು ಉಪಹಾರದ ನಂತರ ಶ್ರೀಧರಮೂರ್ತಿಗಳು ವಿಷಯಕ್ಕೆ ಬಂದರು. "ಎಲ್ಲಿ ಹಸ್ತ ಪ್ರತಿ ಸಾಕಷ್ಟು ಸಲ ಫೋನ್ ಮಾಡಿ ಸೋತು ಹೋದೆ. ಏನಂದ್ರು.. ಅಳಿಯಂದಿರು ?"

ಕಾಶೀಪತಿಗಳತ ನೋಟ ಹರಿಸಿ ಮೌನವಹಿಸಿದಳು. ಆ

ಪ್ರಕರಣವನ್ನಂತು ಅವಳು ಮರೆಯುವಂತಿರಲಿಲ್ಲ. ಈಗ ಅವಳಲ್ಲಿ ಇದ್ದಿದ್ದು ಒಂದಿಷ್ಟು ಜಿಗುಪ್ಸೆ, ಹಿಡಿಯಷ್ಟು ಬೇಸರ-ಅವೆರಡರ ನಡುವೆ ಬಂದು ಸಾಸುವೆ ಕಾಳಿನಷ್ಟು ಆಸೆ.

"ತುಂಬ ... ತುಂಬ... ಹೊಗಳಿದ, ಹೆಂಡತೀನಾ ! ಅದ್ನೆಲ್ಲಿ ನಿಮ್ಗೆ ಹೇಳೋಕ್ಕಾಗುತ್ತೆ ! ಆದರೆ ಒಂದು ಚಿಕ್ಕ ದುರ್ಘಟನೆ ನಡೆಯಿತು. ನಮ್ಮ ಗೋಪಿ ಕಾಲು ಜಾರಿ, ಕಾಫಿನ ಹಸ್ತಪ್ರಕಿಯ ಮೇಲೆ ಹಾಕ್ಬಿಟ್ಟ" ತಡಬಡಿಸುತ್ತಲೇ ಉಸುರಿದರು.

"ಅಷ್ಟೇ ತಾನೇ ! ಕಾಫಿ ಬಿದ್ದ ಕಡೆ ಅಕ್ಷರಗಳು ಕದಡಿ ಹೋಗಿರಬಹುದು, ಕೆಲವು ಕಡೆ ಪೂರ್ತಿ ಕಾಣದೇ ಹೋಗಿರಬಹ್ದು. ಆ ರಿಪೇರಿಯೆಲ್ಲ ನಾನು ಮಾಡ್ತೋತೀನಿ" ಬಹಳ ಸರಳವಾಗಿ ಹೇಳಿದರು.

ಸುಮ್ಮನೆ ತಲೆ ತಗ್ಗಿಸಿ ಕೂತಿದ್ದ ಶಾರದ "ಹಸ್ತಪ್ರತಿ ಪೂರ್ತಿ ಹಾಳಾಯ್ತು ! ನನ್ನ ಕವನಗಳ ಮೂಲಕ ತಾತನ್ನು ಕಲಾವಿರನ್ನಾಗಿಸೋಕೆ ಪ್ರಯತ್ನಪಟ್ಟಿದ್ದು. ... ನಿರರ್ಥಕವಾಯ್ತು. ದಯವಿಟ್ಟು ಕ್ಷಮಿಸಿಬಿಡಿ" ಕ್ಷಮೆ ಕೇಳಿದಳು ದುಗುಡದಿಂದ.

ಶ್ರೀಧರಮೂರ್ತಿಗಳು ಜೋರಾಗಿ ನಕ್ಕು ಬಿಟ್ಟರು.

"ಅಷ್ಟೇ, ತಾನೇ ! ನಾನು ಅದರ ಜೆರಾಕ್ಸ್ ಪ್ರತಿ ತೆಗ್ದು ಇರ್ಸಿದ್ದೀನಿ 'ಹಂಸಪಲ್ಲಕಿ' ಅಚ್ಚಾಗಿ ಹೊರ ಬರುತ್ತೆ, ಜನಕ್ಕೆ ಇಷ್ಟವಾಗುತ್ತೆ ಆಮೇಲೆ ವಿಮರ್ಶಕರ ವಿಷ್ಯ".

ಅವರ ಮಾತುಗಳಿಗೆ ಗೆಲುವಾದವರು ಕಾಶೀಪತಿಗಳು, ಶಾರದಾಗೆ ಉತ್ಸಾಹವೇ ಇರಲಿಲ್ಲ.

ಹೋಗುವ ಮುನ್ನ ಶ್ರೀಧರಮೂರ್ತಿಗಳು "ಒಂದ್ವಾರದಲ್ಲಿ ಪುಸ್ತಕ ಪ್ರಿಂಟಾಗಿ ಹೊರಬರುತ್ತೆ. ನಿನ್ತಂದೆ ಸ್ನೇಹಿತರಾದ ಶ್ರೇಷ್ಠ ಸಾಹಿತಗಳು ಆದ ಜಿ. ಎಸ್.ಚಂದ್ರಶೇಖರಯ್ಯನವ್ರು ಮುನ್ನುಡಿ ಬರ್ದು ಕೊಟ್ಟಿದ್ದಾರೆ. ಅವರೇ ಆ ಪುಸ್ತಕವನ್ನು ಬಿಡುಗಡೆ ಮಾಡುತ್ತಾರೆ, ಕೂಡ" ಅತ್ಯಂತ ಸಂತೋಷದ ಸುದ್ದಿಯನ್ನು ಅವಳ ಕಿವಿಯ ಮೇಲೆ ಹಾಕಿ ಹೋದರು.

ಅವರ ಮೈ ಪುಲಕಿತವಾಯಿತು. ಅಕಾಡಮಿ ಪ್ರಶಸ್ತಿಗಳ ಜೊತೆ ಜನಮನ ಗೆದ್ದ ಶ್ರೇಷ್ಠ ಸಾಹಿತಿಯೊಬ್ಬರು ತನ್ನ ಕವನ ಸಂಕಲನಕ್ಕೆ ಮುನ್ನುಡಿ ಬರೆಯುವುದೆಂದರೆ - ರೋಮಾಂಚಿತಳಾದಳು. ಈ ಸಂತೋಷದ

ಸಮಯದಲ್ಲಿ ಒಂದಿಷ್ಟು ಕಾಂಪ್ರಮೈಸ್ ಆಗುತ್ತಿದ್ದಳೇನೋ, ಮರುದಿನದ ಘಟನೆಯಿಂದ ಪೂರ್ತಿ ವಿಚಲಿತಳಾದಳು.

ಆ ಪಿರಿಯಡ್ ಮುಗಿಸಿಕೊಂಡು ಕ್ಲಾಸ್‌ರೂಮಿನಿಂದ ಹೊರ ಬರುತ್ತಿದ್ದಂತೆ ಪ್ರೊಫೆಸರ್ ಶಾಂತ ಅವಳನ್ನು ಕೈ ಹಿಡಿದು ಕಾರಿಡಾರ್ ತುದಿಗೆ ಕರೆದೊಯ್ದು.

"ನೀನು..... ಬರೋಲ್ವಾ ?" ಕೇಳಿದರು ಪಿಸುದನಿಯಲ್ಲಿ.

"ಎಲ್ಲಿಗೆ ? ಸತ್ಯಬೋದ್ ಮಗ್ಗ ಬರ್ತ್ತಾ‌ಡೇಗಾ.... ಇನ್ನೂ ನೋಡ್ಬೇಕು" ಎಂದಳು ಅನ್ಯಮನಸ್ಕಳಾಗಿ.

ಪ್ರೊಫೆಸರ್ ಶಾಂತ ಕಣ್ಣುಗಳನ್ನು ಕಿರಿದು ಮಾಡಿ ಪಿಳಿ ಪಿಳಿ ನೋಡಿದರು. "ಮರ್ತು ಬಿಟ್ಟಿದ್ದೀಯಾ ! ಇವತ್ತು ಪ್ರೊಫೆಸರ್ ರಂಗೇಗೌಡರು, ಮಾಧವಿ ವಿವಾಹ, ಕೆಲವೇ ಜನಕ್ಕೆ ಆಮಂತ್ರಣ, ಅದ್ರಲ್ಲಿ ನೀನೂ ಒಬ್ಳೂಂತ ಹೇಳಿದ್ರಲ್ಲ."

"ನಂಗೆ ಈ ವಿಷ್ಯವೇ ಗೊತ್ತಿಲ್ಲ, ಒಂದೆರಡ್ಮೂರು ಸಲ ಪೋ। ವಿವಾಹ ಪೋಸ್ಟ್‌ಪೋನ್ ಆದ್ಮೇಲೆ.... ನಂಗೆ ಏನು ಗೊತ್ತಿಲ್ಲ" ಕೈಯಾಡಿಸಿದಳು ಶಾರದ.

"ಮೈ ಗಾಡ್, ಸ್ವತಃ ಮಾಧವಿನೇ ಪ್ರೊಫೆಸರ್ ಪತ್ರ ತಂದು ನಿಮ್ಮ ಮನೆಗ್ಬಂದು ಕಾದು.... ಆಮೇಲೆ ನಿನ್ನ ಹಸ್ಬೆಂಡ್ ಕೈಯಲ್ಲಿ ಕೊಟ್ಟು ಬಂದಳಂತೆ, ಹೊತ್ತಾಯ್ತು......" ಕೈ ಹಿಡಿದೇ ಎಳೆದೊಯ್ದರು.

ಒಂದು ಬಿಳಿಯ ಫಿಯೆಟ್ ಕಾರು ಕೊಂಡು ಡ್ರೈವಿಂಗ್ ಕಲಿತ ಮೇಲೆ ಪ್ರೊಫೆಸರ್ ಶಾಂತ ಅದರಲ್ಲಿಯೇ ಕಾಲೇಜಿಗೆ ಬರುತ್ತಿದ್ದರು.

ಇವರ ಫಿಯೆಟ್ ಸಿಟಿ ಆಚೆ ಇದ್ದ ಒಂದು ಗೆಸ್ಟ್‌ಹೌಸ್‌ಗೆ ಹೋಯಿತು. ಅಲ್ಲಿದ್ದವರು ಮಾಧವಿ, ಪ್ರೊಫೆಸರ್ ರಂಗೇಗೌಡರನ್ನು ಸೇರಿ ಲೆಕ್ಕ ಮಾಡಿದರೂ ಹನ್ನೆರಡು ಜನ ಇದ್ದರು. ಇವರಿಬ್ಬರು ಸೇರಿದ ಮೇಲೆ ಹದಿನಾಲ್ಕು ಜನವಾದರು. ಅಷ್ಟು ಜನರ ಮುಂದೆ ಅವರಿಬ್ಬರು ಹಾರಗಳನ್ನು ಬದಲಾಯಿಸಿಕೊಂಡರು. ಒಂದು ಕೃತಿಗೆ ತಾಯಿ, ತಂದೆ ಆಗಲು ಹೊರಟ ದಂಪತಿಗಳಿಗೆ ಬಂದವರು ಶುಭ ಹಾರೈಸಿದರು.

ಒಂದೆರಡು ಸಲದ ಭೇಟಿಯಿಂದಲೇ ಮಾಧವಿ ಎಷ್ಟು ಬುದ್ಧಿವಂತೆ ಎಂದು ತಿಳಿದಿದ್ದರು. ಬೇರೆ ಯುವತಿಯರಿಗಿಂತ ಭಿನ್ನವಾಗಿ ಅತ್ಯಂತ ಪ್ರೌಢವಾಗಿ ಆಲೋಚಿಸಬಲ್ಲ ಅವಳು ಲಕ್ಷದಲ್ಲಿ ಒಬ್ಬಳೆನಿಸಿದ್ದಳು.

ತಾನು ಕೊಂಡೊಯ್ದ ಪುಸ್ತಕವನ್ನು ಕೊಟ್ಟು ಪ್ರೊಫೆಸರ್ ರಂಗೇಗೌಡರಿಗೆ ಶುಭ ಹಾರೈಸಿದಾಗ, ಅವರ ಕಣ್ಣಲ್ಲಿ ತುಂತುರು.

"ನಂಗೆ ನೀನು ಬಂದಿದ್ದು.... ತುಂಬ... ತುಂಬ... ಸಂತೋಷ" ಅವಳ ಮುಂಗೈ ಹಿಡಿದು ಚುಂಬಿಸಿದರು. "ನಿನ್ನಂಥ ಮಗ್ಳು ಬೇಕಿತ್ತು, ಅಂದುಕೊಳ್ಳೋ ಬದ್ಲು... ನಿನ್ನನ್ನೆ ಮಗ್ಳು ಅಂದುಕೊಳ್ಳೋದು ತುಂಬ ಹಿತ" ಎಂದರು.

ಪ್ರೊಫೆಸರ್ ಶಾಂತನ ಪಕ್ಕಕ್ಕೆ ಕರೆದೊಯ್ದು ಏನೋ ಮಾತಾಡಿದರು. ಆಮೇಲೆ ಮಾಧವಿ ಮತ್ತು ಪ್ರೊಫೆಸರ್ ರಂಗೇಗೌಡರನ್ನ ಹೊತ್ತ ಕಾರು ಗೆಸ್ಟ್‌ಹೌಸ್‌ನ ಮೈನ್‌ಗೇಟ್ ದಾಟಿದಾಗ ಎಲ್ಲರೂ ತಮ್ಮ ತಮ್ಮ ವೆಹಿಕಲ್‌ಗಳತ್ತ ಹೊರಟರು.

ಪ್ರೊಫೆಸರ್ ಶಾಂತಳ ಕಾರು, ವಿಭಿನ್ನ ದಿಕ್ಕು ಹಿಡಿದಾಗ ಅವಳಿಗೆ ಆಶ್ಚರ್ಯ "ಎಲ್ಲಿಗೆ ಹೋಗ್ತಾ ಇದ್ದೀರಾ ?" ಕೇಳಿದರು.

"ಪ್ಲೀಸ್, ನಾನು ಮಾತಾಡೋ ಸ್ಥಿತಿಯಲ್ಲಿಲ್ಲ" ಎಂದು ಕಣ್ಣೊರೆಸಿಕೊಂಡು ಕಾರಿನ ವೇಗ ಹೆಚ್ಚಿಸಿದರು. ದೊಡ್ಡ ಆವರಣ, ದೊಡ್ಡ ಕಬ್ಬಿಣದ ಗೇಟು ಇದ್ದ ಮನೆಯ ಮುಂದೆ ನಿಂತಿತು. ಶಾಂತ ಇಳಿದು ಆ ಗೇಟಿಗೆ ಹಾಕಿದ್ದ ಬೀಗ ತೆಗೆದು ಕಾರನ್ನು ಒಳಗೆ ನಿಲ್ಲಿಸಿದರು. "ಇಳೀ... ಶಾರದ" ಎಂದರು.

ಗೇಟುನ ನಿಲ್ಲಿಸಿದ್ದ ಪಿಲ್ಲರ್‌ಗೆ ಅಮೃತಶಿಲೆ ಕಲ್ಲನ್ನು ಅಂಟಿಸಿ ಪ್ರೊಫೆಸರ್ ರಂಗೇಗೌಡರು ಎನ್ನುವ ಹೆಸರನ್ನು ಕೆತ್ತಲಾಗಿತ್ತು. ಅವಳೆಂದೂ ಈ ಮನೆಗೆ ಬಂದಿರಲಿಲ್ಲ.

ಶಾಂತ ಡೋರ್‌ಲಾಕ್‌ನ ಓಪನ್ ಮಾಡಿ ಬಾಗಿಲು ತೆಗೆದರು. ಇಡೀ ಮನೆಯಲ್ಲೆಲ್ಲ ಓಡಾಡಿದರು. ಎಲ್ಲಾ ಸುಸ್ಥಿತಿಯಲ್ಲಿತ್ತು. ಅತ್ಯಂತ ಬೆಲೆಬಾಳುವ ಸೋಫಾಸೆಟ್, ಬುಕ್‌ಸೆಲ್ಫ್‌ಗಳು ಅವರು ವಿದ್ಯಾರ್ಥಿಯಾದಾಗಿನಿಂದ ಇಂದಿನವರೆಗೂ ಗಳಿಸಿದ ಪ್ರಶಸ್ತಿ ಪತ್ರಗಳು, ಮೊಮೆಂಟೋ ಎಲ್ಲಾ ಷೋಕೇಸ್‌ನಲ್ಲಿ ಅಲಂಕೃತಗೊಂಡಿದ್ದು, ಮಂಚ, ಬೀರು, ಫ್ರಿಜ್, ವಿ.ಸಿ.ಆರ್, ಟೀವಿ-ಕೆಲವು ಬೆಳ್ಳಿ ಸಾಮಾನುಗಳು, ಬೆಲೆ ಬಾಳುವ ಗಡಿಯಾರಗಳು ಎಲ್ಲಾವನ್ನು ಕೈ ಹಿಡಿದು ಡೈವೋರ್ಸ್‌ಕೊಟ್ಟ ಶಾಂತಳಿಗೆ ಬಿಟ್ಟಿದ್ದರು.

ಸೋಫಾ ಮೇಲೆ ಕುಸಿದ ಶಾಂತ ಬಿಕ್ಕಿ ಬಿಕ್ಕಿ ಅಳತೊಡಗಿದರು. ಸರಸದ

ಜೊತೆ ವಿರಸದ ಕ್ಷಣಗಳನ್ನು ಕೂಡ ಅವರೊಂದಿಗೆ ಕಳೆದಿದ್ದರು.

"ಸಮಾಧಾನ ಮಾಡ್ಕೊಳ್ಳಿ, ಮೇಡಮ್" ಅವರ ಪಕ್ಕದಲ್ಲಿ ಕೂತು ಶಾರದ ಹೇಳಿದಾಗ, ತೆಕ್ಕೆಬಿದ್ದು ಮಗುವಿನಂತೆ ಅಳತೊಡಗಿದರು ಶಾಂತ. ಈಗ ಪ್ರೊಫೆಸರ್ ರಂಗೇಗೌಡರು ಆಕೆಯ ದೃಷ್ಟಿಯಲ್ಲಿ ಆಕಾಶದ ಎತ್ತರ ಬೆಳೆದಿದ್ದರು. 'ಈ ಮುದಿ ವಯಸ್ಸಿನಲ್ಲಿ ಹುಡ್ಗಿ ತೆವಲು' ಕೆಲವರು ಅಂದಿದ್ದರು. ಅವರಮ್ಮ ಕೂಡ ಹತ್ತಾರು ಸಲ ಅಂದಿದ್ದರು. ಆಕೆ ಮನ ಅನುಮೋದಿಸುತಿತ್ತು. ಪಕ್ವಗೊಂಡ ಮನುಷ್ಯ ಅವನ ಯೋಚನಾ ದೃಷ್ಟಿಯೇ ಬೇರೆ ಇತ್ತು.

"ನಾನು ಈ ಮನೆಗೆ ಷಿಫ್ಟ್ ಆಗ್ಬಿಡೋಣಾಂತ ಇದ್ದೀನಿ ಶಾರದ. ನನ್ನ ಯೋಚ್ನೆ ಪ್ರಕಾರ ಅಮ್ಮ ಲಕ್ಷ್ಮೀನ ಇಲ್ಲಿಗೆ ಕರ್ಕಂಡ್ ಬಂದು, ಆ ಮನೆನ ಬಾಡಿಗೆಗೆ ಕೊಡ್ಬೇಕೂಂತ, ಬಹುಶಃ ಅಮ್ಮ ಒಪ್ಪಲಾರರು. ಅಲ್ಲೇ ಇದ್ಕೊಳ್ಳಿ, ನಾನಂತು ಇನ್ಮೇಲೆ ಒಂಟಿಯಾಗಿ ಇಲ್ಲಿ ಇದ್ಬಿಡ್ತೀನಿ" ಎಂದು ಹೇಳಿದರು ಪ್ರೊಫೆಸರ್ ಶಾಂತ. ಅದು ಕೂಡ ಸರಿಯೆನಿಸಿದರೂ ಲಕ್ಷ್ಮಿಯು ನೆನಪಾಯಿತು. ತೀರಾ ದುರ್ಬಲ ಮನಸ್ಸಿನ ಹುಡುಗಿ.

"ನಿಮ್ಮ ತೀರ್ಮಾನ ಒಳ್ಳೆದೇ ! ಲಕ್ಷ್ಮೀನ ನಿಮ್ಮ ಜೊತೆಯಲ್ಲಿ ಇರ್ಸಿ ಕೊಳ್ಳಿ. ಒಂದ್ಮೂರು ವರ್ಷವಾದ್ರೂ ಅವ್ಳ ಗಮನ ಅತ್ತಿತ್ತ ಹರಿಯದಂತೆ ಒಂದ್ಕಡೆ ಕಟ್ಟಿಹಾಕಿ" ಸೂಕ್ಷ್ಮವಾಗಿ ಹೇಳಿದಳು ಶಾರದ.

ಅರ್ಥಂಬರ್ಥ ಬೇರೆಯವರ ಮುಖಾಂತರ ಪ್ರೊಫೆಸರ್ ಶಾಂತ ಕಿವಿ ಮುಟ್ಟಿತ್ತಷ್ಟೆ ಲಕ್ಷ್ಮಿಯಾಗಲೀ, ಜಲಜಮ್ಮನಾಗಲೀ ಏನು ಹೇಳಿರಲಿಲ್ಲ.

"ನಿಮ್ಗೆ ಲಕ್ಷ್ಮಿ ಆತ್ಮಹತ್ಯೆಯ ಕತೆಯ ಹಿಂದಿರೋ ವಿಚಾರ ತಿಳಿದಿದೆ. ದಯವಿಟ್ಟು ಹೇಳಿ, ಮತ್ತೆ ಅದೇ ದಾರಿ ಅವ್ಳು ಹಿಡಿಯಬಾರ್ದು. ಅಮ್ಮ ಮೊನ್ನೆಯೊಂದು ದಿನ ನಿಮಗ್ಯಾರಿಗೂ ಗೋತ್ತಾಗದಂತೆ ಲಕ್ಷ್ಮಿಗೆ ವಿವಾಹ ಮಾಡ್ಬಿಡ್ತೀನಿ ಅಂದ್ರು. ಅವ್ರ ಉದ್ದೇಶ ಅರ್ಥವಾಗ್ಲಿಲ್ಲ" ಎಂದು ಧಾವಂತದಿಂದ ನುಡಿದಾಗ ಹಿಡಿದಷ್ಟು ಚಿತ್ರವನ್ನು ಶಾಂತ ಮುಂದಿಟ್ಟಳು ಶಾರದ.

"ದಯವಿಟ್ಟು ಪ್ರಶ್ನಿಸೋದು ಬುದ್ಧಿವಂತಿಕೆಯಲ್ಲ. ಲಕ್ಷ್ಮಿನ ಇಲ್ಲಿಗೆ ಕರ್ಕಂಡ್ ಬಂದ್ಬಿಟ್ರೆ... ಪಾರ್ಥನ ಭೇಟಿ ತಪ್ಪಿಹೋಗುತ್ತೆ, ಅವ್ಳಿಗೆ ಸಂಗೀತಾನೋ, ಚಿತ್ರಕಲೆಯೋ ಆಸಕ್ತಿ ಇದ್ದರೇ ಗಮನ ಕೊಡ್ಸಿ, ಅಂಥದ್ನ... ಯೋಚ್ಸಿ ! ಈಗಿನ್ನು ನಿಮ್ಮಮ್ನ ಹದಿನೇಳು ವರ್ಷ ಅಂದ್ರು."

"ಅಯ್ಯೋ, ಹದಿನೇಳು ಅಲ್ಲ. ಅಪ್ಪಿಗೆ ಈ ಏಪ್ರಿಲ್‌ಗೆ ಹದಿನೈದು ತುಂಬುತ್ತೆ. ಹೇಳ್ಕೊಂಡ್ರೆ... ಅವಮಾನ ! ಅಪ್ಪಿಗೆ ಹೈಸ್ಕೂಲಿಗೆ ಹೋಗೋಕೆ ಅರ್ಹತೆ ಇಲ್ಲ. ಅಕ್ಷರ ಅವ್ನ ಮಿದುಳಿಗೆ ಹೋಗ್ಲಿಲ್ಲ. ಏನು ಕಷ್ಟವಿರ್ಲಿಲ್ಲ, ಪ್ರೇಮ ಪಾಠ ಆರಂಭಿಸಿಬಿಟ್ಲು. ಪಾರ್ಥನ ಅಪ್ಪನಿಗೆ ಗೋತ್ತಾದ್ರೆ, ಸುಟ್ಟು ಬಿಡ್ತಾರಷ್ಟೆ" ಎಂದರು ಶಾಂತ.

ಇಬ್ಬರು ಕೂತು ಬಹಳ ಹೊತ್ತು ಮಾತಾಡಿದರು. ಕಾಲೇಜಿನ ಎಷ್ಟೋ ವಿಷಯಗಳು ಬಂದು ಹೋದವು. ಹೆಚ್ಚು ಪ್ರಸ್ತಾಪವಾದದ್ದು ಪ್ರೊಫೆಸರ್ ರಂಗೇಗೌಡರ ಬಗ್ಗೆಯೇ.

ಬೀಗ ಹಾಕುತ್ತ "ಅಮ್ಮನ ಮೇಲೆ ಜೋರು ಮಾಡಿಯಾದ್ರೂ ಲಕ್ಷ್ಮಿನ ಕರ್ಕೊಂಡ್ಬಂದು ಇಟ್ಕೋತೀನಿ. ಅಂತು ಮುಂದಿನ ವಾರದ ಹೊತ್ತಿಗೆ ಇಲ್ಲಿಗೆ ಷಿಫ್ಟ್ ಆಗ್ಬಿಡ್ತೀನಿ" ದೃಢವಾಗಿ ಹೇಳಿದರು.

ಮನೆಗೆ ಬಂದಾಗ ತೀರಾ ನಿರುತ್ಸಾಹದಿಂದಿದ್ದಳು. ಮಾಧವಿ ಕೂಡ ವಸಂತನ ಕೈಗೆ ಪ್ರೊಫೆಸರ್ ಪತ್ರ ಕೊಟ್ಟಿದ್ದಾಗಿ ಹೇಳಿದ್ದಳು. ಇದೆಂಥ ಸ್ವಭಾವ ! ಪತ್ರ ಕೊಡದಿದ್ದರೂ ಓದಿ ವಿಷಯವಾದರೂ ತಿಳಿಸದಷ್ಟು ಕಂಜೂಸಿತನ, ಅದನ್ನ ಹಾಗೇ ಕೂಗುವುದು ತಪ್ಪೆನಿಸಿತು.

"ಏನಾದ್ರೂ, ಬೇರೆ ತಿಂಡಿ... ಮಾಡ್ಲಾ ?" ಗೋಪಿ ಬಂದು ಕೇಳಿದ.

"ಬರೀ ಅಡಿಗೆ, ತಿಂಡಿ ವಿಷ್ಯ ಬಿಟ್ಟು... ನಾನು ತಂದು ಕೊಟ್ಟ ಪುಸ್ತಕಗಳ್ನ ಚೆನ್ನಾಗಿ ಓದೋಕೆ ಅಭ್ಯಾಸ ಮಾಡ್ಲಾ?" ಪ್ರಶ್ನಿಸಿದಳು. ಈ ಪುಟ್ಟ ಹುಡುಗ ಅಡಿಗೆ, ತಿಂಡಿ, ಚಾಕರಿಯಲ್ಲಿಯೇ ತನ್ನ ಜೀವನ ಮುಗಿಸಬಾರದು. ಈ ವಯಸ್ಸಿನಲ್ಲಿ ಅವನಿಗೆ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಅವಳ ಚಿಂತನೆ.

ಗೋಪಿ ತಲೆ ಕೆಳಗೆ ಹಾಕಿ ಮೌನವಾಗಿ ನಿಂತಿದ್ದ.

"ಯಾಕೆ, ನಿಂಗೆ ಓದೋಕೆ ಇಷ್ಟವಿಲ್ವಾ ?" ನವಿರಾಗಿ ಕೇಳಿದಳು. 'ಇದೆ' ಎಂದು ಗೋಣಾಡಿಸಿದ "ಮತ್ಯಾಕೆ, ಓದ್ಲಿಲ್ಲ ?" ಸ್ವಲ್ಪ ಸ್ವರವೇರಿಸಿದಳು.

ಅತ್ತಿತ್ತ ನೋಡಿದ ಭಯ ಅವನ ಕಣ್ಣುಗಳಲ್ಲಿ ದಟ್ಟವಾಯಿತು. ವಸಂತ ಪುಸ್ತಕ ಮುಟ್ಟಿದರೇ 'ಒದ್ದು ಹೊರಗೆ ಹಾಕುವೆ' ಎಂದು ಎಚ್ಚರಿಸಿದ್ದ. ಬಾಯಿ ಬಿಟ್ಟು ಹೇಳಲು ಸಾಧ್ಯವೇ ? ಆದರೂ ಬಾಯಿ ಬಿಟ್ಟ.

"ಅಣ್ಣಾವ್ರೂ, ಪುಸ್ತಕ ಮುಟ್ಟಿದ್ರೆ... ಊರಿಗೆ ಕಳಿಸ್ತಾರಂತೆ. ನಂಗೆ ಹೋಗೋಕೆ... ಇಷ್ಟವಿಲ್ಲ."

"ಈಗ ಹೋಗು, ಗೋಪಿ" ಅವನನ್ನು ಕಳುಹಿಸಿದಳು.

ಪುಟ್ಟ ಹುಡುಗ, ಯಾರಾದರೂ ಸಹಾನುಭೂತಿ ತೋರಿಸಬೇಕೆನ್ನುವಂಥ ವಯಸ್ಸು, ಮನೆ ಕೆಲಸದಾಕೆ ಬರದಿದ್ದರೇ ಆ ಕೆಲಸ ಮಾಡುತ್ತಿದ್ದ. ಕರುಣೆ, ಸಹಾನುಭೂತಿ ಅಂಥದ್ದು ವಸಂತನಿಗೆ ಗೊತ್ತೇ ಇಲ್ಲವಾ ? ಬದುಕನ್ನು ಕಾವ್ಯವನ್ನಾಗಿಸಲು ಗೊತ್ತಿಲ್ಲದ ಮನುಷ್ಯನೆಂದುಕೊಂಡಳು.

ವಸಂತ, ಅವಳ ಮಧ್ಯೆ ಶೀತಲ ಯುದ್ಧ ಷುರುವಾಗಿತ್ತು. ಅವಳಾಗಿ ಅವನನ್ನು ಮಾತಾಡಿಸುವುದನ್ನು ಪೂರ್ತಿಯಾಗಿ ಬಿಟ್ಟಿದ್ದಳು. ಹಾಗೆಂದು ಅವನ ಸಿಡುಕೇನು ಕಮ್ಮಿಯಾಗಿರಲಿಲ್ಲ.

ರಾತ್ರಿ ಊಟದ ನಂತರ ಕಾಶೀಪತಿಗಳು, ಅವಳು, ವಸಂತ ಕಾಂಪೌಂಡಿನಲ್ಲಿನ ಲಾನ್ ಮೇಲೆ ಬೆತ್ತದ ಛೇರ್‌ಗಳನ್ನು ಹಾಕಿಕೊಂಡು ಕೂತಿದ್ದರು.

"ಒಂದ್ವಿಷ್ಯ, ಪ್ರೊಫೆಸರ್ ರಂಗೇಗೌಡರು ಯಾವ್ದೋ ಪುಟ್ಟ ಹುಡ್ಗೀನ ವಿವಾಹವಾದರಂತೆ ನಿಜ್ವಾ ? ನಮ್ಮ ಕ್ಲಬ್‌ನಲ್ಲಿ ಇದೇ ಮಾತುಗಳು" ಕಾಶೀಪತಿಗಳು ಪ್ರಸ್ತಾಪಿಸಿದರು. ಪ್ರೊಫೆಸರ್ ರಂಗೇಗೌಡರ ಕೊಲೀಗ್ಸ್ ಅವರು ಹೋಗುತ್ತಿದ್ದ ಕ್ಲಬ್‌ನ ಸದಸ್ಯರು, ಅವರಿಗೆ ನೇರವಾಗಿ ಆಹ್ವಾನವಿಲ್ಲದಿದ್ದರೂ ವಿಷಯ ತಿಳಿದು ವಿಷ ಕಾರಿದ್ದರು.

"ಹೌದು, ಈ ವಿವಾಹ ಸದುದ್ದೇಶದಿಂದ ಆಗಿರೋದು. ಫಿಲಾಸಫಿನ ಅವ್ರು ಓದಿಕೊಂಡಿರೋಷ್ಟು, ನಂಗೆ ತಿಳಿದಂತೆ ಬೇರೆಯವ್ರ ಅಭ್ಯಾಸ ಮಟ್ಟಕ್ಕೆ ಇಲ್ಲ. ನಿರಂತರ ಅಭ್ಯಾಸ, ಅನುಭವದ ಜಿಜ್ಞಾಸೆಯನ್ನು ಪುಸ್ತಕದ ರೂಪದಲ್ಲಿ ಬರೆಯಲು ನಿಶ್ಚಯಿಸಿದ್ದಾರೆ. ಅದ್ಕೆ ಒಬ್ಬರ ಸಹಕಾರ ಬೇಕು. ಸಾಕಷ್ಟು ಹುಡ್ಕಿರಬೇಕು. ಅವ್ರ ಮಟ್ಟಕ್ಕೆ ಯೋಚ್ಸುವಂಥ ಹುಡ್ಗೀನೇ.... ಮಾಧವಿ" ಎಂದು ಹೇಳಿದಳು.

"ಈಡಿಯಟ್... ರೋಗ್ಸ್.... ಎಂಥೆಂಥ ವೇಷಗಳು, ಅದ್ಕೇ ನಿಮ್ಮಗಳ ಸಹಕಾರ" ಕಟುವಾಗಿ ಟೀಕಿಸಿದ ವಸಂತ.

ಶಾರದ ಮೌನವಹಿಸಿದಳು.

"ನಂಗೂ ... ನಿಂಗೂ... ಅರ್ಥವಾಗೋಲ್ಲ, ಬಿಡು, ಅದ್ಕೇ ನೀನ್ಯಾಕೆ ಎಮೋಷನ್ ಆಗ್ತೀಯಾ? ಯಾರು ಸಹಕಾರ ಕೊಡ್ಲೀ, ಬಿಡ್ಲೀ, ವಿವಾಹ ಅವ್ರ ಸ್ವಂತದ ವಿಷ್ಯ" ಕಾಶೀಪತಿಗಳು ಆ ವಿಷಯವನ್ನು ಉಪಸಂಹರಿಸಲು ನೋಡಿದರು.

"ಇವ್ಳು, ಆ ವಿವಾಹದಲ್ಲಿ ಭಾಗವಹಿಸಿದ್ದಾಳೆ" ತೋರು ಬೆರಳಿನಿಂದ ಅವಳತ್ತ ತೋರಿಸಿದ "ನನ್ನ ಪರ್ಮಿಷನ್ ಇಲ್ದೇ ಯಾಕೆ ಹೋದ್ಲು ? ಹೊರಗೆ ಹೋದ ಮಾತ್ರಕ್ಕೆ ಯಾರು ಹೇಳೋರು ಕೇಳೋರು ಇಲ್ಲಾಂತ... ಅಂದ್ಕೊಂಡ್ ಬಿಟ್ಟಿದ್ದಾಳೆ. ಇವ್ಳು ಯಾಕೆ ಹೋದ್ಲು ?" ಇನ್ನಷ್ಟು ಸ್ವರವೇರಿಸಿದ.

ಪರಿಸ್ಥಿತಿಯನ್ನು ಸಮಾಧಾನವಾಗಿಯೆ ವಿವರಿಸಿದ ಶಾರದ "ಮಾಧವಿ ಪ್ರೊಫೆಸರ್ ಪತ್ರದ ಮೂಲಕ ಕಳ್ಸಿದ ಆಹ್ವಾನವನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದಳಂತೆ. ನೀವು ನಂಗೆ ಹೇಳೋ ರಿಸ್ಕ್ ಕೂಡ ತಗೊಳ್ಳಲಿಲ್ಲ" ಎಂದು ಉಸುರಿದಳು. ಇಂದು ಅವನಿಗೆ ಏನು ಅಲ್ಲವೆನಿಸಿದ ಅಪರಾಧವನ್ನು ಕಾಶೀಪತಿಗಳ ಮುಂದೆಯೆ ತಿಳಿಸಿದಳು.

"ಅದು ನಂಗೇನು ಮುಖ್ಯವೆನಿಸಲಿಲ್ಲ" ಎಂದ ಜೋರಾಗಿ.

"ಅದು ಮುಖ್ಯವೋ ಅಲ್ಲವೋ ಎಂದು ನಿರ್ಧರಿಸಬೇಕಾದವ್ಳು ನಾನು. ಪ್ರೊಫೆಸರ್ ರಂಗೇಗೌಡರು ನಮ್ಮ ತಂದೆಯ ಕೊಲೀಗ್, ಸ್ನೇಹಿತರು. ಅವ್ರ ಪತ್ರ ನಂಗೆ ಮುಖ್ಯವೇ" ತನಗೂ ಒಂದು ವ್ಯಕ್ತಿತ್ವವಿದೆಯೆಂದು ಮೊದಲ ಸಲ ಹೇಳಿದಳು. ಅವಳನ್ನು ಕೊಂಡು ತಂದ ಜೀತದಾಳುವಿನ ರೀತಿ ಮಾತುಗಳಲ್ಲಿ ನಡೆಸಿಕೊಳ್ಳುತ್ತಿದ್ದ.

"ನೋಡಿದ್ರಾ, ಎಷ್ಟೊಂದು ದುರಹಂಕಾರ ! ಈ ಹಮ್ಮು ಅಡಗಲೇ ಬೇಕು. ನಿನ್ನ ಸಪೋರ್ಟ್‌ಗೆ ನಿಲ್ಲೋಂಥ ಅಪ್ಪ, ಅಮ್ಮ ಅಣ್ಣ ತಂಗಿ ಯಾರು ಇಲ್ಲ. ನಾನು ಕೈಬಿಟ್ಟರೇ ಫುಟ್‌ಫಾತ್ ಸೇರುತ್ತೀಯಾ !" ರೋಫು ಹಾಕಿದ. ತೀರಾ ಕೆಳದರ್ಜೆಯವನಂತೆ ಮಾತಾಡಿದಾಗ ಕಾಶೀಪತಿಗಳು ದಂಗಾದರು.

"ವಸಂತ, ಏನೇನು ಸರಿಯಿಲ್ಲ ! ಕೈ ಹಿಡಿದವ್ಳು ಅಂದರೇ, ಏನೂಂತ ನಿನ್ನ ಲೆಕ್ಕದಲ್ಲಿ ? ಪ್ರೊಫೆಸರ್ ಪತ್ರವನ್ನು ನೀನು ಶಾರದಾಗೆ ಕೊಡದೇ ಇದ್ದಿದ್ದು, ತಪ್ಪೇ" ಮೂದಲಿಸಿದರು.

ಕಾಲು ಅಪ್ಪಳಿಸುತ್ತ ಒಳಗೆ ಹೋದ. ಎಷ್ಟೇ ಸಿಟ್ಟಿನಿಂದ ಕುದಿಯುತ್ತಿದ್ದರೂ ದೈಹಿಕವಾಗಿ ಹಿಂಸಿಸುತ್ತಿರಲಿಲ್ಲ ಇದೊಂದು ಅತ್ಯುತ್ತಮವಾದ ಒಳ್ಳೆಯ ಗುಣವೆ.

ಮಾವ, ಸೊಸೆ ಎದುರು ಬದರಾಗಿ ಕೂತಿದ್ದರು.

"ಶಾರದ, ಒಂದ್ಮಾತು ! ನೀನು ಕೆಲ್ಸದಲ್ಲಿ ಇರೋದು ಅವ್ನಿಗೆ ಇಷ್ಟವಿಲ್ದೇ ಇರ್ಬ್ಹೋದು" ಅನುಮಾನ ವ್ಯಕ್ತಪಡಿಸಿದರು.

ಗಾಬರಿಯಿಂದ ತಲೆಯೆತ್ತಿ ಅವರ ಕಣ್ಣಿನಾಳದಲ್ಲಿ ಏನಿದೆಯೆಂದು ನೋಡಿದಳು. ವ್ಯಥೆ ಇತ್ತು, ನೋವಿತ್ತು, ಅರ್ಥವಾಗದ ಆಂದೋಲನ-ಅದರಲ್ಲಿ ಒಂದು ಕನಸ್ಸಿತ್ತು, ದೂರದ ಆಸೆ ಇತ್ತು. ಮಗ, ಸೊಸೆ ಸುಖವಾಗಿ ನಗು ನಗುತ್ತಾ ಇರಬೇಕೆಂದು.

"ನಾನು ಕೆಲ್ಸಕ್ಕೆ ಸೇರಿದ ನಂತರವೇ ವಿವಾಹವಾಗಿದ್ದು ಅವ್ರ ಕಲ್ಪನೆಯಲ್ಲಿರುವ ಹೆಂಡತಿಯ ರೂಪ, ನಡವಳಿಕೆಯೇ ಬೇರೆ. ಮದುವೆಗೆ ಮುನ್ನ ವಸಂತ್ ಸಾಕಷ್ಟು ಸಲ ನಮ್ಮಲ್ಲಿಗೆ ಬಂದಿದ್ರು. ಕೆಲವೊಮ್ಮೆ ಕಾಲೇಜಿಗೂ ಬಂದು ಭೇಟಿ ಮಾಡಿದ್ರು, ಹೋಟಲ್, ಪಾರ್ಕ್‌ಗೆ ಒಂದೆರಡು ಸಲ ಕರೆದೊಯ್ದಿದ್ರಿಂದ ನಾವಿಬ್ಬರೂ ಅಪರಿಚಿತರಲ್ಲ, ಅಷ್ಟೆ. ಇದು ಮೇಲ್ನೋಟದ ಒಂದು ದೃಶ್ಯ. ಆದರೆ ಮಾನಸಿಕವಾಗಿ ಇಂದಿಗೂ ನಾವು ಅಪರಿಚಿತರೇ. ನಾನು ಅವ್ರಿಗೆ ಅರ್ಥವಾಗಿಲ್ಲ; ಅವ್ರು ನಂಗೆ ಅರ್ಥವಾಗಿಲ್ಲ. ರಾತ್ರಿಗಳು, ಹಗಲುಗಳು ತಮ್ಮ ಪಾಡಿಗೆ ತಾವು ಉರುಳಿ ಹೋಗಿವೆ, ಯಾವುದೇ ಸ್ವಾರಸ್ಯವಿಲ್ಲದೆ" ಎಂದು ನಿಟ್ಟುಸಿರು ಚೆಲ್ಲಿದಳು.

"ಪ್ಲೀಸ್, ಶಾರದ ನೀನೇನು ಕೆಲ್ಸ ಬಿಡ್ಬೇಡ. ಆದರೆ ನಾನು ನೀನು ಕೆಲ್ಸ ಬಿಡ್ತೀಯಾ, ಬಿಟ್ಟೇಂತ ಹೇಳಿದಾಗ ಅವ್ನ ಬಿಹೇವಿಯರ್ ಸ್ಮೂತ್ ಆಗುತ್ತೇನೋ ನೋಡೋಣ" ಆಸೆ ವ್ಯಕ್ತಪಡಿಸಿದರು.

ಬೆಚ್ಚಿ ಬಿದ್ದಳು. ಅತಿ ಅಕ್ಕರೆಯಿಂದ ಇಂಗ್ಲೀಷ್ ಸಾಹಿತ್ಯವನ್ನು ಅಭ್ಯಾಸ ಮಾಡಿ ಬಂಗಾರದ ಪದಕ ಪಡೆದವಳು. ಅಧ್ಯಾಪಕಿಯಾಗಬೇಕೆಂಬ ಕನಸನ್ನು ಹೊತ್ತೆ ಓದಿದವಳು. ಬದುಕಿಗೊಂದು ಧ್ಯೇಯ ಇಟ್ಟುಕೊಂಡವಳು. ಮೌಲ್ಯಗಳನ್ನು ಗೌರವಿಸಿದವಳು-ಈಗ ಎಲ್ಲಾವನ್ನೂ ಗಾಳಿಯಲ್ಲಿ ತೂರಲು ಸಾಧ್ಯವೇ ? ಅವಳ ವಸಂತನ ಮಧ್ಯೆ ಮೂಲಭೂತವಾದ ಭಿನ್ನತೆ ಇತ್ತು.

"ಒಂದೇ... ಒಂದು ಅವಕಾಶ ಕೊಡಮ್ಮ" ದೈನ್ಯತೆ ಇತ್ತು ಧನಿಯಲ್ಲಿ "ಅಂಕಲ್, ಪ್ಲೀಸ್, ನೀವು ಹಾಗೆಲ್ಲ ಹೇಳ್ಬೇಡಿ. ಕೆಲವನ್ನು ಸರಿಪಡಿಸಬಹುದು, ಕೆಲವು ತಿಳಿದು ಮಾಡುವುದ್ನ ಸರಿಪಡಿಸೋದು ಕಷ್ಟ, ನಿಮ್ಮಿಷ್ಟ".

ಮರುದಿನ ಕಾಲೇಜಿಗೆ ಹೋಗಲಿಲ್ಲ. ಗಮನಿಸಿದರೂ ಗಮನಿಸದಂತಿದ್ದ ವಸಂತ, ತನ್ನ ರೋಫಿಗೆ ಬೆದರಿದ್ದಾಳೆಂದು ಒಳಗೊಳಗೆ ಖುಷಿಪಟ್ಟ. ಸಿಳ್ಳೆ

ಹಾಕುತ್ತ ಓಡಾಡಿದ.

ರಾತ್ರಿ ಅವನ ಕಿವಿಯ ಮೇಲೊಂದು ಮಾತು ಹಾಕಿದರು "ಕೆಲ್ಸ ಬಿಡ್ತಾ ಇದ್ದಾಳೆ, ಶಾರದ. ಮಧ್ಯಾಹ್ನದ ಹೊತ್ತು ನೀನು ಊಟಕ್ಕೆ ಬಂದಾಗ ಅವ್ಳು ಇಲ್ದೇ ಇರೋದ್ದರಿಂದ ನಿಂಗೆ ಬೇಸರವಾಗ್ಬಹ್ದು ಅಂದೇ. ಅದ್ಕೆ ಕೆಲ್ಸಕ್ಕೆ ರಾಜಿನಾಮೆ ಕೊಡ್ತಾ ಇದ್ದಾಳೆ".

ವಸಂತನ ಎದೆ ಉಬ್ಬಿತು. ಬಹುಶಃ ತೆಪ್ಪಗೆ ಇದ್ದಿದ್ದರೇ ಕೆಲರು ದಿನಗಳಾದರೂ ಇಲ್ಲಿ ಉಳಿಯುವ ಅವಕಾಶ ಇತ್ತು. ಅದನ್ನು ಕಳೆದುಬಿಟ್ಟ ದುಡುಕಿನಿಂದ.

"ನೋಡಿದ್ರಾ, ಅವ್ಳ ನ್ನ ಹೇಗೆ ದಾರಿಗೆ ತಂದೇಂತ. ಇನ್ನು ನೋಡಿ ಉಸಿರೆತ್ತದೆ ಹೇಳ್ದಂಗೆ ಕೇಳ್ಕೊಂಡ್ ... ಬಿದ್ದಿರುತ್ತಾಳೆ" ಎಂದು ಉಬ್ಬಿ ನುಡಿದ.

ಅನಾಮತ್ತಾಗಿ ಇಕ್ಕಳದಲ್ಲಿ ಹಿಡಿದಿದ್ದ ಹಾಲಿನ ಪಾತ್ರೆಯನ್ನು ಎತ್ತಿ ಹಾಕಿ ಬಿಟ್ಟಳು. ಹಿಡಿಯು ಬಟ್ಟಲಿಗೆ ಬದಲಾಗಿ, ಅದನ್ನು ಏಕೆ ಉಪಯೋಗಿಸಿದಳೆಂದು ಅವಳಿಗೆ ಗೊತ್ತೇ ಆಗಲಿಲ್ಲ. ಚೆಲ್ಲಿದ ಹಾಲು ಎತ್ತಲಾಗುವುದಿಲ್ಲ; ಎತ್ತಿದರೂ ಉಪಯೋಗಕ್ಕೆ ಬರದು.

ಆಮೇಲೆ ಕಾಶೀಪತಿಗಳು ಆಡಿದ ಮಾತುಗಳು ಅವಳಿಗೆ ಕೇಳಲಿಲ್ಲ. ಬಹುಶಃ ಹಿಂದಿನ ತೆಲುಗು, ಕನ್ನಡ, ಹಿಂದಿ ಚಿತ್ರಗಳ ಇನ್ಸ್‌ಪಿರೇಷನ್ ಇರಬಹುದು. ಗಂಡ ಮನೆಯಿಂದ ಹೊರಗೆ ತಳ್ಳುವ ಸಂದರ್ಭದಲ್ಲಿ, ಅವನ ಕಾಲುಗಳನ್ನು ಹಿಡಿಯುವುದು. ಅವನು ರೇಗುತ್ತ, ಅವಳ ಇಡೀ ಕುಲವನ್ನು ತರಾಟೆಗೆ ತಗೊಂಡಿದ್ದಳು. ಅವನ ಪಾದಗಳನ್ನು ಹಿಡಿದು 'ತನಗೇ ಬಾಳು ಕೊಡಬೇಕೆಂದು' ಬೇಡುವ ಕರುಣಾಜನಕ ದೃಶ್ಯ ಹೆಂಗಳೆಯರ ಮನ ಕರಗುವುದರ ಜೊತೆಗೆ ಗಂಡಸರಿಗೆ ಉತ್ಸಾಹ ತುಂಬುತಿತ್ತೇನೋ. ಈಗಂತು ವಸಂತನ ಕಾಲುಗಳನ್ನು ಹಿಡಿದು ಅಂಥ ಸೀನ್‌ನ ಖಂಡಿತ ಕ್ರಿಯೇಟ್ ಮಾಡಲಾರಳು ಶಾರದ.

ಆ ದಿನ ಕಾಶೀಪತಿಗಳ ಜೊತೆಗೆ ಆ ಮನೆಗೆ ಹೋದಾಗ ತುಳಸಮ್ಮ ಕಾಲು ಉಳುಕಿಸಿಕೊಂಡು ಕೂತಿದ್ದರು. 'ಅಂಕಲ್, ನಾನು ಇಲ್ಲೇ ಇರ್ತೀನಿ' ಎಂದು ಅಲ್ಲೇ ಉಳಿದಳು. ಉಸಿರೆತ್ತಲಿಲ್ಲ ಅವರು. ಭಯ ಭೂತಾಕಾರವಾಗಿ ಹೆದರಿಸುತ್ತಿದ್ದವರು ಶಾಂತರಾಗಿದ್ದರು. 'ಮಗನ ಪಕ್ಷ ಇನ್ನು ವಹಿಸಲಾರರು' ಇನ್ನು ಮೂಕ ಪ್ರೇಕ್ಷಕರಷ್ಟೆ.

ಅಡಿಗೆ ಮಾಡಿ ಅವರೇ ಬಡಿಸಿದಾಗ ಶ್ರೀಧರಮೂರ್ತಿಗಳು ತೃಪ್ತಿಯಾಗಿ ಊಟ ಮಾಡಿದರು, ಬಹಳ ನೋವಿನಿಂದ "ಆಹ್ವಾನ ಪತ್ರಿಕೆಯ ಪ್ರೂಫ್ ತೋರಿಸಲು ವಸಂತನ್ನ ಹುಡುಕಿಕೊಂಡು ಆಫೀಸಿಗೆ ಹೋದೆ. ಅದಕ್ಕೆ ದೊಡ್ಡ ಕಾರಣವೇನು ಇರಲಿಲ್ಲ. ಅಲ್ಲಿಗೆ ಮುದ್ರಣಾಲಯ ತುಂಬ ಹತ್ತಿರದಲ್ಲಿ ಇತ್ತು. ಬಹುಶಃ ನಾನು ಹೋಗಿದ್ದು ಇಷ್ಟವಾಗಲಿಲ್ಲವೇನೋ, ಸರ್ರಿಯಾಗಿ ಮಾತಾಡಲು ಇಲ್ಲ. ಆಹ್ವಾನ ಪತ್ರಿಕೆಯ ಪ್ರೂಫ್ ಕೂಡ ಸರ್ರಿಯಾಗಿ ನೋಡಲಿಲ್ಲ. ತನಗೇ ಅಂದು ಪುರಸತ್ತಿಲ್ಲವೆಂದು ನೇರವಾಗಿ ಹೇಳ್ದ. ಬಹಳ ಹೇಳಿ ನೋಡಿದೆ. ಬರೋದಿಕ್ಕೆ ಆಗೋದೇ... ಇಲ್ಲ ಅಂದ. ಬಹುಶಃ ಆ ಮನುಷ್ಯನಿಗೆ ಈ ಕವನ ಸಂಕಲನ ಅಚ್ಚಾಗಿ ಬಿಡುಗಡೆಯಾಗುವುದು ಇಷ್ಟವಿಲ್ಲವೆಂದು ಕಾಣುತ್ತೆ" ಮನದಲ್ಲಿನ ಸಂಶಯ ಅವಳ ಮುಂದಿಟ್ಟರು.

"ನೀನು ಕೆಲಸದಲ್ಲಿರೋದು ವಸಂತನಿಗೆ ಇಷ್ಟವಿಲ್ಲ" ಕಾಶೀಪತಿಗಳು ಹೇಳಿದರು. "ಈ ಕವನ ಸಂಕಲನ ಅಚ್ಚಾಗುವುದು ವಸಂತನಿಗೆ ಇಷ್ಟವಿಲ್ಲ" ಶ್ರೀಧರಮೂರ್ತಿಗಳು ಹೇಳಿದರು. ಆದರೆ ಏನು ಇಷ್ಟ ? ಯಾವುದು ಇಷ್ಟ ? ಒಮ್ಮೆ ಅವನೇ ಇಷ್ಟವೆಂದು ಖರೀದಿಸಿ ತಂದ ಸೀರೆಯನ್ನು ಅವಳು ಬಿಟ್ಟಾಗ ಟೀಕಿಸುತ್ತಿದ್ದ, ಬೇಸರಿಸುತ್ತಿದ್ದ - ಅವನೇ ಅವನಿಗೆ ಅರ್ಥವಾಗಿಲ್ಲ !ತಾನು ಅರ್ಥ ಮಾಡಿಕೊಳ್ಳುವುದು ಸಾಧ್ಯವೇ ?

"ಏನು, ಮಾತಾಡ್ಲೇ ... ಇಲ್ಲ" ಎಂದರು ಶ್ರೀಧರಮೂರ್ತಿಗಳು. "ನಂಗೆ ಏನು ಮಾತಾಡ್ಬೇಕೂಂತ ಗೋತ್ತಾಗ್ತ ಇಲ್ಲ" ಅಷ್ಟೇ ಹೇಳಿದ್ದು.

ಶ್ರೀಧರಮೂರ್ತಿಗಳು ಸಪ್ಪಗಾದರು. ಅವಳು ಸುಖವಾಗಿಲ್ಲ ಮಾತ್ರವಲ್ಲ, ವಸಂತನಂಥ ಗಂಡಿನ ಜೊತೆ ಯಾವ ಹೆಣ್ಣು ಸುಖರಾಗಿರೋದು ಕಷ್ಟವೆಂದು ಎಂದೋ ಅರಿತಿದ್ದರು. ಶ್ರೇಯೋಭಿಲಾಷಿಯಾಗಿ ಶುಭ ಹಾರೈಸಿದ್ದರು. 'ಸಾಮರಸ್ಯದಿಂದ ಬಾಳಲಿಯೆಂದು' ದೇವರಲ್ಲಿ ಪ್ರಾರ್ಥಿಸಿದ್ದರು.

ಮಾರನೆ ದಿನ ತುಳಸಮ್ಮನ ಕಾಲಿನ ಊತ ಜಾಸ್ತಿಯಾದುದ್ದರಿಂದ ಅಲ್ಲೇ ಉಳಿದು ಮನೆಗೆ ಫೋನ್ ಮಾಡಿದ್ದಳು. "ಅಜ್ಜಿ, ಕಾಲಿನ ಊತ ಜಾಸ್ತಿಯಾಗಿದೆ. ನರ್ಸಿಂಗ್‌ಹೋಂಗೆ ಕರ್ಕಂಡ್ ಹೋಗ್ತಾ ಇದ್ದೀನಿ" ಇದನ್ನು ವಸಂತನಿಗೆ ಹೇಳಿದಳು.

"ತೆಪ್ಪಗೆ ಮನೆಗೆ ಬಾ, ಇಲ್ಲದಿದ್ರೆ ಹೊಸಲು ಒಳಗೆ ಸೇರಿಸೋಲ್ಲ" ಗುಡುಗಿದ. ತೀರಾ ಸೆಂಟಿಮೆಂಟ್ ಚಿತ್ರದ ಒಂದು ಸೀನ್‌ನಂತಿತು. ಅದೇ

ದೃಶ್ಯ ಅವಳ ಕಣ್ಮುಂದೆ ಮರುಕಳಿಸಿತು. ಇಲ್ಲಿ ಸ್ತ್ರೀ ಪುರುಷರ ಮಧ್ಯದ ಪ್ರೀತಿ, ಪ್ರೇಮವಾಗಲೀ ಮುಖ್ಯ ವಹಿಸದೇ ತಾಳಿಯೆಂಬ ಉರುಳನ್ನು ಹೆಣ್ಣಿನ ಕುತ್ತಿಗೆಗೆ ಎಸೆದು ಅಟ್ಟಹಾಸಗೈಯುವ ಪುರುಷ ಚಿತ್ರ ಒಂದು ಸಾಮಾನ್ಯ ದೃಶ್ಯ ಇಲ್ಲಿ ಸ್ಥಾನ ನಿರ್ಣಯವನ್ನು ಅವನೇ ಮಾಡಿಕೊಂಡಿದ್ದ. ಶಾರದಾಗೆ ಇಲ್ಲಿ ಯಾವುದೇ ಸ್ಥಾನವಿಲ್ಲ.

* * * *

ಸಮಾರಂಭದ ಮಾರನೆ ದಿನ ಮನೆಗೆ ಬಂದ ಶಾರದ ತನ್ನ ಬಟ್ಟೆಗಳನ್ನು ಬೆಡ್‌ರೂಂನಿಂದ ಸೂಟುಕೇಸ್‌ಗೆ ತುಂಬಿ ಪ್ಯಾಕ್ ಮಾಡಿಕೊಂಡು ಬಂದು ಡ್ರಾಯಿಂಗ್ ರೂಮಿನಲ್ಲಿಟ್ಟಳು.

ಮಧ್ಯಾಹ್ನ ಊಟ ಮುಗಿದ ನಂತರ "ವಸಂತ್, ನಿಮ್ಹತ್ರ ಪರ್ಸನಲ್ಲಾಗಿ ಮಾತಾಡೋದಿದೆ." ಎಂದಳು. ಎರಡು ಹೆಜ್ಜೆ ಮುಂದಕ್ಕೆ ಹೋದವನು ಹಿಂದಕ್ಕೆ ತಿರುಗಿ "ಈಗ ಆಗೋಲ್ಲ, ಹೇಳ್ದೇ ಕೇಳ್ದೇ ಎರ್ಡು ದಿನ ಬೇರೆ, ಇದ್ದು ಬರೋಷ್ಟು ಧೈರ್ಯ. ನನ್ನ ಒಳ್ಳೆಯತನ, ಸಹನೆಗೆ ಪರೀಕ್ಷೆ ಮಾಡ್ತಾ ಇದ್ದೀಯಾ" ಅದೇ ವರಸೆಯಲ್ಲಿ ಮಾತಾಡಿದ.

"ನಿಮ್ಹತ್ರ ಮಾತಾಡ್ಲೇಬೇಕು. ಈಗ ಆಗೋಲ್ಲಾಂದ್ರೆ ಒಂದು ಲೆಟರ್ ಬರೆದಿಟ್ಟು ಹೋಗ್ತೀನಿ ಅಷ್ಟೆ" ಬಹಳ ಸುಲಭವಾಗಿ ಹೇಳಿದಳು. ಯಾವುದೇ ಟೆನ್‌ಷನ್ ಅವಳಲ್ಲಿರಲಿಲ್ಲ.

ಮೊದಲ ಸಲ ಒಂದಿಷ್ಟು ಚಲಿಸಿ ಹೋದ. ಇವನು ತಾಕೀತು ಮಾಡಿದ ನಂತರ ಎಂದೂ 'ವಸಂತ್' ಎಂದಿರಲಿಲ್ಲ. ಇಂದು ಆರಾಮಾಗಿ 'ವಸಂತ್' ಎಂದು ಸಂಭೋದಿಸಿದಳು.

ರೂಮಿಗೆ ಹೋದ ವಸಂತನನ್ನು ಹಿಂಬಾಲಿಸಿ ಹೋದವಳು "ವಸಂತ್, ನಾನು ಆ ಮನೆಗೆ, ನನ್ನ ಮನೆಗೆ ಹೋಗ್ತಾ ಇದ್ದೀನಿ. ನಮ್ಮಿಬ್ಬರಲ್ಲಿ ಒಮ್ಮತ ಮೂಡಲು ಸಾಧ್ಯವಿಲ್ಲವೆನ್ನುವ ತೀರ್ಮಾನಕ್ಕೆ ಬಂದಿದ್ದೀನಿ. ನಿಮ್ಗೆ ಬೇಕಾದ್ದು ನನ್ನಲ್ಲಿ ಸಿಗ್ದೇ, ನಂಗೆ ಬೇಕಾದ್ದು ನಿಮ್ಮಲ್ಲಿ ಸಿಗ್ದೇ .... ನಿತ್ಯ ಘರ್ಷಣೆ ಅಸಹನೆಯಲ್ಲಿ ಅಮೂಲ್ಯವಾದ ಸಮಯ ಹಾಳಾಗಿ ಹೋಗೋದು ಬೇಡ. ಇಂದಿಗೂ ನನ್ನ, ನಿಮ್ಮ ಮಧ್ಯದ ವಿವಾಹಿತ ಸಂಬಂಧ ಮುಗಿಯಿತು. ವಿವಾಹ ಮಾಡಿದ ಅಂಕಲ್ ಡೈವೋರ್ಸ್ ಜವಾಬ್ದಾರಿನು ಹೊತ್ಕೋತಾರೆ. ಗುಡ್ ಬೈ" ಹೊರಗೆ ಬಂದಳು. ಮತ್ತೆ ಮಡದಿಯಾಗಿ ಆ ರೂಮು ಪ್ರವೇಶಿಸಳು.

ಗೋಪಿನ ಕಳಿಸಿ ಬಹಳ ಸಿಂಪಲ್ಲಾಗಿ ಆಟೋ ತರಿಸಿದಳು. ರೂಮಿನಲ್ಲಿದ್ದ ಕಾಶೀಪತಿಗಳ ಬಳಿಗೆ ಹೋಗಿ ಕಾಲು ಮುಟ್ಟಿ ನಮಸ್ಕರಿಸಿದಳು. "ಅಂಕಲ್ ನಾನು ಹೋಗ್ತಾ ಇದ್ದೀನಿ. ಆಗಾಗ ನಿಮ್ಮ ಫ್ರೆಂಡ್ ಆನಂದರಾವ್ ಮಗ್ಳುನ ನೋಡೋಕೆ... ಬರ್ತೀರಲ್ಲ" ಎಂದು ಹೇಳಿದಳು.

ಕಾಶೀಪತಿಗಳು ಕಣ್ಣೀರು ಸುರಿಸಿದರು. ಮಾತನಾಡಲಾರದ ಸ್ಥಿತಿ ಇನ್ನು ಯಾವುದೇ ಬಲವಂತದಿಂದ ಕಟ್ಟಿ ಹಾಕಿ ಶಾರದಳ ಬದುಕನ್ನು ನರಕ ಮಾಡಲಾರರು. ತಟ್ಟನೆ ಒಂದು ಯೋಚನೆ ಬಂದು ಮಗನ ರೂಮಿಗೆ ಓಡಿದರು.

"ವಸಂತ, ಶಾರದ... ಹೋಗ್ತಾ ಇದ್ದಾಳೆ. ಹೋಗಿ...ನಿಲ್ಲಿಸ್ಕೋ. ನೀನು ಎಲ್ಲಾವನ್ನು ಕಳೆಕೋತಾ... ಇದ್ದೀಯಾ ! ಈಗ್ಲೂ ಎಚ್ಚೆತ್ತುಕೊಳ್ಳದಿದ್ದರೇ, ನಿನ್ನ ವೈವಾಹಿಕ ಜೀವ್ನ ಸಂಪೂರ್ಣವಾಗಿ ನಾಶವಾಗುತ್ತೆ. ಬೇಗ್ಬಾ... ಹೋಗು. ಹೊಸಲು ದಾಟುವ ಮುನ್ನ ನಿಲ್ಲಿಸ್ಕೋ" ಬೇಡಿಕೊಂಡರು.

ಅವನಲ್ಲಿ ವಿವೇಕ ಜಾಗೃತಗೊಳ್ಳಲಿಲ್ಲ. ಅದೇ ಮೂರ್ಖತನ ಭುಸುಗುಟ್ಟಿತು. "ಹೋಗ್ಲಿ ಬಿಡಿ, ಎಷ್ಟು ದಿನ ಹೋಗ್ತಾಳೆ. ಈ ಸಲ ಪೂರ್ತಿ ಬುದ್ಧಿ ಕಲಿಸ್ತೀನಿ. ನಾನೇನು ಕಳ್ದುಕೊಳ್ಳೋಲ್ಲ. ಕಳಕೊಳ್ಳೋಳು... ಅವ್ಳೇ ! ಎಲ್ಲಾ ಅನುಭವಿಸಿಕೊಳ್ಳಿ. ಅವಳದೇ ದುರಾದೃಷ್ಟ" ಎಂದ. ಅವನ ವಾದದಿಂದ ಕಿಂಚಿತ್ ಅಲುಗಲೂ ಸಿದ್ಧವಿರಲಿಲ್ಲ.

"ಬರ್ತೀನಿ, ವಸಂತ್" ರೂಮಿನ ಬಾಗಿಲಿಗೆ ಬಂದು ಹೇಳಿದಳು, ಭುಸುಗುಟ್ಟುತ್ತ ಹೊರಗೆ ಬಂದ ವಸಂತ "ಬಹಳ ತಪ್ಪು ಮಾಡ್ತಾ ಇದ್ದೀಯಾ, ಈ ಸಲ ನೀನು ಹೊರ್ಗೆ ಹೋದರೆ ಮತ್ತೆ ಈ ಮನೆಯ ಪ್ರವೇಶ ಇರೋಲ್ಲ. ಯೋಚ್ಸಿ ಹೊರ್ಗಡೆ ಕಾಲ್ಇಡು" ಎಚ್ಚರಿಕೆ ಕೊಟ್ಟ.

ತಣ್ಣಗೆ ಅವನತ್ತ ನೋಟ ಹರಿಸಿದ ಶಾರದ "ನಾನೆಂದು, ನಿಮ್ಮ ಮಡದಿಯೆನಿಸಿ ಈ ಮನೆಗೆ ಬರೋ ಪ್ರಸಕ್ತಿಯೇ ಇಲ್ಲ. ನಮ್ತಂದೆ ಗೆಳೆಯರಾದ ಕಾಶೀಪತಿಗಳನ್ನು ನೋಡಲು ಎಂದಾದ್ರೂ... ಬರಬಹುದಷ್ಟೆ" ದೃಢವಾಗಿ ನುಡಿದಳು. ಇನ್ನು ಯಾವುದೇ ಕಾರಣಕ್ಕೂ ವಸಂತನೊಂದಿಗೆ ವೈವಾಹಿಕ ಬದುಕನ್ನು ಹಂಚಿಕೊಳ್ಳಲಾರಳು.

ಕಾಶೀಪತಿಗಳು ಆಟೋವರೆಗೂ ಬಂದು ಬೀಳ್ಕೊಟ್ಟರು ಅವಳನ್ನು. ಈ ಮನೆಯ ಸಂಪೂರ್ಣವಾದ ನೆಮ್ಮದಿ, ಸುಖ, ಶಾಂತಿ ಎಲ್ಲವನ್ನು

ಹೊತ್ತುಕೊಂಡು ಹೋದಳು ಎನ್ನುವಂತೆ ಕುಸಿದರು.

'ಹಂಸ ಪಲ್ಲಕಿ' ಕವನ ಸಂಕಲನ ಬಿಡುಗಡೆಯ ಸಮಾರಂಭದ ದಿನ, ಶ್ರೀಧರಮೂರ್ತಿಗಳೇ ಬಂದು ಬಹಳ ಅನುನಯದಿಂದ "ವಸಂತ, ಈ ದಿನ ಮಹತ್ವದ ದಿನ. ನೀನು ಬಂದು ಪಾಲ್ಗೊಂಡ್, ಶಾರದಳ ಜೊತೆ ಸಂತೋಷ ಹಂಚಿಕೋ" ಎಷ್ಟೋ ವಿಧವಾಗಿ ಹೇಳಿದಾಗಲೂ ಅವನದು ಒಂದೇ ಉತ್ತರ "ಬರೋಕ್ಕಾಗೋಲ್ಲ, ನಂಗೆ ಬೇರೆ ಬೇರೆ ಕೆಲ್ಸಗಳು ಇವೆ" ಎಂದು ತಳ್ಳಿ ಹಾಕಿದ್ದ.

ಆ ಸಮಾರಂಭದ ಹಿಂದಿನ ದಿನಗಳಲ್ಲಿ ಶಾರದಾನ ಪ್ರತಿಯೊಂದು ವಿಷಯಕ್ಕೂ ಅಂದು ಅಂದು ಹಿಂಸಿಸಿಬಿಟ್ಟಿದ್ದ. ಟೀಕಿಸುವುದು, ಛೀಮಾರಿ ಹಾಕುವುದು, ಅವಮಾನ ಮಾಡುವುದು ಇಷ್ಟಕ್ಕಾಗಿ ತನ್ನ ಬಹಳಷ್ಟು ಸಮಯುವನ್ನು ವಿನಿಯೋಗಿಸಿದ್ದ. ಆಗಲೇ ಹಿರಿಯರಿಬ್ಬರು ಒಂದು ತೀರ್ಮಾನಕ್ಕೆ ಬಂದಿದ್ದರು.

"ನೀವು ಆನಂದರಾವ್ ಸ್ನೇಹಿತರಾಗಿ ಅವ್ಳಿಗೆ ಒಂದು ಉಪಕಾರ ಮಾಡಿ. ಅವ್ಳು ತಗೊಳ್ಳೋ ತೀರ್ಮಾನಕ್ಕೆ ನಿಮ್ಮ ಸಮ್ಮತಿ ಇರ್ಲೀ. ಶಾರದ ತನ್ನ ಬದ್ಕನ್ನು ತಾನು ರೂಪಿಸಿಕೊಳ್ಳಬಲ್ಲಳು. ಅದ್ಕೆ ನಮ್ಮಗಳ ಸಹಾಯ, ಸಹಕಾರ ಕೂಡ ಬೇಕಿಲ್ಲ" ಶ್ರೀಧರಮೂರ್ತಿಗಳು ಒಂದು ಒಳ್ಳೆ ಸಲಹೆ ಕೊಟ್ಟಿದ್ದರು.

"ಖಂಡಿತ, ನಂಗೆ ಬೇಗ ಹೋಗಿ ಸ್ನೇಹಿತನ್ನ ಭೇಟಿ ಮಾಡೋ ಉದ್ದೇಶವಿತ್ತು, ಈಗ... ತುಂಬ... ತುಂಬ ಭಯ. ಏನೂಂತ ಹೋಗಿ ಉತ್ತರಿಸ್ಲೀ ?" ನಕ್ಕರು. ಕಣ್ಣಂಚಿನಲ್ಲಿದ್ದ ಕಂಬನಿ ಸತ್ಯವನ್ನು ಹೊರ ಹಾಕಿತ್ತು.

ಆಟೋ ಬಂದು ನಿಂತಾಗ ತುಳಸಮ್ಮ ಹೊರ ಬಂದರು. ಇಂಥ ನಿರೀಕ್ಷೆ ಇದ್ದರೂ ನೋವಿನ ವಿಷಯವೇ. 'ಶಾರದ, ವಸಂತ ಹೊಂದಿಕೊಂಡು ಹೋಗೋಕೆ ಸಾಧ್ಯವಿಲ್ವಾ ?' ಒಂದು ಹತ್ತು ಸಲವಾದರೂ ಕೇಳಿದ್ದರು, ರಾತ್ರಿಯಿಂದ ಈವರೆಗೆ.

"ಹೇಗೆ, ಸಾಧ್ಯ ? ಸ್ವಾಭಿಮಾನ, ಸ್ವತಂತ್ರ ಮನುಷ್ಯನ ಮೂಲಭೂತ ಹಕ್ಕುಗಳು. ಕೆಲವೊಮ್ಮೆ ಅದು ರಾಜಿಯಾಗ್ಬಿಡೋದು, ಪ್ರೀತಿಗೆ ಮಾತ್ರ. ವಸಂತನ ಮನಸ್ಸು ತೀರಾ ನಿಗೂಢ. ಏನೇನು ಅರ್ಥವಾಗ್ದು. ಅವ್ನ ಮಾತಿನಲ್ಲಿ ವ್ಯಕ್ತವಾಗುವ ಹೆಣ್ಣಿನ ಸ್ಥಾನವನ್ನು ಶಾರದ ಎಂದೂ ಪುರಸ್ಕರಿಸಳು. 'ಸ್ವಾಭಿಮಾನವಿದ್ದರೂ ಅವಳದು ಅಹಂಭಾವವಲ್ಲ, ಸ್ವತಂತ್ರ ಕೇಳಿದರೂ, ಸ್ವೇಚ್ಛೆ ಬಯಸದಂಥ ಉತ್ತಮ ಗುಣ ಅವಳದು. ಬೌದ್ಧಿಕವಾಗಿ ಬೆಳೆಯದ

ವಸಂತ, ಅವ್ರ ಮಧ್ಯೆ ಹೊಂದಿಕೆಯಾಗೋಲ್ಲ. ಅಷ್ಟು ಇಷ್ಟು ಸಮಾನ ಅಭಿರುಚಿ ಬೇಕು, ಅವ್ನಿಗೆ ಇರೋದು ದುರಹಂಕಾರ ಅಷ್ಟೆ" ಎಂದಿದ್ದರು.

ಒಂದೊಂದಾಗಿ ಎರಡು ಸೂಟುಕೇಸ್‌ಗಳನ್ನು ತಾನೇ ಹೊತ್ತು ತಂದವಳಿಗೆ, ಪಂಜರದಿಂದ ಬಿಡುಗಡೆಯಾಗಿ ವಿಹರಿಸಿ ಬಂದ ಹಕ್ಕಿಯಂತಾಗಿದ್ದಳು.

"ಮೊದ್ಲು ಕೈಕಾಲು ತೊಳ್ಕೊಂಡ್ಬಾ, ತಿಂಡಿ ಕೊಡ್ತೀನಿ" ಹೇಳಿದರು ತುಳಸಮ್ಮ. "ಅಲ್ಲೇ ತಿಂಡಿ ಆಯ್ತು, ನಿಮ್ಗೇ ಅಡಿಗೆಗೆ ಸಹಾಯ ಮಾಡ್ತೀನಿ, ನಾವಿಬ್ರೂ ಹೋಗಿ ತರಕ್ಕಾರಿ... ತರೋಣ" ಸೂಟುಕೇಸ್‌ಗಳನ್ನು ತಾನು ಉಪಯೋಗಿಸುತ್ತಿದ್ದ ರೂಮಿನೊಳಗೆ ಇಟ್ಟಳು.

ಗೋಡೆಯನ್ನು ಅಲಂಕರಿಸಿದ್ದ ಆನಂದರಾವ್ ಭಾವಚಿತ್ರದ ಕಡೆ ನೋಟ ಹರಿಯಿತು. ಹಾಕಿದ್ದ ಗಂಧದ ಹಾರ ಮಂಕಾಗಿತ್ತು, ಸ್ಟೂಲ್ ಹಾಕಿಕೊಂಡು ಅದನ್ನು ತೆಗೆದು ಧೂಳು ತೆಗೆದಳು.

"ಅಮ್ಮ, ಶಾರದ......" ಶ್ರೀಧರಮೂರ್ತಿಗಳು ರೂಮಿನೊಳಕ್ಕೆ ಬಂದರು. "ಆಗ್ಲೇ ಷುರು ಹಚ್ಕೊಂಡ್‌ಬಿಟ್ಯಾ ! ನಿನ್ನ ಬರವಣಿಗೆಯ ಬಗ್ಗೆ ಜಿ.ಎಸ್.ಸಿ. ಎಷ್ಟೊಂದು ಆಶಾಭಾವನೆ ವ್ಯಕ್ತಪಡಿಸಿದರು" ಎಂದರು. ಸದ್ಯಕ್ಕೆ ಅವಳ ಮನಸ್ಸನ್ನು ಬೇರೆಡೆ ಒಯ್ದು ಉತ್ಸಾಹಿತಳನ್ನಾಗಿ ಮಾಡಬೇಕಿತ್ತು.

"ಅದು ಅವ್ರ ದೊಡ್ಡತನ. ಸ್ನೇಹಿತನ ಮಗಳೆಂಬ ಸಹಾನುಭೂತಿ ಕೂಡ ಇರುತ್ತೆ. ನಾವು ಮೂರು ಜನ ಒಂದಿಷ್ಟು ಹೊರ್ಗಡೆ... ಹೋಗ್ಬರೋಣ" ಸ್ಟೂಲ್ ಮೇಲಿಂದ ಇಳಿದು ಅದನ್ನು ಪಕ್ಕಕ್ಕೆ ಇಟ್ಟಳು.

ಯಾವುದೋ ಊರಿಗೆ ಹೋಗಿ ಹಿಂದಿರುಗಿ ಬಂದಂಥ ಸಮಾಧಾನದ ಭಾವ ಇತ್ತಷ್ಟೆ. ಸೊಂಟಕ್ಕೆ ಸೆರಗನ್ನು ಸಿಕ್ಕಿಸಿ, ಇಡೀ ಮನೆಯಲ್ಲೆಲ್ಲ ಓಡಾಡಿ ಅಚ್ಚುಕಟ್ಟು ಮಾಡಿದಳು. ಊಟದ ನಂತರ ತನ್ನ ರೂಮಿಗೆ ಹೋಗಿ ತಾನು ಮಲಗುತ್ತಿದ್ದ ಮಂಚದ ಮೇಲೆ ಮಲಗಿ ಕಣ್ಮುಚ್ಚಿದಳು. ಕಳೆದ ವೈವಾಹಿಕ ದಿನಗಳಲ್ಲಿ ಎಲ್ಲಾದರೂ ಸಿಹಿಯ ಅನುಭವವಿದೆಯೇನೋ ಎಂದು ಹುಡುಕಾಡಿದಳು. ತಾಳಿ ಕಟ್ಟಿದ ಮರುಕ್ಷಣದಿಂದಲೇ ತನ್ನ ಮಾತುಗಳ ಮೂಲಕ ಅಧಿಕಾರ ಸ್ಥಾಪಿಸಿದ್ದ.

ಪಕ್ಕಕ್ಕೆ ಹೊರಳಿ ನಿದ್ರಿಸಲು ಪ್ರಯತ್ನಿಸಿದಳು. ಸೇತುರಾಮ್ ಸಾವಿನ ಸುದ್ದಿ ತಿಳಿದಾಗ ಅವನಿಗೆ ತಕ್ಕೆಬಿದ್ದು ಕಣ್ಣೀರು ಸುರಿಸಿದಾಗ, ತೊಡೆಯಲು

ಕೈ ಮುಂದಾಗಲಿಲ್ಲ. ಅದೇ ಕಹಿ ಮಾತುಗಳಿಂದ ನೋಯಿಸಿದ್ದ. ಅವನ ಕಟು ಮಾತುಗಳು ಚಾಕು, ಚೂರಿಗಳಿಗಿಂತ ಹೆಚ್ಚು ಹರಿತವಾಗಿ ಅವಳನ್ನು ಮಾನಸಿಕವಾಗಿ ನೋಯಿಸಿತ್ತು.

ಆಮೇಲೆ ನಿದ್ದೆಯ ಜೊಂಪು ಹತ್ತಿ ಎಚ್ಚರವಾದಾಗ ತುಳಸಮ್ಮ ಕಾಫಿಯ ಲೋಟ ಅವಳ ಮುಂದಿಡಿದರು.

"ನಿನ್ನ ತಾತ ಮಾಡಿದ ಕಾಫಿ, ನಂಗಿಂತ ಚಲೋ ಮಾಡ್ತಾರೆ. ಆ ಪುಣ್ಯಾತ್ಮನಿಗೆ ಒಂದ್ಗಳಿಗೆ ಕೂತು ಅಭ್ಯಾಸವಿಲ್ಲ" ಅಭಿಮಾನದಿಂದ ಹೇಳಿಕೊಂಡರು. ಈ ವಯಸ್ಸಿನಲ್ಲು ಹೆಂಡತಿಯನ್ನು ಹೂವಿನಂತೆ ಜೋಪಾನ ಮಾಡುವ, ಆಕೆಯ ಸುಖಕ್ಕಾಗಿ ಶ್ರಮಿಸುವ ಶ್ರೀಧರಮೂರ್ತಿಗಳು 'ಯಜಮಾನರು' ಎಂದು ಹೇಳಿಕೊಳ್ಳಲು ಲಾಯಕ್ಕಾಗಿದ್ದರು.

ಕಾಫೀ ಕುಡಿದು ಮುಖ ತೊಳೆದುಕೊಂಡ ಶಾರದ ಬಲವಂತದಿಂದ ಅವರುಗಳನ್ನು ಹೊರಡಿಸಿದಳು. ೧೯೪೭ರ ಮಧ್ಯ ರಾತ್ರಿಯಲ್ಲಿ ಭಾರತೀಯರು ಅನುಭವಿಸಿದ ಸ್ವತಂತ್ರದ ಸಂತೋಷ ಅವಳ ಕಣ್ಣುಗಳಲ್ಲಿತ್ತು.

ತುಳಸಮ್ಮ ಕಾಂಜೀವರಂ ಸೀರೆ, ಶ್ರೀಧರಮೂರ್ತಿಗಳಿಗೆ ಬಟ್ಟೆಗಳನ್ನು ಖರೀದಿಸಿದಳು. ಟ್ಯಾಕ್ಸಿ ಮಾಡಿಕೊಂಡು ಇದೇ ಸಿಟಿಯಲ್ಲಿರುವ ದೇವಸ್ಥಾನಗಳನ್ನೆಲ್ಲ ತೋರಿಸಿಕೊಂಡು ಮನೆಗೆ ಹಿಂದಿರುಗಿದಾಗ, ಹತ್ತರ ಸಮಯ, ಇಂದಿನ ದಣಿವಿನಲ್ಲಿ ಸಂತೋಷವಿತ್ತು.

"ಬೆಳಿಗ್ಗೆ ಹೊರಡ್ಬೇಕು. ಹಳ್ಳಿಯಲ್ಲಿ ನಮಗಾಗಿ ಕಾಯ್ತ ಇರ್ತಾರೆ" ಸಂಕೋಚದಿಂದಲೇ ಹೇಳಿದರು. ತುಳಸಮ್ಮ "ಖಂಡಿತ ಅಜ್ಜಿ, ನಾನೇ ಬಂದು.... ಬಸ್ಸು ಹತ್ತಿಸ್ತೀನಿ. ಹೇಗೂ ಪರೀಕ್ಷೆಗಳು ಮುಗ್ದ ಮೇಲೆ ಬೇಸಿಗೆಯ ರಜ ಬರುತ್ತೆ. ಆಗ ನಾನು ಅಲ್ಲಿಗೆ... ಬರ್ತೀನಿ. ನೀವು ಯಾವಾಗ್ಬಂದ್ರೂ ನಿಮ್ಮ ಮನೇನೇ" ಅತ್ಯಂತ ಶಾಂತವಾಗಿ ಉಸುರಿದಳು.

ಒಮ್ಮೆ ಕಾಶೀಪತಿಗಳನ್ನು ಯಾಕೆ ಮಾತಾಡಿಸಬಾರದೆಂದುಕೊಂಡರೂ ಮೌನವಹಿಸಿದಳು. ಈ ಸಣ್ಣ ದೌರ್ಬಲ್ಯದ ಎಳೆಯನ್ನು ಹಿಡಿದುಕೊಂಡು ಹಿಗ್ಗಾಮುಗ್ಗಾ ಎಳೆದಾಡುವುದು ಮಾತ್ರವಲ್ಲ, ಬೇರೊಂದು ಕಲ್ಪನೆ ಅವನ ಮನದಲ್ಲಿ ಸೃಷ್ಟಿಯಾಗುತ್ತದೆ. ಅದು ಬೇಡವೆನಿಸಿತು ಅವಳಿಗೆ.

ಕಾದಾಡಿ ಸೋತ ಸೈನಿಕನಂತೆ ಆರಾಮಾಗಿ ನಿದ್ರಿಸಿದಳು. ಬೆಳಿಗ್ಗೆ ಸ್ವಲ್ಪ ಬೇಗನೇ ಎದ್ದು ತಾನೇ ಅಡಿಗೆ ಸಿದ್ಧ ಮಾಡಿ ಕೂಡಿಸಿ ಬಡಿಸಿ, ಅವರಿಬ್ಬರಿಗೂ ತಂದಿದ್ದ ಸೀರೆ, ಪಂಚೆ, ಶಲ್ಯವನ್ನು ಉಡುಗೊರೆಯಾಗಿ ನೀಡಿ ನಮಸ್ಕರಿಸಿದಳು.

"ನಂಗೆ ನೂರು ಮಕ್ಳು ಆಗ್ಲೀ, ಮುತ್ತೈದೆಯಾಗಿ ನೂರು ವರ್ಷ ಬದ್ಕು... ಇಂಥ ಆಶೀರ್ವಾದಗಳು ಬೇಡ. ಕೆಲವೇ ಮಂದಿ ವಿದ್ಯಾರ್ಥಿಗಳಿಗಾದ್ರೂ ನನ್ನ ಪಾಠ ಉಪಯೋಗಕ್ಕೆ ಬರ್ಲಿ-ಇಷ್ಟು ಆಶೀರ್ವಾದ ಸಾಕು" ಎಂದು ಶಾರದ ಹೇಳಿದಾಗ ನಿಬ್ಬೆರಗಾದರು. ಅವಳು ಒಂದು ತೀರ್ಮಾನಕ್ಕೆ ಬಂದು ಆಗಿತ್ತು. ಅದರಿಂದ ಅತ್ತಿತ್ತ ಚಲಿಸಲಾರಳು. ಅಂಥ ದೃಢತೆ ಇತ್ತು ಮುಖದ ಮೇಲೆ.

ಶ್ರೀಧರಮೂರ್ತಿಗಳು ಟಾಕ್ಸಿ ಬಂದಾಗ ಅವಳ ಕೈ ಹಿಡಿದು ರೂಮಿಗೆ ಕರೆದೊಯ್ದು "ನೀನೆಂದೂ ತಪ್ಪು ಮಾಡೋಲ್ಲಾಂತ ಗೊತ್ತು. ವಸಂತನ್ನ ಸಾಧ್ಯವಾದ್ರೆ... ಕ್ಷಮ್ಸಿ ಬಿಡು" ಎಂದರು.

"ಇಲ್ಲ ತಾತ, ಅಲ್ಲಿ ಕ್ಷಮಿಸೋಕೇನಿದೇ ? ಅವ್ರ ದೃಷ್ಟಿಯಲ್ಲಿ ಅವ್ರ ನಡತೆ ಸರಿ. ನಂಗೆ ಆ ಬಗ್ಗೆ ಮಾತಾಡೋಕೆ ಇಷ್ಟವಿಲ್ಲ. ಬೆಳಗಿನ ಬಸ್ಸು ಮಿಸ್ಸಾದರೇ, ನಿಮ್ಗೆ ಸಂಜೆಯವರ್ಗೂ ಬಸ್ಸಿಲ್ಲ" ಅವಸರಿಸಿದಳು. ಹೊಸ ಬದುಕಿನಲ್ಲಿ ಕರಿ ಮೋಡಗಳು ಬೇಡವಾಗಿತ್ತು.

ಟಾಕ್ಸಿ ಹೊರಡುವ ವೇಳೆಗೆ ಆಟೋದಿಂದ ಇಳಿದ ಕಾಶೀಪತಿಗಳು ಧಾವಿಸಿದರು. "ಆಗ್ಲೇ, ಹೊರಟೇ ಬಿಟ್ಟಿದ್ದೀರಾ !" ಟಾಕ್ಸಿ ಹತ್ತಿಕೊಂಡಾಗ, ಆಟೋಗೆ ಅವಳೇ ಹಣ ಕೊಟ್ಟಳು.

ತುಂಬ ಅಪ್‌ಸೆಟ್ ಆಗಿದ್ದ ಕಾಶೀಪತಿಗಳು ಅದನ್ನು ಮರೆಸಲು ಏನೇನೋ ಮಾತಾಡಿದರು. ಇಲ್ಲಿಗೆ ಹೊರಟು ಬರುವ ಮುನ್ನ ಮಗನಿಗೆ ಬುದ್ಧಿವಾದ ಹೇಳಿದ್ದರು.

"ಇದೊಂದು ಕೊನೆಯ ಅವಕಾಶ ! ನಿನ್ನ ಸ್ವಾಭಿಮಾನವೇನು ಕುಸಿದು ಬೀಳೋಲ್ಲ. ಶ್ರೀಧರಮೂರ್ತಿಗಳು, ತುಳಸಮ್ಮ ಹೊರಟಿದ್ದಾರೆ. ಅವ್ರನ್ನ ನೋಡುವ ಸಲುವಾಗಿ, ಬೀಳ್ಕೊಡುವ ಸಲುವಾಗಿಯಾದ್ರೂ ಬಸ್‌ಸ್ಟಾಂಡ್‌ಗೆ ಬಾ. ದೈವ ಸಂಕಲ್ಪವಿದ್ದರೇ ಕಹಿ ಕರಗಿ ಹೋಗಿ, ನೀನು ಕರೆದರೇ ಶಾರದ ಹಿಂದಿರುಗಬಹುದು".

ಆ ಆಸೆಯಿಂದ ಬಸ್‌ಸ್ಟ್ಯಾಂಡ್‌ಗೆ ಬಂದ ಕೂಡಲೇ ಕಾರು ಪಾರ್ಕಿಂಗ್ ಕಡೆ ಕಣ್ಣು ಹಾಯಿಸಿದರು. ಸಾಲಾಗಿ ಜೋಡಿಸಿದಂತೆ ನಿಂತಿದ್ದ ಕಾರುಗಳಲ್ಲಿ ತಮ್ಮ ಕಾರನ್ನ ಹುಡುಕಲು ಪ್ರಯತ್ನಿಸಿದರು. ಅದೇ ಬಣ್ಣದ ಮಾರುತಿ ಕಂಡಾಗ ಹೋಗಿ ನಂಬರ್ ಪ್ಲೇಟ್‌ನ ಪರಿಶೀಲಿಸಿ ಬಂದರು. ಅಲ್ಲಿ ಕಾದಿದ್ದು ದಟ್ಟವಾದ ನಿರಾಸೆ ! ಸೋಲು ಒಪ್ಪಿಕೊಳ್ಳಲಾರ ವಸಂತ. ಅದು ಅವನ ಜಾಯಮಾನಕ್ಕೆ ಒಗ್ಗುವಂಥದಲ್ಲ.

ಸ್ವಲ್ಪ ನಿಧಾನವಾಗಿಯಾದರೂ ಅರ್ಥವಾಯಿತು ಶ್ರೀಧರಮೂರ್ತಿಗಳಿಗೆ. ಕಾಶೀಪತಿಗಳ ಭುಜದ ಮೇಲೆ ಕೈಯಿಟ್ಟು "ನಿಮ್ಮ ನೋವು, ವ್ಯಥೆ ಅರ್ಥವಾಗುತ್ತೆ. ವಸಂತನಿಗೆ ಬೇಗ ಅರ್ಥವಾಗೋಲ್ಲ, ನಿಧಾನವಾಗಿ ಅರ್ಥವಾಗುತ್ತೆ, ಆ ವೇಳೆಗೆ ಕಾಲ ಮೀರಿಹೋಗಿರುತ್ತೆ" ಎಂದು ಹೇಳಿದರು.

ಬಸ್ಸು ಅರ್ಧಗಂಟೆ ತಡವಾಗಿ ಬಂತು. ಅಲ್ಲಿಯವರೆಗೂ ದೂರದ ಆಸೆಯಿಂದ ಕಾದೇ ಕಾದರು ಕಾಶೀಪತಿಗಳು. ಪುಸ್ತಕದ ಸ್ಟಾಲ್ ಬಳಿಗೆ ತುಳಸಮ್ಮನನ್ನು ಕರೆದೊಯ್ದು ಶಾರದ ದೇವಿ ಮಹಾತ್ಮೆಯ ಜೊತೆ ಕೆಲವು ಕನ್ನಡದ ಕಾದಂಬರಿಗಳನ್ನು ಖರೀದಿಸಿ ಕೊಟ್ಟು ಕರೆ ತಂದಳು.

"ಅಜ್ಜಿ, ಇದ್ನೆಲ್ಲ ಬೇಗ ಓದಿ ಮುಗ್ಸಿಬಿಡ್ತಾರೆ" ಗೆಲುವಿನಿಂದ ಹೇಳಿದಳು. ಈ ಗೆಲುವು, ಮುಖದಲ್ಲಿನ ಸಂತೋಷ ಶಾರದಳ ಮುಖದಲ್ಲಿ ಕಂಡು ಯುಗವೆ ಆಯಿತೆಂದುಕೊಂಡರು. ಅಲ್ಲಿ ವ್ಯಥೆ ನರಳಿ ಹರ್ಷ ಚಿಮ್ಮಿತು.

ತಾನೇ ಅವರುಗಳ ಸಾಮಾನುಗಳನ್ನು ಒಯ್ದು ಬಸ್ಸಿನಲ್ಲಿ ಸರಿಯಾಗಿ ಇರಿಸಿ, ಕೆಳಗಿಳಿದು ಬಂದು ನಿಂತಳು.

"ಟ್ಯಾಕ್ಸಿಯಲ್ಲಿ ಕರೆದೊಯ್ದು ಬಿಟ್ಟು ಬರಬಹುದಿತ್ತು" ಎಂದರು ಕಾಶೀಪತಿಗಳು. ಎತ್ತಲೋ ನೋಡುತ್ತ ನಿಂತವಳು ತಟ್ಟನೆ ತಿರುಗಿ "ಒಪ್ಪಿಲ್ಲ, ತಾತ ಅಜ್ಜಿ. ಅವ್ರಿಗೆ ಸರಳವಾದ ಬದ್ಕು ಇಷ್ಟ. ಬಸ್ಸಿನ ಗಜಿಬಿಜಿ, ಜನ, ಮಾತು ಎಲ್ಲಾ ಇಷ್ಟವೇ ಅವರಿಗೆ" ಹೇಳಿದಳು.

ಬಸ್ಸು ಹೊರಟನಂತರ ಕಾಶೀಪತಿಗಳು, ಅವಳು ಕೂಡಿಯೇ ಬಸ್ಸು ನಿಲ್ದಾಣದಿಂದ ಹೊರಗೆ ಬಂದರು. ನೂರು ಮಾತುಗಳು ಹೇಳಬೇಕೆಂಬ ತವಕ ಅವರಿಗೆ. ಆದರೆ ಅದರಲ್ಲಿ ತಿರುಳು ಇರುವುದಿಲ್ಲ ಬರೀ ಪ್ರಯೋಜನಕ್ಕೆ ಬರದ ಮಾತುಗಳು ತಿಂದು ಬಿಸುಟ್ಟ ಎಂಜಲೆಲೆಗಳಂತೆ.

ಇಬ್ಬರು ಕೂಡಿಯೇ ಒಂದೇ ಆಟೋ ಹತ್ತಿದರು "ಅಂಕಲ್, ಬೆಳಿಗ್ಗೆ ವಾಕ್ ಹೋಗಿದ್ರಾ ?" ವಿಚಾರಿಸಿದಳು. ಅವರು ನಕ್ಕುಬಿಟ್ಟರು. "ನಂಗೂ ಕೆಲವೊಮ್ಮೆ ಹೋಗೋ ಇರಾದೆ ಏನಿರೋಲ್ಲ. ಆನಂದ ಸುಮ್ನೇ ಬಿಡೋಲ್ಲ, ತಲೆ ಮೇಲೊಡೆದು ಎಚ್ಚರಿಸ್ತಾನೆ. ಸತ್ತು ವರ್ಷಗಳು ಉರುಳಿದರೂ, ಅವ್ನ ನೆನಪು, ಸಾನಿಧ್ಯದಿಂದ ನಾನು ಮುಕ್ತನಾಗಿಲ್ಲ. ಕೆಲವರು ಇದ್ದು ಇಲ್ಲವಾಗಿ ಬಿಡ್ತಾರೇ, ಇನ್ನು ಕೆಲವರು ಸತ್ತರೂ ನಮ್ಮ ಜೊತೆ ಇರ್ತಾರೆ. ಹಾಗೇ ಆನಂದ ಸದಾ ನನ್ನ ಪಾಲಿಗೆ ಇರ್ತಾನೆ" ಗೆಳೆಯನನ್ನು ನೆನಸಿಕೊಂಡರು. ಇಂಥ ನೆನಪು ಸದಾ ಅವರಿಗೆ ಹಿತವೇ.

ಶಾರದ ಮಾತಾಡಲಿಲ್ಲ. ತಂದೆ ಸತ್ತರೂ ಕಾಶೀಪತಿಗಳ ಮಾತುಗಳಲ್ಲಿ ಬದುಕಿರುತ್ತಾರೆಂದುಕೊಂಡಳು.

ಮನೆಗಳು ವಿಭಿನ್ನ ದಿಕ್ಕುಗಳಲ್ಲಿ ಇತ್ತು. ಮೊದಲು ಕಾಶೀಪತಿಗಳ ಮನೆಯ ಮುಂದೆ ಆಟೋ ನಿಂತಾಗ, ಒಳಗಿನಿಂದ ಬಂದ ಮಾರುತಿ ನಿಲ್ಲದೆ ಮುಂದಕ್ಕೆ ಹೋಯಿತು. ಅವಳ ಜೀವನದಲ್ಲೂ ಅಷ್ಟೇ ಬೇಗ ಕಾರಿನಂತೆ ಹಾದು ಹೋಗಿದ್ದ. ಎರಚಾಡಿದ್ದು ರಸ್ತೆಯ ಧೂಳು, ಪ್ರೆಟೋಲು ವಾಸನೆ, ಹೊಗೆ ಮಾತ್ರ.

ಕಾಶೀಪತಿಗಳು ಆಟೋದಿಂದ ಇಳಿದಾಗ "ಅಂಕಲ್, ಆರೋಗ್ಯ ಜೋಪಾನ ! ಸಂಜೆಗಳಲ್ಲಿ ಬನ್ನಿ, ಒಮ್ಮೊಮ್ಮೆ ಕ್ಲಬ್‌ಗೆ ಚಕ್ಕರ್ ಹಾಕಿ" ಹೇಳಿ ನಕ್ಕಳು.

"ಒಮ್ಮೆ ಇಳ್ದು..... ಹೋಗಬಹುದಲ್ಲ !" ಎಂದರು ಔಪಚಾರಿಕವಾಗಿ. "ಇಲ್ಲ, ಇನ್ನೊಮ್ಮೆ ಬರ್ತೀನಿ. ಹೇಗೂ ನೀವು ಮನೆಯಲ್ಲಿರೋ ಟೈಮಿಂಗ್ಸ್ ಗೊತ್ತು. ಈಗೇನು, ಅಂಥ ಕಾಲೇಜು ಬಿಜಿ ಇಲ್ಲ, ಯಾವಾಗಲಾದರೊಮ್ಮೆ... ಬರ್ತೀನಿ" ನವಿರಾಗಿ ನಿರಾಕರಿಸಿದಳು.

ಆಟೋ ಹೊರಟಾಗ ಗೋಪಿ ಓಡಿ ಬಂದ "ಸ್ವಲ್ಪ ನಿಲ್ಸೀ" ಎಂದಳು. ಬಂದವನು ಬಿಕ್ಕತೊಡಗಿದ "ನೀವು ಇನ್ನು ಈ ಮನೆಗೆ ಬರೋಲ್ವಾ ? ನಾನು ನಿಮ್ಜೊತೆ ಬಂದ್ಬಿಡ್ತೀನಿ" ಕಣ್ಣಿಗೆ ಕೈ ಹಚ್ಚಿದ.

"ಈಗ್ಬೇಡ! ಅಂಕಲ್- ವಸಂತ್‌ಗೆ ತೊಂದರೆ ಆಗುತ್ತೆ. ಹೇಗೂ ಪರೀಕ್ಷೆ, ರಜಗಳೆಲ್ಲ ಮುಗ್ದ ಮೇಲೆ ನಿನ್ನ ಸ್ಕೂಲಿಗೆ ಸೇರಿಸೋಕೆ ಹೇಳ್ತೀನಿ. ಆಗ ನೀನು ಬರ್ಬಹುದ್ದು. ಅಂಕಲ್ ಬರೋವಾಗ ನಿನ್ನ ಕರ್ಕಂಡ್ ಬರೋಕೆ

ಹೇಳ್ತೀನಿ" ಎಂದಳು ಸಾತ್ವನಿಸುವಂತೆ.

ಷರಟಿನಲ್ಲಿ ಮುಚ್ಚಿಟ್ಟುಕೊಂಡಿದ್ದ 'ಹಂಸ ಪಲ್ಲಕಿ'ಯ ಒಂದು ಪ್ರತಿಯನ್ನು ಅವಳ ಮುಂದಿಡಿದ "ಯಜಮಾನ್ರು ಓದೂಂತ ನಂಗೆ ಕೊಟ್ರು. ತುಂಬ ... ತುಂಬ.... ಚೆನ್ನಾಗಿ ಬರಿದಿದ್ದೀರಿ" ಎಂದ ಮೆಚ್ಚಿಗೆಯಿಂದ.

ಅವನ ಕೆನ್ನೆ ತಟ್ಟಿದಳು. ಆಟೋ ಮುಂದಕ್ಕೆ ಹೋಯಿತು.

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು —— (ಸಾಮಾಜಿಕ, ಐತಿಹಾಸಿಕ, ಪೌರಾಣಿಕ)

ಸಣ್ಣ ಕಥೆಗಳು

ಕವನ ಸಂಗ್ರಹಗಳು

ನಾಟಕಗಳು

ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು

ವಿಶ್ವವಿದ್ಯಾಲಯದ ಪ್ರಕಟಣೆಗಳು

ಸಂಗೀತ ಪುಸ್ತಕಗಳು

ಶಿಶು ಸಾಹಿತ್ಯ

ಪ್ರಬಂಧ ಹಾಗೂ ಪ್ರೌಢಗ್ರಂಥಗಳು

ಜ್ಯೋತಿಷ್ಯ ಶಾಸ್ತ್ರಗ್ರಂಥಗಳು

ವೈಜ್ಞಾನಿಕ ಪುಸ್ತಕಗಳು

ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ

ಅಥವಾ

ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ


ಗೀತಾ ಏಜನ್ಸೀಸ್

ಬಳೇಪೇಟೆ ಚಾಕ [illegible]